ಪ್ರಬುದ್ಧ ಕರ್ಣಾಟಕ

ಸಂಪುಟ ೫೫ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

ಪ್ರಬುದ್ಧ ಕರ್ಣಾಟಕ

ಸಂಪುಟ ೫೫ ಸಂಚಿಕೆ ೪

೨೧೮

ಪ್ರಮಾದೀಚ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೪

PRABUDDHA KARNATAKA, Kannada Quarterly of the *University of Mysore*. Volume 55, Number 4, January, 1974. Edited by Dr. T. V. Venkatachala Sastry and Sudhakara.

All Rights Reserved

ಪ್ರಧಾನ ಸಂಪಾದಕರು
ಡಾ. ಹಾ. ಮಾ. ನಾಯಕ

ಸಂಪಾದಕರು
ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ
ಸುಧಾಕರ

ಪ್ರಕಾಶಕರು
ಡಾ. ಪ್ರಭುಶಂಕರ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು
ಎಚ್. ನರಸಣ್ಣ
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯ ಸೂಚಿಕೆ

	ಶ್ರೀಯುತರಾದ	ಪುಟ
೧ ಸಿಡ್ಲೆಹಳ್ಳಿ ಮತ್ತು ತಾರಿಣಿಯ ಪ್ರಾರ್ಥನೆ (ಕವನ)	ಕುವೆಂಪು	೧
೨ ಕಾಮ (ಕವನ)	ಮಳಲಿ ವಸಂತಕುಮಾರ್	೬
೩ ಪಂಪನ ಕಾವ್ಯಗಳಲ್ಲಿ ಹೂಗಿಡಮರಬಳ್ಳಿಗಳು (ಸಂಶೋಧನೆ)	ಬಿ. ಜಿ. ಎಲ್ ಸ್ವಾಮಿ	೭
೪ ಬಯಕೆ (ಕವನ)	ಎನ್. ವಿ. ಶಿವಕುಮಾರ್	೪೬
೫ 'ಪಗರಣ' (ಹಗರಣ)–ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ (ಸಂಶೋಧನೆ)	ಎಂ. ಚಿದಾನಂದಮೂರ್ತಿ	೪೭
೬ ಬಿಳಿಕೊಂಬು (ಸಣ್ಣಕತೆ)	ಕೆ. ಎಸ್. ಶಿವರಾಂ ಎಚ್. ಎಸ್. ಹರಿಶಂಕರ್	೬೭
೭ ಒಂದು ಸಂಕೇತ ಭಾಷೆ–ಕರಪಲಸವುಜ್ಜಕಂ (ಸಂಶೋಧನೆ)	ಜಿ. ಜಿ. ಮಂಜುನಾಥನ್	೭೩
೮ ಚತುರ್ಥೀವಿಭಕ್ತಿ (ಸಂಶೋಧನೆ)	ಕೆ. ಕುಶಾಲಪ್ಪಗೌಡ	೮೧
೯ ಮೂರ್ತಿರಾಯರ ಪ್ರಬಂಧ ಸಾಹಿತ್ಯ	ಮಳಲಿ ವಸಂತಕುಮಾರ್	೯೫
೧೦ ನಂಜೇಶ್ವರ ಪಾರಿಜಾತ (ಸಂಪಾದನೆ)	ಭೋಜರಾಜ ಪಾಟೀಲ	೧೦೨
೧೧ ತೊರವೆ ರಾಮಾಯಣದ ಸ್ವರೂಪ ಮತ್ತು ವೈಶಿಷ್ಟ್ಯ	ಭೀಮರಾವ ಚಿಟಗುಪ್ಪಿ	೧೦೫
೧೨ ಕಾವ್ಯವಿತಾನ: ಗಂಗಾಲಹರಿ	ಎನ್. ಎಸ್. ಗದಗಕರ	೧೨೩
೧೩ ಕಮ್ಮಟದ ಕಿಡಿಗಳು:		೧೩೦

(i) 'ಪಂಪಭಾರತ'ದ ಒಂದು ಪದ್ಯದ ಪಾಠ–ತೆಕ್ಕುಂಜ ಗೋಪಾಲಕೃಷ್ಣ ಭಟ್ಟ

(ii) 'ಮುಂತಾಗಿ', 'ಮುಂದಾಗಿ' : ಒಂದು ಮರುಟಿಪ್ಪಣಿ–ಸಿ.ಪಿ.ಕೆ.

೧೪ ಕಾವ್ಯಾವಲೋಕನ: ೧೩೭

ಸಕಲಪುರಾತನರ ವಚನಗಳು (ಡಾ. ಆರ್. ಸಿ. ಹಿರೇಮಠ)–ಓ. ಎನ್. ಲಿಂಗಣ್ಣಯ್ಯ; ಇದು ಜೀವನ (ಸದಾಶಿವ ಒಡೆಯರ)–ಹೊರೆಯಾಲ ದೊರೆಸ್ವಾಮಿ; ಪ್ರಸಾದಯೋಗ (ಡಾ. ವಿ. ಎ. ದಿವಾಣಜಿ) ಪಿ. ಬಿ. ಬಡಿಗೇರ

೧೫ ಸಂಪಾದಕೀಯ:

ಕನ್ನಡ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ. ಹಿರಿಯ ಸಾಮಾಜಿಕರಿಗೂ ಸಾಹಿತ್ಯೋಪಾಸಕರಿಗೂ ಸನ್ಮಾನಗಳು, ಎಚ್. ಎಂ. ರಾಮಾರಾಧ್ಯರ ನಿಧನ, ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣಮಹೋತ್ಸವ ಭವನದ ಉದ್ಘಾಟನೆ, ಗೌರವ ಡಾಕ್ಟರೇಟ್ ಪದವಿಗಳ ನೀಡಿಕೆ, ರಾಜ್ಯಸಾಹಿತ್ಯ ಅಕಾಡೆಮಿ ಸನ್ಮಾನಿತರು, 'ಎಪಿಗ್ರಾಫಿಯ ಕರ್ನಾಟಿಕ' ಎರಡನೆಯ ಸಂಪುಟ, 'ಕಛೇರಿ ಕೈಪಿಡಿ'ಗಳ ಬಿಡುಗಡೆ.

೧೬ ಸಾದರ ಸ್ವೀಕಾರ

ಈ ಸಂಚಿಕೆಯ ಲೇಖಕರು

1	ಕುವೆಂಪು	ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು, ಮೈಸೂರು
2	ಮಳಲಿ ವಸಂತಕುಮಾರ್	ಕುಲಪತಿಗಳ ಆಪ್ತಕಾರ್ಯದರ್ಶಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3	ಬಿ. ಜಿ. ಎಲ್. ಸ್ವಾಮಿ (ಡಾ.)	ಮುಖ್ಯ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಪ್ರೆಸಿಡೆನ್ಸಿ ಕಾಲೇಜು, ಮದರಾಸು-5
4	ಎನ್. ವಿ. ಶಿವಕುಮಾರ್	ಸಂಶೋಧನ ಸಹಾಯಕ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-3
5	ಎಂ. ಚಿದಾನಂದಮೂರ್ತಿ (ಡಾ.)	ಉಪಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು
6	ಕೆ. ಎಸ್. ಶಿವರಾಂ (ಡಾ.)	ರಷ್ಯನ್ ಭಾಷಾಂತರಕಾರರು, ಭಾರತೀಯ ವೈಜ್ಞಾನಿಕ ಉಪಗ್ರಹಯೋಜನೆ, ಐ. ಎಸ್. ಆರ್. ಒ., ಪೀಣ್ಯ, ಬೆಂಗಳೂರು-562140
	ಎಚ್. ಎಸ್. ಹರಿಶಂಕರ್	ಅಧ್ಯಾಪಕರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
7	ಜಿ. ಜಿ. ಮಂಜುನಾಥನ್	ಸಹಾಯಕ ಸಂಶೋಧಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
8	ಕೆ. ಕುಶಾಲಪ್ಪಗೌಡ	ಭಾಷಾವಿಜ್ಞಾನದ ಉಪಪ್ರಾಧ್ಯಾಪಕರು, ಅಣ್ಣಾಮಲೈ ವಿಶ್ವವಿದ್ಯಾನಿಲಯ, ಅಣ್ಣಾಮಲೈನಗರ, ದಕ್ಷಿಣ ಆರ್ಕಾಟ್
9	ಭೋಜರಾಜ ಪಾಟೀಲ	ಕನ್ನಡ ಅಧ್ಯಾಪಕ, ಎಂ. ಎ. ಎಸ್, ಕಾಲೇಜು, ಹಂಸಭಾವಿ, ಧಾರವಾಡ ಜಿಲ್ಲೆ
10	ಭೀಮರಾವ ಚಿಟಗುಪ್ಪಿ	ಗಣ್ಯಸಾಹಿತಿಗಳು, 12/64, ಸುಮಿತ್ರಾಸದನ್, ಕೆಲೂಸ್ಕರ್ ರೋಡ್, ಶಿವಾಜಿಪಾರ್ಕ್, ಮುಂಬಯಿ-28
11	ಎನ್. ಎಸ್. ಗದಗಕರ	ಗಣ್ಯಸಾಹಿತಿಗಳು, ಶುಕ್ರವಾರಪೇಟೆ, ನವಲೂರ್ ಅಗಸಿ, ಧಾರವಾಡ-1
12	ತೆಕ್ಕುಂಜ ಗೋಪಾಲಕೃಷ್ಣಭಟ್ಟ	ಉಪಪ್ರಾಧ್ಯಾಪಕರು, ಕನ್ನಡ ವಿಭಾಗ, ಸೇಯಿಂಟ್ ಅಲೋಸಿಯಸ್ ಕಾಲೇಜು, ಮಂಗಳೂರು–3
13	ಸಿ.ಪಿ.ಕೆ.	ಡಾ. ಸಿ. ಪಿ. ಕೃಷ್ಣಕುಮಾರ್, ಉಪಪ್ರಾಧ್ಯಾಪಕರು, ಕನ್ನಡ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-6
14	ಓ. ಎನ್. ಲಿಂಗಣ್ಣಯ್ಯ	ಗಣ್ಯ ಸಾಹಿತಿಗಳು, ಶ್ರೀಕಂಠೇಶ್ವರನಿಲಯ, ಶಂಕರಮಠದ ಬೀದಿ, ಮೈಸೂರು

15 ಹೊರೆಯಾಲ ದೊರೆಸ್ವಾಮಿ ಸಂಶೋಧನ ಸಹಾಯಕರು, ಹರಿದಾಸ ಸಾಹಿತ್ಯ ಸಂಶೋಧನ ಶಾಖೆ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು

16 ಪಿ. ಬಿ. ಬಡಿಗೇರ ಅಧ್ಯಾಪಕ, ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಕುವೆಂಪು

ಸಿದ್ಧೆಹಳ್ಳಿ ಮತ್ತು ತಾರಿಣಿಯ ಪ್ರಾರ್ಥನೆ

೧

ಬೆಂಗಳೂರಿನಿಂದ ದೂರ ದೂರ ದೂರ
ಎರಡು ನೂರು ದೂರ
ಶಿವಮೊಗ್ಗೆಗೆ ಧಾವಿಸಿತ್ತು ಕವಿಯ ಕಾರು
ಕಾಲದೇಶ ಲಗ್ಗೆಗೆ ಕ್ಷಣಕ್ಷಣಕ್ಷಣಕೆ ಮೈಲಿ ಮೈಲಿ ಮೈಲಿ
ಹಾರುತ್ತಿತ್ತು ಕವಿಯ ಕಾರು :
ತೇಲುತಿತ್ತು, ಚಿಮ್ಮುತಿತ್ತು ಈಜುತಿತ್ತು ಮಿಂಚುತಿತ್ತು
ಸಿಮೆಂಟು, ಟಾರು!
ಉಬ್ಬು ತಗ್ಗು ನೇರ ಡೊಂಕು
ಕರಿಯ ರಸ್ತೆ ಹಾವು ಹರಿಯುತಿತ್ತು
ಸರ್ಪಿಸಿ!
ದೂರದೊಂದು ಭವಿಷ್ಯದಂತೆ
ಕಂಡ ಆ ದಿಗಂತವೊಡನೆ
ವರ್ತಮಾನವಾಗಿ ಕಾರಿನಡಿಯೆ ತೂರಿ
ಭೂತಕಾಲವಾಗಿ ಸ್ಮರಣಮಾತ್ರವಾದ ತೆರದಲಿ
ವೇಗ ವೇಗ ವೇಗ ಭರದಲಿ
ತನ್ನ ತಾ ಸಮರ್ಪಿಸಿ
ಧಾವಿಸಿತ್ತು ಕವಿಯ ಕಾರು!

೨

ಕವಿ: ವೈಸ್ ಛಾನ್ಸಲರ್!
ಕಾರ್: ಸ್ಟುಡಿಬೇಕರ್!
ಸದ್ಯದ ಡ್ರೈವರ್: ಪೂರ್ಣಚಂದ್ರ ತೇಜಸ್ವಿ!
ಅವನ ಪಕ್ಕ ನಿಜ ಡ್ರೈವರ್!
ಜವದ ಹುಚ್ಚೆ ಹಿಡಿಯಿತೇನೊ ಪೆಟ್ರೋಲಿಗೆ!
ಅತ್ತ ಇತ್ತ ಕಾರ್ತಿಕದ
ನೆಲದ ಸಿರಿ ಹಸುರಿಸೆ

ನೀಲಿ ಬಾನು, ಮುಗಿಲ ಲೀಲೆ,
ನೆತ್ತಿ ಮೇಲೆ ಹಸರಿಸೆ......
ಅಯ್ಯೊ
ಇತ್ತ ನೋಡು......ದೇವರೆ ಗತಿ,
ಅರುವತ್ತು! ಎಪ್ಪತ್ತು! ಎಪ್ಪತ್ತೈದು!......
ಗೂಳಿಗಣ್ಣ ಸ್ಪೀಡಾಮಿಟರ್ ಕೂಗಿ ಹೇಳುತಿತ್ತು.

೩

"ಬೇಡ ಕಣೋ ಇಷ್ಟು ಸ್ಪೀಡು!"
"ಬಿಡಿ, ಅಣ್ಣಾ, ಸುಮ್ಮನಿರಿ,
ನನಗೆ ಗೊತ್ತಿದೆ!"
ಎಂದಿನಂತೆ ತೇಜಸ್ವಿಯ ಉಡಾಫಿ ಉತ್ತರ!
ಸರಿ, ಕಣ್ಣು ಮುಚ್ಚಿ ಕುಳಿತೆ:

ದಕ್ಷಿಣೇಶ್ವರ! ಭವತಾರಿಣಿ!
ಜಗದಂಬೆಗೆ ಚವರಿ ಬೀಸುತಿಹರು ಪರಮಹಂಸರು!
ಕೈಯ ಮುಗಿದು ನಿಂತು ನೋಡಿ ಧನ್ಯನಾಗುತಿದ್ದೆ.

ಚಕ್ರವೇಕೊ ಕೀರೆಂದಿತು:
ಒಳ್ಳೆರಸ್ತೆ, ನೇರ ರಸ್ತೆ,
ಆದರೇನು? ಗಾಲಿ ವಾಲಿ ಸದ್ದು ಮಾಡತೊಡಗಿದೆ!

"ಸ್ಟೀರಿಂಗೇಕೊ ಸರಿ ಇಲ್ಲ; ಸ್ವಲ್ಪ ಎಣ್ಣೆ ಬಿಡಬೇಕಿತ್ತೊ?"
"ನಿನ್ನೆ ಅಲ್ಲ ಮೊನ್ನೆ ತಾನೆ ಲೂಬ್ರಿಕೇಷನ್ ಆಗಿದೆ"
ಎಂದ ಡ್ರೈವರ್, ಡ್ರೈವ್ ಮಾಡುತಿದ್ದ ತೇಜಸ್ವಿಗೆ.
"ಚಕ್ರವೇಕೊ ಎಡದ ಕಡೆಗೆ ವಾಲುತ್ತಿದೆ!"

ಗಾಡಿ ನಿಂತಿತು. ಪರೀಕ್ಷೆ ಸಾಗಿತು:
ಜಾಕ್ ಹೊರಗೆ ಬಂದಿತು.
ಗಾಡಿ ಮೇಲಕೆದ್ದಿತು.
ಚಕ್ರ ಬಿಚ್ಚಿದರು.
ಸ್ಪ್ಯಾನರ್–ಸ್ಕ್ರೂ, ಡ್ರೈವರ್–ವ್ಹೀಲ್ ಸ್ಪಾನರ್– ಟಕ್ ಟಕ್ ಟಕ್......
ಅರ್ಧ ಗಂಟೆ ಮುಗಿದ ಮೇಲೆ ಮತ್ತೆ......
ಹೊರಟಿತು!

೪

ಚಕ್ರ ಮತ್ತೆ ಸಮೆಯುತಿತ್ತು: ಕಿರೋ ಕಿರೋ ಕಿರೋ!
ಫಿಷ್ ಪ್ಲೇಟ್...ಟೈರ್ ರಾಡ್ ಎಂಡ್......
ಮಣ್ಣು, ಮಸಣ...ನನಗೆ ಅರ್ಥವಾಗದಿದ್ದ ನೂರು ಹೆಸರು...

ಕಡೆಗೆ ಮತ್ತೆ ಗಾಡಿ ನಿಂತಿತು:
ಸರಿ, ಮತ್ತೆ ಇಳಿದರಿಬ್ಬರೂ.
ನಾ...ನೂ...ಇಳಿದೆ! !
ಏನು ಮಾಡುವುದು?
"ಚಕ್ರ ವಾಲಿ ಹೀಗೆ ಗಾಡಿ ನಡೆದರೆ
ಬಹಳ ಕೆಟ್ಟದು" ಎಂದ ತೇಜಸ್ವಿ.
"ಹೌದು ಅಣ್ಣ" ಎಂದು ಡ್ರೈವರ್ ಪಲ್ಲವಿ!

ಮತ್ತೆ ಜಾಕು ಕೊಟ್ಟು ಕಾರು ಎದ್ದಿತು.
ಡ್ರೈವರ್ ಕಾರಿನ ಹೊಟ್ಟೆ ಅಡಿ ಅಡಗಿದ
ದಾರವಿಟ್ಟು ಆಳೆದರು: ಏಕೊ ಏನೊ?
ಅದರ ಬದಲು ಕುಂಕುಮ ಹಚ್ಚಿದ್ದರೂ
ಆಗುತಿತ್ತೇನೊ!

೫

ನನಗೆ ರೇಗಿತು:
"ಮೊನ್ನೆ ತಾನೆ ಲ್ಯೂಬ್ರಿಕೇಷನ್ ಮಾಡಿಸಿದೆ.
ಇಂದು ಕಾರು ದಾರಿಯಲ್ಲಿ ತೊಂದರೆ ಕೊಡುತ್ತಿದೆ.
ನಿನಗೆ ತಲೆ ನೆಟ್ಟಗಿದ್ದರೆ ಹೀಗಾಗುತಿತ್ತೆ?
ನೀನೊಬ್ಬ ಡ್ರೈವರ್...ಕೆಲಸಕ್ಕೆ ಬಾರದವ...
ಬೆಪ್ಪು ಮುಂಡೇದು!......
ಹೀಗೆ ಸಹಸ್ರನಾಮ!......
ಇನ್ನೆಂದಿಗೂ ಈ ಡ್ರೈವರು ಈ ಕಾರು ನಂಬಿ
ದೂರ ಪಯಣಕ್ಕೆ ಹೊರಡುವುದಿಲ್ಲ.
ಇದೇ ಕೊಟ್ಟ ಕೊನೆ! ಇದೇ ಕೊಟ್ಟ ಕೊನೆ!"
ಹೀಗೆ ನನ್ನ ಸಿಟ್ಟು ಹರಿಯುತಿತ್ತು!
ಮತ್ತೆ ಹೇಳಿದೆ:
"ಹೊರಡಿ ಈಗ
ಹೇಗಾದರು ಅರಸಿಕೆರೆಯವರೆಗೆ ಹೋಗಿ
ವರ್ಕ್‌ಷಾಪಿನಲ್ಲಿ ತೋರಿಸಿ ಸರಿಪಡಿಸೋಣ!"
ಆಗಲೆ ಎರಡು ಗಂಟೆ ಕಳೆದಿತ್ತು ರಿಪೇರಿಯಲ್ಲಿ!

೬

ಮತ್ತೆ ಕಾರು ಹೊರಟಿತು :
ಕಡಮೆ ವೇಗದಲ್ಲೆ ಹೊರಟಿತು!
ಮತ್ತೆ ಅದೇ ಸದ್ದು! ಅದೇ ವಾಲಿಕೆ......

ಅದೇ ಹೊತ್ತಿನಲ್ಲಿ
ದೂರ ಮೈಸೂರಿನಲಿ, ಮನೆ 'ಉದಯರವಿ'ಯಲ್ಲಿ,
ಮಗಳು ತಾರಿಣಿ ಗುಡಿಸಿ, ದೇವರ ಮನೆಯ ತೊಳೆದು,
ಹೂ ಮುಡಿಸಿ, ಸೊಡರ ಹೊತ್ತಿಸಿ, ಊದುಕಡ್ಡಿಯಿಟ್ಟು

ಒಂದು ವಾರದ ವರೆಗೆ ದೂರ ಪಯಣಕೆ ಹೋದ
ತಂದೆಯನು ನೆನೆದು
"ಸುಗಮವಾಗಲಿ ದೇವ, ಅಣ್ಣನಿಗೆ ಪಯಣ!
ಕ್ಷೇಮವಾಗಿಯೆ ಅಣ್ಣ ತಿರುಗಿ ಬರಲಿ!"
ಎಂದು ಪ್ರಾರ್ಥನೆ ಮಾಡುತಿರೆ ಭಕ್ತಿ ತುಂಬಿ:

ಡ್ರೈವರನ ತಲೆಗೇನೊ ತೆಕ್ಕನೆಯೆ ಹೊಳೆದಂತಾಯ್ತು:
"ಟೈರ್ ರಾಡ್ ಎಂಡ್ ಅಲೈನ್‌ಮೆಂಟ್ ನೋಡಬೇಕಿತ್ತಣ್ಣಾ......"
"ನಿನ್ನ ತಲೆ! ನಿನ್ನ ಬೆಪ್ಪುತಕ್ಕಡಿತನ ಮುಚ್ಚುಕೊಳ್ಳೋಕೆ
ಬಾಯಿಗೆ ಬಂದದ್ದು ಬೊಗಳ್ತೀಯಾ!"
ಎಂದು ಸ್ವಲ್ಪ ದೂರ ಹೋಗಿ ಚಕ್ರ ಕೀರುವ ಸದ್ದಿಗೆ ಕನಿಸಿ ತೇಜಸ್ವಿ;
"ಇಲ್ಲ, ಅಣ್ಣಾ, ಕಾರು ಹಾಳಾಗುತ್ತದೆ
ಹೀಗೇ ನಾವು ಮುಂದುವರಿದರೆ.
ಟೈರ್ ರಾಡ್ ಎಂಡ್ ಅಲೈನ್‌ಮೆಂಟ್ ನೋಡಿದರೆ
ಸರಿಹೋಗಬಹುದೇನೋ!"
ರಸ್ತೆ ಎಡಕೆ ಕಾರು ನಿಂತಿತು. ಕೆಳಗೆ ಇಳಿದೆವು ಮತ್ತೆ:

೭

ಗಡ್ಡ ಬಿಳಲಿಳಿದ ಹಸುರಿನ ದಟ್ಟ ಹೇರಾಲಗಳ ಹಂತಿ
ಸಾಲು ಸಾಲಾಗಿ ನಿಂತು ರಸ್ತೆಯಿಕ್ಕೆಲದಲ್ಲಿ
ನಮಗೆ ಗೌರವ ರಕ್ಷೆ ನೀಡಿದ್ದುವು.
ಕಾರ್ತಿಕದ ಹಿತ ಬಿಸಿಲು ಹಸುರು ಹೊಲಗಳ ಮೇಲೆ
ಹುಲುಸಾಗಿ ಹಸರಿಸಿತ್ತು.

ಹಣ್ಣು ತುಂಬಿದ ಆಲ ಹಕ್ಕಿಗಳನೌತಣಕೆ ಕರೆದಿತ್ತು:
ಲಕ್ಷ ಪಕ್ಷಿಯ ಕೊರಲು ಕಿವಿಗಿಂಪ ಸುರಿದಿತ್ತು.
ದಾರಿ ಬದಿ ಕಲ್ಲಬೋರ್ಡಿನೊಳಿತ್ತು ಬರೆಹ :
"ಸಿದ್ಲೆಹಳ್ಳಿ!"
ಅಲ್ಲೆಲ್ಲಿಯೂ ಹಳ್ಳಿ ಕಣ್ಗೆ ಕಾಣಿಸಲಿಲ್ಲ.
ಹೆದ್ದಾರಿಯಿಂದ ಮೊದಲಾಗಿ ಹೊಲಗಳ ನಡುವೆ ಹಾದಿ
ಬೋರೆಯನಿಳಿದು ಕಣ್ಗೆ ಮರೆಯಾಗಿತ್ತು.
ಏಳೆಂಟು ವರುಷಗಳ ಹೈದನೊಬ್ಬನು ಕಾರು ನೋಡಲು ಬಂದು
ಹಳ್ಳಿಯ ಕುತೂಹಲವ ಪ್ರತಿನಿಧಿಸಿ ನಿಂತಿದ್ದನಲ್ಲಿ.

ಜಾಕ್–ಟೈರ್ ಲಿವರ್–ಸ್ಪಾನರ್–ಚಕ್ರಕ್ಕೆ ಕಲ್ಲಾಪು.
ಟೈರ್ ರಾಡ್ ಎಂಡ್ ಅಲೈನ್‌ಮೆಂಟ್ ನೋಡಲಿಕ್ಕೆ
ಕಾರಿನಡಿ ಹೊಟ್ಟೆ ಮೇಲಾಗಿ ಮಲಗಿದನು ಡ್ರೈವರ್.
"ಓಹೋ ಹೋ ಹೋ–ಅಣ್ಣಾ!"
"ಏನೋ?" ಕೇಳಿದನು ತೇಜಸ್ವಿ.
"ಟೈರ್ ರಾಡ್ ಎಂಡ್ ಅಲೈನ್‌ಮೆಂಟ್ ಅಲ್ಲ..."
"ಮತ್ತೇನೋ?"
"ಫ್ರಂಟ್‌ವ್ಹೀಲ್ ಮೆಯನ್ ಸ್ಪ್ರಿಂಗ್ ಸ್ಕ್ರೂ ಬಿದ್ದುಹೋಗಿದೆ!"
"ಛೆ ಛೆ ಛೆ! ಏನಪಾಯವಾಗುತಿತ್ತು! ! ......"

'ಉದಯರವಿ'ಯ ದೇವರ ಮನೆಯಲ್ಲಿ
ಪ್ರಾರ್ಥಿಸುತಿದ್ದ ತಾರಿಣಿಯ ಕೈ ಮುಗಿಯುತಿತ್ತು.
ಆಗಳಾಗಳೆ ಮುಗಿಯುತಿತ್ತು
ಪ್ರಾರ್ಥನೆಯೂ:
"ಸುಗಮವಾಗಲಿ, ದೇವ, ಅಣ್ಣನಿಗೆ ಪಯಣ!
ಕ್ಷೇಮವಾಗಿಯೆ ಅಣ್ಣ ಹೋಗಿಬರಲಿ!"

೨೬–೧೧–೧೯೫೬

(೧೮–೧೧–೧೯೫೬ ರಂದು ಶಿವಮೊಗ್ಗೆಗೆ ಬೆಳಗ್ಗೆ ಕಾರಿನಲ್ಲಿ ಹೊರಟಿದ್ದೆವು. ಮಧ್ಯೆ ದಾರಿಯಲ್ಲಿ ನಡೆದ ಘಟನೆಯಿಂದ ಪ್ರೇರಿತವಾದದ್ದು.)

ಮುಳಲಿ ವಸಂತಕುಮಾರ್

ಕಾಮ

ಕಾಮ–ಕಾಮನ ಬಿಲ್ಲು
ಮನರಂಗದಲಿ ನೂರು ನವಿಲಾಟ
ಬಯಕೆ ಗರುಡನ ಹರಿದಾಟದಲಿ ಇರಿವ ತೀಕ್ಷ್ಣನೋಟ
ಕಣ್ಣಂಜಲಿಗೆ ಮನದೆಂಜಲಿನ ಸೋಂಕು
ಜಗಜಾತ್ರೆಯಲಿ ಆಸೆಯಂಗಡಿ ಸಾಲು
ರಂಗು ರಂಗಿನ ಮಾಲು
ಆದರೇನು.........
ಇಚ್ಛಾಶ್ವಗಳ ಸಂಕೊಲೆಯ ಬಾಳು!
ನನ್ನಂತೆ ನಿನ್ನ ನಿನ್ನಂತೆ ನನ್ನ
ಎಲ್ಲರಲಿ ಇರುವ ಹಲವಾರು ಬಣ್ಣ
ಬಯಲಾಗದಂತೆ ಬಳಿದ ಭಯದ ಬಿಳಿಯ ಸುಣ್ಣ
ವಾಸ್ತವಕೆ ಧರ್ಮದ ಮುಳ್ಳುಬೇಲಿ?
ಪ್ರಕೃತಿಗೆ ನೀತಿಯ ಕಲ್ಲುಕಟ್ಟೆ?
ನಮಗಿಲ್ಲ ಮುಕ್ತಮಾರುಕಟ್ಟೆ!

ಬಿ. ಜಿ. ಎಲ್. ಸ್ವಾಮಿ

ಪಂಪನ ಕಾವ್ಯಗಳಲ್ಲಿ ಹೂಗಿಡಮರಬಳ್ಳಿಗಳು

ಕೆಂದಳಿರನ್ನೂ ಗುತ್ತಿಹೂವನ್ನೂ ತಳೆದ ಮಾವಿನಮರವೇ ಒಂದು ಕನ್ನಡ ಕಾವ್ಯವಾಯಿತು. ಕವಿತಾ ಗುಣಾರ್ಣವನಿಗೆ. ಕಾವ್ಯಾರಣ್ಯದಲ್ಲಿ ಎಷ್ಟೋ ಬಗೆಯ ಸಸ್ಯಗಳು ಬೆಳೆಯುತ್ತವೆ, ಆದರೆ ರಸಿಕರಾದ ದುಂಬಿಗಳೂ ಕೋಗಿಲೆಗಳೂ ಅರಿಸಿಕೊಂಡು ಬಂದು ಮುತ್ತುವುದು ಈ ಒಂದು ಮರವನ್ನೇ. "ಮುತ್ತುಂ ಮೆಟಿಸುಂ ಕೋಪಂತೆ" ಇರವೆ. ದೇಸಿಯೂ ಮಾರ್ಗವೂ (ಕೆಂದಳಿರೂ ಹೂಕೊತ್ತೂ ಅಥವಾ ಹೂ ಕೊತ್ತೂ ಕೆಂದಳಿರೂ) ಒಂದರೊಡನೊಂದು ಹುದುವಾಗಿ ಕಲೆತು ಅನುವಾದ ಬಂಧವೇ ಒಳ್ಳೆಯ ಕಾವ್ಯದ ಲಕ್ಷಣ ಎಂಬ ಧ್ವನಿಯನ್ನು ಇಂಥ ಮಾವಿನ ಮರದಲ್ಲಿ ಚಿತ್ರರಿಸಿದ್ದಾನೆ. ಪಂಪ (ವಿ.ವಿ. ೧–೮). ಗಿಡಮರಹೂಬಳ್ಳಿಗಳಲ್ಲಿ ಕವಿತೆಯನ್ನು ಕಂಡ ಅಪೂರ್ವ ಕನ್ನಡ ಕವಿ ಪಂಪ. ಚಾರಿತ್ರಿಕತೆಯೊಂದರಿಂದ ಮಾತ್ರ 'ಆದಿ'ಯಾದ ಕವಿಯಲ್ಲ ಪಂಪ; ಬಗೆ ಬಗೆಯ ಸೌಂದರ್ಯಾನುಭವಗಳನ್ನು ಸಹಜತೆಯಿಂದ ಛಂದಸ್ಸಿನಲ್ಲಿ ಕರುಣಿಸಿದ ಆದಿಕವಿ, ವರಕವಿ ಪಂಪ.

ಆದರೆ ಪಂಪನಿಗೆ ಅಡ್ಡಲಾಗಿ ಬಿದ್ದಿರುವ ಕಾವ್ಯನಿರ್ಬಂಧವೊಂದನ್ನು ಜ್ಞಾಪಕದಲ್ಲಿಟ್ಟುಕೊಳ್ಳ ಬೇಕು. ಪಂಪನ ಕಾಲಕ್ಕೆ ಮೊದಲೇ ಕವಿರಾಜಮಾರ್ಗವು ಕಾವ್ಯಮೀಮಾಂಸೆಯನ್ನು ಕುರಿತಿದೆಯಲ್ಲವೆ? ಎಂದರೆ ಕನ್ನಡ ಕಾವ್ಯಕ್ಕೊಂದು ಲಕ್ಷಣಗ್ರಂಥ ಒದಗಿ ಬಂದು ಕಾವ್ಯಮರ್ಯಾದೆಯೆಂಬ ನಿಯ ಸ್ಥಾಪಿತ ವಾಗಿತ್ತು. ಪಂಪನು ಕವಿರಾಜಮಾರ್ಗದಲ್ಲಿ ಎಷ್ಟು ದೂರ ನಡೆದಿದ್ದಾನೆ ಎಂಬ ತುಲನೆ ಇನ್ನೂ ನಡೆಯ ಬೇಕಾಗಿದೆಯಾದರೂ ಆ ಗ್ರಂಥದ ವಸ್ತು ಇವನಿಗೆ ಪರಿಚಯವಾಗಿತ್ತು ಎಂದು ನಂಬಬಹುದಾಗಿದೆ. ಸಂಸ್ಕೃತ ಕಾವ್ಯ ಪರಂಪರೆಯೂ ಅವನಿಗೆ ತಿಳಿದಿತ್ತು. ಹೀಗಾಗಿ ಕಾವ್ಯಮರ್ಯಾದೆಯೆಂಬೊಂದು ಸಂಪ್ರದಾಯ ಪಂಪನ ಬೆನ್ನು ಹತ್ತಿ ಕುಳಿತಿತ್ತು. ಅಂಥ ಸಂಪ್ರದಾಯಗಳನ್ನು ಪಾಲಿಸುವ ಸಂದರ್ಭಗಳಲ್ಲಿ ಪಂಪನು ಕವಿಯ ರಾಜಮಾರ್ಗವನ್ನು ತೊರೆದು ಕವಿಸಾಮಾನ್ಯನು ನಡೆಯುವ ರಸ್ತೆಯನ್ನು ಹೊಕ್ಕಿದ್ದಾನೆ.

"ಕಕುಭಾಶೋಕ ಕದಂಬ ಲುಂಗ ಲವಲೀ ಭೂಜಾರ್ಜುನಾನೋಕಹ ಪ್ರಕರಂ ಪುಷ್ಪಿತ ಹೇಮ ಪಂಕಜ......"(ವಿ.ವಿ. ೫–೮೦) ಇದು ಖಾಂಡವವನದಲ್ಲಿ ಬೆಳೆಯುತ್ತಿದ್ದ ಗಿಡಮರಗಳ ಪಟ್ಟಿ. ಖಾಂಡವವನ ಒಂದು ಕಲ್ಪಿತ ಪ್ರದೇಶವೆಂದೇ ಇಟ್ಟುಕೊಳ್ಳೋಣ. ಅಲ್ಲಿ ನಿಜವಾಗಿಯೂ–ಎಂದರೆ ಸಸ್ಯಶಾಸ್ತ್ರ ದೃಷ್ಟಿಯಿಂದ– ಗಿಡಮರಗಳೆಲ್ಲ ಬೆಳೆಯುತ್ತಿದ್ದವೆ ಎಂಬ ಪ್ರಶ್ನೆ ಏಳುತ್ತದೆ. ಈ ಸಸ್ಯ ಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು:

ಗುಂಪು ೧	ಗುಂಪು ೨	ಗುಂಪು ೩	ಗುಂಪು ೪
ಕದಂಬ	ಲವಲೀ	ಕಕುಭ	ಭೂಜ
ಅಶೋಕ	ಲುಂಗ	ಅರ್ಜುನ	
		ಹೇಮಪಂಕಜ	

ಮೊದಲನೆ ಗುಂಪಿನ ಸ್ವಾಭಾವಿಕ ನಿವಾಸ ಸರಾಸರಿ ೧೫೦ ಅಂಗುಲಕ್ಕೆ ಮೀರಿದ ಮಳೆಯನು ಕೊಂಡ ಪ್ರದೇಶ; ಎರಡನೆ ಗುಂಪು ಸರಾಸರಿ ೧೦೦ ಅಂಗುಲ ಮಳೆ ಬೀಳುವ ಪ್ರದೇಶದಲ್ಲಿ ಮಾತ್ರ

ಸಾಧಾರಣವಾಗಿ ಬೆಳೆಯುತ್ತದೆ; ೮೦ ಅಂಗುಲಕ್ಕೆ ಹೆಚ್ಚಾಗಿ ೧೦೦ ಅಂಗುಲಕ್ಕೆ ಕಡಿಮೆಯಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಮೂರನೆ ಗುಂಪಿನ ಗಿಡಗಳು ಬೆಳೆಯುತ್ತವೆ; ನಾಲ್ಕನೆ ಗುಂಪಿನ ತೌರು ಹಿಮಾಲಯ ಪರ್ವತದಲ್ಲಿ, ಐದಾರು ಸಾವಿರ ಅಡಿ ಎತ್ತರದಲ್ಲಿ. ಮಿಕ್ಕ ಮೂರು ಗುಂಪುಗಳ ಹರವು ೩,೦೦೦ ಅಡಿ ಮಟ್ಟಕ್ಕಿಂತಲೂ ಕೆಳಗಿರುವ ಪ್ರದೇಶಗಳಲ್ಲಿ. "ಸರಳ ತಮಾಳ ತಾಳ ಹರಿಚಂದನ ಸಂವನ ಭೂಜ......" (ವಿ.ವಿ. ೫-೫೨). ಇವು ಕಾವ್ಯಧರ್ಮಕ್ಕನುಸಾರವಾಗಿ ಯಮುನಾ ತೀರದ ಗಿಡಮರಗಳು. ಸರಳವೂ ತಮಾಳವೂ ಒಂದೇ ಪ್ರದೇಶದಲ್ಲಿ ಬೆಳೆಯವು; ತಾಳವೂ ಭೂಜವೂ ಬೇರೆ ಬೇರೆ ಭೂವಾಯು ಸನ್ನಿವೇಶಗಳಲ್ಲಿ ಬೆಳೆಯುವಂಥವು. ಹೀಗೆಯೇ "ಫಳ ಕರ್ಪೂರ ಲವಂಗ ಲುಂಗ ಲವಲೀ ಹಿಂತಾಳ ತಾಳೀ ತಮಾಳಳತಾ......" (ವಿ.ವಿ. ೫-೮೬). ವರ್ಣನೆಯೆಂಬ ಸಂಪ್ರದಾಯಕ್ಕೆ ಮರ್ಯಾದೆ ಸಲ್ಲಿಸುವುದಕ್ಕಾಗಿ ಪಂಪನು ಬೇರೆ ಬೇರೆ ಪ್ರದೇಶಗಳ ಗಿಡಮರಗಳನ್ನು ಒಂದೇ ತಾವಿನಲ್ಲಿ ಕುಪ್ಪೆ ಹಾಕಿದ್ದಾನೆ.

ಇಂಥ ಸಂದರ್ಭಗಳು ಕೆಲವನ್ನು ಬಿಟ್ಟರೆ ಪಂಪನ ನೈಜ ಕವಿತಾಸ್ಫೂರ್ತಿ 'ಭೃಂಗದ ಬೆನ್ನೇರಿ' ಸ್ವೇಚ್ಛೆಯಾಗಿ ವಿಶಾಲತೆಯಲ್ಲಿ ಹರಡಿದೆ. ಈ ಸವಾರಿಯ ಝೇಂಕಾರ ತರಂಗಗಳ ಸ್ಪರ್ಶದಿಂದ ಗಿಡಮರಗಳಲ್ಲಿ ಚೆಲುವಾದ ಚಿಗುರೊಡೆದಿದೆ, ಕೋಮಲವಾದ ಹೂ ಬಿರಿದಿದೆ, ಇನಿದಾದ ಹಣ್ಣು ತೊಂಗಿದೆ.

* * * *

ಒಂದೊಂದು ಹೂವಿನ ಪ್ರತ್ಯೇಕವಾದ ಚೆಲುವಿಗೂ ಪರಿಮಳಕ್ಕೂ ಒಂದೇ ಪ್ರಕಾರದಲ್ಲಿ ಮನಸೋತಿದ್ದಾನೆ, ಪಂಪ. ಅವನಿಗೆ ಬಹುಪ್ರಿಯವಾದ ಹೂಗಳ ಕೊಂಡಾಟಕ್ಕಾಗಿಯೇ ಬಿಡಿ ಪದ್ಯಗಳನ್ನು ಮೀಸಲಾಗಿಟ್ಟಿದ್ದಾನೆ. ಕೆಲವು ಸಲ ಹೂ-ಹೂಗಳಿಗೆ ಪೈಪೋಟಿಯಿಟ್ಟು ತುಂಟಾಟವಾಡಿದ್ದಾನೆ. ಜಾದಿಹೂವಿನ ಬಾಳುವೆ ಅರೆಗಳಿಗೆಯಲ್ಲಿ ಮುಗಿದು ಹೋಗುತ್ತದೆ, ಆದರೂ ಅದಕ್ಕೆ ವಿಪರೀತ ಅಹಂಕಾರ; ಮಲ್ಲಿಗೆಯ ಬೆಡಗೂ ಹಾಗೆಯೇ ಕ್ಷಣಿಕ; ಸಿಂದುರ ಹಾಗಲ್ಲ. ಅದರದು ಮುಗಿಯದ ತನಿಗಂಪು. ಸೊಡರ ಪಕ್ಕದಲ್ಲಿ ಜಾಜಿ ಕಾಂತಿಹೀನ; ಸಂಪಗೆಗೆ ದುಂಬಿಯನ್ನು ಕಂಡರೆ ದ್ವೇಷ; ತುರುಬಿನಲ್ಲಿ ಮುಡಿದರೆ ಅದಿರ್ಮುತ್ತೆ ಸೊಗಯಿಸದು; ಗೊಜ್ಜಗೆ ಮಸಿಗೆ ಸಮ; ಆದರೆ ಮಲ್ಲಿಗೆ ಮದನನ ಮುಡಿಯಲ್ಲಿ ಕೂಡ ಶೋಭಿಸುತ್ತದೆ, ಅವನ ಕೈಲಿ ಶಹಭಾಸ್ ಎನ್ನಿಸಿಕೊಳ್ಳುತ್ತದೆ.

* * * *

ಬಳ್ಳಿಯಲ್ಲದ ಗಿಡಮರಗಳಿಗೆಲ್ಲ 'ಲತಾ' ಪ್ರಯೋಗ ಮಾಡಿದ್ದಾನೆ. ಪಂಪ. ಸಂಸ್ಕೃತದಲ್ಲಿ ಲತಾ ಎಂದರೆ ಕೋಮಲವಾದ ಎಂಬ ಸಾಮಾನ್ಯಾರ್ಥವಿದೆ, ಎಂದರೆ ತೆಳುವಾಗಿ ಬಳುಕುವ ಬಳ್ಳಿ. ಈ ಅರ್ಥದಲ್ಲಿ ಪಂಪನ ಎಲೆವಳ್ಳಿ (ವಿ.ವಿ. ೪-೨೮; ಆ.ಪು. ೧-೬೭), ಪೂತಮಲ್ಲಿಗೆಯ ಬಳ್ಳಿ (ವಿ.ವಿ. ೭-೮೧) ಮಾಧವೀಲತೆ, ನವಮಾಳಿಕಾಲತೆ (ಆ.ಪು. ೪-೯೨ಗ) ಮೊದಲಾದ ಪದಸಂಯೋಜನೆಗಳು ಉಚಿತವಾಗಿವೆ.

ಏಲಲತಾ	ವಿ.ವಿ. ೪-೨೩
ಅಶೋಕೆಗಳ ಮಿಸುಪ ಲತೆ	ವಿ.ವಿ. ೫-೩
ಅಶೋಕೆಗಳ ಲತೆ	ವಿ.ವಿ. ೫-೪; ಆ.ಪು. ೪-೯೨ಗ
ಅಶೋಕ ಲತೆ	ವಿ.ವಿ. ೫-೧೨
ತಮಾಳ ಲತಾ	ವಿ.ವಿ. ೫-೮೬; ಆ.ಪು. ೪-೯೨ಗ
ಚೂತಲತೆ	ಆ.ಪು. ೪-೯೨ಗ

ಏಲದ ಗಿಡಕ್ಕೆ ವಿಜ್ಞಾನ ಪರಿಭಾಷೆಯಲ್ಲಿ ಹರ್ಬ್ (herb, ರಸಭರಿತವಾದ ಸಣ್ಣಗಿಡ) ಎಂಬ ಮಾತು ಬಳಕೆಯಲ್ಲಿದೆ; ಕ್ಲೈಂಬರ್, ಟ್ವೈನರ್ (climber, twiner) ಮೊದಲಾದ ಮಾತುಗಳು ಬಳ್ಳಿಯನ್ನು (ಲತಾ) ಸೂಚಿಸುತ್ತವೆ. ಏಲದ ಎಲೆಕಾಂಡ ನೆಲದೊಳಗಿನಿಂದ ಒಡೆದು ಗುಂಪಾಗಿ ನೀಟಾಗಿ ಬೆಳೆಯುತ್ತದೆ. ಮೇಲಿನ ಪಟ್ಟಿಯಲ್ಲಿರುವ ಇತರ ಸಸ್ಯಗಳೆಲ್ಲ ಮರಗಳು (trees). ಲತೆಯ ಸಾಮಾನ್ಯ ಅರ್ಥಕ್ಕೆ ಅವು ಒಳಪಡವು. ಪಂಪನಿಗೂ ಇದು ತಿಳಿದ ಸಂಗತಿಯೇ. ಆದರೂ ಲತಾಪ್ರತ್ಯಯವನ್ನು

ಉದ್ದೇಶಪೂರ್ವಕವಾಗಿಯೇ ಅಂಟಿಸಿರುವಂತೆ ತೋರುತ್ತದೆ. ರೆಂಬೆ ಕೊಂಬೆಗಳಿಂದ ಹೊಸತಾಗಿ ಒಡೆದ ಕುಡಿ ಲತೆಯಂತೆಯೇ ಕೋಮಲವಾದ ಗಿಡಭಾಗ. ಲತೆಯಂತೆಯೇ ತೆಳ್ಳಗಿದ್ದು ಬಳುಕಾಡುತ್ತದೆ. ರಸಭರಿತವಾಗಿರುತ್ತದೆ. ಈ ಪರ್ವದಲ್ಲಿರುವ ಟೊಂಗೆಗ್ಗಳಿಗೆ ಕಾವ್ಯಮಯ ದೃಷ್ಟಿಯಿಂದ ಲತಾ ಎಂಬ ವಿಶೇಷಣವನ್ನು ಕೊಟ್ಟು ಅವನಿಗೂ ಹಿಂದಿನ ಸಂಸ್ಕೃತ ಕವಿಮಾರ್ಗವನ್ನೇ ತುಳಿದಿದ್ದಾನೆ. ಎಂದರೆ, ಸಸ್ಯದ ಒಂದು ನಿಲವಿಗೆ ಅನ್ವಯವಾಗಬೇಕಾದ ಪದವನ್ನು (ಲತಾ = climber, twiner) ಮರದ ಎಳೆಟೊಂಗೆ ಭಾಗಕ್ಕೆ ಸಂಕುಚಿತಾರ್ಥದಲ್ಲಿ ಉಪಯೋಗಿಸಿದ್ದಾನೆ. ಚೂತಲತಾ ಎಂದೊಡನೆ ಬಳ್ಳಿಯಂತಿರುವ ಮಾವಿನಮರ ಎಂದು ನೇರವಾದ ಅರ್ಥ ಬರುವುದಾದರೂ–ಸಸ್ಯಶಾಸ್ತ್ರಜ್ಞನಿಗೆ ದಿಗ್ಭ್ರಮೆ ತರುವುದಾದರೂ–ಮಾವಿನಮರದ ಎಳೆಯ ಕುಡಿ ಎಂಬ ಕಾವ್ಯಾರ್ಥದಲ್ಲಿ ಗ್ರಹಿಸಬೇಕು. ಬಳ್ಳಿಯಲ್ಲದ ಸಸ್ಯವನ್ನೂ ಸಸ್ಯಭಾಗವನ್ನೂ ಲತಾ ಎಂದು ಸಂಬೋಧಿಸುವುದು ಕವಿಸ್ವಾತಂತ್ರ್ಯ.

* * * *

ಈ ಲೇಖನದಲ್ಲಿ ಪ್ರಸ್ತಾಪಿಸಿರುವ ಕೆಲವು ಗಿಡಮರಗಳನ್ನು ಕುರಿತು ಪ್ರಬುದ್ಧ ಕರ್ಣಾಟಕದ ೫೪ನೇ ಸಂಪುಟದಲ್ಲಿ ಕೆಲವು ವಿವರಗಳನ್ನು ನಿವೇದಿಸಿದ್ದೇನೆ. ಓದುಗರು ಆ ಲೇಖನವನ್ನೂ ಪರಿಶೀಲಿಸುವರಾದರೆ ಹೆಚ್ಚು ಉಪಯೋಗ ಹೊಂದುತ್ತಾರೆಂಬ ನಂಬಿಕೆ ನನಗಿದೆ. ಅಲ್ಲಲ್ಲಿ 'ದೀಪಿಕೆ' ಎಂಬ ಪದ ಪ್ರಯೋಗ ಡಿ. ಎಲ್. ನರಸಿಂಹಾಚಾರ್ಯರ 'ಪಂಪ ಭಾರತ ದೀಪಿಕೆ'ಯನ್ನು ಕುರಿತದ್ದು. ಆಕರಗಳನ್ನು ತಿಳಿಸುವಾಗ ವಿ.ವಿ. (ವಿಕ್ರಮಾರ್ಜುನ ವಿಜಯ), ಆ.ಪು. (ಆದಿಪುರಾಣ) ಎಂಬ ಸಂಕೇತಗಳನ್ನು ಬಳಸಿದ್ದೇನೆ. ರೋಮನ್ ಅಂಕಿಗಳು ಅಧ್ಯಾಯವನ್ನೂ, ಅವನ್ನು ಹಿಂಬಾಲಿಸುವ ಇಂಗ್ಲಿಷ್ ಅಂಕಿಗಳು ಪದ್ಯ ಸಂಖ್ಯೆಯನ್ನೂ ತಿಳಿಸುತ್ತವೆ. ಕೆಲವು ಪದ್ಯ ಸಂಖ್ಯೆಗಳ ಮಗ್ಗುಲಲ್ಲಿ 'ಗ' ಅಕ್ಷರವನ್ನು ಉಪಯೋಗಿಸಿದ್ದೇನೆ; ಆಯಾ ಪದ್ಯವನ್ನು ಹಿಂಬಾಲಿಸುವ ಗದ್ಯಭಾಗ ಎಂದು ತಿಳಿಯಬೇಕು.

ಅರ್ಜುನ ಕುಕಭ

ಆಕರ ವಿ.ವಿ.–V ೮೦

ನಿಘಂಟುಗಳು ಈ ಎರಡು ಪದಗಳೂ ಒಂದೇ ಮರವನ್ನು ಕುರಿತದ್ದು ಎನ್ನುತ್ತವೆ. ಆದರೆ ಪಂಪ ಇವೆರಡು ಪದಗಳನ್ನೂ–ಒಂದೇ ಪದ್ಯದ ಒಂದೇ ಸಾಲಿನಲ್ಲಾದರೂ–ಬೇರೆ ಬೇರೆಯಾಗಿ ಉಲ್ಲೇಖಿಸಿದ್ದಾನೆ.

ಅರ್ಜುನವೃಕ್ಷ ಎಂಬುದು ಟರ್ಮಿನೇಲಿಯ ಅರ್ಜುನ (Terminalia arjuna). ದಕ್ಷಿಣ ಭಾರತದ ಮೈದಾನ ಪ್ರದೇಶಗಳಿಂದ ಹಿಡಿದು ಮೂರು ನಾಲ್ಕು ಸಾವಿರ ಅಡಿ ಎತ್ತರದ ಬೆಟ್ಟ ಪ್ರದೇಶಗಳಲ್ಲೆಲ್ಲ ಬೆಳೆಯುತ್ತದೆ. ಕಕುಭ ಎಂಬುದನ್ನು ಕೆಂಪುಮತ್ತಿ ಎಂದು ಕೆಲವು ಕೋಶಗಳು ನಿರ್ಣಯಿಸಿವೆ. ಮತ್ತಿ, ತಾರೆ, ಅಳಲೆ, ಅರ್ಜುನ ಮರಗಳೆಲ್ಲ ಟರ್ಮಿನೇಲಿಯ ಜೀನಸ್ಸಿಗೆ (genus) ಸೇರಿದ ಬೇರೆ ಬೇರೆ ಸ್ಪೀಷೀಸುಗಳು (species). ಕಕುಭವೂ ಒಂದಾಗಿರಬಹುದು.

ಟರ್ಮಿನೇಲಿಯ ಮರಗಳಲ್ಲಿಎತ್ತರವಾಗಿ ಬೆಳೆಯುತ್ತವೆ, ಚೌಬೀನೆ ಮರಗಳು. ಮತ್ತಿಯ ಚೌಬೀನೆ ಪ್ರಸಿದ್ಧವಾದದ್ದು. ಈ ಮರಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಾವ್ಯದಲ್ಲೂ ವೈದ್ಯದಲ್ಲೂ ಹೆಸರುಗೊಂಡಿವೆ.

ಅದಿಮುರ್ಂತೆ (Hiptage madablota)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಅದಿಮುರ್ಂತೆ, ಮಾಧವೀಲತೆ.

ಆಕರ: ವಿ.ವಿ.–II ೧೨ ; II ೧೨ ಗ, V ೧೪ ಗ ; V ೩೫
ಆ.ಪು.–IV ೫೮ ; XI ೭೩ ಗ ; XI ೧೦೯ ; XI ೧೧೨
(ಪ್ರ.ಕ. ಸಂಪುಟ ೫೪ ಪುಟ ೧೭ ನೋಡಿ)

ಕಾಲಿದಾಸಾದಿ ಕವಿಗಳ ಕಾಲದಿಂದಲೂ ಅತಿಮುಕ್ತಾ, ಅದಿರ್ಗಂದಿ, ಮಾಲತೀ, ಮಾಧವೀ ಮೊದಲಾದ ಹೆಸರುಗಳಿಂದ ಹೆಚ್ಚು ಕಡಿಮೆ ಕವಿಸಮಯವಾಗಿಬಿಟ್ಟಿದೆ, ಅದಿರ್ಮುತ್ತೆ. ಕವಿಪ್ರಯೋಗ ಈ ಮರಬಳ್ಳಿ(liane)ಯನ್ನು ವಸಂತದೂತಿ ಎನ್ನುತ್ತದೆ (ಆ.ಪು. XI ೧೧೨). "ಇದಿರೊಳ್ ನನೆದೋಱಿ" ವಸಂತಕಾಲದ ಬರವನ್ನು ಮುನ್ಸೂಚಿಸುತ್ತದೆಯೆಂಬುದು ಕವಿಯ ಭಾವ. ಎಂದರೆ ವನದ ಗಿಡಮರಗಳಲ್ಲೆಲ್ಲ ಅದಿರ್ಮುತ್ತೆಯೇ ಮೊಟ್ಟಮೊದಲು ಚಿಗುರೊಡೆಯುತ್ತದೆ, ಉಳಿದ ಗಿಡಮರಗಳು ಹಿಂಬಾಲಿಸುತ್ತವೆ. ಈ ಸಂದರ್ಭದಲ್ಲಿ ಇನ್ನೊಂದು ಸ್ವಾರಸ್ಯವನ್ನು ಗಮನಿಸಬೇಕು. ಹೀಗೆ ನನೆದೋಱಿದ ತಾಮ್ರವರ್ಣದ ಚಿಗುರು ಕುಡಿಗಳು ಹಸುರೆಲೆಯ ಹೊದಿಕೆಯಿಂದ ದಿಕ್ಕು ದಿಕ್ಕಿಗೂ ಅಂಬುಗಳಂತೆ ಮೇಲೆದ್ದು ಗಾಳಿಯಲ್ಲಿ ಬಳುಕುತ್ತವೆ. ಎಂದರೆ ವನವಸಂತಕ್ಕೆ ದೂತಿಕೆಯಾಗಿರುವಂತೆಯೇ ತನ್ನ ಸ್ವಂತ ವಸಂತೋತ್ಕರ್ಷವನ್ನೂ ಪ್ರದರ್ಶಿಸುತ್ತದೆ. ಈ ಕೊಡಿಗಳು ಇನ್ನೂ ಮುಂಚಾಚಿಕೊಂಡು ಬೆಳೆದು "ಅಡರ್ದು ಕೊಡರ್ದೆಳಗೊಂಬುಗಳ್ವಿಡಿದು ಮರದಿಂದ ಮರಕ್ಕೆ" (ವಿ.ವಿ. II ೧೨ ಗ) ದಾಂಗುಡಿಯಿಡುತ್ತವೆ. ಇಂಥ ತೆಳುಟೊಂಗೆಗಳ ತುದಿಯಲ್ಲಿ ಹೂಗೊಂಚಲು ಕೊನರುತ್ತದೆ. ಹೀಗೆ ಮಡಲ್ದು ಅಲರ್ದ ಅದಿರ್ಮುತ್ತೆ "ಪೂತ ಪೊಸಮಲ್ಲಿಗೆ ಕಂಪಸವುಂಕು"ತಿತ್ತು (ವಿ.ವಿ. II ೧೨). ಎಂದರೆ ಅದಿರ್ಮುತ್ತೆಯ ವಾಸನೆ ತೀಕ್ಷ್ಣವಾಗಿದ್ದುದರಿಂದ ಮಲ್ಲಿಗೆಯ ನರುಗಂಪನ್ನು ಅದುಮಿಟ್ಟಿತ್ತು.

ನಂದನವನಗಳಲ್ಲಿ ಅದಿರ್ಮುತ್ತೆಯ ಚಪ್ಪರಗಳನ್ನು ಬೆಳೆಸುವುದು ಪಂಪನ ಕಾಲದ ಬಳಕೆಯಾಗಿತ್ತೆಂದು ತೋರುತ್ತದೆ. (ವಿ.ವಿ. IV ೧೪ ಗ) ಇತರ ಕಾವ್ಯಗಳಲ್ಲೂ ಮಾಧವೀಮಂಟಪಗಳ ಪ್ರಸ್ತಾಪ ಕಾಣುತ್ತೇವೆ.

ಮಾಧವೀ ಒಂದು ಮರಬಳ್ಳಿ. ಬುಡಭಾಗವೂ ಕಾಂಡವೂ ಸಾಧಾರಣವಾದ ಮರದ ಗಾತ್ರವನ್ನೇ ತಾಳುತ್ತದೆ. ಪತ್ರಕಿಸಲಯ ತಾಮ್ರಬಣ್ಣ; ಬಲಿತಾಗ ಹೊಳೆಹೊಳೆಯುವ ಹಸುರು. ಪೂರ್ವ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ. ಮೈದಾನದಲ್ಲಿ ಬೆಳೆಯಿಸುವುದಕ್ಕೂ ಒಗ್ಗುತ್ತದೆ. ವಾಸನೆಯಿಲ್ಲದೆ ಬಣ್ಣದ ಬೆಡಗನ್ನು ಮಾತ್ರ ಚೆಲ್ಲುವ ಈಗಿನ ಬೊಗನ್‌ವಿಲ್ಲ ಲತಾಮಂಟಪಗಳಿಗೆ ಬದಲಾಗಿ ಮಾಧವೀಮಂಟಪಗಳನ್ನು ಉದ್ಯಾನದಲ್ಲಿ ಬೆಳೆಯಿಸುವ ಸಂಪ್ರದಾಯ ಮುಂದೊಂದು ಕಾಲದಲ್ಲಾದರೂ ಪುನರ್ಭವಿಸಲಿ ಎಂದು ಕನಸು ಕಾಣುತ್ತೇನೆ.

ಅಲ್ಲ (Zingiber officinale)

ಆಕರ: ವಿ.ವಿ. IV ೮೭ ಗ

ಕ್ರಿ.ಶ. ೧೬ನೆ ಶತಮಾನಕ್ಕೆ ಮೊದಲು–ಮೆಣಸಿನಕಾಯಿ ಭಾರತದಲ್ಲಿ ಕಾಲಿಡುವುದಕ್ಕೆ ಮೊದಲು–ನಮ್ಮ ನಾಲಗೆಗೆ ಖಾರವನ್ನೊದಗಿಸುತ್ತಿದ್ದ ಸಾಂಬಾರ ದಿನಸುಗಳಲ್ಲಿ ಶುಂಠಿ ಒಂದಾಗಿತ್ತು. ಪ್ರಾಚೀನ ಕಾಲದಿಂದಲೂ ಆಯುರ್ವೇದದ ಮೂಲಕ ಪ್ರಸಿದ್ಧಿಯಾಗಿರುವ ಮೂಲಿಕೆ ಇದು.

ಶುಂಠಿ ದಕ್ಷಿಣ ಭಾರತದಲ್ಲಿ ವ್ಯವಸಾಯಕ್ಕೊಳಪಟ್ಟಿದೆಯೇ ಹೊರತು ವನ್ಯವಾಗಿಲ್ಲ. ಶುಂಠಿಯ ಇತರ ಸ್ಪೀಷೀಸುಗಳೇನೋ ನಮ್ಮ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತವೆಯಾದರೂ ಅವುಗಳಲ್ಲಾವುದಕ್ಕೂ ಶುಂಠಿಯ ಕಟುತ್ವವಿಲ್ಲ. ಎರಡನೆ ಮಹಾಯುದ್ಧಕ್ಕೆ ಮೊದಲು ಒಣಶುಂಠಿಯೂ ಅದರಿಂದ ತಯಾರಾದ ಮುರಬ್ಬವೂ ಚೈನಾ ಜಪಾನ್ ದೇಶಗಳಿಂದ ಆಮದಾಗುತ್ತಿತ್ತೆಂಬ ಸಂಗತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಈ ಹಿನ್ನೆಲೆಯಿಂದ ಶುಂಠಿಯ ತೌರು ಪ್ರದೇಶವಾವುದು ಎಂಬ ಸಂದೇಹವೇರ್ಪಡುತ್ತದೆ. ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ಈ ಗಿಡ ವನ್ಯನೆಲೆಯಲ್ಲಿ ಬೆಳೆಯುತ್ತದೆಯಾದ್ದರಿಂದ ಅದೇ ತೌರಾಗಿದ್ದಿರಬಹುದೆ ಎಂಬ ಊಹೆ ತೋರಿದೆ. ಬಹು ಕಾಲದ ಹಿಂದೆಯೇ ಅಲ್ಲಿಂದ ಹೊರಟು ಇತರ ದೇಶಗಳಿಗೆ (ದಕ್ಷಿಣ ಭಾರತಕ್ಕೂ) ವಲಸೆ ಬಂದು ನೆಲಸಿರಬಹುದು.

ಅಶೋಕ (Saraca indica)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಅಶೋಕ, ಅಸುಗೆ

ಆಕರ: ವಿ.ವಿ. II ೨ ಗ; II ೧೨ ಗ; II ೩೯ ಗ; III ೭೫; V ೩; V ೪; V ೧೨; V ೮೦; V ೮೨; XIV ೧೩

ಆ.ಪು. III ೯ ಗ; XI ೭೩ ಗ; XI ೮೫: XI ೯೫ ಗ; XI ೧೦೪ XI ೧೩೦ ಗ; XI ೧೩೨

ಭಾರತೀಯ ಕಾವ್ಯಪರಂಪರೆಯಲ್ಲಿ ಕವಿಸಮಯವಾಗಿದೆ ಅಶೋಕ. ಹಳಗನ್ನಡ ನಡುಗನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಎಲ್ಲಾದರೂ ಒಂದು ಕಡೆ ಬಲಾತ್ಕಾರವಾಗಿ ಈ ಮರವನ್ನು ಇರುಕಿಸಿ ಬಿಟ್ಟಿದ್ದಾರೆ; ಕಂಡೋ ಕೇಳಿಯೋ ಅದರ ರಕ್ತಕಿಸಲಯವನ್ನೂ ಹೆಸರಿಸಿದ್ದಾರೆ. ಕಾಲಿದಾಸನಂತೆ ಪಂಪನೂ ಅಶೋಕದೋಹದ ಕ್ರಮವನ್ನು ಸೂಕ್ಷ್ಮವಾಗಿ ವಿವರಿಸಿದ್ದಾನೆ (ಆ.ಪು. XI ೯೫ ಗ; XI ೧೦೪)

ವಸಂತರಾಜನ ಬರವಿಗೆ ಅಲುಗಾಡುವ ಅಶೋಕ ತಳಿರುತೋರಣಗಟ್ಟಿದಂತೆ ಸಿದ್ಧವಾಯಿತು. (ವಿ.ವಿ. II ೧೨ ಗ). ಕೊಳದ ತಡಿಯಲ್ಲಿ ಎಳೆ ಚಿಗುರಿನ ಅಶೋಕದ 'ಮನೆ'ಗಳಿದ್ದವು (ವಿ.ವಿ. V ೪). ಸುಭದ್ರೆಯ ಕಣ್ಣಿಗೆ ಈ ದೃಶ್ಯ ಪ್ರೇಮದ ಉಂಡೆಗಳಂತೆ ಭಾಸವಾಯಿತು (ವಿ.ವಿ. V ೩); ಮರದ ಸುತ್ತ ಓಡಾಡುತ್ತಿದ್ದ ದುಂಬಿಗಳ ಝೇಂಕಾರವನ್ನು ಕೇಳಿ ಅಸೂಯೆಯಿಂದ ಕಿರಿಕಿರಿಯಾದಳು.

ಬಿರಿದ ಹೂಗಳಿಂದ ಕಿಕ್ಕಿರಿದ ಟೊಂಗೆಗಳು ಭಾರದಿಂದ ಬಾಗಿ ಸುಭದ್ರೆಯ ಅಂಗಾಂಗಗಳ ನೆನಪು ತಂದಿತು (ವಿ.ವಿ. V ೧೨). ತೆಂಕಣಗಾಳಿಯಲ್ಲಿ ಬಳುಕುವ ಅಶೋಕವಲ್ಲರಿಯಂತಿದ್ದ ದ್ರೌಪದಿಯ ಪಾಣಿಯನ್ನು ನವಚೂತ ಪಲ್ಲವದಂತಿದ್ದ ಅರ್ಜುನನ ಕೈ ಗ್ರಹಣಮಾಡಿತು (ವಿ.ವಿ. III ೭೫). ರಕ್ತಾಶೋಕ ಪಲ್ಲವದಂತೆ ತೊಳತೊಳಗಿದವಂತೆ ಆಂಧ್ರಸ್ತ್ರೀಯರ ಕುಚಗಳು (ವಿ.ವಿ. II ೩೯ಗ). ರಾಜಕುಮಾರನೊಬ್ಬನ ಪಾಣಿಪಾದಗಳು ಅಶೋಕಪಲ್ಲವದೊಡನೆ ಒಪ್ಪಗೊಂಡವು (ಆ.ಪು. III ೯ ಗ). ಬಂಜೆತನದಿಂದ ವಿರಕ್ತೆಯಾದ ಮಾದ್ರಿಯು ಹೊಸೆದೆಸೆದ ರಕ್ತಾಶೋಕಪಲ್ಲವದಂತೆ ಸೊರಗಿ ಕೊರಗುತ್ತಿದ್ದಳು (ವಿ.ವಿ. II ೨ ಗ).

"......ಬೆಳ್ಗೊಡೆ ರಾಗದ ಪುಂಜದನ್ನವಪ್ಪಸುಗೆಯ ನೀಳ್ದ ಕೆಂದಳಿರೆ..." ಎನ್ನುತ್ತಾನೆ, ಪಂಪ (ವಿ.ವಿ. XIV 13). ಬೆಳ್ಗೊಡೆ ಎಂದರೆ ಶ್ವೇತಚ್ಛತ್ರ ಎಂದು 'ದೀಪಿಕೆ' ತಿಳಿಸುತ್ತದೆ. ಈ ಅರ್ಥ ಸಂದರ್ಭಕ್ಕೆ ಒಪ್ಪದು. ಬೆಳಗು + ಒಡೆ = ಬೆಳಗೊಡೆ→ಬೆಳ್ಗೊಡೆ ಎಂದು ಅರ್ಥಯಿಸಿದರೆ 'ಬೆಳಕೊಡೆದಾಗ (ಕಾಣುವ) ಅರುಣ ಬಣ್ಣದ ಕೆಂದಳಿರ ಸಮೂಹ' ಎಂಬ ತಾತ್ಪರ್ಯ ಪಂಪನ ನುಡಿಗಟ್ಟಿನ ಭಾವಾರ್ಥವನ್ನು ಸಮಂಜಸವಾಗಿ ತೋರ್ಪಡಿಸುತ್ತದೆ, "ಪಸರಿಸಿ ಬಂದ ಮಾಮರನೆ". (ಚಿಗುರೊಡೆದ ಮಾವಿನ ಮರ) ಎಂಬ ನುಡಿಗಟ್ಟಿನೊಂದಿಗೂ ಹೊಂದಿಕೊಳ್ಳುತ್ತದೆ. ಅಶೋಕದ ಚಿಗುರೂ ಕೆಂಪು, ಮಾವಿನ ಚಿಗುರೂ ಕೆಂಪು. ಇವನ್ನು ಹಿಂಬಾಲಿಸಿ ದುಂಬಿಹಿಂಡೂ ಮೇಳಯಿಸಿತು. ಬಸಂತರಾಜನ ವನದ ಪ್ರತಿಷ್ಠೆಗೆ ಇನ್ನೇನು ಬೇಕು?

ಸಮುದ್ರ ಮಟ್ಟದಿಂದ ಎರಡು ಮೂರು ಸಾವಿರ ಅಡಿ ಎತ್ತರದಲ್ಲಿರುವ ಕರ್ನಾಟಕದ ಕಾಡುಗಳಲ್ಲಿ ಅಶೋಕ ಸ್ವಾಭಾವಿಕವಾಗಿ ಬೆಳೆಯುತ್ತದೆ. ೨೫–೩೦ ಅಡಿ ಎತ್ತರ ಎದ್ದು ಸುತ್ತಲೂ ಹರಡುವ ಕೊಂಬೆರೆಂಬೆಗಳನ್ನು ತಳೆದು ತುಂಬು ಎಲೆಕೊಡೆಯನ್ನು ಹಿಡಿದಿರುತ್ತದೆ. ಕವಿವಾಣಿಯಂತೆ ವಸಂತದಲ್ಲಿ ಹೊಸತಾಗಿ ಚಿಗುರಿದ ಎಲೆಗಳು ತಾಮ್ರವರ್ಣ; ಕ್ರಮೇಣ ಹಸುರಿಗೆ ತಿರುಗುತ್ತದೆ. ದಟ್ಟವಾದ ಹೂಗುತ್ತಿಗಳ ಬಣ್ಣ ಹವಳವನ್ನೂ ನಾಚಿಸುವಂಥ ಅಚ್ಚಗೆಂಪು. ಈ ಭಂಗಿಯಲ್ಲಿ ಮರ ನಯನಮನೋಹರ. ಅನೇಕ ಕವಿಗಳು ಈ ದೃಶ್ಯವನ್ನು ಕಂಡಿರಲಾರರು; ರಕ್ತಕಿಸಲಯವನ್ನೇ ಹಾಡಿ ಹಾಡಿ ಗಂಟಲು ಒಣಗಿಸಿಕೊಂಡಿದ್ದಾರೆ. ಹೂತಳೆದ ಮರವನ್ನು ನೇರವಾಗಿ ನೋಡಿದ ಸ್ಫೂರ್ತಿವಂತನಾದ ಕವಿಗೆ ಅಶೋಕ ಈಗಲೂ ಹೊಸ ಭಾವನೆಗಳ ತೌರಾಗಿದೆ:

"ವನಲಕ್ಷ್ಮಿ ತೀವಿದಾ ಕತ್ತಲೆಗೆ ಬೇಸತ್ತು
ಸಿರಿಗುರುಳಿರುಳ ಮುಡಿಯ ಕಿಡಿತಾರೆಗಳನಾಯ್ದು,
ರಕ್ತಾರುಣನ ಮಿಂಚೊಳದ್ದಿ, ಗೊಂಚಲನೆಯ್ದು
ದೀವಟಿಗೆ ಹಿಡಿರೆಂದು ತರುಹಸ್ತಗಳಿಗಿತ್ತು
ಹೂವಿನ ಹಿಲಾಲುಗಳ ಹೊತ್ತಿಸಿಹರಲ್ಲಲ್ಲಿ
ಜ್ವಲಿಸುತಿದೆ ನೋಡದೊ ಅಶೋಕ ಹೂವೇಪದಲ್ಲಿ!" (ಕುವೆಂಪು)

ಆಲ (Ficus bengaleusis)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಆಲ, ವಟ.

ಆಕರ: ವಿ.ವಿ. III ೧೦ ಗ; III ೧೨

ಅರಗಿನ ಮನೆಯಿಂದ ತಪ್ಪಿಸಿಕೊಂಡಾದ ಬಳಿಕ ಭೀಮನು ತನ್ನ ಅಣ್ಣತಮ್ಮಂದಿರನ್ನು ಹೆಗಲ ಮೇಲೇರಿಸಿಕೊಂಡು ಹಿಡಿಂಬನ ವನದಲ್ಲಿ ಬೆಳೆಯುತ್ತಿದ್ದ ಆಲದ ಮರದ ಕೆಳಗೆ ಇಳಿಸುತ್ತಾನೆ (ವಿ.ವಿ. III ೧೦). ವೇದಕಾಲದಿಂದ ನಮಗೆ ಪರಿಚಯವಾಗಿರುವ ಮರ ಆಲ. ಒಣಮರವೂ ಕಡ್ಡಿಯೂ ಬೆಂಕಿಯನ್ನು ಕಡೆಯುವ ಅರಣಿಗಳಾದವು. ಆಲದ ಮರವೂ ಅದರ ಬಿಳಿಲುಗಳೂ ಮರದ ಶಾಶ್ವತತೆಯೂ ಉಪನಿಷತ್ಕವಿಗಳಿಗೆ ಆತ್ಮಪರಮಾತ್ಮರನ್ನೂ ಸೃಷ್ಟಿಸ್ಥಿತಿಲಯಗಳನ್ನೂ ಕುರಿತ ಯೋಚನಾತರಂಗಗಳನು ಒದಗಿಸಿದವು. ಅಂದಿನ ಮಾರ್ದನಿಯೇ ಇಂದಿಗೂ ಕೇಳಿಬರುತ್ತಿದೆ:

"ತಲೆಯ ಮೇಗಡೆ ಬೇರು, ಕೆಳಗೆ ಕೊಂಬೆಲೆ ಚಿಗುರು
ಬಿಳಿಲ್ಬೊರೆಗಳ ಲೆಕ್ಕಕಿಲ್ಲ ಕೊನೆಮೊದಲು"
....
"ಒಂದು ಕೊಂಬೆಯು ಬಾಡಲಿನ್ನೊಂದು ಚಿಗುರುವುದು
ಸಂದಿಹುದು ಚಿರನವತೆಯಶ್ವತ್ಥಮರಕೆ
ಎಂದೆಂದುಮಂತಿರುವುದೀ ವಿಶ್ವವೃಕ್ಷವದ
ರೊಂದು ರೆಂಬೆಯೊ ನೀನು–ಮಂಕುತಿಮ್ಮ"

"ಊರ್ಧ್ವಮೂಲಮಧಃಶ್ಶಾಖಾಶ್ವತ್ಥ" ಎಂದರು, ಪ್ರಾಚೀನರು. ಇಲ್ಲಿ ಅಶ್ವತ್ಥವೆಂಬ ಮರ ನಮಗೆ ಇಂದು ಸಾಮಾನ್ಯವಾಗಿ ಪರಿಚಿತವಾಗಿರುವ ಅಶ್ವತ್ಥವಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಸಮಯಭಾಷೆ ಗುಹ್ಯವೆಂದು ಒಪ್ಪಿಕೊಳ್ಳಬಹುದಾದರೂ ಆ ಮಾತುಗಳ ಹಿನ್ನೆಲೆಯಲ್ಲಿ ಆಲದ ಮರದ ಪ್ರತಿಮೆ ಇದ್ದಿತೆಂಬುದರಲ್ಲಿ ಸಂದೇಹವಿಲ್ಲ. ರೆಂಬೆಗಳಿಂದ ಬಿಳಿಲು ಬೇರು ಬಿಡುವ ಮರ ಅದು. ಇಂದಿನ ಅಶ್ವತ್ಥ ಇದಕ್ಕೆ ಹೊರಗು. ನಮ್ಮ ಪೂರ್ವಿಕರು ಗಿಡಮರಗಳಲ್ಲಿ ಇಂದಿನ ಜೀನಸ್, ಸ್ಪೀಷೀಸ್‌ಗಳ ವ್ಯವಸ್ಥೆಯನ್ನು ಮಾಡಿದವರಲ್ಲ. ಒಂದೇ ಜಾತಿಯ ಗಿಡವನ್ನು ಬೇರೆ ಬೇರೆ ಹೆಸರುಗಳಿಂದ ಕರೆದವರು ಅವರು; ಹಾಗೆಯೇ ಬೇರೆ ಬೇರೆ ಸ್ಪೀಷೀಸುಗಳನ್ನು ಒಂದೇ ಹೆಸರಿನಿಂದಲೂ ಸಂಬೋಧಿಸಿದರು. ಹೀಗಾಗಿ ವೇದಕಾಲದಲ್ಲಿ ವಟ ಅಶ್ವತ್ಥಗಳೆರಡೂ ಬಿಳಿಲುಬಿಡುವ ಆಲಜಾತಿಗಳಿಗೆ ಅನ್ವಯವಾಗಿರಬೇಕು ಎಂದು ನನ್ನ ಗ್ರಹಿಕೆ.

ನಮ್ಮ ಇಂದಿನ ಅಶ್ವತ್ಥ ವೇದೋಕ್ತವಾದದ್ದೇ ಆದರೂ ಅದಕ್ಕೆ ಹೆಚ್ಚು ಪ್ರಾಶಸ್ತ್ಯ ಉಂಟಾದದ್ದು ಬೌದ್ಧಾಗಮನದಿಂದ. ಗೌತಮನು ಅಶ್ವತ್ಥಮರದಡಿಯಲ್ಲಲ್ಲವೆ ಸಾಕ್ಷಾತ್ಕಾರ ಪಡೆದದ್ದು, ಬುದ್ಧನಾದದ್ದು? ಹೀಗೆ ಬೌದ್ಧಮತದಲ್ಲೂ ಬೋಧಿ ಎಂಬ ಹೆಸರಿನಿಂದ ಅಶ್ವತ್ಥ ಪವಿತ್ರವಾಯಿತು. ಕಾಲಕ್ರಮದಲ್ಲಿ ಹಿಂದೂ–ಬೌದ್ಧಮತದ ಎಳೆಗಳಲ್ಲಿ ಕೆಲವು ಒಂದರೊಡನೊಂದು ಕಲೆತಾಗ ಹಿಂದೂಮತ ದೃಷ್ಟಿಯಲ್ಲಿ ಮರ ಇನ್ನೂ ಪೂಜ್ಯವಾಯಿತು.–ಅಶ್ವತ್ಥಪೂಜೆ, ಅಶ್ವತ್ಥಸೇವೆ ಇತ್ಯಾದಿ.

ಇರುವಂತಿ (Jasminum sambac var virupakshi)

ಆಕರ: ಆ.ಪು. XI ೧೧೧

(ಪ್ರ.ಕ. ಸಂಪುಟ ೫೪, ಪುಟ ೪ ನೋಡಿ).

ರತಿಗೂ ಮನ್ಮಥನಿಗೂ ಮುಡಿಯಲು ಯೋಗ್ಯವಾದ ಹೂ ಎನ್ನುತ್ತಾನೆ, ಪಂಪ. ಮಘಮಘಿಸುತಲಿರ್ದ ಇರುವಂತಿ ಎಂದು ವಿಶೇಷಿಸಿದ್ದಾನೆ, ಹರಿಹರ. 'ಇರುವಂತಿ' ಎಂದರೆ ಎರಡು ಸುತ್ತಿನ ದಳಗಳನ್ನು ಕೊಂಡ ಮಲ್ಲಿಗೆ ಜಾತಿಯ ಹೂ ಇರಬಹುದೇ?– ಎಂದು ಹಿಂದೊಮ್ಮೆ ಪ್ರಶ್ನೆ ಕೇಳಿದ್ದೇನೆ. ಈಗಲೂ ಅದೇ ನೆಲೆಯಲ್ಲಿದ್ದೇನೆ.

ಉಡಮೊಗ

ಆಕರ: ವಿ.ವಿ. IV ೭೮

"ಉಡಮೊಗಮೆಂಬ ತಾವರೆಯ ನೀಳ್ದೆಸಳ್" ಎನ್ನುತ್ತಾನೆ, ಪಂಪ. 'ದೀಪಿಕೆ'ಯಲ್ಲಿ "ಉಡಮೊಗಮೆಂಬ–ಬಾಗೆಹೂವಿನಂತಿರುವ ಮುಖವೆಂಬ, ತಾವರೆಯ" ಎಂದಿದೆ.

ಬಾಗೆ ಹೂ ವಿಪರೀತ ಸಣ್ಣದು; ಮುಖದ ಹೋಲಿಕೆಗೆ ತಕ್ಕುದಾದ ರಚನಾವಿಶೇಷವಾಗಲಿ ರೂಪ ಲಾವಣ್ಯವಾಗಲಿ ಅದಕ್ಕಿಲ್ಲ. ನೀಳ್ದ ಎಸಳ್ (ನೀಳವಾದ ದಳಪತ್ರ)ಗಳನ್ನು ಒಳಕೊಂಡ ರಚನೆಯ ತಾವರೆ ಹೂ ಇರಬಹುದು ಎಂದು ನನಗೆ ತೋರುತ್ತದೆ. ಈ ರಚನೆಗೆ ಉಡಮೊಗ ಎಂಬ ಹೆಸರಿದ್ದಿರಬಹುದು.

ಉಡ=ಚಂದ್ರ, ಮೊಗ=ಮುಖ ಎಂದು ಅರ್ಥಯಿಸಬಹುದೆ? ಬಿರಿದ ತಾವರೆಯನ್ನು ಸೂರ್ಯನಿಗೂ ಮುಖಕ್ಕೂ ಹೋಲಿಕೆಯಿಟ್ಟಂತೆಯೇ ಚಂದ್ರಬಿಂಬಕ್ಕೂ ಹೋಲಿಕೆಯಿಟ್ಟಿರಬಹುದೆ?

ಏಲ (Eletteria cardamum)

ಆಕರ: ವಿ.ವಿ. IV ೨೩

ಭಾರತದ ಪ್ರಾಚೀನ ಪರಿಮಳ ದ್ರವ್ಯಗಳಲ್ಲಿ ಏಲ (ಏಲಕ್ಕಿ) ಒಂದು; ವೈದ್ಯದಲ್ಲೂ ಬಳಕೆಗೊಂಡಿದೆ. ದಕ್ಷಿಣ ಭಾರತದ ಪಶ್ಚಿಮ ಘಟ್ಟ ಪ್ರದೇಶ ಇದರ ತೌರು. ಇಂದಿನ ಬೆಳೆಯೂ ಅಲ್ಲೇ ಕೇಂದ್ರೀಕೃತವಾಗಿದೆ.

ಏಲದ ಗಿಡವನ್ನು ಶಾಸ್ತ್ರಪ್ರಕಾರ ಹರ್ಬ್ ಎನ್ನುತ್ತೇವೆ. ಕಾವ್ಯಸಂಪ್ರದಾಯದಲ್ಲೂ ಆಡುಮಾತಿನಲ್ಲೂ ಏಲದ ಬಳ್ಳಿ, ಏಲಕ್ಕಿ ಬಳ್ಳಿ ಎಂಬ ಸಂಬೋಧನೆಯೇ ನಿಂತಿದೆ. ಗಿಡವು ಬಳ್ಳಿಯನ್ನು ಹೋಲದಿದ್ದರೂ ಕಾಯಿಗೊಂಚಲು ಬಳ್ಳಿಯಂತೆಯೇ ಇರುತ್ತದೆ. ಕವಿ ಈ ಕುಡಿಯನ್ನೇ (ಗಿಡವನ್ನಲ್ಲ) ಏಲಲತಾ ಎಂದನೋ ಏನೋ!

ಕದಂಬ (Anthoce phalus cadamba)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಕದಂಬ, ಕಡವು

ಆಕರ: ವಿ.ವಿ. V ೮೦; VII ೬೯
ಆ.ಪು. XI ೮೮
(ಪ್ರ.ಕ. ಸಂಪುಟ ೨೩, ಪುಟ ೧೩೧ ನೋಡಿ)

ಶರತ್ಕಾಲದಲ್ಲಿ ಕದಂಬಹೂವಿನ ಪರಿಮಳ ಅಡಗಿತು ಎಂದು ನುಡಿದಿದ್ದಾನೆ, ಪಂಪ (ವಿ.ವಿ. VII ೬೯) ಕದಂಬ ಹೂಬಿಡುವುದು ಮಳೆಗಾಲದಲ್ಲಿ. ಇದನ್ನು ಹಿಂಬಾಲಿಸಿ ಬರುವ ಆಶ್ವೀಜ-ಕಾರ್ತೀಕ ಮಾಸಗಳಲ್ಲಿ ಕಾಯಿಬಲಿಯುತ್ತದೆಯಾದದ್ದರಿಂದ ಪುಷ್ಪಕಾಲಮುಗಿಯಿತು ಎಂದು ಗ್ರಹಿಸ

ಬೇಕು. ವಾರಾಕದಂಬ ಸುರಭಿಸಮೀರ (ಆ.ಪು. XI ೮೮) ತೆಳುವಾದ ನರುಗಂಪಿನಿಂದ ಕೂಡಿದ್ದು, ಮಾದಕೀಯವಾದದ್ದು. ಹೀಗಾಗಿ ಮಮ್ಮಟ ಭಟ್ಟನು "ಪ್ರೌಢಾಃ ಕದಂಬಾನಿಲಾಃ" ಎಂದಿದ್ದಾನೆ.

ಕದಂಬ ಚೆಲುವಾದ ಮರ. ಪಶ್ಚಿಮ ಘಟ್ಟದ ಮಳೆಗಾಡುಗಳಲ್ಲೂ ಎಲೆ ಉದುರುವ ಕಾಡುಗಳಲ್ಲೂ ೪೦–೫೦ ಅಡಿ ಎತ್ತರಕ್ಕೆ ಬೆಳೆಯುತ್ತದೆ. ಹಿಮಾಲಯದ ತಪ್ಪಲಿನಲ್ಲೂ ಹೇರಳವಾಗಿದೆ. ಹೊಳೆಹೊಳೆಯುವ ಹಿರಿಯ ಹಸುರೆಲೆಗಳು ಬ್ಯಾಡ್‌ಮಿಂಟನ್ ಚೆಂಡಿನ ಆಕಾರದ, ಗಾತ್ರದ, ಹೆಚ್ಚು ಕಡಿಮೆ ಅದರದೇ ಬಣ್ಣದ ಒತ್ತಾದ ಹೂಗೊಂಚಲು. ಇದನ್ನು ಕಂಡೇ ನಮ್ಮ ಪೂರ್ವಿಕರು 'ಕದಂಬ ಕೋರಕ ನ್ಯಾಯ'ವನ್ನು ರೂಪಿಸಿದರು. ಹಳೆಯ ತಮಿಳು ಕವಿಗಳು ಹೂಗೊಂಚಲನ್ನು ಆಗ ತಾನೆ ಮೊಟ್ಟೆಯಿಂದ ಹೊರ ಬಂದ ಕೋಳಿಮರಿಗೆ ಔಚಿತ್ಯದಿಂದ ಒಪ್ಪವಿಟ್ಟರು.

ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ಪರಿಚಿತವಾಗಿರುವ ಮರ ಕದಂಬ. ನಾಗಾರ್ಜುನಕೊಂಡ, ಮಥುರ, ಬಾರ್‌ಹುತ್ ಶಿಲ್ಪಗಳಲ್ಲಿ ಕದಂಬಹೂಗೊಂಚಲು ರೂಪಿತವಾಗಿದೆ. ಪಾರ್ವತಿ ಕದಂಬವನವಾಸಿನಿ. ಶಿವನಿಗೂ ಕೃಷ್ಣನಿಗೂ ಪ್ರಿಯವಾದ ಹೂ ಕದಂಬ. ಕದಂಬಕುಲದ ಲಾಂಛನವೇ ಕದಂಬ.

ಪ್ರಾಚೀನ ತಮಿಳರಿಗೆ ಕದಂಬ ಒಂದು 'ಕಾವಲ್' ಮರವಾಗಿತ್ತು; ಅದು ಊರನ್ನು ರಕ್ಷಿಸುವುದೆಂದು ನಂಬಿದ್ದರು. ಈ ಮರವನ್ನು ಕಡಿಯಕೂಡದೆಂಬ ನಿಯಮವನ್ನು ಪಾಲಿಸಿದರು. ಒಂದು ಸಲ ದಾಳಿಯಿಟ್ಟು ಗೆದ್ದ ಶತ್ರು ಮರವನ್ನು ಕೆಡವಿ ಅದರಿಂದ ರಣಭೇರಿಗಳನ್ನು ನಿರ್ಮಿಸಿದ ಸಂಗತಿ ಹಳೆಯ ತಮಿಳು ಸಾಹಿತ್ಯದಲ್ಲಿ ವರ್ಣಿತವಾಗಿದೆ.

ಕರ್ಪೂರ (Cinnamomum Camphora)

ಪಂಪನು ಉಪಯೋಗಿಸಿರುವ ಪರ್ಯಾಯಪದಗಳು: ಕರ್ಪೂರ, ಕಪ್ಪುರ.

ಆಕರ: ವಿ.ವಿ. IV ೨೩ ; IV ೫೯ ; V ೬ ಗ ; V ೧೬ ; V ೮೬ ; VII ೭೮ ; XIII ೨ ಗ
ಆ.ಪು. II ೩೨ ಗ ; XI ೧೫೯ ಗ ; XVI ೫೨

(ಪ್ರ.ಕ. ಸಂಪುಟ 54, ಪುಟ 10 ನೋಡಿ)

ಕಾಮಜ್ವರದಿಂದ ಪೀಡಿತಳಾದ ಸುಭದ್ರೆ ಚಂದ್ರಕಾಂತಶಿಲೆಯ ಮಂಟಪವನ್ನು ಸೇರುತ್ತಾಳೆ. ಅಲ್ಲಿ ಹರಡಿದ್ದ ಕರ್ಪೂರದ ಹಳಕುಗಳನ್ನೂ ಇತರ ಪರಿಮಳ ದ್ರವ್ಯಗಳನ್ನೂ ಕಂಡು ಇನ್ನಷ್ಟು ವ್ಯಾಮೋಹ ಪೀಡಿತಳಾಗುತ್ತಾಳೆ (ವಿ.ವಿ.V 6 ಗ). ಅಮೃತದಲ್ಲಿ ನನೆಸಿದ ಕರ್ಪೂರದಿಂದ ಕಡೆದಿದ್ದಂತೆ ಸುಭದ್ರೆ ಅರ್ಜುನನಿಗೆ ಕಂಡಳು (ವಿ.ವಿ. V 16).

ಕರ್ಪೂರ ಸಸ್ಯಜನ್ಯವಾದ ವಸ್ತುವೆಂಬುದು ಪಂಪನಿಗೂ ತಿಳಿದಿತ್ತು. ಸ್ವಾಭಿಮಾನದಿಂದ ಮರವನ್ನು ಖಾಂಡವವನದಲ್ಲೂ ಬೆಳೆಸಿಬಿಟ್ಟಿದ್ದಾನೆ! (ವಿ.ವಿ.V 86). ಆದರೆ ಈ ಮರ ಚೈನಾ ಜಪಾನ್ ಫಾರ್ಮೋಸಾಗಳನ್ನು ಬಿಟ್ಟು ಬೇರೆಲ್ಲೂ ಬೇರುಬಿಟ್ಟಿಲ್ಲ. ಭಾರತದಲ್ಲಿ ಈ ಸಸ್ಯಜನ್ಯವಸ್ತು ಮೊದಮೊದಲು ಸುವಾಸನಾದ್ರವ್ಯವಾಗಿಯೂ ವೈದ್ಯಮೂಲಿಕೆಯಾಗಿಯೂ ಉಪಯೋಗ ಪಡೆಯಿತು. ಪಂಪನ ಕಾಲದ ವೇಳೆಗೆ ಮತಾಚರಣೆಗಳಲ್ಲೂ ಮನ್ನಣೆ ಪಡೆದಿತ್ತು.

ಕಬ್ಬಾಳ

ಆಕರ: ಆ.ಪು. XI ೧೨೭

ನೀವು ತಂಜಾವೂರಿನ ಕಡೆ ಭೇಟಿ ಕೊಟ್ಟಿದ್ದೀರೋ ಇಲ್ಲವೋ? ಅಖಂಡ ಕಾವೇರಿ ಕವಲೊಡೆದು ನದೀಮುಖಜ ಭೂಮಿಯನ್ನು ಸೇರಿದಾಗ ನೀರಿನ ಬದಿಯಲ್ಲಿ Coleus Vetiverioides ಎಂಬ

ಸಣ್ಣ ಗಿಡವೊಂದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದರ ಬೇರು ಸುವಾಸನೆಗೊಂಡದ್ದು. ತಮಿಳಿನಲ್ಲಿ ಕುರುವಿವೇರ್, ಕರುವೇರ್, ಕರುವಿಯೇರ್ ಮೊದಲಾದ ಪದಗಳಿಂದ ಪರಿಚಿತವಾಗಿದೆ. ಗಿಡದಿಂದ ಬೇರ್ಪಡಿಸಿದಾಗ ಬೇರು ಹಸಿಯಾಗಿರುವಾಗಲೇ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಪರಿಮಳ ಇಮ್ಮಡಿಸುತ್ತದೆ. ಮಾಲೆಗಾರರು ಹಾರಗಳಲ್ಲೂ ದಂಡೆಗಳಲ್ಲೂ ಉಪಯೋಗಿಸುತ್ತಾರೆ.ಇದೇ ಕರ್ಬಾಳ ಇರಬಹುದೆ?

ಕಬ್ಬು (Saccharum sp.)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು:

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಕರ್ಬು, ಕರ್ಪು, ಇಕ್ಷು.

ಆಕರ: ವಿ.ವಿ. I ೫೬ ; I ೧೧೭ ; V ೫ ಗ
ಆ.ಪು. XI ೬೮

ಬೆರಳಿನಿಂದ ತಟ್ಟಿದರೆ ಸಾಕು, ರಸವನ್ನು ಸುರಿಸುತ್ತದೆ! ಇಂಥ ಕಬ್ಬು ಕುರುಜಾಂಗಣ ನಾಡಿನಲ್ಲಿ ಬೆಳೆಯುತ್ತಿತು (ವಿ.ವಿ. I 156). ಈ ರಖಮು ಇಂದಿನ, ಹಳದಿ ಹಸುರು ಕೆಂಪು ಗೀಟುಗಳನ್ನು ಕೊಂಡ 'ಪಟ್ಟಾಪಟ್ಟೆ'ಯಾಗಿರಲಾರದು. 'ಕರಿಯ ಕರ್ಬಿನ' (ವಿ.ವಿ. V ೫ ಗ) ಎಂದು ವಿಶೇಷಿಸಿದ್ದಾನೆ, ಪಂಪ. ಕರ್ನಾಟಕದ ಕೆಲವು ಪ್ರದೇಶಗಳಲ್ಲೂ ತಮಿಳುನಾಡಿನಲ್ಲೂ ಕಪ್ಪುಗೆಂಪು ಬಣ್ಣದ ಜಳವೆ ರಖಮು ಬೆಳೆಯುತ್ತಿದೆ. ಸಕ್ಕರೆಯ ಅಂಶ ಪಟ್ಟಾಪಟ್ಟೆಗಿಂತಲೂ ಸ್ವಲ್ಪ ಗೌಣ. ಆದರೆ ರಸನಿಬಿಡವಾದದ್ದು. ಇದನ್ನು 'ರಸದಾಳಿ' ಎನ್ನುತ್ತಾರೆ. ಪಂಪನು ಹೇಳುವ ಕಬ್ಬು ಇದೇ ಆಗಿರಬಹುದು ಎಂದು ನನ್ನ ಅಭಿಪ್ರಾಯ.

"ಇಕ್ಷುಪುಷ್ಪದವೋಲೆನ್ನಯ ನಿಷ್ಫಲ ಪುಷ್ಪದರ್ಶನಂ" ಎಂದು ಪುತ್ರಾರ್ಥಿನಿಯಾದ ಕುಂತಿ ರೋದಿಸುತ್ತಾಳೆ (ವಿ.ವಿ.I ೧೧೭). ಕಬ್ಬಿನ ಸೂಲಂಗಿ (ಹೂ ಗೊಂಚಲು) ನೋಟಕ್ಕೆ ಚೆಲುವು; ಕೆದರಿದ ಎಲೆಗರಿ ಗುಂಪಿನ ಮಧ್ಯದಿಂದ ಬಿಳಿಗರಿಗುತ್ತಿಯಂತೆ ಮೇಲೆದ್ದು ನಿಂತಿರುತ್ತದೆ. ಹೂ ತೀರ ಸಣ್ಣ; ಭೂತಗನ್ನಡಿಯ ನೆರವಿಲ್ಲದೆ ಅದನ್ನು ಗುರುತಿಸಲಾಗದು. ಸಾಗುವಳಿಗೀಡಾಗಿರುವ ರಖಮುಗಳಲ್ಲಿ ಸಾಧಾರಣವಾಗಿ ಹೂ ಕಾಯಾಗದು. ಕೆಲವು ವನ್ಯ ರಖಮುಗಳಲ್ಲಿ ಕಾಯಿ ಕೊನರಬಹುದಾದರೂ ಬರಿಗಣ್ಣಿಗೆ ಬೀಳದು. ಅಲ್ಲದೆ ಹೂ–ಸೂಲಂಗಿಗೂ ಕಾಯಿ–ಸೂಲಂಗಿಗೂ ಹೊರನೋಟದ ವ್ಯತ್ಯಾಸವೇನೂ ಇಲ್ಲ. ಹೀಗಾಗಿ ಕಬ್ಬಿನ ಸೂಲಂಗಿ ಕಾಯಿಬಿಡದು ಎಂಬ ಸಾಮಾನ್ಯ ನಂಬಿಕೆ ಜನಪ್ರಿಯವಾಗಿದೆ, ಕವಿಗೆ ಉಪಮಾನಪ್ರಿಯವಾಗಿದೆ.

ಕಾಳಾಗರು (Aquillaria agallocha)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಅಗರು, ಕಾಳಾಗರು, ಕೃಷ್ಣಾಗರು

ಆಕರ: ವಿ.ವಿ. IV ೨೩ ; IV ೧೧೮ ಗ; VII ೭೮
ಆಪು; II ೩೨; V ೨೩; V ೨೫ ; XI ೧೩೯ ಗ; XVI ೫೨

ಸುಗಂಧ ಧೂಪಕ್ಕಾಗಿ ಬಳಕೆಯುಳ್ಳದ್ದ ಸಸ್ಯಜನ ದ್ರವ್ಯ ಇದು. ತೌರೂರಾದ ಕೊಚಿನ್–ಚೈನವನ್ನು ಬಿಟ್ಟು ಹೊರ ಪ್ರದೇಶಗಳಲ್ಲಿ ಬೆಳೆಯದು. ಆದರೆ ಕಾವ್ಯಸ್ವಾತಂತ್ರ್ಯಪ್ರಿಯನಾದ ಪಂಪ ಮರವನ್ನು ಮಲಯ ಪರ್ವತದಲ್ಲಿ ಹುಟ್ಟುಹಾಕಿದ್ದಾನೆ. ಕ್ರಿ.ಶ. ೭–ನೇ ಶತಮಾನಗಳಿಂದಲೂ ಈ ಸಸ್ಯಜನ್ಯವಾದ ವಸ್ತು ಭಾರತದಲ್ಲಿ ಪರಿಚಿತವಾಗಿದೆ.

ಇದೇ ದ್ರವ್ಯವನ್ನು ಅರಬ್ಬೀಯರೂ ಪರ್ಷಿಯನರೂ ಅಯಲೂಗಿ, ಅಘಲೂಝಿ ಎನ್ನುತ್ತಾರೆ; ಸಂಸ್ಕೃತದ ಅಗರು ಇದೇ ದ್ರವ್ಯವನ್ನು ನಿರ್ದೇಶಿಸುತ್ತದೆ. ಈ ಮಾತೃಕೆಗಳಿಂದಲೇ ಲಾತೀನಿನಲ್ಲಿ ಅಗಲೂಚ ಎಂದು ಮಾರ್ಪಡಿಸಿಕೊಳ್ಳಲಾಗಿದೆ.

ಅಕ್ವಿಲೇರಿಯ ಅಗಲೂಚ ೩೦–೪೦ ಅಡಿ ಎತ್ತರ ಬೆಳೆಯುವ ಮರ. ರೆಂಬೆ ಕೊಂಬೆಗಳು ಮುರಿದಾಗ ಸಂಭವಿಸುವ ಗಾಯದಲ್ಲಿ ಒಂದು ಬಗೆಯ ಬೂಷ್ಟು ಹೊಕ್ಕು ಪೊಟರೆ ಬಿಡುತ್ತದೆ; ಕಾಂಡದ ಗರ್ಭವನ್ನು ತಿನ್ನುತ್ತದೆ. ಹೀಗೆ ರೋಗಗ್ರಸ್ತವಾದ ಡೊಗರಿನಿಂದ ರಾಳದಂತೆಗಟ್ಟಿಯಾಗುವ ಸ್ರವ ಸುರಿಯುತ್ತದೆ. ಇದೇ ಅಗರು.

ಮರದಿಂದ ಹೊಸತಾಗಿ ಶೇಖರಿಸಿದ ರಾಳ ಕಪ್ಪು ಬಣ್ಣಕ್ಕಿರುತ್ತದೆ.–ಕಾಳಾಗರು, ಕೃಷ್ಣಾಗರು. ಮಾರಾಟಕ್ಕಿಡುವ ಮುನ್ನ ರಾಳವನ್ನು ಶುದ್ಧಿಮಾಡಿ ಇತರ ಬೆರಕೆ ವಸ್ತುಗಳೊಂದಿಗೆ ಮಿಶ್ರಮಾಡುತ್ತಾರೆ; ಈ ಭಾವನೆಯಿಂದ ಅಗರು ಸ್ವಲ್ಪ ಬಿಳಿ ಬಣ್ಣಕ್ಕೆ ತಿರುಗುತ್ತದೆ. ಇದು ಶ್ವೇತಾಗರು.

ಕುರವಕ (Ixora ? arborea)

ಆಕರ: ಆ.ಪು. XI ೧೩೦ ಗ

ದೋಹದ ಪ್ರಕರಣದ ಸಂದರ್ಭದಲ್ಲಿ ಕುರವಕವನ್ನು ಉಪಯೋಗಿಸಿಕೊಂಡಿದ್ದಾನೆ, ಪಂಪ. "ಉನ್ನತಕುಚತಟಾಘಾತ" ಪ್ರಯೋಗದಿಂದ ಮರ ಹೂಗೊಳ್ಳುವುದೆಂಬ ಕವಿಸಮಯವನ್ನು ಪ್ರಸ್ತಾಪಿಸಿದ್ದಾನೆ.

ಕರ್ನಾಟಕದ ಕಾಡುಗಳಲ್ಲಿ ಈ ಮರ ಸ್ವಾಭಾವಿಕವಾಗಿ ಬೆಳೆಯುತ್ತದೆ. ೧೫–೨೫ ಅಡಿ ಎತ್ತರ; ಕಾಂಡದ ಮೇಲ್ಭಾಗದಲ್ಲಿ ರೆಂಬೆಕೊಂಬೆಗಳು; ಬಿಳಿ ಇಲ್ಲವೆ ಕೆಂಪು ಮಿಶ್ರವಾದ ಹೂಗುತ್ತಿಗಳು ಟೊಂಗೆಯ ತುದಿಯಿಂದ ಬಿರಿಯುತ್ತವೆ; ದೂರಕ್ಕೆ ಚೆಂಡುಗಳಂತೆ ಕಾಣುತ್ತವೆ. ವಾಸನೆ ದೂರದಿಂದ ಹಿತ, ಹತ್ತಿರದಿಂದ ಮಾದಕೀಯ, ವೆಗಟು.

ಕನ್ನಡದಲ್ಲಿ ಈ ಮರ ಕುರವ, ಗುರುವ, ಗೊರವಿ ಎಂಬ ರೂಪಭೇದಗಳಿಂದಲೂ ಪರಿಚಿತವಾಗಿದೆ; ತಮಿಳಿನಲ್ಲಿ ಕುರಾ, ಕುರಕ್ಕು ಎಂದು ಮಾರ್ಪಾಟುಹೊಂದಿದೆ. ಕಾಂಚೀಪುರದ ಬಳಿ ತಿರುಪರುತ್ತಿಕುನ್ರಮ್ ಎಂಬೊಂದು ಜೈನಗ್ರಾಮವಿದೆ. ಅಲ್ಲಿನ ವರ್ಧಮಾನಸ್ವಾಮಿ ದೇವಾಲಯದ ಪ್ರಾಕಾರದಲ್ಲಿ ಕುರವಕ ಮರವೊಂದು ಬೆಳೆಯುತ್ತಿದೆ. ಬುಡದ ಸುತ್ತ ಕಲ್ಲು ಚಪ್ಪಡಿಯ ಕಟ್ಟೆಯಿದೆ. ಅದರ ಮೇಲೆ ಕೊರೆದಿರುವ ಶಾಸನವೊಂದು (ಕ್ರಿ.ಶ. ೧೧ನೆ ಶತಮಾನದ್ದೆಂದು ಹೇಳುತ್ತಾರೆ) "ಇಕ್ಕುರಾ ತನ್ನಳವಿಲ್ ಕುನ್ರಾದು ಉಯಿರಾದು" ಎಂದು ತಿಳಿಸಿ, ಅದರಡಿಯಲ್ಲಿ ಮೂವರು ಸವಣಮುನಿಗಳು ದೇಹತ್ಯಾಗ ಮಾಡಿದರು ಎಂದು ತಿಳಿಸುತ್ತದೆ. ಎಂದರೆ, "ಈ ಕುರವಕ ತನ್ನ ಅಳತೆಯಲ್ಲಿ ಕುಗ್ಗುವುದೂ ಇಲ್ಲ, ಏರುವುದೂ ಇಲ್ಲ". ಆಗಲೇ ಹಾಗಿದ್ದ ಮರ ಈಗಲೂ ಹಾಗೆಯೇ ಇದೆ! ಸುಮಾರು ೨೦ ಅಡಿ ಎತ್ತರ, ಕಾಂಡ ಕೊಂಬೆ ರೆಂಬೆಗಳೆಲ್ಲ ಗಂಟು ಗುದುಕು ಪೊಟರೆಗಳಿಂದ ನಿಬಿಡವಾಗಿದೆ; ರೆಂಬೆಕೊಂಬೆಗಳ ಸಂಖ್ಯೆಯೂ ಕಡಮೆ. ಹೊರನೋಟಕ್ಕೆ ಪುರಾತನವಾಗಿಯೇ ಕಾಣುತ್ತದೆ.

ಕುಂಬಳ

ಆಕರ: ವಿ.ವಿ. XI ೪೮

ನಮ್ಮ ಬಳಕೆಯಲ್ಲಿರುವ ಸೀಗುಂಬಳ ಬೂದುಗುಂಬಳಗಳೆರಡೂ ಪ್ರಾಚೀನ ಭಾರತದಲ್ಲಿ ಬೆಳೆಯುತ್ತಿದ್ದ ಗಿಡಗಳಲ್ಲ. ಸೀಗುಂಬಳ ೧೬ನೇ ಶತಮಾನದಿಂದ ಈಚೆಗೆ ಪೋರ್ಚುಗೀಸರ ಮೂಲಕ ಅಮೆರಿಕದಿಂದ ಆಮದಾದದ್ದು. ಬೂದುಗುಂಬಳ ಅದಕ್ಕೂ ಹಿಂದೆಯೇ ಚೈನಾದೇಶದಿಂದ ಬಂದದ್ದು. ಪಂಪನ ಕುಂಬಳ ಇದೇ ಆಗಿದ್ದ ಪಕ್ಷದಲ್ಲಿ ಅವನ ಕಾಲಕ್ಕೆ ಮುಂಚೆಯೇ ಭಾರತಕ್ಕೆ ಬಂದು ನೆಲೆಸಿರಬೇಕು.

ಕುಂಬ = ಕುಂಭಾಕಾರದ, ಪಳ = ಹಣ್ಣು, ಕುಂಬಪಳ→ಕುಂಬಳ, ಎಂಬ ವ್ಯುತ್ಪತ್ತಿ ಸಾಧುವಾದರೆ ಪಂಪನ ಕಾಲದ ಕುಂಬಳ ಈಗ ಬಳಕೆಯಲ್ಲಿರುವ ಸೋರೆಕಾಯಿ ಆಗಬಹುದು. ಈ ಗಿಡ ಭಾರತದ್ದೇ, ಪ್ರಾಚೀನ ಕಾಲದಿಂದಲೂ ನಮಗೆ ಪರಿಚಿತವಾದದ್ದೇ. ಸೋರೆಕಾಯಿಯೂ ಹೊರಕ್ಕೆ ಆರೋಗ್ಯವಾಗಿ ಕಾಣಬಹುದಾದರೂ ಕೆಲವು ಸಲ ಒಳಗೆ ಕೊಳೆತಿರಬಹುದು.

ಕೇದಗೆ (Pandanus odorotissimus)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಕೇದಗೆ, ಕೇತಕಿ.

ಆಕರ: ಆಪು. XI ೧೨೦; XI ೧೨೧

(ಪ್ರ.ಕ. ಸಂಪುಟ 54, ಪುಟ ೯ ನೋಡಿ).

ಕನ್ನಡ ಕವಿಗಳು ಸಾಮಾನ್ಯವಾಗಿ ಕೇದಗೆಯನ್ನು ಕಾವ್ಯದೊಳಗೆ ಸಿಕ್ಕಿಸಿ ಬಿಟ್ಟಿರುವರಾದರೂ ಗಿಡದ ಎಲೆಮುಳ್ಳುಗಳಿಗೆ ಹೆದರಿಕೊಂಡೋ ಏನೋ. ರೂಪವರ್ಣನೆಗೆ ಕೈ ಹಾಕಿಲ್ಲ. ಸಂಸ್ಕೃತ ಕವಿಗಳೂ ಅಷ್ಟೇ. ಸುಭಾಷಿತಗಳನ್ನು ನೆಯ್ದುಬಿಟ್ಟಿರುವರಾದರೂ ಮುಳ್ಳುಜುಟ್ಟಿಗೆ ಒಳಗಾಗದೆ ತಟಸ್ಥರಾಗಿ ದೂರದಿಂದಲೇ ಗಿಡವನ್ನು ನೋಡಿ ತೃಪ್ತಿಪಟ್ಟುಕೊಂಡಿದ್ದಾರೆ. ಎಲೆಯಂಚಿನ ಗರಗಸದಿಂದ ಗಾಯ ಗೊಂಡರೂ ಪೊದೆಯ ಒಳಗನ್ನು ಹೊಕ್ಕು ಗೆದ್ದುಬಂದ ಧೈರ್ಯಶಾಲಿಗಳೆಂದರೆ ತಮಿಳು ಕವಿಗಳು.

ದುಂಬಿಗೂ ಕೇದಗೆಗೂ ಬಹುಕಾಲದ ನಂಟು. ಪಂಪನೂ ಇದೇ ಪಲ್ಲವಿಯನ್ನು ಹಾಡಿರುವ ನಾದರೂ ನೆರವಲಿನಲ್ಲಿ ತನ್ನ ವ್ಯಕ್ತಿತ್ವವನ್ನು ದುಂಬಿಯ ಆತ್ಮಗತದಲ್ಲಿ ಬೆಳಗಿದ್ದಾನೆ: "ಲೋಕದಲ್ಲಿ ನಾವು ಮುಟ್ಟದ ಹೂ ಇಲ್ಲ. ನಮ್ಮ ರೆಕ್ಕೆ ಗಾಳಿಯ ಸ್ಪರ್ಶದಿಂದಲೇ ಎಸಳುಗಳು ಕುಂದಿಹೋಗುತ್ತವೆ; ಒಂದು ಸಲ ಹೀರಿದರೆ ಕಂಪು ಸೋರಿಹೋಗುತ್ತದೆ. ಆದರೆ ಕೇದಗೆ ಹೂ ಹೀಗಲ್ಲ. ಎಷ್ಟು ಹೀರಿದರೂ ಉಕ್ಕುವ ಸೌರಭ ಮುಗಿಯದು" (ಆ.ಪು. ೧೨೦).

ಎಸಳನ್ನು ಮುಟ್ಟಿದರೆ ಸುವಾಸನೆ ಕೆಟ್ಟುಹೋಗಿ "ಕತ್ತುರಿವಣ್ಣಂ ಮಸಿಗೆಡೆಯಪ್ಪುದು" (XI ೧೨೧). ಪಂಪನ ಮಾತಿನಲ್ಲಿ ದಿಟವಿರುವುದಾದರೂ ಸ್ವಲ್ಪ ಉತ್ಪ್ರೇಕ್ಷೆಯಿದೆ. ಎಸಳಂ ಮುಪ್ಪು ಮುಟ್ಟಲೊಡಂ ಎಂದು ಓದಿಕೊಂಡರೆ ನಿಜಕ್ಕೆ ಹತ್ತಿರವಾಗುತ್ತದೆ. ಎಂದರೆ ಬಾಡಿದ ಎಸಳು ಕಪ್ಪಾಗಿ ಮಸಿಗೂ 'ಕತ್ತುರಿವಣ್ಣ'ಗೂ ಸಮನಾಗುತ್ತದೆ.

ಇಲ್ಲಿ ಕತ್ತುರಿವಣ್ಣ ಎಂಬುದಕ್ಕೆ ಪದಶಃ ಅರ್ಥಮಾಡಿ ಕಸ್ತೂರಿಹಣ್ಣು ಎಂದು ಹೇಳಬಹು ದಾದರೂ ಕಾವ್ಯಾರ್ಥಕ್ಕೆ ಹೊಂದದು. ಕತ್ತುರಿ (ಕಸ್ತೂರಿ) ಪ್ರಾಣಿಜನ್ಯವಾದದ್ದು. ಕಸ್ತೂರಿಮೃಗದ ಗಂಟಲ ಭಾಗದಿಂದ ದುಂಡು ಗುಬುಟೊಂದು ಬೆಳೆದು ಕೊಂಗುತ್ತದೆ. ಇದರಲ್ಲಿ ತುಂಬಿರುವ ಕಪ್ಪು ದ್ರವ್ಯವೇ ಕಸ್ತೂರಿ. ಹಣ್ಣಿನ ರೂಪಸಾಮ್ಯದಿಂದ ಈ ಗ್ರಂಥಿಯನ್ನು ಪಂಪನು ಕತ್ತುರಿವಣ್ ಎಂದು ವರ್ಣಿಸಿರುವಂತೆ ಭಾಸವಾಗುತ್ತದೆ.

ಕೇಸರಿ (Crocus sativus)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಕೇಸರಿ, ಕುಂಕುಮ, ಕಾಶ್ಮೀರ

ಆಕರ: ಆ.ಪು. XI ೧೨೮; XI ೧೫೯; XVI ೫೨

"ತಲೆಗೇಱುವ ಕುಸುಮನಿಚಯಂ ಕಾಶ್ಮೀರಂ" (XI ೧೨೮). ಇಲ್ಲಿ ಸ್ವಲ್ಪ ಕ್ಲಿಷ್ಟತೆಯಿದೆ. ಕೇಸರಿ ಹೂವಿನಂತೆ ರೂಪಗೊಂಡಿದ್ದ ಬಯ್ತಗ(ಬಯ್ತಲೆಯ ಆಭರಣ)ವೇ ತಲೆಯ ಮೇಲೆ ಶೋಭಿಸಿತೋ ಅಥವಾ ಕೇಸರಿಹೂವೇ ಆಭರಣವಾಯಿತೋ ಹೇಳುವುದು ಕಷ್ಟ. ತಾವರೆಕಾಂಡದಿಂದಾದ ಬಳೆ ಗಳನ್ನೂ, ಅದರದೇ ಹೂವಿನಿಂದಾದ ಕರ್ಣಪೂರವನ್ನೂ, ಜಾಜಿಯ ಹೂವಿನಿಂದ ಕೋದ ಸರಿಗೆ ಯನ್ನೂ ಅಲಂಕಾರಾಭರಣಗಳಾಗಿ ಉಪಯೋಗಿಸಿಕೊಂಡ ಆ ಸ್ತ್ರೀಯರು ಕೇಸರಿ ಹೂವನ್ನು ಬೈತಲೆಯಲ್ಲಿ ಸಿಕ್ಕಿಸಿಕೊಂಡರು ಎಂದು ಗ್ರಹಿಸುವುದು ಸ್ವಾಭಾವಿಕವೇ.

ಆದರೆ ಕೇಸರಿ ಕಾಶ್ಮೀರಪ್ರದೇಶವನ್ನು ಬಿಟ್ಟು ಭಾರತದಲ್ಲೆಲ್ಲೂ ಬೆಳೆಯದು. ಹೂವನ್ನೇ ಆಭರಣವನ್ನಾಗಿ ಧರಿಸುವ ಪಕ್ಷಕ್ಕೆ ಅದು ಕಾಶ್ಮೀರ ಸ್ತ್ರೀಯರಿಗೆ ಮಾತ್ರ ಸಾಧ್ಯ. ಪಂಪನ ಭೂಗೋಳವೆಲ್ಲ ದಕ್ಷಿಣ ಭಾರತ; ಕೇಸರಿಹೂ ಇಲ್ಲಿನ ಸ್ತ್ರೀಯರ ಆಭರಣವಾಗಬೇಕಾಗಿದ್ದರೆ ಅದು ಚಿನ್ನದಲ್ಲೋ ಬೆಳ್ಳಿಯಲ್ಲೋ ರೂಪಗೊಂಡಿದ್ದಿರಬೇಕು ಎನಿಸುತ್ತದೆ.

ಪಂಪನ ಕಾಲದಲ್ಲಿ ಕೇಸರಿ ಬಳಕೆಯಲ್ಲಿತ್ತೆಂಬುದಕ್ಕೆ ಆದಿಪುರಾಣದ ಪದ್ಯಗಳು ಸಾಕ್ಷಿಯಾಗಿವೆ. ಎಂದರೆ ೧೦ನೇ ಶತಮಾನದ ವೇಳೆಗಾಗಲೇ ಕಾಶ್ಮೀರಕ್ಕೂ ದಕ್ಷಿಣ ಭಾರತಕ್ಕೂ ವ್ಯಾಪಾರ ವಾಣಿಜ್ಯ ಸಂಬಂಧವೇರ್ಪಟ್ಟು ನೆಲೆಯಾಗಿತ್ತೆಂದು ಧಾರಾಳವಾಗಿ ಊಹಿಸಬಹುದು. ಆ ಪ್ರದೇಶದಿಂದ ಪ್ರತ್ಯ-ಭಿಜ್ಞಾದರ್ಶನ ಸಂಪ್ರದಾಯಸ್ಥರು ದಕ್ಷಿಣ ಭಾರತಕ್ಕೆ ಬಂದು ಚಿದಂಬರದಲ್ಲಿ ನೆಲಸಿದ್ದೂ ಸುಮಾರು ಇದೇ ಕಾಲದಲ್ಲಿ ಎಂಬುದಕ್ಕೆ ಸಾಕ್ಷ್ಯಗಳಿವೆ.

ಕೊಸಗು (?Pterospermum heyneanum)

ಆಕರ: ವಿ.ವಿ.–IV ೭೫

ಆ.ಪು.–XI ೮೫

ಮೇಲೆ ಕಾಣಿಸಿರುವ ಅನನ್ಯತೆಯನ್ನು ನಿಘಂಟುಗಳಲ್ಲಿ ಕಾಣಬಹುದು. ಆದರೆ ನನಗೆ ಸಮರ್ಪಕ ವಾಗಿಲ್ಲ. ಕೊಸಗಿನ ಕೇಸರಗಳನ್ನು ಅಮೃತದಲ್ಲೂ ಶೃಂಗಾರ ರಸದಲ್ಲೂ ಅದ್ದಿ (ಇನ್ನೂ ಏನೇನನ್ನೋ ಮಾಡಿ) ಬ್ರಹ್ಮನು ಸುಭದ್ರೆಯನ್ನು ಸೃಷ್ಟಿಮಾಡಿದನಂತೆ (ವಿ.ವಿ. IV ೭೫). ಕೊಸಗನ್ನೇ ಕರ್ಣಿಕಾರ ಎಂದೂ ಹೇಳುತ್ತಾರೆ. ಕರ್ಣಿಕಾರದ ಕೇಸರಗಳು ಕುಚ್ಚು ಕುಚ್ಚಾಗಿರುತ್ತವೆ. ಆದರೆ ಈ ಸಂದರ್ಭಕ್ಕೆ ಯಾವ ಬಗೆಯಲ್ಲೂ ಹೊಂದಿಕೊಳ್ಳದು.

ಪಂಪನಿಗೆ ನೇರವಾದ ಪರಿಚಯವಿದ್ದ ಮರ ಕೊಸಗು ಎಂದು ನನ್ನ ನಂಬಿಕೆ. ಆದರೆ ಈಗಿನ ಅನನ್ಯತೆ ಸದ್ಯಕ್ಕೆ ತಿಳಿಯದು.

ಗೊಜ್ಜಗೆ

ಆಕರ: ವಿ.ವಿ.–V ೩೦

ಆಪು.–XI ೧೧೯ ; XI ೧೨೫ ; XI ೧೨೬

(ಪ್ರ.ಕ. ಸಂಪುಟ ೫೪, ಪುಟ ೯ ನೋಡಿ)

ಪಂಪನ ಮಾತುಗಳಿಂದ ಈ ಗಿಡದ ಅನನ್ಯತೆಯನ್ನು ಗುರುತಿಸಲಾಗದು. ಸಾಮಾನ್ಯ ಅಭಿಪ್ರಾಯದ ಪ್ರಕಾರ ಇದು ಸೇವಂತಿಗೆ. ಕಿಟ್ಟೆಲ್ ನಿಘಂಟುವಿನಲ್ಲೂ (ಎರಡನೆ ಆವೃತ್ತಿ) ಹೀಗೆಯೇ ತಿಳಿಸಿದೆ. ಆದರೆ ಸೇವಂತಿಗೆಯೂ ಗೊಜ್ಜಗೆಯೂ ಬೇರೆ ಬೇರೆ ಜೀನಸುಗಳಲ್ಲದಿದ್ದರೂ ಸ್ಪೀಷೀಸುಗಳು ಎಂದು ನನ್ನ ಅಭಿಪ್ರಾಯ (ಸೇವಂತಿಗೆ ನೋಡಿ).

ಗೊಜ್ಜಗೆ ಹೂವಿನ ಬಣ್ಣವನ್ನು ಮಸಿಗೆ ಹೋಲಿಸಿದ್ದಾನೆ, ಪಂಪ (ಆ.ಪು. XI ೧೧೯). ನಾನು ಇನ್ನೊಂದೆಡೆ ತಿಳಿಸಿರುವಂತೆ ಇದು ಕಾಡಿಗೆಗಪ್ಪಾಗಿಯೇ ಇರಬೇಕಾಗಿಲ್ಲ. ಕೆಂಪು, ನೀಲಿ, ಹಸುರು ಬಣ್ಣಗಳು ಬಹುತೀಕ್ಷ್ಣವಾದಾಗ ಆಯಾ ಛಾಯೆಗಳೂ ಒಂದು ಬಗೆಯ ಕಪ್ಪಾಗಬಹುದು. ನೀಲ ನೈದಿಲೆಯನ್ನು 'ಕನ್ನೈಯ್ದಿಲು' ಎಂಬ ಪದಸಂಯೋಜನೆಯಿಂದ 'ಕಪ್ಪುಬಣ್ಣದ ನೆಯ್ದಿಲು' ಎಂದು ಕಾವ್ಯದೃಷ್ಟಿಯಿಂದ ಪಂಪನೇ ವರ್ಣಿಸಿದ್ದಾನೆಂಬುದನ್ನೂ ಗಮನದಲ್ಲಿಟ್ಟುಕೊಳ್ಳಬೇಕು. (ವಿ.ವಿ. V ೫ ಗ)

ತರುಬಿನಲ್ಲಿ ಮುಡಿದಾಗ ಗೊಜ್ಜಗೆ ಹೂ 'ಉದಿರ್ದು' ಒಪ್ಪುವುದು ಎಂದಿದ್ದಾನೆ. ಪಂಪ (ಆ.ಪು. XI ೧೨೬). ಈ ಮಾತಿಗೆ 'ಉದುರಿ' ಎಂದು ಅರ್ಥಮಾಡಲಾಗಿದೆ. (ರಾಜರತ್ನಂ. ಜಿ.ಪಿ.: ಶ್ರೀಕವಿಪಂಪ, ಪುಟ ೭೦ ನೋಡಿ). ಮುಡಿದಾಗ ಎಸಳುಗಳು ಉದುರಿ ಹೋದರೆ ಒಪ್ಪವೇನು ಬಂತು? 'ಉದಿರ್ದು' ಎಂದರೆ ಉದಯಿಸಿರ್ದು, ಉದಿಸಿ, ಅರಳಿ ಎಂಬ ಭಾವವನ್ನು ಗ್ರಹಿಸುವುದು ಸಾಧುವಾದರೆ ಗಿಡದ ಅನನ್ಯತೆಯನ್ನು ಗುರುತಿಸುವುದಕ್ಕೆ ಒಂದು ಸುಳಿವು ದೊರಕುತ್ತದೆ.

ಗೋಧೂಮ

ಆಕರ: ವಿ.ವಿ.–XV ೩ ೧

ಯವದಂತೆ ಗೋಧಿಯೂ ದಕ್ಷಿಣ ಭಾರತಕ್ಕೆ ಉತ್ತರ ಭಾರತದಿಂದ ಪರಿಚಯವಾದ ಧಾನ್ಯ ಋಗ್ವೇದದಲ್ಲಿ ಗೋಧಿಯ ಉಲ್ಲೇಖವಿಲ್ಲವಾದರೂ ಇತರ ಸಂಹಿತೆಗಳಲ್ಲಿದೆ. ಯವದಿಂದ ತಯಾರಿಸುತ್ತಿದ್ದ ಅಡುಗೆಗಳೆಲ್ಲವನ್ನೂ ಗೋಧಿಯಿಂದಲೂ ಮಾಡುತ್ತಿದ್ದರು. ಯವಕ್ಕಿಂತಲೂ ಗೋಧಿಯ ಉಪಯೋಗ ದಕ್ಷಿಣ ಭಾರತದಲ್ಲಿ ಬಹುಕಾಲದಿಂದಲೂ ಬೇರೂರಿದೆ.

(ಚಂದನ) ಶ್ರೀಗಂಧ (Santalum album)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಸಿರಿಕಂಡ, ಚಂದನ, ಹರಿಚಂದನ, ಮಳಯಜ

ಆಕರ: ವಿ.ವಿ.–IV ೨೧ ; IV ೨೨ ; IV ೫೯ ; IV ೭೫ ; V ೫ ೧ ; V ೩೦ ; V೫೨ ; V ೬೬ ; XIII ೨ ೧.

ಆ.ಪು.–XVI ೫೨.

ಪಂಪನು ಶ್ರೀಗಂಧದ ಮರವನ್ನು ಪ್ರತ್ಯಕ್ಷವಾಗಿ ಕಂಡಿದ್ದನೋ ಇಲ್ಲವೋ ಎಂಬ ಸಂದೇಹ ತಟ್ಟುತ್ತದೆಯಾದರೂ ಅದರ ಚೌಬೀನೆ ಹೊಮ್ಮುವ ವಾಸನೆಯನ್ನು ಅನುಭವಿಸಿದ್ದನೆಂಬುದು ಸ್ಪಷ್ಟವಾಗಿದೆ.

ಶ್ರೀಗಂಧವನ್ನು ಮಲಯಪರ್ವತವಾಸಿ ಎಂದು ನಿರ್ದೇಶಿಸಿದ್ದಾನೆ (ವಿ.ವಿ. IV ೨೧ ; IV ೭೫). ಇದು ಸರಿಯೇ. ಮಲಯ ಎಂಬ ಪ್ರದೇಶ ಭಾರತದ ಹೊರಗಿರುವ ಅದೇ ಹೆಸರನ್ನು ಕೊಂಡ ಪರ್ಯಾಯ ದ್ವೀಪವಲ್ಲವೆಂಬುದನ್ನೂ, ಈಗಿನ ಕರ್ನಾಟಕದ ದಕ್ಷಿಣ ಪ್ರದೇಶವನ್ನೂ ಅದನ್ನಂಟಿಕೊಂಡಿರುವ ತಮಿಳು ಕೇರಳ ಪ್ರದೇಶಗಳಲ್ಲಿ ಹಬ್ಬಿರುವ ಘಟ್ಟಪ್ರಾಂತಗಳನ್ನೂ ನಿರ್ದೇಶಿಸುತ್ತದೆಯೆಂಬುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಹರವನ್ನು ಬಿಟ್ಟು ಶ್ರೀಗಂಧ ಬೆಳೆಯದು. ಆದರೂ ಕವಿಸ್ವಾತಂತ್ರ್ಯದ ಹಕ್ಕಿನಿಂದ ಪಂಪ ಈ ಮರವನ್ನು ಯಮುನಾನದೀ ತೀರದಲ್ಲೂ ಬೆಳೆಸಿಬಿಟ್ಟಿದ್ದಾನೆ !(ವಿ.ವಿ. V ೫೨).

ಕಾಡಾನೆಗಳ ಕೇಳಿಯಲ್ಲಿ ಮುರಿದು ಬಿದ್ದ ಶ್ರೀಗಂಧ ಮರಗಳಿಂದ ಹೊಮ್ಮಿದ ಸುವಾಸನೆಯನ್ನು ಚಂದನರಸ ಎನ್ನುತ್ತಾನೆ (ವಿ.ವಿ. IV ೨೨) ಸೆಕೆಗಾಲದಲ್ಲಿ ಚಂದನಲೇಪ ದೇಹಕ್ಕೆ ತಂಪೀಯುತ್ತದೆ (ವಿ.ವಿ. V ೫), ಚಳಿಗಾಲದಲ್ಲಿ ಚಂದನಧೂಪ ಸುಖೋಷ್ಣತೆಯನ್ನೀಯುತ್ತದೆ (ವಿ.ವಿ. V ೩೦). ಈ ದ್ವಂದ್ವ ಗುಣ ಪಂಪನಿಗೂ ಹಿಂದಿನ ಪ್ರಾಚೀನ ವೈದ್ಯಕೋಶಗಳಲ್ಲೂ ಉಕ್ತವಾಗಿದೆ. ವಕ್ಷಃಸ್ಥಳದ ಮೇಲೆ ಚಂದನ ಲೇಪ ಮಾಡಿಕೊಳ್ಳುವುದು ಪಂಪನ ಕಾಲದ ಸ್ತ್ರೀಯರ ಅಲಂಕಾರಗಳಲ್ಲೊಂದಾಗಿತ್ತು (ವಿ.ವಿ. V ೬೬)

ಶ್ರೀಗಂಧ ಮರದ ಮೇಲೆ ಬೀಸಿದ ಗಾಳಿ ಪೆಂಪು ಪಡೆದಿತ್ತು ಎನ್ನುತ್ತಾನೆ, ಪಂಪ (ವಿ.ವಿ. IV ೨೧). ಪರಿಮಳವಿರುವುದು ಚೌಬೀನೆಯ ಗರ್ಭದಲ್ಲಿ; ಎಲೆ ಹೂಗಳಲ್ಲಲ್ಲ. ಮರದ ಒಂದು ಭಾಗಕ್ಕೆ ಮಾತ್ರ ದತ್ತವಾಗಿರುವ ಗುಣವನ್ನು ಮರಕ್ಕೇ ಇದೆಯೆಂಬ ಹೇಳಿಕೆ ಉತ್ಪ್ರೇಕ್ಷಾಲಂಕಾರವಾಗಬಹುದೇ? (ಬತ್ತ ನೋಡಿ).

ನಮ್ಮ ಪ್ರಾಚೀನರು ಸಾಮಾನ್ಯವಾಗಿ ಎರಡು ಬಗೆಯ ಚಂದನಗಳನ್ನು ಹೆಸರಿಸುತ್ತಾರೆ: ಹರಿಚಂದನ (=ಶ್ವೇತಚಂದನ) ಮತ್ತು ರಕ್ತಚಂದನ. ಮೊದಲನೆಯದು ಶ್ರೀಗಂಧ. ರಕ್ತಚಂದನವೂ ದಕ್ಷಿಣ ಭಾರತದ ಕಾಡುಗಳಲ್ಲೇ ಬೆಳೆಯುತ್ತದೆಯಾದರೂ ಬಹುಕಾಲ ಉಪಯೋಗಕ್ಕೆ ಒಗ್ಗಿರಲಿಲ್ಲ. ಮೊದಮೊದಲು ಕೆತ್ತನೆಯ ಕೆಲಸಕ್ಕಾಗಿ ರಕ್ತಚಂದನ ಚೌಬೀನೆ (Pterocarpus santalinus) ಬಳಕೆಗೆ ಬಂತು; ಈಗಲೂ 'ತಿರುಪತಿ ಗೊಂಬೆ'ಗಳಿಗೆ ಈ ಮರವೇ ಮೂಲ ಸರಕು. ಮರವನ್ನು ಸಾಣೆಕಲ್ಲಿನ ಮೇಲೆ ತೇಯ್ದು ಕೆಂಪುಗಂಧವನ್ನು ತೆಗೆಯುವ ಸಂಪ್ರದಾಯ ಯಾವಾಗ ಹುಟ್ಟಿತೆಂದು ತಿಳಿಯಲು

ಆಧಾರಗಳು ದೊರಕಿಲ್ಲ. ದಕ್ಷಿಣ ಭಾರತದಲ್ಲಿ ಶಾಕ್ತ ಮತ್ತು ಸೌರ ಸಂಪ್ರದಾಯಗಳು ಬೇರೂರಿ, ಕೆಂಪು ಹೂ, ಕೆಂಪು ಅಕ್ಷತೆ, ಕೆಂಪು ವಸ್ತ್ರ ಮೊದಲಾದವು ಉಪಯೋಗಕ್ಕೆ ಬಂದ ಸಮಯದಲ್ಲಿ ಕೆಂಪುಗಂಧವೂ ಬಳಕೆಗೆ ಬಂದಿದ್ದಿರಬೇಕು. ರಕ್ತಚಂದನಕ್ಕೆ ಪರಿಮಳವಿಲ್ಲ.

ಜಾದಿ (Jasminum grandiflorum)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಜಾದಿ, ಜಾಜಿ, (?)ಜಾತಿ

ಆಕರ: ವಿ.ವಿ.–VII ೬೯ ; VII ೭೦

ಆ.ಪು. XI ೬ ; XI ೯ ; XI ೮೯ ; XI ೧೦೯ ; XI ೧೧೩ ; XI ೧೨೨ ; XII ೧೨

(ಪ್ರ.ಕ. ಸಂಪುಟ 54, ಪುಟ 12 ನೋಡಿ)

ಮಲ್ಲಿಗೆ ಮೊಲ್ಲೆಗಳಂತೆ ಈ ಗಿಡವೂ ಜಾಸ್ಮಿನಮ್ ಜೀನಸಿಗೆ ಸೇರಿದ ಇನ್ನೊಂದು ಸ್ಪೀಷೀಸು. ಕರ್ನಾಟಕದ ಕಾಡುಗಳಲ್ಲಿ ಬೆಳೆಯುತ್ತದೆ. ಬಳ್ಳಿಯಾಗಿ ಬೆಳೆದು ಅಕ್ಕಪಕ್ಕದ ಗಿಡಮರಗಳೊಂದಿಗೆ ಸುಲಿ ಹಾಕಿಕೊಳ್ಳುತ್ತದೆ. ಹೂವಿನ ಪರಿಮಳ ಕ್ಷಣಿಕವೆಂಬುದನ್ನು ಪೊಸಜಾದಿ (ಆ.ಪು. XI ೬), ಪೊಸತಲರ್ದ (ಆ.ಪು. IX ೧೧೩) ಅಲರ್ದರಗಳಿಗೆಯ ಜಾದಿ (ಆ.ಪು. XI ೧೨೨) ಮೊದಲಾದ ವಿಶೇಷಣ ಗಳಿಂದ ಬೆಳಗಲಾಗಿದೆ. ಹೂಬಿರಿಯುವ ಕಾಲ ಬೆಳದಿಂಗಳು ಎಂದೂ ಸೂಚಿತವಾಗಿದೆ (ಆ.ಪು. XI ೯) ಯಾದರೂ ಇರುಳಿನಲ್ಲಿ ಎಂದು ತಿಳಿಯಬೇಕು. ಜಾದಿ ಶರತ್ಕಾಲದಲ್ಲಿ ಹೂ ತಳೆಯುತ್ತದೆ ಎಂಬ ಪಂಪನ ಹೇಳಿಕೆಯನ್ನೂ (ಆ.ಪು. VII ೬೯) ಒಪ್ಪತಕ್ಕದ್ದೇ. ಒಂದು ಗಿಡವನ್ನು ಕುರಿತು ಇಷ್ಟೊಂದು ವಿವರಗಳನ್ನು ಕೊಡುವ ಕವಿಗಳು ತೀರ ವಿರಳ. ಈ ವಿವರಗಳನ್ನು ಕೊಂಡೇ ಗಿಡದ ಅನನ್ಯತೆಯನ್ನು ಸ್ಫುಟವಾಗಿ ತಿಳಿಸಲು ಸಾಧ್ಯವಾಗಿದೆ.

ಹೊಸದಾಗಿ ಅರಳಿದ ಜಾದಿಯ ಕಂಪು ಮೃದುವಾದ ಮಾಧುರ್ಯಗೊಂಡದ್ದು. "“ಜನಮಂ ಸೋಲಿಸುಗುಂ," "ಅನಂಗಾಮೃತ ಸೌಖ್ಯಸಾರ." ಇನ್ನಾವ ಹೂವೂ ಈ ಗುಣವನ್ನು ಪಡೆದಿಲ್ಲ ಎಂದು ಪಂಪನ ಅಭಿಪ್ರಾಯ (ಆ.ಪು. XI ೧೧೩).

"ಸೊಡರ ಬೆಳಗಿನೊಳ್ ಕೊರಗುವ ಜಾಜಿ" ಎಂದ ಪಂಪ (ಆ.ಪು. XI ೧೦೯). ಈ ಸಂದರ್ಭ ದಲ್ಲಿ ಸೊಡರ ಕಾಂತಿಯೇ ಹೆಚ್ಚು, ಜಾದಿಯು ಕಾಂತಿಹೀನ ಎಂಬ ಟೀಕೆ ಸಲ್ಲದು. ಚಂದ್ರಶೀತಲ ಕಿರಣ ದಲ್ಲಿ ಜಾಜಿ ಅರಳುತ್ತದೆಯೆಂದು ಪಂಪನೇ ನಮಗೆ ತಿಳಿಸಿದ್ದಾನೆ. ಎಂದರೆ 'ಪೊಸ' ಜಾದಿಯ ಕ್ಷಣಿಕ ಕಂಪನ್ನು ಅನುಭವಿಸಬೇಕಾದರೆ ತಣುವು ವಾತಾವರಣ ಬೇಕು. ಬಿಸಿಯೇರಿದ ವಾತಾವರಣದಲ್ಲಿ–ಸೊಡರ ಮಗ್ಗುಲಲ್ಲಿ–ಕಂಪು ನಾಶವಾಗುತ್ತದೆ, ಹೂ ಮಾಸುತ್ತದೆ. ಬೆಂಗಳೂರು ಹವದಲ್ಲಿ ಬೆಳೆದ ಜಾಜಿಗಿರುವ ಪರಿಮಳ ಸಮುದ್ರಮಟ್ಟದಲ್ಲಿ ಬೆಳೆದ ಜಾಜಿಗಿಲ್ಲವೆಂಬುದು ರಸಿಕರ ಅನುಭವ.

ತಮಾಲ (Cinnamomum tamala)

ಆಕರ: ವಿ.ವಿ. I ೧೨೫ ; V ೫೨ ; V ೮೬ ; VII ೭೬

ಆ.ಪು. XI ೬೦

ತಮಾಲ (ತಮಾಳ) ಎಲೆಯ ಬಣ್ಣ ಕಪ್ಪು ಛಾಯೆಗೊಂಡ ಹಸುರು ಎಂದು ಅನೇಕ ಸಂಸ್ಕೃತ ಕಾವ್ಯಗಳಿಂದ ತಿಳಿದು ಬರುತ್ತದೆ (ಉದಾ: ಶ್ಯಾಮಸ್ತಮಾಲ ದ್ರುಮೈಃ–ಗೀತ ಗೋವಿಂದ). ಪಂಪನು ಕುಂತಿಯ ಚೂಚುಕವನ್ನು ಒಪ್ಪವಿಡುವ ಸಂದರ್ಭದಲ್ಲಿ ಕಪ್ಪುಬಣ್ಣವನ್ನು ಪ್ರತಿಮೆಯಾಗಿಟ್ಟು ಕೊಂಡಿರುವಂತಿದೆ. ಹೀಗಿರುವಾಗ ತಮಾಳವನು ಮೊಂಗೆಯ ಚಿಗುರು ಎಂದು ಅರ್ಥಯಿಸುವುದರಲ್ಲಿ ('ದೀಪಿಕೆ') ಸಾಧುತ್ವವಿಲ್ಲ.

ಯಮುನಾ ತೀರದಲ್ಲೂ ನಂದನವನದಲ್ಲೂ ತಮಾಲ ವೃಕ್ಷ ಬೆಳೆಯುತ್ತಿತ್ತು. ಪಂಪನ ಪ್ರಕಾರ (ವಿ.ವಿ. V ೫೨ ; V ೮೬). ನಿಜವಾದ ಹಿಮಾಲಯದ ತಪ್ಪಲು ಪ್ರದೇಶದಲ್ಲೂ ಅಸ್ಸಾಂನ ಬೆಟ್ಟಕಾಡುಗಳಲ್ಲೂ ಸ್ವಾಭಾವಿಕವಾಗಿ ಬೆಳೆಯುತ್ತದೆ. ಸಣ್ಣಮರ, ದಟ್ಟವಾದ ಎಲೆಹೊದಿಕೆ. ಎಲೆಯ ಮೇಲೆ (ಹಿಂಭಾಗ) ಮೂರು ನಾಮದಂತೆ ವಿನ್ಯಾಸಗೊಂಡಿರುವ ಉಬ್ಬುನರಗಳು. ಪ್ರಾಚೀನ ಕಾಲದಿಂದಲೂ ಎಲೆ ಸಾಂಬಾರದಿನಸಾಗಿ ಪ್ರಸಿದ್ಧಿ ಹೊಂದಿದೆ. ದಕ್ಷಿಣ ಭಾರತಕ್ಕೆ ಕಡಲು ವ್ಯಾಪಾರದ ಮೂಲಕ ಕ್ರಿಸ್ತ ಶಕದ ಆದಿಶತಮಾನಗಳಲ್ಲಿ ಸರಬರಾಜಾಗುತ್ತಿತ್ತು: ಮೆಡಿಟರೇನಿಯನ್ ರಾಷ್ಟ್ರಗಳಿಗೂ ರವಾನೆಯಾಗುತ್ತಿತ್ತು.

ಪಶ್ಚಿಮ ಘಟ್ಟಗಳಲ್ಲಿ ಸಿನ್ನಮೋಮಿನ ಬೇರೆ ಸ್ಪೀಷೀಸುಗಳಿಗೆ ಸೇರಿದ ಗಿಡಗಳು ಬೆಳೆಯುತ್ತವೆ. ತಮಾಲ ಪತ್ರಕ್ಕೆ ಬೆರಕೆ ಮಾಲಾಗಿ ಈ ಎಲೆಗಳು ಮಾರುಕಟ್ಟೆಗೆ ಬರುತ್ತವೆ. ನಮ್ಮ ಜನ ಇದನ್ನೇ 'ಲವಂಗ ಪತ್ರೆ' 'ಜಾಕಾಯಿ ಪತ್ರೆ' ಎಂದೆಲ್ಲ ಹೇಳಿಕೊಂಡು ಉಪಯೋಗಿಸುತ್ತಾರೆ (ಲವಂಗಕ್ಕೂ ತಮಾಲಕ್ಕೂ ಯಾವ ಸಂಬಂಧವೂ ಇಲ್ಲ). ಸಸ್ಯಾಹಾರಿಗಳಿಗಿಂತಲೂ ಮಾಂಸಾಹಾರಿಗಳಿಗೆ ತಮಾಲ ವಾಸನೆ ಪ್ರಿಯ.

ತಾವರೆ (Nelumbium Speciosum)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ತಾವರೆ, ಕೆಂದಾವರೆ, ಅಂಭೋಜ, ಅಬ್ಜ, ಮೃಣಾಳ, ವನಜ, ಕೋಕದ, ಅಂಬುಜ, ಪದ್ಮ, ಕಮಳ, ಕಮಲ, ನೀರೇಜ, ಶತಪತ್ರ, ಪಂಕಜ, ಅಂಬೋರುಹ.

ಆಕರ: ವಿ.ವಿ. I ೪೦; I ೧೧೫; II ೧೭; II ೧೯ ಗ; II ೨೯; II ೩೯ ಗ; II ೭೭ ಗ; III ೧೧ ಗ; III ೧೮; III ೩೩ ಗ; III ೩೯; IV ೪೬; IV ೪೮ ಗ; IV ೫೯; IV ೭೨; IV; ೭೫; IV ೧೦೭; V ೫ ಗ; V ೧೦; V ೧೬; V ೩೪; V ೫೬; V ೬೩; V ೮೦; X ೫೧

ಆ.ಪು. I ೬

(ಪ್ರ.ಕ. ಸಂಪುಟ 54, ಪುಟ 8 ನೋಡಿ)

ನೆಯ್ದಿಲಿನಂತೆ ತಾವರೆಯೂ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ, ರಾಜಾಸ್ಥಾನದಿಂದ ಬಂಗಾಳದ ವರೆಗೆ. ಮೈದಾನ ಪ್ರದೇಶಗಳಲ್ಲೆಲ್ಲ ಬೆಳೆಯುತ್ತದೆ (ಭೂಮಿಯ ಉಷ್ಣವಲಯ ಪ್ರದೇಶಗಳಲ್ಲೆಲ್ಲ ಬೇರೆ ಬೇರೆ ಸ್ಪೀಷೀಸುಗಳು ಬೆಳೆಯುತ್ತವೆ. ಪ್ರಾಚೀನ ಕಾಲದಿಂದ ಭಾರತೀಯರಿಗೆ ಭಾವೋತ್ಕರ್ಷವೀಯುತ್ತಿರುವ ಗಿಡ ಇದು.

ಪಂಪನು ಎರಡು ಬಣ್ಣಗಳ ತಾವರೆ ಹೂಗಳನ್ನು ನಿರ್ದೇಶಿಸುತ್ತಾನೆ: ಬಿಳಿದಾವರೆ (ವಿ.ವಿ. I ೪೦; V ೫ ಗ) ಮತ್ತು ಕೆಂದಾವರೆ (ವಿ.ವಿ. II ೩೯ ಗ) ಈ ಎರಡು ಬಣ್ಣಗಳ ಹೂ ತಳೆಯುವ ಗಿಡಗಳು ಬೇರೆಯಾದರೂ ಒಂದೇ ಸ್ಪೀಷೀಸಿಗೆ ಸೇರಿದವು.

ಪಂಪನು ಲಕ್ಷ್ಮಿಯನ್ನು ಬಿಳಿದಾವರೆಯಲ್ಲಿ ನಿಲ್ಲಿಸಿದ್ದಾನೆ. ಅದರ ಮಗ್ಗುಲಲ್ಲಿ ಜಾಕಪ್ಪೆಯನ್ನು ನಿಲ್ಲಿಸಿ ಲಕ್ಷ್ಮಿಯು ಕಾಂತಿಹೀನ ಎನ್ನುತ್ತಾನೆ (ವಿ.ವಿ. I ೪೦). ಸಂಜೆಯ ಅರುಣಾಕಾಶ ಕೆಂದಾವರೆಯ ಹೂ ನೀರನ್ನು ಎರಚಿದ್ದರಿಂದ ಉಂಟಾಯಿತು ಎನ್ನುತ್ತಾನೆ (ವಿ.ವಿ. IV ೪೬). ಅಸ್ತಮಿಸುತ್ತಿರುವ ಸೂರ್ಯನೆದುರು ಅರಳಿದ್ದ ತಾವರೆ ಹೂ ಮುಚ್ಚಿಕೊಳ್ಳುವುದನ್ನು "ಆದಿತ್ಯಂಗೆ ಕೆಯ್ಯಂ ಮುಗಿವಂತೆ ಮುಗಿದು" ಎಂದು ಕಾವ್ಯವಾಣಿಯಲ್ಲಿ ಚಿತ್ರಿಸಿದ್ದಾನೆ (ವಿ.ವಿ. IV ೪೮ ಗ). ದುರ್ಯೋಧನನ ಮುಖ ಅವನ ತುರುಬಿಗಿಂತಲೂ ಕಿರಿಯದಾಯಿತು ಎಂಬ ಹೇಳಿಕೆಗೆ ಪುಷ್ಟಿದೊರಕುವಂತೆ ಭೀಷ್ಮದ್ರೋಣಾದಿಗಳ ಮುಖ ಅರಳಿದ ತಾವರೆಗಿಂತಲೂ ಹಿರಿಯದಾಯಿತು ಎನ್ನುತ್ತಾನೆ (ವಿ.ವಿ. II ೭೭ ಗ)

ತಾವರೆ ಹೂವಿನಿಂದ ಅನುವಾದ ಸರಿಗೆ ಕಂಕಣಗಳಿಂದಲೂ ಕಟಿಸೂತ್ರದಿಂದಲೂ ಅಲಂಕಾರ ಗೊಂಡಿದ್ದರಂತೆ ಸ್ತ್ರೀಯರು (ವಿ.ವಿ. V ೫ ಗ; V ೧೬). ಪಾಂಡುವು ಸಾಯುವ ಮುನ್ನ ಮಾದ್ರಿಯನ್ನಪ್ಪಿ ಕೊಂಡಾಗ ತಾವರೆದಂಟಿನಂತಿದ್ದ (ಕ್ಷೀಣವಾಗಿದ್ದ) ಅವನ ಬಾಹುಪಾಶಗಳು ಯಮಪಾಶಗಳಾದ ವಂತೆ (ವಿ.ವಿ. II ೧೯ ಗ). ತಾವರೆ ಕಾಂಡವನ್ನು ಸೀಳಿದ ಹಾಗೆ ಭೀಮನು ರಾಕ್ಷಸನನ್ನು ಸೀಳಿದನಂತೆ (ವಿ.ವಿ. III ೧೮). ತಾವರೆದಂಟಿನ ನಾರಿನಿಂದ ತೋರಮಲ್ಲಿಗೆಯ ಬಿರಿಮುಗುಳನ್ನು ಸರಿಗೆಯಂತೆ ಪೋಣಿಸಿದರು (ವಿ.ವಿ V ೫ ಗ)

ಬಿರಿದ ತಾವರೆಯನ್ನು ಚೆಲುವಾದ ಮುಖಕ್ಕೆ ಒಪ್ಪವಿಡುವ ಸಂಪ್ರದಾಯವನ್ನು ಪಂಪನೂ ಅನುಸರಿಸಿದ್ದಾನೆ (ಮುಖಾಬ್ಜ, ವಿ.ವಿ. II ೬೩; ಮುಖಾಂಬುಜ, ವಿ.ವಿ. IV ೧೦೭; ಅಂಬುಜಾಕ್ಷಿ ವಿ.ವಿ. IV ೭೨ ಇತ್ಯಾದಿ). ಕಮಲದ ಹೂವನ್ನು ಉಪಮಾನವಾಗಿ ಆರಿಸಿಕೊಂಡಂತೆ ಅದರ ದಳ ವನ್ನು ಕಣ್ಣಿಗೂ ಬೆರಳಿಗೂ ಹೋಲಿಕೆ ತರುವುದೂ ಸಾಮಾನ್ಯ ಕವಿಸಮಯವೇ.

ತಾಳ

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ತಾಳ, ತಾಳೀ

ಆಕರ: ವಿ.ವಿ. V ೫೨; V ೮೬

ಆ.ಪು. XI ೬೦

ಪಂಪನು ತಾಳ ತಾಳೀ ಪದಗಳನ್ನು ಇತರ ಸುಗಂಧದ್ರವ್ಯಗಳ ಸಂದಿನಲ್ಲಿ ಇರುಕಿಸಿದ್ದಾನೆ. ಹೀಗಾಗಿ ತಾಳ ಎಂಬುದು ತಾಳೆ (ತಾಡ, ತಾಟ) ವೃಕ್ಷವಾಗಿರಲಾರದೆಂದೂ ತಾಳೆ (ಕೇದಿಗೆ) ಇರ ಬಹುದೆಂದೂ ಸಂಶಯ ಹುಟ್ಟುತ್ತದೆ (ಕೇತಕಿ ನೋಡಿ).

ತಾಂಬೂಲ, ಎಲೆ, ಅಡಕೆ

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: 1. ತಾಂಬೂಲ, ತಂಬುಲ, ತಾಂಬೂಳ. 2. ಎಲೆ, ಎಲೆವಳ್ಳಿ, ನಾಗ, ನಾಗಜಾಲ (Piper betel) 3. ಅಡಕೆ, ಕೌಂಗು, ಪೂಗ (Areca catechu)

ಆಕರ: 1. ತಾಂಬೂಲ

ವಿ.ವಿ. III ೧೮ ಗ; IV ೩೭; IV ೪೩; IV ೧೦೭
ಆ.ಪು. XI ೨೭ ಗ; III ೯೦ ಗ
2. ಎಲೆ:
ವಿ.ವಿ. IV ೧೭; IV ೨೮
ಆ.ಪು. I ೬೭; XI ೬೮; XIII ೧೧
3. ಅಡಕೆ:
ವಿ.ವಿ. II ೩೯ ಗ; II ೪೬; III ೫೫
ಆ.ಪು. I ೬೭; XIII ೧೧

ಪಂಪನಿಗೆ ಪ್ರಿಯವಾದ ಬನವಾಸಿಯಲ್ಲಿ ಬೆಳೆಯುತ್ತಿದ್ದ ಗಿಡಗಳಲ್ಲಿ ಎಲೆಯೂ ಒಂದು (ವಿ.ವಿ. IV ೨೮). ಕಬ್ಬಲಿಸುತ್ತಿದ್ದ ಎಲೆವಳ್ಳಿ ಎನ್ನುತ್ತಾನೆ (ಆ.ಪು. I ೬೭). ಬಳ್ಳಿ ಸಮೂಹ (ತೋಟ?) ವನ್ನು ನಾಗಜಾಲ ಎನ್ನುತ್ತಾನೆ (ವಿ.ವಿ. IV ೧೭). ತಾಂಬೂಲದೊಡನೆ ಅಗಿಯುವ ಎಲೆಗೆ ದ್ರಾವಿಡ ಭಾಷೆಗಳಲ್ಲಿ ಪ್ರತ್ಯೇಕವಾದ ಹೆಸರಿಲ್ಲ; ಔತ್ತರೇಯ ನುಡಿಗಳಲ್ಲೂ ಪಾನ್(=ಎಲೆ. ಪರ್ಣ) ಎಂಬ ಸಾಮಾನ್ಯ ಪದವೇ ಬಳಕೆಯಲ್ಲಿದೆ. ಭಾರತ ಪೂರ ಉಪಯೋಗವಲ್ಲಿರುವ ತಾಂಬೂಲದ ಎಲೆಗೆ

ಪ್ರತ್ಯೇಕವಾದೊಂದು ಹೆಸರಿಲ್ಲದಿರುವುದರಿಂದ ಸೋಜಿಗಪಡಬೇಕಾಗಿಲ್ಲ. ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಸುವರ್ಣ ದ್ವೀಪಗಳಿಂದ (ಜಾವಾ ಸುಮಾತ್ರ ಬೋರ್ನಿಯೋ ದ್ವೀಪಸಮೂಹ) ಭಾರತಕ್ಕೆ ಆಮದಾಗಿ ಬಂದ 'ಎಲೆ' ವಿಲೆಯೆಂಬ ಹೆಸರನ್ನೇ ಉಳಿಸಿಕೊಂಡಿದೆ. ನಾಗವಲ್ಲಿ ಎಂಬ ಹೆಸರು ಈಚಿನ ಸಂಸ್ಕೃತ ಪಂಡಿತರ ನಾಮಕರಣ.

ಅಡಕೆ ಮರವೂ ಮೂಲತಃ ನಮ್ಮದಲ್ಲ. ಎಲೆ ಆಗಮಿಸಿದ ಕಾಲದಲ್ಲೇ ಇದೂ ಭಾರತವನ್ನು ಸೇರಿರಬೇಕು. ಅಡಕೆಯ ವನ್ಯ ಬೆಳೆ ಭಾರತದಲ್ಲೆಲ್ಲೂ ಇಲ್ಲ. ಅಡಕೆ ತೋಟಗಳೆಲ್ಲ ಮಾನವಕೃತ. ಪಂಪನಿಗೆ ಅಡಕೆ ಒಂದೆರಡು ಸಂದರ್ಭಗಳಲ್ಲಿ "ಬಲವಂತಾಲಂಕಾರ"ವಾಗಿದೆ; ಗಿಡಮರಗಳ ಕ್ಯಾಟಲಾಗಿನಲ್ಲಿ ಇದು ದಾಖಲಾಗಿದೆ (ವಿ.ವಿ. III ೫೫: ಆ.ಪು. XIII ೧೧). ಇನ್ನೊಂದೆಡೆ ಹಣ್ಣಾದ ಹೊಂಬಾಳೆಯಿಂದ ಬಳುಕುವ ಕೌಂಗು ಎಂದು ನಮ್ಮ ಗಮನವನ್ನು ಸೆಳೆದಿದ್ದಾನೆ. (ಆ.ಪು. I ೬೭)

ಅರ್ಜುನನ ಕೊರಳನ್ನು ಎಳಗೌಂಗಿಗೆ ಒಪ್ಪವಿಟ್ಟಿದ್ದಾನೆ (ವಿವಿ. II ೩೯ ಗ). ಅಡಕೆಮರದ ವರ್ತುಲಸ್ತಂಭಾಕೃತಿಯ (Cylindrical) ಕಾಂಡದಂತೆ ಕತ್ತುಳ್ಳವನು ಎಂದು ತಿಳಿಯಬೇಕು; ಆ ಕಾಂಡದ ಮೇಲೆ ಎಲೆಯುದುರಿದ ಅಡ್ಡಗೆರೆಗಳಿರುತ್ತವೆಯಲ್ಲವೆ? ಕತ್ತನ್ನು ಅಡ್ಡವಾಗಿ ಹಾದು ಹೋಗುವ ಸುಕ್ಕುಗಳು ಎಲೆ–ಗುರುತುಗಳಿಗೆ ಒಪ್ಪಗೊಳ್ಳುತ್ತವೆಯೆಂದು ಹೇಳಬಹುದು.

"ಈಗಳೊಂದಡಕೆಯುಮಿಲ್ಲ" (ವಿ.ವಿ. 46) ಎಂದು ಪರಶುರಾಮ ಪೇಚಾಡುತ್ತಾನೆ. ತಿಂಗಳ ಸಂಬಳದಿಂದ ಜೀವಿಸುವ ನಮ್ಮಂಥವರು ಮಾಸದ ಕೊನೆಗೆ "ಕೈಲೊಂದು 'ಕಾಸೂ ಇಲ್ಲ" ಎಂಬ ಭಾವವನ್ನು ಚಿತ್ರಿಸುತ್ತದೆ. ಈ ನುಡಿಕಟ್ಟು ('ಬಿಡಿಕೆ' ನೋಡಿ). ಹಿಂದೊಂದು ಕಾಲದಲ್ಲಿ ಅಡಕೆ ನಾಣ್ಯ ರೂಪದಲ್ಲಿ ಚಲಾವಣೆಯಲ್ಲಿತ್ತೆ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಇದು ಸಂಶೋಧನೆಗೆ ತಕ್ಕ ವಸ್ತು

ಮೊದಮೊದಲು ಎಲೆಅಡಕೆ ಸುಣ್ಣಗಳ ಸಮ್ಮೇಲನವೇ ತಾಂಬೂಲವಾಗಿತ್ತು ಎಂಬುದಕ್ಕೆ ಆಧಾರಗಳಿವೆ (ಈಗಲೂ ಬಡವರ ತಾಂಬೂಲ ಇದೇ). ಕ್ರಮೇಣ ಕರ್ಪೂರ, ಏಲ, ಕೇಸರಿ ಮೊದಲಾದ ಪರಿಮಳ ವಸ್ತುಗಳು ಸೇರಿಕೊಂಡು ತಾಂಬೂಲ ಭೋಗವಾಯಿತು. ಪಂಪನ ಕಾಲಕ್ಕೆ ಕಸ್ತೂರಿ, ಕಾಜು, ಕರ್ಪೂರ, ಪಾಕಿ ಸಂಮಿಶ್ರವಾದ ತಾಂಬೂಲ ಪ್ರಿಯವಾಗಿತ್ತು; ಮಗಮಗಿಸಿದ್ದುದ್ದು ಇಂಥ ಕದಂಬದಂಬುಲ (ವಿ.ವಿ. VI ೧೦೭; ಆ.ಪು.III ೯೦ ಗ ; XI ೨೭ ಗ) ಮಜ್ಜನ ಭೋಜನ ತಾಂಬೂಲ (ಸುಗಂಧ) ಲೇಪನಗಳಿಂದ ಪಥಪರಿಶ್ರಮವನ್ನು ಪರಿಹಾರ ಮಾಡಿಕೊಳ್ಳುವ ಪದ್ಧತಿ ಆ ಕಾಲದಲ್ಲೂ ಇತ್ತು. (ವಿ.ವಿ. III೧೮); ತಾಂಬೂಲಸೇವನೆ ಅನಧಿಕೃತ ಭೋಗವಾಗಿತ್ತು. ಭೋಗಿಗಳ ಸೌಕರ್ಯಕ್ಕೆ ತಾಂಬೂಲಕರಂಕವಾಹಿನಿಯರು (ವಿವಿ. IV ೪೩) ಹವಣಾಗಿದ್ದರು.

ಪಂಪನ ಕಾಲದಲ್ಲೇ ತಾಂಬೂಲ ಸೇವನೆ 'ಚಟ'ದ ನೆಲೆಯನ್ನು ಮುಟ್ಟಿದ್ದಿರಬೇಕು. ಎಲೆಯಡಕೆ ಮೆಲ್ಲುತ್ತ ಕುಳಿತಿದ್ದ ದ್ರೌಪದಿ ಅರ್ಜುನನನ್ನು ಕಂಡಾಗ ಅವಳ ಕೈಯಲ್ಲಿದ್ದ ಎಲೆ ಕೈಯಲ್ಲೇ, ಬಾಯಲ್ಲಿದ್ದ ತಾಂಬುಲ ಬಾಯಲ್ಲೇ ಚಲನೆಯಿಲ್ಲದೆ ನಿಂತುಬಿಟ್ಟು ಆಕೆ ದಂಗುಬಡಿದು ಹೋದಳು! (ವಿ.ವಿ. IV ೩೭) ಕನ್ನಡ ಸಾಹಿತ್ಯದಲ್ಲಿ ಇದೊಂದು ಅತಿರಮ್ಯವಾದ ವರ್ಣನೆಯಲ್ಲವೆ?

ತಿಳಕ (Clerodendron infortunatum)

ಆಕರ: ಆ.ಪು. XI ೯೫ ಗ; XI ೧೩೦ ಗ

"ಅಭಿನವ ಮೃಗಮದತಿಳಕಲಲಾಟೆಯರ್ ಉತ್ಪಳ ತಿಳಕತರುಗಳುಮಂ" "ನೋಡುತ್ತುಂ ಕುಸುಮಾಪಚಯ ಕ್ರೀಡಾವಿಳಾಸ"ದಲ್ಲಿದ್ದರು (XI 95 ಗ). ತಿಳಕವೃಕ್ಷಕ್ಕೆ ವೀಕ್ಷಣದೋಹದವನ್ನು ಎಸಗುತ್ತಿದ್ದ ದೃಶ್ಯ ಇದು(XI ೧೩೦).

ತಿಳಕ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಬೆಳೆಯುತ್ತದೆ. ಸಣ್ಣಮರ. ಸಡಿಲವಾದ ಶಂಕುವಿನಾಕೃತಿಯಲ್ಲಿರುವ ಗುಚ್ಛಗಳಲ್ಲಿ ಕೆಂಪು ಹೂಗಳನ್ನು ಕೊನರಿಸುತ್ತದೆ. ಹೊಸದಾಗಿ ಅರಳಿದ ಹೂ ತೆಳುವಾದ ಪರಿಮಳದಿಂದ ಕೂಡಿದ್ದು. ಕಾಡನ್ನು ಬಿಟ್ಟು ಊರಿಗೆ ಬಂದಿಲ್ಲ, ತಿಳಕ. ಹೀಗಾಗಿ ಜನಕ್ಕೆ ಅಷ್ಟು ಪರಿಚಯವಾಗಿಲ್ಲ; ಇನ್ನೂ ಕಾವ್ಯದ ಮರವಾಗಿಯೇ ಇದೆ.

ತೆಂಗು (Cocos nucifera)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಚೆಂದೆಂಗು, ನಾಳಿಕೇರೀ

ಆಕರ: ಆ.ಪು. I ೬೭; XI ೬೮; XI ೮೧

ಪಂಪನ ಕಾಲದಲ್ಲೂ ಜನ ನಾಳಿಕೇರೀ ಫಲಾಮೃತ ಸ್ವಾದದಿಂದ ತಣ್ಣನೆ ತಣಿಯುತ್ತಿದ್ದರು.

ಪಂಪ ಎರಡು ಕಡೆ ಚೆಂದೆಂಗು ಎಂದು ನಿರ್ದೇಶಿಸುತ್ತಾನೆ. ಇದೊಂದು ತೆಂಗಿನ ರಖಮು ಎಂದು ನನ್ನ ತಿಳಿವಳಿಕೆ. ಈ ರಖಮಿನ ಗಿಡಗಳಲ್ಲಿ ಎಲೆಪೊಟ್ಟೆಯ ಮೇಲೂ ಕೆಲವು ಸಲ ಕಾಯಿನ ಮೇಲೂ ಕೆಂಬಣ್ಣದ ಗೆರೆಗಳಿರುತ್ತವೆ. ಇತರ ರಖಮುಗಳಿಗಿಂತ ಕಾಯಿನ ಗಾತ್ರವೂ ದೊಡ್ಡದು. ಈಚೀಚೆಗೆ ಈ ರಖಮು ವ್ಯವಸಾಯದಲ್ಲಿ ಅಷ್ಟಾಗಿ ಕಾಣದು. ಹೊಸ ಹೊಸ ರಖಮುಗಳು ಹುಟ್ಟಿಕೊಂಡು ಹಳೆಯ ವನ್ನು ಅಳಿಸುತ್ತಿರುವ ಕಾಲ ನಮ್ಮದು. ಕರ್ನಾಟಕದ ಕಡೂರು ತಿಪಟೂರುಗಳ ಹರವಿನಲ್ಲಿರುವ ಕೆಲವು ಹಳೆಯ ತೋಟಗಳಲ್ಲಿ ಈ ಚೆಂದೆಂಗಿನ ಮರಗಳನ್ನು ನೋಡಿದ್ದೇನೆ.

ಮೀನಾಕ್ಷಿಯ ಮಧುರೆಗೆ ನೀವು ಹೋದಿರಾದರೆ, ಆ ನಗರದ ಮಾರಿಗುಡಿ–ಕೊಳಕ್ಕೆ ಹೋಗು ವುದನ್ನು ಮರೆಯಬೇಡಿ. ಕೊಳದ ಮಧ್ಯದಲ್ಲಿ ಮಂಟಪವೂ ಅದನ್ನು ಸುತ್ತುವರಿದು ಚೆಂದೆಂಗು ಮರಗಳೂ ಇವೆ. ಚೆಂದೆಂಗನ್ನೇ ತಮಿಳರು ಶೆವ್ವೆಳನೀರ್ ಎನ್ನುತ್ತಾರೆ. ಈ ಎಳನೀರಿನಲ್ಲಿ ಕ್ಷಾರಾಂಶ ಲೇಶವೂ ಇಲ್ಲ; ನೀರು ಒಂದು ಬಗೆಯ ತಿಳಿಯಾದ ಮಾಧುರ್ಯದಿಂದ ಕೂಡಿದೆ. ಸೊಗಸಾಗಿರುತ್ತದೆ ಎನ್ನುವುದಕ್ಕಿಂತಲೂ ಪಂಪನ ಮಾತಿನಲ್ಲಿ ಅಮೃತಸ್ವಾದ ಎಂದು ಭರವಸೆ ಕೊಡುತ್ತೇನೆ.

ದಾಳಿಂಬ (Punica granatum)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ದಾಡಿಮ,

ಆಕರ: ವಿ.ವಿ. II ೩೯ ಗ

ಪರ್ಷಿಯ, ಕುರ್ದಿಸ್ತಾನ, ಅಫ್ಘಾನಿಸ್ತಾನ, ಬಲೂಚಿಸ್ತಾನಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಗಿಡ ದಾಳಿಂಬ. ಮುಸ್ಲಿಮರು ಭಾರತಕ್ಕೆ ದಾಳಿಯಿಡುವುದಕ್ಕಿಂತ ಮೊದಲೇ ಹಣ್ಣು ಭಾರತದಲ್ಲಿ ಪರಿಚಯ ವಾಗಿದ್ದಿರಬೇಕು. ವರಾಹಮಿಹಿರನ ಬೃಹತ್‌ಸಂಹಿತೆಯಲ್ಲಿ (ಕ್ರಿ.ಶ. ೭ನೆ ಶತಮಾನ) ಈ ಗಿಡ ಅನುಪ ಪ್ರದೇಶದಲ್ಲಿ ಬೆಳೆಯುವುದೆಂದು ಉಕ್ತವಾಗಿದೆ. ಅಲ್ಲಿಂದ ಈಚೆಗೆ ಕಾವ್ಯವನ್ನು ಪ್ರವೇಶಿಸಿತು.

ಹರವಿದಳಿತ ಮದಗಜ ಕುಂ
ಭರಕ್ತಸಿಕ್ತಾರ್ದ್ರ ಮೌಕ್ತಿಕ ಪ್ರಕರದವೋಲ್
ಕರಮೆಸೆವ ದಾಡಿಮೀಬೀ
ಜರಾಶಿ............

ಈ ವರ್ಣನೆ (ಕರ್ನಾಟಕ ಕಾದಂಬರಿ) ಬಲು ಸೊಗಸಾದದ್ದು, ಸಮಂಜಸವಾದದ್ದು. ದಾಳಿಂಬ ಬೀಜ ಗಳನ್ನು ತಿರಸ್ಕರಿಸುವಂಥ ದಂತಪಂಕ್ತಿಯನ್ನು ಪಡೆದಿದ್ದನಂತೆ, ಅರ್ಜುನ (ವಿ.ವಿ. II ೩೯ ಗ). ದಾಳಿಂಬ ಬೀಜಗಳನ್ನು ಮಾನವನ ಹಲ್ಲುಸಾಲಿಗೆ ಒಪ್ಪವಿಡುವ ಬಳಕೆ ಮಧ್ಯಕಾಲೀನ ಯೂರೋಪಿನಲ್ಲೂ ಇತ್ತು. ಹಲ್ಲನ್ನು ಹೋಲುವ ದಾಳಿಂಬ ಹಲ್ಲುನೋವನ್ನು ಗುಣಪಡಿಸುವುದೆಂಬ (ಮೂಢ) ನಂಬಿಕೆಯೂ ಅಲ್ಲಿತ್ತು.

ಈಜಿಪ್ಟ್, ಅಸಿರಿಯ ದೇಶಗಳ ಪುರಾತತ್ವ ಮಣ್ಣುಪಾತ್ರೆಗಳ ಮೇಲೆ ದಾಳಿಂಬದ ಹಣ್ಣು ಹೂ ಗಳ ಚಿತ್ರಗಳಿವೆ. ದೊರೆ ಸಾಲಮನಿನ ದೇವಾಲಯದ ಕಂಭಗಳ ಮೇಲೆ ದಾಳಿಂಬದ ಕೆತ್ತನೆಯಿದೆ. ಯೆಹೂದಿ ನಾಣ್ಯಗಳ ಮೇಲೆ ದಾಳಿಂಬ ನಕಾಸೆಯನ್ನು ಮುದ್ರಿಸುವುದು ಪ್ರಾಚೀನ ಕಾಲದಲ್ಲಿ ಬಳಕೆ ಯಾಗಿತ್ತು. ಇವತ್ತಿಗೂ ಅವರಿಗೆ ದಾಳಿಂಬ ಬಹು ಪವಿತ್ರವಾದ ಸಂಕೇತ.

ದೂರ್ವೆ (Cynodon dactyolon)

ಆಕರ: ವಿ.ವಿ. III ೨ ಗ

ಪಾಂಡವರು ವಾರಣಾವತವನ್ನು ಹೊಕ್ಕಾಗ ಅವರನ್ನು ಎದುರುಗೊಂಡ ಪುರಜನರು ತಂದಿದ್ದ ಮಂಗಳವಸ್ತುಗಳಲ್ಲಿ ದೂರ್ವಾಂಕುರ ಒಂದಾಗಿತ್ತು. ನಮ್ಮ ಕಾಲದಲ್ಲೂ ಮದುವೆ ಮೊದಲಾದ ಕೆಲವು ಗೃಹ್ಯಕರ್ಮಗಳಲ್ಲಿ ರಾಗಿಯನ್ನೋ ಬತ್ತವನ್ನೋ ಮೊಳಕೆಕಟ್ಟುವ ಸಂಪ್ರದಾಯಕ್ಕೂ ಪಂಪನ ಕಾಲದ ದೂರ್ವಾಂಕುರ ಪದ್ಧತಿಗೂ ಸಂಬಂಧವೇನಾದರೂ ಇರಬಹುದೆ?

ವಿನಾಯಕ ಚತುರ್ಥಿಗೂ ದೂರ್ವೆಕ್ಕೂ ಗಂಟುಬಿದ್ದಿರುವ ಸಂಗತಿ ಎಲ್ಲರಿಗೂ ತಿಳಿದದ್ದೇ. ಕೆಲವು ವೈದ್ಯ ಪರಂಪರೆಗಳಲ್ಲಿ ಗಣೇಶಕಲ್ಪವೆಂಬೊಂದು ರೋಗನಿವಾರಣೋಪಾಯವಿದೆ. ಬೆಳಗೆದ್ದು ಒಂದು ಹಿಡಿ ಹಸುರು ಗರಿಕೆ ಹುಲ್ಲನ್ನು ಕಲ್ಲಿನಿಂದ ಜಜ್ಜಿ, ರಸವನ್ನು ಕುಡಿದರೆ (೪೦ ದಿನ) ರಕ್ತವೃದ್ಧಿಯಾಗುತ್ತದೆಯೆಂದು ಹೇಳುತ್ತಾರೆ. ಈ ವಿಧಾನವನ್ನು ಅಳ್ಳೆಕಾಯಿ ಪಂಡಿತನ ಕಸುಬು ಎಂದು ತಾತ್ಸಾರ ಮಾಡಲಾಗದು. ಅಮೆರಿಕದಲ್ಲಿ ಈಚೀಚೆಗೆ ಗ್ರಾಸ್‌ಎಕ್ಸ್‌ಟ್ರಾಕ್ಟ್ ಎಂಬೊಂದು ಇಂಜಕ್ಷನ್ ತಯಾರಾಗಿದೆ. ಗರಿಕೆಯ ಹುಲ್ಲಿನಿಂದ. ಅನೀಮಿಯ ರೋಗಿಗಳಿಗೆ ಐದಾರು ಇಂಜಕ್ಷನ್ನುಗಳು ವಿನಿಯೋಗವಾದರೆ ಅವರ ಆರೋಗ್ಯ ಮರುಕಳಿಸುತ್ತದೆ.

ನಮೇರು (Calophyllum inophyllum)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ನಮೇರು, ಸುರಹೊನ್ನೆ

ಆಕರ: ವಿ.ವಿ. XIV ೧೭ ಗ
ಆ.ಪು. II ೬೭ ಗ ; III ೩ ; XI ೧೧೭
(ಪ್ರ.ಕ. ಸಂಪುಟ ೫೪, ಪುಟ ೨೦ ನೋಡಿ)

ಸುರಹೊನ್ನೆಯ ಸುವಾಸನೆಯ ಶಿರೋಮಣಿಗೆ 'ಪರಿಮಳದರಸಿ' ಎಂದು ಬಿರುದುಕೊಟ್ಟ ಹರಿಹರ. ಹೂವಿನ ರಚನೆಗೂ ರೂಪಕ್ಕೂ ಮರುಳಾಗಿ "ಪೂಗಳೊಳೇಂ ಸುರಹೊನ್ನೆ ಚೆನ್ನವೋ" ಎಂದು ಉದ್ಗಾರತೆಗೆದ ಪಂಪ; ಈ ಹೂಗಳಿಂದ ನಿರ್ಮಿತವಾದ ಬಾಸಿಗ, ಮಾಲೆ ಮೊದಲಾದ ಆಭರಣಗಳನ್ನು ಪ್ರಸ್ತಾಪಿಸಿದ್ದಾನೆ. (ವಿ.ವಿ. XIV ೧೭ ಗ; ಆ.ಪು. III ೩).

ಸುರಹೊನ್ನೆಯನ್ನು ಕುರಿತ ಪಂಪನ ಪದ್ಯ ಕನ್ನಡ ಸಾಹಿತ್ಯದಲ್ಲೊಂದು ಮಹೋತ್ಕೃಷ್ಟ ಪುಷ್ಪ. ಹೂವಿನ ರಚನಾ ವಿಶೇಷವು ಕವಿತಾಸ್ಫೂರ್ತಿಯ ರಸಘಟ್ಟಿಯಾಗಿದೆ. ಮುತ್ತಿನಲ್ಲಿ ಕಡೆದ ಎಸಳುಗಳನ್ನು ವರ್ತುಲಾಕಾರದಲ್ಲಿ ಜೋಡಿಸು; ಇದೇ ದಳಪತ್ರ ಸಂಚಯ! ಚಿನ್ನದ ಪುಡಿಯ ಚಿಟಿಕೆಯೊಂದನ್ನು ನಡುವೆ ಚೆಲ್ಲು; ಇದೇ ಕೇಸರ ಸಮೂಹ! ಕೆಂಪಿನ ಹರಳೊಂದನ್ನು ಮಧ್ಯದಲ್ಲಿರಿಸು: ಇದೇ ಬೀಜಕೋಶ! ಇಂಥ ವರ್ಣನೆಯ ನೆಯ್ಗೆಗೂ ಶಾಸ್ತ್ರೀಯ ವಿವರಣಾವಿಧಾನಕ್ಕೂ ಹೆಚ್ಚು ವ್ಯತ್ಯಾಸವಿಲ್ಲ. ಎರಡು ಮಾರ್ಗಗಳೂ ಹೂವಿನ ಅನನ್ಯತೆಯನ್ನು ಬೇರೆ ಬೇರೆ ದೃಷ್ಟಿಗಳಿಂದ ತಿಳಿಸುತ್ತವೆ.

ನಾಗಸಂಪಗೆ (Mesua ferrea)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ನಾಗಸಂಪಗೆ, ಪುನ್ನಾಗ.

ಆಕರ: ವಿ.ವಿ. IV ೧೭
ಆ.ಪು. I ೬೮ ; XI ೯೫ ಗ ; XIII ೧೧

ಪಂಪನು ಹೇಳುವಂತೆ "ಅಪರೂಪಮಪ್ಪ ಪುನ್ನಾಗ" ಈ ಮರ. ಪಶ್ಚಿಮ ಘಟ್ಟದ ಕಾಡುಗಳಲ್ಲಿ ಬೆಳೆಯುತ್ತದೆಯಾದರೂ ವಿರಳ. ಒಂದು ಮರವನ್ನು ನೋಡಿ ಇನ್ನೊಂದನ್ನು ನೋಡಬೇಕಾದರೆ ನಾಲ್ಕಾರು ಮೈಲಿ ದೂರ ಹೋಗಬೇಕು. ರೆಂಬೆ ಕೊಂಬೆಗಳಿಲ್ಲದೆ ನೀಟಾಗಿ 30–40 ಅಡಿ ಎತ್ತರ ಬೆಳೆ

ಯುವ ಮರ; ಕಾಂಡದ ತುದಿಯಲ್ಲಿ ಎಲೆಛತ್ರಿ. ಗಟ್ಟಿಯಾದ ಭಾರವಾದ ಕೆಂಬಣ್ಣದ ಚೌಬೀನೆ. ರೆಯಿಲ್ವೆ ಸ್ಲೀಪರುಗಳಿಗೆ ಬಳಸಲಾಗುತ್ತದೆ. ಸೇತುವೆ ಕಟ್ಟುವುದಕ್ಕೂ ಒಗ್ಗುತ್ತದೆ. ಒಳ್ಳೆ ಬಾಳಿಕೆ ಬರುವ ಮರ.

ಚೆಲುವಾದ ಹೂ. ಬಿಳಿಯ ದಳ ಸಮೂಹ, ಹಳದಿಯ ಕೇಸರ ನಿಚಯ. ಅರಳಿದ ಸ್ವಲ್ಪ ಹೊತ್ತಿನಲ್ಲೇ ಇವೆರಡು ಅಂಗಗಳೂ ಪುಷ್ಪಪಾತ್ರದಿಂದ ಉದುರಿ ಮರದ ಹೆಜ್ಜೆಯಲ್ಲಿ ರಾಶಿಬೀಳುತ್ತದೆ. ನವುರಾದ ಪರಿಮಳ, ಸ್ವಲ್ಪ ಮಾದಕೀಯವಾದ ಮೇಲ್ಕಂಪು. ಕಾಡುವಾಸಿಗಳು ಕಲಾಪರಿಪೂರ್ಣವಾದ ಮಧುವನ್ನು ಬಟ್ಟಿಯಿಳಿಸುತ್ತಾರೆ; ಹೂವಿನ ಪರಿಮಳವೇ ಮಧುರಸವಾದಂತಿರುತ್ತದೆ!

ಬೀಜದಿಂದ ಎಣ್ಣೆ ಹಿಂಡುತ್ತಾರೆ; ದೀಪ ಉರಿಸುವುದಕ್ಕೂ ಸಾಬೂನು ತಯಾರಿಸುವುದಕ್ಕೂ ಒದಗುತ್ತದೆ.

ನಾರಂಗ (Citrus sp)

ಆಕರ: ಆ.ಪು. I ೬೭ ; XI ೮೧

ಈಳೆ ಜಾತಿಗೆ ಸೇರಿದ ಸಣ್ಣಮರ. ಪ್ರಾಚೀನ ದಕ್ಷಿಣ ಭಾರತದಲ್ಲಿ ಅನೇಕ ಈಳೆ ಜಾತಿಗಳಿದ್ದವು,– ಕಿತ್ತೀಳೆ (ಕಿತ್ತಳೆ), ಹೇರೀಳೆ (ಹೇರಳೆ), ಮಾದೀಳೆ (ಮಾದಾಳ), ನಿಂಬೆ ಇತ್ಯಾದಿ. ನಾರಂಗ ಎಂಬ ಪದ ಮೂಲತಃ ದ್ರಾವಿಡ ಭಾಷಾವರ್ಗಕ್ಕೆ ಸೇರಿದುದಲ್ಲ; ಉತ್ತರ ಭಾರತದ ನುಡಿಗಳಲ್ಲಿ ಈಳೆ ಜಾತಿಯ ಬೇರೆ ಬೇರೆ ರಖಮುಗಳನ್ನು ನಿರ್ದೇಶಿಸುತ್ತದೆ.

ಪಂಪನಕಾಲಕ್ಕೆ ಉತ್ತರ ಭಾರತದ ನಾರಂಗ ಜಾತಿಗಳು ದಕ್ಷಿಣ ಭಾರತದಲ್ಲಿ ಪರಿಚಯವಾಗಿದ್ದಿರಬೇಕು. ಆರಂಜ್ (orange) ಪದವೂ ಈ ಭಾಷಾ ಪಂಗಡಕ್ಕೆ ಸೇರಿದ್ದು.

ನೆಯ್ದಿಲು (Nymphaea Stellata ; N. Pubescens)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ನೆಯ್ದಿಲು, ಕನ್ನೆಯ್ದಿಲು, ಕರ್ನೆಯ್ದಿಲು, ಚೆನ್ನೈದಿಲು, ಕುವಳಯ, ನೀಳೋತ್ಪಳ.

ಆಕರ: ವಿ.ವಿ. I ೫೨ ; I೧೩೮ ; III ೫೫ ; IV ೭೦ ; V ೫ ಗ ; VI ೨೭ ; IX ೪೯

ಆ.ಪು. I ೬೨ ; I ೬೭ ; IV ೨೦ ; IV ೨೬ ಗ ; XI ೧೨೩ ; XII ೧೨
(ಪ್ರ.ಕ. ಸಂಪುಟ ೫೪, ಪು. ೧೪ ನೋಡಿ)

ನಿಂತ ನೀರಿನಲ್ಲಿ ನೆಯ್ದಿಲು ಬೆಳೆಯುತ್ತದೆ, ಎಂದರೆ ಕೆರೆ ಕೊಳ ಕುಂಟೆಗಳಲ್ಲಿ; ಪಂಪನಿಗೆ ಇದು ಚೆನ್ನಾಗಿ ಗೊತ್ತಿತ್ತು. (ವಿ.ವಿ. I ೧೩೮ ಆ.ಪು. I ೬೭). ಕವಿಸ್ವಾತಂತ್ರ್ಯಪ್ರಿಯತೆಯಿಂದಾಗಿ ಹರಿಯುವ ಕಾಲುವೆಯಲ್ಲೂ ಬೆಳೆಯುತ್ತಿತ್ತು ಎನ್ನುತ್ತಾನೆ (ವಿ.ವಿ. I ೫೨). ಸ್ವಯಂವರ ಶಾಲೆಯನ್ನು ಹೊಕ್ಕ ದ್ರೌಪದಿಯನ್ನು ಕಂಡ ದುರ್ಯೋಧನನು "ನನ್ನ ಮೃದು ಹೃದಯವನ್ನು ಈ ಹೂ ಬಾಣ ಭೇದಿಸಿತು" ಎಂದು ಭಾವೋದ್ರೇಕಗೊಂಡು ಕೈಲಿ ಹಿಡಿದುಕೊಂಡಿದ್ದ ನೆಯ್ದಿಲು ಹೂವನ್ನು ತಿರುಗಿಸುತ್ತಿದ್ದನಂತೆ (ವಿ.ವಿ. III ೫೫).

ನೆಯ್ದಿಲು ದಂಟನ್ನು ತುದಿವರೆಗೂ ಸೀಳುವ ಹಾಗೆ ಜರಾಸಂಧನನ್ನು ಭೀಮ ಸಿಗಿದು ಹಾಕಿದ (ವಿ.ವಿ. VI ೨೭).ನೆಯ್ದಿಲ ಕಾಂಬಿನಿಂದ ರೂಪಿಸಿದ ನೂಪುರವನ್ನೂ (ವಿ.ವಿ. V ೫ ಗ) ಬಿರಿಮುಗುಳಿನಿಂದ ಅನುವಾದ ಕರ್ಣಪೂರವನ್ನೂ (ಆ.ಪು. XII ೧೨ : ವಿ.ವಿ. V ೫ ಗ) ಧರಿಸುವುದು ಪಂಪನ ಕಾಲದ ಸ್ತ್ರೀಯರಿಗೆ ಬಲುಪ್ರಿಯವಾಗಿತ್ತು. ಉನ್ನತಕುಚೆಯರ ಕಣ್ಣಿನ ಕಾಂತಿಯನ್ನು ಚೆನ್ನೈದಿಲೆಯ ಎಸಳಿಗೆ ಒಪ್ಪವಿಡಲಾಗಿದೆ (ಆ.ಪು. XI ೧೨೩)

ನೆಯ್ದಿಲಿನಲ್ಲಿ ಬೇರೆ ಬೇರೆ ಬಣ್ಣದ ಹೂಗಳನ್ನು ತಳೆಯುವ ರಖಮುಗಳಿವೆಯಾದರೂ ಶಾಸ್ತ್ರೀಯ ದೃಷ್ಟಿಯಲ್ಲಿ ಇವೆಲ್ಲ ಮೇಲೆ ಕಾಣಿಸಿರುವ ಎರಡು ಸ್ಪೀಷೀಸುಗಳಿಗೆ ಸೇರಿದವು: ಹಳದಿ (ಹೊನ್ನೈದಿಲು), ಕೆಂಪು ಚೆನ್ನೈದಿಲು), ಬಿಳಿ (ಬೆಳ್ನೆಯ್ದಿಲು)–ಇವು ಪ್ಯೂಬಿಸೆನ್ಸ್ ಸ್ಪೀಷೀಸಿಗೆ ಸೇರಿದವು. ನೀಲಿ (ಕರ್ನೆಯ್ದಿಲು, ಕನ್ನೆಯ್ದಿಲು, ನೀಲೋತ್ಪಲ)–ಇವು ಸ್ಟೆಲ್ಲೇಟ ಸ್ಪೀಷೀಸಿಗೆ ಸೇರಿದ್ದು.
ಳಲ್ಲಿ

ನೆಲ್ಲಿ (Emblica officinalis)

ಪಂಪನು ಉಪಯೋಗಿಸಿರುವ ಪರ್ಯಾಯ ಪದ: ತೋರ ನೆಲ್ಲಿ

ಆಕರ: ವಿ.ವಿ. XII ೧೦೮ ಗ

ಬೆಟ್ಟದ ನೆಲ್ಲಿ, ಅರನೆಲ್ಲಿ ಎಂದು ನಮಗೆ ಪರಿಚಿತವಾಗಿರುವ ಸ್ಪೀಷೀಸೇ ಪಂಪನ ತೋರನೆಲ್ಲಿ; ಇದೇ 'ಕರತಲಾಮಲಕ', 'ಅಂಗೈಯ ನೆಲ್ಲಿಕಾಯಿ'.

ವೇದೋಕ್ತವಾಗಿಲ್ಲದಿರುವುದಾದರೂ ಬೌದ್ಧಯುಗಾರಂಭದಿಂದ ಜಾತಕಗಳಲ್ಲಿ ನೆಲ್ಲಿಕಾಯಿ (ಆಮಲಕ, ಅಮಲ) ಉಲ್ಲೇಖಗೊಂಡಿದೆ. ರೋಗಪೀಡಿತರಾದ ಭಿಕ್ಷುಗಳಿಗೆ ಈ ವಸ್ತು ಪಥ್ಯಾಹಾರ ವಾಗಿತ್ತು. ಅಲ್ಲಿಂದ ಈಚೆಗೆ ವೈದ್ಯದಲ್ಲೂ ಉಪಯೋಗ ಹೊಂದಿದೆ. ಆಮಲಕ ಚೂರ್ಣ, ಗುಡಾಮಲಕ, ಆಮಲಕಾಸವ ಮೊದಲಾದ ಪರಿಪಾಕಗಳು ನಿತ್ಯಾಹಾರದಲ್ಲೂ ಸೇರುವ ವ್ಯಂಜನಗಳೆಂಬುದು ಮಂಗರಸನ ಸೂಪಶಾಸ್ತ್ರದಿಂದ ತಿಳಿದು ಬರುತ್ತದೆ.

೩೦–೪೦ ಅಡಿ ಎತ್ತರ ಬೆಳೆಯುವ ಮರ, ನೆಲ್ಲಿ. ಹೂವಿನ ರೂಪದಲ್ಲಾಗಲಿ, ಗಾತ್ರದಲ್ಲಾಗಲಿ, ಬಣ್ಣದಲ್ಲಾಗಲಿ, ರಚನೆಯಲ್ಲಾಗಲಿ ಆಕರ್ಷಕತೆಯಿಲ್ಲ. ಕಾಯಿತಳೆದ ಟೊಂಗೆ ನೋಟಕ್ಕೆ ಚೆಲುವಾಗಿರುತ್ತದೆ. ಕಾಯಿ ತಿಂದಾದ ಮೇಲೆ ತಣ್ಣೀರು ಕುಡಿದ ಪ್ರಾಚೀನ ತಮಿಳು ಕವಿಗಳು ನಾಲಗೆಯ ಮೇಲೆ ನಿಂತ ಸಿಹಿರುಚಿಯನ್ನು ಮೊಲೆಹಾಲಿನ ಸವಿಗೆ ಹೋಲಿಸಿದರು. ಕಾಯಿನ ದುಂಡುರೂಪವನ್ನೂ ಹೊಳಪನ್ನೂ ಜಿಂಕೆಯ ಕಣ್ಣಿಗೆ ಸರಿದೂಗಿದರು. ನೆಲ್ಲಿಕಾಯಿಗಿಂತಲೂ ಹಿರಿಯಗಾತ್ರದ ಮುತ್ತನ್ನು ಕುರಿತಿದ್ದಾನೆ, ಪಂಪ.

ಪನಸ (Artacarpus integra)

ಆಕರ: ಆ.ಪು. XI ೮೧

ಪ್ರಾಚೀನಕಾಲದಿಂದಲೂ ತರಕಾರಿಯಾಗಿ, ತಿನ್ನುವ ಹಣ್ಣಾಗಿ ಉಳಿದುಕೊಂಡು ಬಂದಿರುವ ಪದಾರ್ಥ ಹಲಸು. ಬೆಟ್ಟಹಲಸು, ಹೆಬ್ಬಲಸು, ಕಿರಿಹಲಸು ಎಂಬೆಲ್ಲ ಸ್ಪೀಷೀಸುಗಳೂ ಕರ್ನಾಟಕದ ಕಾಡುಗಳಲ್ಲಿ ಬೆಳೆಯುತ್ತವೆ. ಎಲ್ಲವೂ ತಿನಿಸು ಪದಾರ್ಥವಾದರೂ ಹಲಸು (ಯಾವ ವಿಶೇಷಣವೂ ಇಲ್ಲದ ಹಲಸು) ಬಹುವಾಗಿ ಜನಪ್ರಿಯತೆಗಳಿಸಿದೆ. ಮಂಗರಸನ ಸೂಪಶಾಸ್ತ್ರದಲ್ಲಿ ಸುಮಾರು ೩೧ ಬಗೆಯ ಹಲಸು ಭಕ್ಷ್ಯಗಳ ವಿವರಣೆ ದೊರಕುತ್ತದೆ.

ಹಲಸಿನ ಕಾಯಿ ಹಣ್ಣುಗಳಂತೆಯೇ ಚೌಬೀನೆಯೂ ಬಹುಕಾಲದಿಂದ ನಮ್ಮ ಉಪಯೋಗಕ್ಕೆ ಒಗ್ಗಿದೆ. ಬೌದ್ಧ ಭಿಕ್ಷುಗಳು ಚೌಬೀನೆಯ ಚಕ್ಕೆಗಳನ್ನು ನೀರಿನಲ್ಲಿ ಕುದಿಸಿ, ತನ್ಮೂಲಕ ಕಾವಿ/ಹಳದಿ ಬಣ್ಣಗೊಂಡ ನೀರಿನಿಂದ ಬಟ್ಟೆಗೆ ಬಣ್ಣಕಟ್ಟುತ್ತಿದ್ದರೆಂದು ಜಾತಕಗಳು ತಿಳಿಸುತ್ತವೆ. ಭಿಕ್ಷುಗಳ ಭಿಕ್ಷಾಪಾತ್ರೆಯೂ ಹಲಸಿನ ಚೌಬೀನೆಯಿಂದ ಸೃಜನವಾಗುತ್ತಿತ್ತು. ಕೇರಳೀಯರ ಗಣನೆಯಲ್ಲಿ ಹಲಸೊಂದೇ 'ಚೌಬೀನೆಯ ರಾಜ!'. ನಾವು ತೇಗಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಅವರು ಹಲಸಿಗೆ ಕೊಟ್ಟಿದ್ದಾರೆ.

ಕುತ್ತಾಲ (ತಿರುನೆಲ್ವೇಲಿ ಜಿಲ್ಲೆ)ದ ಕಾಡುಗಳಲ್ಲಿ ಬೆಳೆಯುವ ಹಲಸು ರಖಮು ಗುಜ್ಜು ಹಲಸು ಎನಿಸಿಕೊಂಡಿದೆ. ಸಾಧಾರಣ ಹಲಸಿಗಿಂತ ಗಾತ್ರದಲ್ಲಿ ಸಣ್ಣ; ಮರವೂ ಅಷ್ಟೆ, ಹಣ್ಣೂ ಅಷ್ಟೆ. ನೆಲದೊಳಗೆ ಹರಡಿಕೊಂಡಿರುವ ಬೇರುಗಳಿಂದ ಹಣ್ಣು ಉತ್ಪತ್ತಿಯಾಗಿ, ಭೂಪದರವನ್ನು ಒಡೆದುಕೊಂಡು ನೆಲದ ಮೇಲೆ ಮಲಗುತ್ತದೆ. ಹಣ್ಣು ತಾನಾಗಿಯೇ ಬಿರಿದು ತೊಳೆಗಳಿಂದ ಜೇನಿನಂಥ ಸ್ರವ ಸುರಿಯುತ್ತದೆ.

ಹಲಸಿನ ಮರದ ನೆರವಿಲ್ಲದಿದ್ದರೆ ಕರ್ನಾಟಕ ಸಂಗೀತದ ವಾದ್ಯತ್ರಯವಾದ ತಂಬೂರಿ ವೀಣೆ ಮೃದಂಗಗಳು ಕೀರ್ತಿ ಪಡೆಯುತ್ತಿದ್ದುವೆ ಎಂದು ಸಂದೇಹ ಪಡುತ್ತಿದ್ದೇನೆ.

ಪಾದರಿ (Stereospermum suaveoleus)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಪಾದರಿ, ಪಾಟಲಿ.

ಆಕರ: ಆ.ಪು. XI ೮೭ ; XI ೧೧೫

ಎಷ್ಟೋ ಹೂಗಳು ಒಂದು ಮೂಸಲಿಗೆ ಹಳಸುತ್ತವೆ; ಪಾದರಿ ಹೀಗಲ್ಲ, ಅದರ ಪರಿಮಳ ವಾಗಲಿ ಚೆಲುವಾಗಲಿ ಬಾಡವು–ಇದು ಪಂಪನ ಅಭಿಪ್ರಾಯ. ಮೊಗ್ಗಿನಿಂದ ಬಿರಿದ ಪಾದರಿ ಹೂವಿನ ದಳನಳಿಗೆ ಬಹುಬೇಗ ಉದುರಿಹೋಗುತ್ತದೆ. (ನಾಗಸಂಪಗೆಯಂತೆ) ಮರದ ಹೆಜ್ಜೆಯ ಸುತ್ತ ಹಳದಿ–ಊದಾ ಬಣ್ಣದ ಜಮಖಾನ ಹಾಸುತ್ತದೆ. ದಳನಳಿಗೆ ಬಾಡುತ್ತದೆಯಾದರೂ ಪರಿಮಳ ಬಹುಕಾಲ ನಿಂತಿರುತ್ತದೆ. ಮೃದುವಾದ ಕಳಕಳಿಸುವ ಪರಿಮಳ.

ಪಾದರಿ ದೊಡ್ಡಮರ. ಚೈತ್ರದಲ್ಲಿ ಹೂಬಿಡುತ್ತದೆ. ಹೂ ಉದುರುವಾಗ ಅದರೊಂದಿಗೆ ಅಡಗಿರುವ ಮಧುಹನಿಗಳೂ ತುಂತುರು ಮಳೆ ಬೀಳುತ್ತವೆ. ಇಂಥ ಮರದಡಿ ನಿಂತು ಮೈಮರೆತಾಗ ಅನುಭವಿಸುವ ಆನಂದಕ್ಕೆ ಎಣೆಯೇ ಇಲ್ಲ.

ಪಾರಿಜಾತ

ಆಕರ: ವಿ.ವಿ. XIV ೧೭ ಗ

ಆ.ಪು. II ೭೩ ; III ೩

ಪಂಪನ ಕಾಲದಲ್ಲಿ ಪಾರಿಜಾತ ಹೂಗಳಿಂದ ಹಾರಕಟ್ಟುತ್ತಿದ್ದರೆಂದು ತಿಳಿದು ಬರುತದೆ (ವಿ.ವಿ. XIV೧೭ಗ;ಆ.ಪು III ೩) ಯಾದರೂ ಹೂವನ್ನು ಕುರಿತಾಗಲಿ ಮರವನ್ನು ಕುರಿತಾಗಲಿ ವಿವರಣೆಯಿಲ್ಲ.

ಇಂದು ನಮಗೆ ಪಾರಿಜಾತ ಎಂದು ಪರಿಚಿತವಾಗಿರುವ ಮರ Nyctanthes arbor-tristis. ೧೦–೧೫ ಅಡಿ ಎತ್ತರದ ಪೊದರುಮರ. ಉಪ್ಪುಕಾಗದದಂತೆ ಎಲೆಮೈ. ಬೂದಿಮಿಶ್ರವಾದ ಹಸುರು ಬಣ್ಣ. ಎಲೆಯುದುರಿದಾಗ ನಗ್ನ ರೆಂಬೆ ಕೊಂಬೆಗಳು ಅಸ್ಥಿಪಂಜರದಂತೆ ಕಡ್ಡಿ ಕಡ್ಡಿ. ನೋಟಕ್ಕೆ ಅಂದ ಎನಿಸಿಕೊಳ್ಳಬಹುದಾದಂಥ ಗುಣವೇನೂ ಇಲ್ಲ. ಗೊಂಚಲುಗಳಲ್ಲಿ ಹೂಬಿಡುತ್ತದೆಯಾದರೂ ಎಲ್ಲ ಮೊಗ್ಗುಗಳೂ ಒಂದೇ ಸಲ ಅರಳವು. ಅರಳಿದ ಹೂ ಒಡನೆಯೇ ಉದುರುತ್ತದೆ. ಹೂವಿನ ಕಾಡು–ಕೊಳವೆ ಹವಳದ ಕೆಂಪು ಬಣ್ಣ. ಕಾಡು–ಕೊಳವೆಯ ತುದಿಯಿಂದ ೯೦ ಡಿಗ್ರಿ ಕೋನದಲ್ಲಿ ಹರಡಿದ ಐದು ಬಿಳಿದಳಗಳು ("ಸಂಜೆಗೆಂಪು ಮೊದಲು ಹಿಂದೆ ಬೆಳುದಿಂಗಳು" ಎಂದು ಬೇಂದ್ರೆಯವರು ನಿರ್ದೇಶಿಸಿರುವ ಹೂ ಇದೇ ಇರಬಹುದೆ?). ದಳದ ಮೊನೆ ಸಾಮಾನ್ಯವಾಗಿ ಇಬ್ಭಾಗವಾಗಿದೆ. ನವುರಾದ ಪರಿಮಳ. ತೀರ ಕೋಮಲ ಶರೀರ, ಮುಟ್ಟಿದರೆ ನಸುಗಿ ಹೋಗುವಷ್ಟು ಮೃದು. ಉದುರಿ ದೊಡನೆ ಬಾಡುತ್ತದೆ. ಹಾರಕಟ್ಟುವುದಕ್ಕೆ ಒಗ್ಗದು. ಪ್ರಯಾಸಮಾಡಿ ಕಟ್ಟಿದರೂ ಒಂದು ಕಡೆಯಿಂದ ಮಾಸಿಕೊಂಡೇ ಬರುತ್ತದೆ.

ಈ ಪಾರಿಜಾತ ನಮ್ಮ ಮನೆ ತೋಟಗಳನ್ನೋ ಸಾರ್ವಜನಿಕ ತೋಟಗಳನ್ನೋ ಬಿಟ್ಟು ವನ್ಯ ನೆಲೆಯಲ್ಲಿ ಬೆಳೆಯುತ್ತಿಲ್ಲ. ದಕ್ಷಿಣ ಭಾರತದಲ್ಲೂ ಇಲ್ಲ. ಉತ್ತರ ಭಾರತದ ಬಯಲು ಸೀಮೆಯಲ್ಲೂ ಇಲ್ಲ, ತೌರನು ಕಾಣಬೇಕಾದರೆ ಹಿಮಾಲಯದ ಪೂರ್ವದಿಕ್ಕಿನ ಪರ್ವತಶ್ರೇಣಿಗಳು, ನಾಗಾಲಯ, ಮೇಘಾಲಯ, ಅಸ್ಸಾಂ, ನೇಪಾಲ ಪ್ರದೇಶಗಳ ಕಾಡಿಗೆ ಹೋಗಬೇಕು. ಅಲ್ಲೀದ ದಕ್ಷಿಣ ಭಾರತಕ್ಕೆ ಯಾವಾಗ ಪ್ರಯಾಣ ಬೆಳೆಸಿತೆಂದು ಹೇಳುವುದು ಸದ್ಯಕ್ಕೆ ಸಾಧ್ಯವಿಲ್ಲ. ಹೀಗಾಗಿ ಪಂಪನ ಪಾರಿಜಾತ ಇದೇ (ಎಂದರೆ ನಿಕ್ಟಾಂಥೆಸ್ ಆರ್‌ಬಾರ್–ಟ್ರಿಸ್ಟಿಸ್) ಎಂದು ನಿರ್ದಿಷ್ಟವಾಗಿ ತಿಳಿಯಲಾಗದು.

ಪಾರಿಜಾತ ನಮ್ಮ ಪುರಾಣೇತಿಹಾಸಗಳಲ್ಲಿ ಪ್ರಸ್ತಾಪಗೊಂಡಿರುವ ಕಾಲ್ಪನಿಕ ವೃಕ್ಷ. ಹಾಲ್ಗಡಲನ್ನು ಕಡೆವಾಗ ಮೇಲೆದ್ದು ಬಂದ ಹದಿನಾಲ್ಕು ರತ್ನಗಳಲ್ಲೊಂದು. ನಂದನ ವನದಲ್ಲಿ ಬೆಳೆಯುತ್ತಿತ್ತು. ಅಲ್ಲಿಂದ ಸತ್ಯಭಾಮೆಯ ಅಂಗಳದಲ್ಲಿ ಮೊದಲು ಬೆಳೆಯಿತು. ಆದರೆ ತಳೆದ ಹೂವೆಲ್ಲ ರುಕ್ಮಿಣಿಯ ಅಂಗಳದಲ್ಲಿ ಉದುರಿತು! ಕಾಲ್ಪನಿಕ ಹೂವನ್ನು ಹುಡುಕಿಕೊಂಡು ಹೋಗುವುದಕ್ಕೆ ಅಗತ್ಯವಾದ ವೀರ ಸಾಹಸಗಳು ನನ್ನಲ್ಲಿಲ್ಲ. ಅಪೇಕ್ಷೆಯೂ ಇಲ್ಲ. ಚಂದ್ರಪ್ರಭ ಪುರಾಣ (VII ೯೦) ಪಾಲಜೂತವನ್ನೇ "ಧಾತ್ರೀ ಪಾರಿಜಾತ" ಎನ್ನುತ್ತದೆ.

ಆದರೆ ಪಂಪನ ಪಾರಿಜಾತ ಕಾಲ್ಪನಿಕವಲ್ಲ ಎಂದು ಹೇಳುವ ಧೈರ್ಯ ಮಾತ್ರ ನನಗಿದೆ. ಅದರ ಅನನ್ಯತೆಯನ್ನು ಕುರಿತ ಸಂಶೋಧನೆ ಮುಂದುವರಿಯಬೇಕಾಗಿದೆ.

ಬಕುಳ (Mimusops elengi)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು : ಬಕುಳ, ವಕುಳ, ಮುಕುಳ.

ಆಕರ: ವಿ.ವಿ. II ೧೬

ಆ.ಪು. XI ೯೫ ಗ ; XI ೧೨೪ ; XI ೧೩೦ ಗ

ಮುಕ್ಕುಳಿಸಿ ಉಗುಳುವ ಮಧುವಿಗಿಂತ ಮಿಕ್ಕ ಆಮೋದವನ್ನು ಪಡೆದ ಕಂಪು ಬಕುಳ ಪುಷ್ಪದ್ದು (ಆ.ಪು. XI ೧೨೪). ಈ ನುಡಿಗಟ್ಟಿನಲ್ಲಿ ಗಂಡೂಷ ದೋಹದ ಧ್ವನಿಯಿಟ್ಟಿದ್ದಾನೆ, ಪಂಪ. ಬಕುಳ ವೃಕ್ಷವನ್ನು ಹೂತಳೆಯುವಂತೆ ಪ್ರೇರೇಪಿಸುವುದಕ್ಕೆ ಬಾಯಲ್ಲಿ ಮಧುವನ್ನು ಮುಕ್ಕುಳಿಸಿ ಮರದ ಮೇಲೆ ಉಗಿಯುವುದು ಸಂಪ್ರದಾಯವಿಧಿ. ಈ ವಿಧಿಯಿಂದ ಕೊನರಿದ ಹೂಗಳ ಕಂಪು ಉಗುಳಿದ ಮಧುವಿನ ವಾಸನೆಗಿಂತಲೂ ತೀವ್ರವಾದದ್ದು, ಮಾದಕೀಯವಾದದ್ದು ಎಂದು ಭಾವ.

ಭಾರತೀಯ ಕಾವ್ಯ ಸಂಪ್ರದಾಯದಿಂದ ನಮಗೆ ತಿಳಿದು ಬಂದಿರುವ ವೃಕ್ಷದೋಹದ ಕ್ರಮಗಳು ಹತ್ತು. ವಿಧ. ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದಿಂದ ಅಶೋಕದೋಹದವನ್ನು ಕುರಿತ ಕೆಲವು ವಿವರಣೆಗಳು ದೊರೆಯುತ್ತವೆ. ಬೇರೆ ಕವಿಗಳಾರೂ ಇತರ ದೋಹದ ವಿಧಿಗಳನ್ನು ವಿವರಿಸಹೋಗಿಲ್ಲ. ಪಂಪ ಬಕುಳ ದೋಹದ ಕ್ರಮದ ವಿವರಣೆಗಳನ್ನು ಸ್ವಲ್ಪಮಟ್ಟಿಗೆ ವಿಸ್ತರಿಸಿದ್ದಾನೆ. (ಪ್ರ.ಕ. ಸಂಪುಟ, ೪ ಪುಟ ನೋಡಿ).

ಸರ್ವ ಋತುಗಳಲ್ಲೂ ಹೊಳಪು ಹಸುರೆಲೆ ತಳೆದು ೨೦-೩೦ ಅಡಿ ಎತ್ತರ ಬೆಳೆಯುವ ಮರ ಬಕುಳ. ಮಾಸಲು ಬಿಳಿಬಣ್ಣದ ನಕ್ಷತ್ರಾಕಾರದ ಹೂ. ಇದು ಹೊಮ್ಮುವ ಮಾದಕೀಯ ವಾಸನೆಯನ್ನು ಒಂದು ಮೈಲಿ ದೂರದಿಂದಲೇ ಗುರುತಿಸಬಹುದು; ಬಹು ಬೇಗ ವೆಗಟಾಗುತ್ತದೆ, ಎಂಥವನನ್ನಾದರೂ ಸೊಕ್ಕಿಸುತ್ತದೆ. ಹೂ ಒಣಗಿದರೂ ವಾಸನೆ ಬಾಡದು; ನೀರು ಚಿಮುಕಿಸಿದರೆ ಮೊದಲಿನ ಪರಿಮಳ ಮರುಕಳಿಸುತ್ತದೆ.

ಪೂರ್ವ ಪಶ್ಚಿಮ ಘಟ್ಟಗಳಲ್ಲಿ ಬಕುಳ ಸ್ವಾಭಾವಿಕವಾಗಿ ಬೆಳೆಯುತ್ತದೆ. ಬಹುಕಾಲದ ಹಿಂದೆಯೇ ಊರಿನ ತೋಟಗಳಲ್ಲಿ ಬೆಳೆಯಿಸುವ ಬಳಕೆ ಆರಂಭವಾಗಿತ್ತು. ಮಧ್ಯಕಾಲದ ತಮಿಳುನಾಡಿನ ನಂದನವನಗಳಲ್ಲಿ ಸಾಧಾರಣವಾಗಿ ಬೆಳೆಯುತ್ತಿತ್ತು; ಶಿವಾರ್ಚನೆಗೆ ಬಕುಳ ಪುಷ್ಪ ಶ್ರೇಷ್ಠತೆ ಪಡೆದಿತ್ತು.

ಬಕ್ಕೆ

ಆಕರ: ಆ.ಪು. XI ೬೮

ಇದರ ಅನನ್ಯತೆ ತಿಳಿಯದು.

ಬಾಳೆ (Musa sp.)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಕದಳಿ, ಬಾಟೆ, ರಂಭಾ

ಆಕರ: ವಿ.ವಿ. I ೬೮ ಗ; II ೩೯ ಗ; V ೫ ಗ; V ೧೦ ಗ; VII ೮೧ ಗ
ಆ.ಪು. XI ೬೮; XI ೮೧; XI ೯೫ ಗ
(ಪ್ರ.ಕ. ಸಂಪುಟ 54, ಪುಟ 15 ನೋಡಿ)

"ವಾಟಿಲೆಯ ಬಿಜ್ಜಣಿಗೆಗಳಿಂ ಬೀಸಲ್ವೇಟ್ದು ತಣ್ಪುಗೆಯ್ಯೆ" (ವಿ.ವಿ. V ೫ ಗ)ಎನ್ನುತ್ತಾನೆ ಪಂಪ. ಇದು ಬರಿಯ ಕವಿಕಲ್ಪನೆಯೆಂದು ನನಗೆ ತೋರದು. ಅವನ ಕಾಲದಲ್ಲಿ ಬಾಳೆಲೆಯಿಂದ ಬೀಸಣಿಗೆಯನ್ನು ರೂಪಿಸುವ ವಿಧಾನವಿತ್ತೆಂದು ನನ್ನ ನಂಬಿಕೆ. ತಾಳೆಯೋಲೆಯ ಬೀಸಣಿಗೆ ನಮ್ಮ ಕಾಲದಲ್ಲೂ ಬಳಕೆಯಲ್ಲಿದೆಯಲ್ಲವೆ? ಅದರಷ್ಟು ಬಾಳಿಕೆಯಿಲ್ಲದಿದ್ದರೂ ಒಣ ಬಾಳೆಲೆಯ ಬೀಸಣಿಗೆ ತಾತ್ಕಾಲಿಕ ಪ್ರಯೋಜನವನ್ನಾದರೂ ಇತ್ತಿದ್ದಿರಬೇಕು.

ತೊಡೆಯನ್ನು ಬಾಳೆಕಂಬದೊಡನೆ ಹೋಲಿಸುವುದು ಸಾಮಾನ್ಯ ಕಾವ್ಯಾಲಂಕಾರ. ಪಂಪನೂ ಇದನ್ನೇ ಮಾಡಿದ್ದಾನೆ (ಆ.ಪು. XI ೯೫). ಕವಿಗಳಿಗೆ ಎಳವಾಳೆ ಸೌಕುಮಾರ್ಯದ 'ಪ್ರತಿಮೆ'. "ಕಾಯ್ದ ಪುಡಿಯೊಳಗೆ ಬಿಸುಟ್ಟೆಳವಾಟಿಯಂತೆ" ಎಂದು ಸುಭದ್ರೆಯ ಕಾದಲುಸೋವನ್ನು ವರ್ಣಿಸಿದ್ದಾನೆ. ಎಳೆವಾಟಿಯನ್ನು ಎಳೆಯ ಮೀನು ಎಂದು ಅರ್ಥಯಿಸಿದೆ 'ದೀಪಿಕೆ'. ಇದು ಸಂದರ್ಭೋಚಿತವಾಗಿಲ್ಲವೆಂದು ನನಗನಿಸುತ್ತದೆ. ಹಾಗೆ ಬಿದ್ದ ಮೀನು ಬೆಂದು ಒದ್ದಾಡಿ ಅಲ್ಪಕಾಲದಲ್ಲೇ ಸತ್ತು ಹೋಗುತ್ತದೆ. ಕಾಮಜ್ವರ ಪೀಡಿತಳಾಗಿ "ಮಮ್ಮಲ ಮಱುಗು"ತ್ತಿದ್ದವಳನ್ನು ಈ ಸಂದರ್ಭದಲ್ಲಿ ಮೀನಿಗೆ ಹೋಲಿಸುವುದಕ್ಕಿಂತಲೂ ಬಾಳೆಗೆ ಒಪ್ಪವಿಡುವುದು ಉಚಿತವಾಗಿದೆಯೆಂದು ನನ್ನ ಸ್ವಂತ ಅಭಿಪ್ರಾಯ. ಇದೇ ಜಾಡನ್ನು ಹಿಡಿದು ಈಚಿನ 'ಕವಿಚೈತ್ರವನ ಚೂತ'ನು "ಫಲಿತ ಕದಳಿ ಮುರಿದಿಳೆಗೊರಗುವಂತೆ" ಎಂದಿದ್ದಾನೆ.

ಆನೆ ಕುದುರೆಗಳ ಸವಾರಿಯಿಂದ ಅರ್ಜುನನ ತೊಡೆಗಳು 'ಸಾಣೆಕಲ್ಲನ್ನು ಕಟ್ಟಿದ ಹಾಗೆ' ಇದ್ದವು, ಎನ್ನುತ್ತದೆ 'ದೀಪಿಕೆ'. ಪಂಪವಾಣಿ "ಎಳವಾಟಿಯ ದಿಂಡಿನೊಳ್ ಸಾಣೆಗಟ್ಟಿದಂತುದವು" ಎಂದಿದೆ (ವಿ.ವಿ. II ೩೯ಗ). 'ಸಾಣೆಗಟ್ಟು' ಎಂದರೆ ಈ ಸಂದರ್ಭದಲ್ಲಿ 'ಎಳೆಬಾಳೆಯ ದಿಂಡಿಗೆ ಸಾಣೆ ಹಿಡಿದ ಹಾಗೆ' "ಎಳೆಬಾಳೆಯ ದಿಂಡನ್ನು ಸಾಣೆಗಲ್ಲಿನಿಂದ ಉಜ್ಜಿದ ಹಾಗೆ' ಎಂದು ಭಾವಿಸಿದರೆ ಕಾವ್ಯಾರ್ಥ ಇನ್ನೂ ರಸವತ್ತಾಗುತ್ತದೆ, ಉಚಿತವಾಗುತ್ತದೆ ಎಂದು ನನ್ನ ಗ್ರಹಿಕೆ.

ಅರ್ಜುನನ ಮೈ ಬಣ್ಣವನ್ನು ಕುರಿತು "ಕದಳೀಗರ್ಭಶ್ಯಾಮುಮೆಂಬ ಬಣ್ಣದಂತಾದುದು" ಎಂದು ಪಂಪನು ವರ್ಣಿಸುತ್ತಾನೆ (II ೩೯ ಗ). ಈ ಪದಪುಂಜದ ವಿಷಯವಾಗಿ ನಡೆದಿರುವ ಚರ್ಚೆಯನ್ನು 'ದೀಪಿಕೆ' ವಿವರಿಸಿದೆ; "ಬಾಳೆಯ ಹೂವಿನ ಮೋತೆಯಂತೆ ಕೆಂಪು ಕಪ್ಪು ಮಿಶ್ರವಾದ" ಎಂದು ಸಮಾಧಾನ ನೀಡಿದೆ. ಇಲ್ಲಿ ಕದಳೀಗರ್ಭ ಎಂದರೆ ಹಣ್ಣಿನ ತಿರುಳು ಭಾಗ (ಸಿಪ್ಪೆ ಸುಲಿದ ಮೇಲೆ ಕಾಣುವ ಒಳಭಾಗ) ಎಂದೇ ಗ್ರಹಿಸಬೇಕೆಂದು ನನಗನಿಸುತ್ತದೆ. ನಾವು ಸಾಮಾನ್ಯವಾಗಿ ತಿನ್ನುವ ಬಾಳೆಕಾಯಲ್ಲಾಗಲಿ ಹಣ್ಣಿನಲ್ಲಾಗಲಿ ಈ ಭಾಗ ಮಾಸಲು ಬಿಳಿ ಬಣ್ಣಕ್ಕಿರುತ್ತದೆ. ಆದರೆ ಶ್ಯಾಮ ಎಂದು ಸ್ಪಷ್ಟವಾದ ವಿಶೇಷಣವಿರುವುದರಿಂದ ಪದಪುಂಜದಲ್ಲಿ ಅಡಗಿರುವ ಒಟ್ಟು ಬಣ್ಣ ಮಾಸಲು ಬಿಳಿ ಆಗದು. ನಡಿಗಟ್ಟಿನ ತಾತ್ಪರ್ಯವನ್ನು 'ಕಪ್ಪುಮಿಶ್ರವಾದ ಬಣ್ಣಗೊಂಡ ಕದಳೀ ಗರ್ಭ' ಎಂದು ನಾನು ಗ್ರಹಿಸುತ್ತೇನೆ. ಏಕೆಂದರೆ ಇಲ್ಲಿ ಪಂಪ ನಿರ್ದೇಶಿಸಿರುವ ಕದಳಿ ನಾವು ಸಾಧಾರಣವಾಗಿ ತಿನ್ನುವ ಹಣ್ಣು ಕದಳಿ ಅಲ್ಲ, ತರಕಾರಿಯಾಗಿ ಉಪಯೋಗಿಸುವ ಕಾಯಿ ಕದಳಿಯೂ ಅಲ್ಲ. ಅವನ ಮನಸ್ಸಿನಲ್ಲಿದ್ದುದು ವನ್ಯ ಕದಳಿ, ಕಾಡುಬಾಳೆ. ಈ ರಖಮು ಹಣ್ಣಿನ ಸಿಪ್ಪೆ ಸುಲಿದಾಗ ನಮ್ಮೆದುರಾಗುವುದು ಕರಿಯ ಬೀಜಗಳ ದಿಂಡು. ಮೆಣಸಿಗಿಂತಲೂ ಗಾತ್ರದಲ್ಲಿ ಹಿರಿಯದಾದ ಬೀಜಗಳು; ಬಿಳಿಯ ಅಂಟುಪಿಟ್ಟು ಬೀಜಗಳನ್ನು ದಿಂಡಾಗಿ ಕೂಡಿಸಿರುವಂತೆ ಕಾಣುತ್ತದೆ. ಇದರಿಂದಾದ ಕ್ಯಾಮೂಫ್ಲಾಜಿನಿಂದ ಹಣ್ಣಿನ ಒಳಭಾಗ ಮಾಸಲು ಕಪ್ಪಾಗಿ ಕಾಣುತ್ತದೆ. ಇದೇ ಕದಳೀಗರ್ಭ ಶ್ಯಾಮ ವರ್ಣ. ಅರ್ಜುನನ ಮೈ ಬಣ್ಣ.

ಈ ರಖಮಿನ ಬಾಳೆ ಪೂರ್ವ ಪಶ್ಚಿಮ ಘಟ್ಟಗಳ ಕಾಡಿನಲ್ಲಿ ಹೇರಳವಾಗಿ ಬೆಳೆಯುತ್ತದೆ. ಹೊರನೋಟಕ್ಕೆ ಸಾಧಾರಣ ಬಾಳೆಮರದಂತೆಯೇ ಇರುತ್ತದೆ. ಹಣ್ಣಿನ ರೂಪವಾಗಲಿ ಬಣ್ಣವಾಗಲಿ ಸಾಧಾರಣ ಬಾಳೆಯಂತೆಯೇ ಆದರೂ ನಿಬಿಡವಾದ ಗಟ್ಟಿ ಬೀಜರಾಶಿಯನ್ನು ಒಳಗೊಂಡಿರುತ್ತದೆ.

ತಿನ್ನಲು ಯೋಗ್ಯವಲ್ಲ. ಮಲೆನಾಡು ಪ್ರದೇಶದಲ್ಲಿ ಇದು ಕಲ್ಲುಬಾಳೆ, ಕಲ್ಬಾಳೆ ಎಂಬ ಹೆಸರುಗಳಿಂದ ಪರಿಚಿತವಾಗಿದೆ.

ಮೈಂದವಾಟಿಯೆಂಬೊಂದು ರಖಿಮನ್ನು ಹೆಸರಿಸುತ್ತಾನೆ, ಪಂಪ (ಆ.ಪು. II ೬೮). ಇದೊಂದು ತಿನ್ನಲಯೋಗ್ಯವಾದ ರಖಿಮೆಂದು ತೋರುತ್ತದೆ. ಈ ರಖಿಮು ಇವತ್ತು ಚಲಾವಣೆಯಲ್ಲಿದೆಯೇ ಎಂಬುದನ್ನು ಕುರಿತು ಸಂಶೋಧನೆ ನಡೆಯಬೇಕಾಗಿದೆ.

ಬಿದಿರು (Bambusa sp)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಬಿದಿರು, ವೇಣು.

ಆಕರ: ವಿ.ವಿ. IV ೮೭ ಗ; IX ೧೦೪ ಗ;

ಪಂಪನ ಕಾಲದಲ್ಲೂ ಪಲ್ಲಕ್ಕಿಯ ದಿಂಡಿಗೆಗೆ ಬಿದಿರು ಉಪಯೋಗದಲ್ಲಿತ್ತು. IX ೧೦೪ ಗ ಕುಡಿ ಬಿದಿರು (ಕಳಿಲೆ) ಉಣಿಸಿನ ವಸ್ತುವಾಗಿತ್ತು. (IV ೮೭ ಗ).ಕಳಿಲೆಯ ಬಳಕೆ ಮೈದಾನ ಪ್ರದೇಶಗಳಲ್ಲಿ ಅಷ್ಟಾಗಿ ಕಾಣದು. ಬಹುಶಃ ಬೆಟ್ಟಗಾಡುಗಳಲ್ಲಿ ಬೆಳೆಯುವ ಬಿದಿರು ಸ್ಪೀಷೀಸುಗಳು ಉತ್ತಮ ರಖಿಮಿನ ಕಳಿಲೆಯನ್ನೀಯಬಹುದು. ಪಂಪನ ಕಾಲದಲ್ಲಿ ಕುಡಿಬಿದಿರಿನಿಂದ ತಯಾರಾದ ಚಕ್ಕಣಗಳು ನಾಲಗೆ ಚಪ್ಪರಿಸುವಂತಿದ್ದಿರಬೇಕು. ಮಂಗರಸನ ಸೂಪಶಾಸ್ತ್ರದಲ್ಲಿ ಚಟ್ಟುಗಳಿಲೆ, ಗಾರಿಗೆಗಳಿಲೆ ಮೊದಲಾದ ೧೩ ಬಗೆಯ ಅಡುಗೆ ವಿಧಾನಗಳನ್ನು ಕಾಣಬಹುದು.

ಕಳಿಲೆಯಿಂದ ತಯಾರಾದ ಅಡುಗೆಯನ್ನು ರುಚಿ ನೋಡುವ ಅವಕಾಶ ನನಗೆ ಒದಗಿಲ್ಲವಾದದ್ದರಿಂದ ಹೆಚ್ಚಿನ ವಿವರಗಳನ್ನು ಕೊಡಲಾರೆ. ಕಳಿಲೆಯ ಆಹಾರಸತ್ವವನ್ನು ಕುರಿತ ವೈಜ್ಞಾನಿಕ ಸಂಶೋಧನೆ ನಡೆದಿಲ್ಲ. ಆದರೆ ಪಿಷ್ಟ ಪದಾರ್ಥಗಳನ್ನು ತಕ್ಕ ಪ್ರಮಾಣದಲ್ಲಿ ಕೊಂಡಿದೆಯೆಂದು ತಿಳಿದು ಬಂದಿದೆ.

ಬಿಂಬ (Coccinia indica)

ಆಕರ: ವಿ.ವಿ. II ೩೯ ಗ

ಅರ್ಜುನನ ತುಟಿಗಳನ್ನು ತೊಂಡೆಹಣ್ಣಿಗೆ ಹೋಲಿಸಿ ಪಂಪನೂ ಸಂಸ್ಕೃತ ಕವಿಗಳು ಹಾಕಿಕೊಟ್ಟ ಮೇಲ್ಪಂಕ್ತಿಯನ್ನೇ ಅನುಸರಿಸಿದ್ದಾನೆ.

ನಮ್ಮ ಪ್ರಾಚೀನರು ಗಂಡುತುಟಿಗಳಿಗೂ ಹೆಣ್ಣುತುಟಿಗಳಿಗೂ ಸರಿಸಮಾನವಾಗಿ ತೊಂಡೆ ಹಣ್ಣನ್ನು ಹೋಲಿಕೆಯಿಟ್ಟು ಬಿಟ್ಟಿದ್ದಾರೆ. ಈ ಅಲಂಕಾರ ಕವಿಸಮಯವಾಗುವುದಕ್ಕೆ ಮೊದಲೇ ಲಾಕ್ಷಣಿಕರು ವಿಚಾರಮಾಡಿ ನಿಷ್ಕರ್ಷೆ ಮಾಡಲಿಲ್ಲವಲ್ಲಾ ಎಂಬ ಕೊರಗು ನನ್ನನ್ನು ಆಗಾಗ ತಿನ್ನುತ್ತದೆ. ಗಂಡು ಹೆಣ್ಣುಗಳ ಅಂಗಾಂಗ ರಚನೆಯನ್ನು ತಿಳಿದಿದ್ದವರು ಅವರು; ಪಾದಾಂತ ಕೇಶಾದಿ ವರ್ಣನೆಗಳನ್ನು ಮಾಡಿದ್ದಾರೆ; ಒಂದೊಂದು ಅಂಗವನ್ನೂ ಹಳಸುವವರೆಗೂ ವರ್ಣಿಸಿದ್ದಾರೆ. ಆದರೆ ಗಂಡು ತುಟಿಗಳನ್ನೂ ಹೆಣ್ಣುತುಟಿಗಳನ್ನೂ ಒಂದೇ ರಚನೆಯೆಂದು ಏಕೆ ಭ್ರಾಂತರಾದರೋ! ಹೋಗಲಿ, ಅವರು ಒಪ್ಪವಿಟ್ಟದ್ದು ತೊಂಡೆಹಣ್ಣಿನ ರೂಪವನ್ನೆ, ಅದರ ಹವಳಗೆಂಪು ಬಣ್ಣವನ್ನೆ, ಅಥವಾ ಎರಡೂ ಗುಣವಿಶೇಷಗಳನ್ನೆ?

ಪಂಪ ತೊಂಡೆಹಣ್ಣನ್ನು ನೇರವಾಗಿ ಕಂಡಿದ್ದನೆ ಎಂಬ ಸಂಶಯ ನನಗಿದೆ. ತೊಂಡೆಹಣ್ಣಿನಂತಿರುವ ದಪ್ಪ ದುಂಡುತುಟಿ (ನನ್ನ ಪ್ರಕಾರ) ಹೆಂಗಸಿಗೆ ಚೆಲುವಲ್ಲ; ಗಂಡಸಿಗೆ ಸಾಧಾರಣವಾಗಿ ಇಂಥ ತುಟಿ ಇರುವುದಿಲ್ಲ. ಹೆಂಗಸಿನ ತುಟಿಬಣ್ಣ ಹವಳದ ಕೆಂಪಾಗಿರಬಹುದಾದರೂ ಗಂಡಸಿನದು ಅದಕ್ಕೆ ಸ್ವಲ್ಪವೂ ಸಾಟಿಯಾಗದು. (ನಾಟಕ ರಂಗದ ಮೇಲೆ ಕಾಣಿಸಿಕೊಳ್ಳುವ ಪೌರಾಣಿಕ ವ್ಯಕ್ತಿಗಳ ತುಟಿಗಳಿಗೆ ಮೆತ್ತಿರುವ ಕೆಂಪು ಬಣ್ಣ ಆ ಮುಖಕ್ಕೆ ಚೆಂದವೆ?-ನೀವೇ ಯೋಚಿಸಿ). ಬಿಂಬಾಧರೆ ಎಂದರೆ ತೊಂಡೆಯ ಹಣ್ಣಿನಂತೆ ತುಟಿಯುಳ್ಳವಳು (ರೂಪ ಮತ್ತು ಬಣ್ಣಗಳೆರಡರಲ್ಲೂ) ಎಂದು ಅರ್ಥಯಿಸಬಹುದೇ ಹೊರತು

ಆಕೆಯ ಮುಖ ಚೆಲುವಾಗಿತ್ತು ಎಂದೇನೂ ಒಪ್ಪಿಕೊಳ್ಳಬೇಕಾಗಿಲ್ಲ. ರೂಪದ ದೃಷ್ಟಿಯಿಂದಾಗಲಿ ಬಣ್ಣದ ದೃಷ್ಟಿಯಿಂದಾಗಲಿ ಗಂಡಸಿಗೆ ಈ ಉಪಮೆ ಸಲ್ಲದು ಎಂದೇ ನನ್ನ ಅಭಿಪ್ರಾಯ.

ತೊಂಡೆಬಳ್ಳಿ ಭಾರತಾದ್ಯಂತ ಬೆಳೆಯುತ್ತದೆ. ವನ್ಯಜಾತಿಯ ಕಾಯಿ ಕಹಿ; ಸಾಗುವಳಿಗೆ ಒಗ್ಗಿದ ರಖಮುಗಳಲ್ಲಿ ಕಹಿಯಿಲ್ಲ. ಈ ತರಕಾರಿ ಎಲ್ಲರಿಗೂ ತಿಳಿದದ್ದೇ ಆದರೂ ನಮ್ಮ ಪ್ರಾಚೀನ ಸೂಪಶಾಸ್ತ್ರ ರಸಿಕರು ಇದರ ಹೆಸರನ್ನೇ ಎತ್ತುವುದಿಲ್ಲ. ಬಹುಶಃ ಅನಾಗರಿಕ ತರಕಾರಿ ಎಂಬ ತಾತ್ಸಾರವೋ ಏನೋ!

ಪಲ್ಲವರು ರಾಜ್ಯವಾಳಿದ ಪ್ರದೇಶಕ್ಕೆ ತೊಂಡೆಮಂಡಲ ಎಂದು ಹೆಸರು. ತೊಂಡೆಕಾಯಿಬೆಳೆಯುತ್ತಿದ್ದ ಹರವು ಅದು ಎಂಬ ನಂಬಿಕೆಯಿಂದ ರಚಿತವಾದ ಸ್ಥಲಪುರಾಣಗಳು ಕೆಲವಿವೆ.

ಬೆಳ್ಳುಳ್ಳಿ (Allium sativum)

ಆಕರ: ವಿ.ವಿ. XIII ೭೧ ಗ

ಕೆಲವರಿಗೆ ಬೆಳ್ಳುಳ್ಳಿಯ ವಾಸನೆ ಎಷ್ಟು ಹಿತವೋ ನನ್ನಂಥವರ ಮೂಗಿಗೆ ದ್ವಿಗುಣವಾದ ಶತ್ರು. ಅದೇನು ವಿಚಿತ್ರ ರುಚಿಯೋ ನಮ್ಮದು!–ಹಸಿ ಈರುಳ್ಳಿಯನ್ನು ಕಂಡರೆ ಕಚಕಚ ಕಚ್ಚಿ ತಿನ್ನುತ್ತೇನೆ. ಬೆಳ್ಳುಳ್ಳಿಯ ವಾಸನೆಗೆ ಅಲ್ಲೇ ವಾಂತಿ ಕಕ್ಕುತ್ತೇನೆ.

ಹೆರಡೋಟಸನ ಪ್ರಕಾರ ಪ್ರಾಚೀನ ಈಜಿಪ್ಟಿನಲ್ಲಿ ಬೆಳ್ಳುಳ್ಳಿ ಯಥೇಷ್ಟವಾದ ಉಪಯೋಗದಲ್ಲಿತ್ತು, ಅಲ್ಲಿಯೇ ಕೃಷಿಯಾಗುತ್ತಿತ್ತು. ತೌರೂಪಾಪ ಮಧ್ಯ ಏಷಿಯಾದಿಂದ ಈಜಿಪ್ಟಿಗೆ ರವಾನೆಯಾಗಿದ್ದಿರಬೇಕು.

ತೌರೂರಿನಲ್ಲಿ ಬೆಳ್ಳುಳ್ಳಿಯ ಹೆಸರು ಶುಮಿನ್, ಶೌಮ್. ಸಂಸ್ಕೃತದ ಲಶುನ ಇದೇ ಬುಡಕಟ್ಟಿಗೆ ಸೇರಿದಪದ. ಈ ಪದದ ರೂಪಾಂತರಗಳೇ ಉತ್ತರ ಭಾರತದ ಭಾಷೆಗಳಲ್ಲೆಲ್ಲ ಪ್ರಚಾರದಲ್ಲಿವೆ. ದ್ರಾವಿಡ ಭಾಷೆಗಳಲ್ಲಿ ವೆಳ್ಳುಳ್ಳಿ, ಬೆಳ್ಳುಳ್ಳಿ, ಬೊಳ್ಳುಳ್ಳಿ ಮೊದಲಾದ ಹೆಸರುಗಳು ಚಲಾವಣೆಯಲ್ಲಿವೆ. ಇವು ಬಿಳಿಯ + ಉಳ್ಳಿ(=ಗಡ್ಡೆ) ಎಂಬ ಎಂಬ ಸಂಯೋಜನೆಯಿಂದ ಉಂಟಾದ ಪದಗಳಂತೆ ಕಾಣುತ್ತವೆ.

ಪಂಪ ಬೆಳ್ಳುಳ್ಳಿಯನ್ನು ತಿಂದಿದ್ದನೋ ಇಲ್ಲವೋ ಹೇಳುವುದು ಸಾಧ್ಯವಿಲ್ಲ. ಅದರ ದುರ್ನಾತವನ್ನಂತೂ ಅರಿತಿದ್ದ. ಹಳೆಯ ಮುಗ್ಗಿದ ಬೇವಿನ ಎಣ್ಣೆಯಲ್ಲಿ ಅದ್ದಿದ ಬೆಳ್ಳುಳ್ಳಿಯನ್ನು ಕೆಂಡದ ಮೇಲೆ ಎಸೆದರೆ ಹೊಮ್ಮುವ ನರಕವಾಸನೆಯನ್ನು ರಣರಂಗದಲ್ಲಿ ಕೊಳೆತು ನಾರುತ್ತಿದ್ದ ಹೆಣದ ವಾಸನೆಗೆ ಒಪ್ಪವಿಟ್ಟಿದ್ದಾನೆ. ಇದೊಂದು ಅದ್ಭುತವಾದ ವರ್ಣನೆ ಎಂದು ನನಗನಿಸುತ್ತದೆ. ಸಾಗರವೊಂದಿಗೆ ಸಾಗರವೇ ಹೋಲಿಕೆ ಎಂದು ವಾಲ್ಮೀಕಿ ಸಾಗರದ ವೈಯಕ್ತಿಕತೆಯನ್ನು ವರ್ಣಿಸಿದ. ಕೊಳೆತು ನಾರುವ ಹೆಣದ ದುರ್ನಾತಕ್ಕೆ ಬೇರೆ ಹೋಲಿಕೆಯೇ ಇಲ್ಲ ಎನ್ನಲಿಲ್ಲ, ಪಂಪ. ಆ ನಾತಕ್ಕಿಂತಲೂ ಕಟುವಾದ ದುರ್ನಾತದ ಹೊಗೆಯೆಬ್ಬಿಸಿದ್ದಾನೆ.

ಭೂಜ (Betula sp.)

ಆಕರ: ವಿ.ವಿ. V ೫೨, V ೮೦

ಭೂಜ ಪದಕ್ಕೆ 'ಮರ' ಎಂದು 'ದೀಪಿಕೆ' ಅರ್ಥಯಿಸಿದೆ. ಒಂದು ಪ್ರದೇಶದಲ್ಲಿ ಬೆಳೆಯುತ್ತಿದ್ದ ಸಸ್ಯಸಮೂಹದ ಗಿಡಮರಗಳನ್ನು ಹೆಸರಿಸುವ ಪಟ್ಟಿಯಲ್ಲಿ ಈ ಹೆಸರೂ ಸೇರಿಕೊಂಡಿದೆ ಎಂಬುದನ್ನು ಗಮನಿಸಬೇಕು. ಸಂದರ್ಭವಿಶೇಷದಿಂದ 'ಭೂಜ' ಎಂಬುದನ್ನು ಭೂರ್ಜ ಎಂದು ಅರ್ಥಮಾಡಿಕೊಳ್ಳುವುದು ಉಚಿತವಾಗಿದೆ.

ಪ್ರಾಚೀನ ಸಂಸ್ಕೃತ ಕಾವ್ಯಗಳಲ್ಲಿ ಭೂರ್ಜ ಪತ್ರದ ಉಲ್ಲೇಖವಿದೆ. ಇಲ್ಲಿ ಪತ್ರ ಎಂದರೆ ಎಲೆ ಅಲ್ಲ; ಕಾಂಡವನ್ನು ಸುತ್ತಿರುವ ತೊಗಟೆ ಪದರಪದರವಾಗಿ ಹಾಳೆಹಾಳೆಯಾಗಿ ಸಡಿಲವಾಗುತ್ತದೆ. ಕಾಂಡದಿಂದ ಬೇರ್ಪಡಿಸಿದ ಹಾಳೆಯೇ ಪತ್ರ. ಅಲೆಕ್ಸಾಂಡರನು ಭಾರತವನ್ನು ಹೊಕ್ಕಾಗ ಭಾರತೀಯರು ಈ ಹಾಳೆಗಳ ಮೇಲೆ ಮಸಿಯಿಂದ ಬರೆಯುತ್ತಿದ್ದರೆಂದು ಕರ್ಶಿಯಸ್ ಹೇಳುತ್ತಾನೆ. ಉತ್ತರ ಭಾರತದಲ್ಲಿ ಮೊಗಲ ಆಳ್ವಿಕೆ ಆರಂಭವಾಗುವ ವರೆಗೂ ಭೂರ್ಜಪತ್ರ ಬರವಣಿಗೆಯ ಸಾಮಗ್ರಿಯಾಗಿತ್ತು.

ಭೂರ್ಜದಲ್ಲಿ ಅನೇಕ ಸ್ಪೀಷೀಸುಗಳಿವೆ. ಇವುಗಳ ಹರವೆಲ್ಲ ಉತ್ತರ ಶೀತವಲಯದಲ್ಲಿ. ಹಿಮಾಲಯ ಪ್ರದೇಶದಲ್ಲಿ ಕೆಲವು ಸ್ಪೀಷೀಸುಗಳು ಬೆಳೆಯುತ್ತವೆ. ಈ ಮರಗಳ ತೊಗಟೆ ಅನೆಚರ್ಮದಂತೆ ಒರಟೆಂದೂ, ಅದರಿಂದ ಬೇರ್ಪಡಿಸಿದ ಪತ್ರದ ಮೇಲೆ ದೇವಕನ್ಯೆಯರು ಪ್ರಣಯ ಪತ್ರಗಳನ್ನು ಬರೆಯುತ್ತಿದ್ದರೆಂದೂ ಕಾಲಿದಾಸನ ಕುಮಾರಸಂಭವ ತಿಳಿಸುತ್ತದೆ. ಭಾರತದ ಹಿಮಪಾತ ಪ್ರದೇಶಗಳಲ್ಲಿ ಭೂರ್ಜ ಬೆಳೆಯದು.

ಉತ್ತಮವಾದ ಚೌಬೀನೆಯನ್ನೀಯುವ ಮರ ಭೂರ್ಜ. ಪಾಶ್ಚಾತ್ಯದೇಶಗಳಲ್ಲಿ ಬಾಹುಳ್ಯದ ಬೆಳೆಯಾಗಿರುವುದರಿಂದ ಕೈಗಾರಿಕೆಗೆ ಒಗ್ಗಿದೆ. ಕುರ್ಚಿ ಮೇಜು ಅಲ್ಮೆರಾಗಳನ್ನು ತಯಾರಿಸುವುದಕ್ಕೆ ಪ್ರಿಯವಾದ ಮರ.

ಆಡುಮಾತಿನ ಇಂಗ್ಲಿಷ್ ಭಾಷೆಯಲ್ಲಿ ಈ ಮರದ ಹೆಸರು ಬರ್ಚ್ ((birch)); ಯೂರೋಪಿನ ಭಾಷೆಗಳಲ್ಲೆಲ್ಲ ಇದೇ ಹೆಸರಿನ ರೂಪಾಂತರಗಳು ಬಳಕೆಯಲ್ಲಿವೆ. ಯಾವ ರೂಪದಿಂದ ಇನ್ನಾವ ರೂಪ ಹುಟ್ಟಿಕೊಂಡಿತೆಂಬ ಪ್ರಶ್ನೆ ಬಗೆಹರಿಯದ್ದು. ಸಂಸ್ಕೃತದ ಭೂರ್ಜವೂ ಐರೋಪ್ಯ ನುಡಿಗಳ ರೂಪಾಂತರಗಳೂ ಇಂಡೋ- ಆರ್ಯನ್ ಭಾಷಾ ಬುಡಕಟ್ಟಿಗೆ ಸೇರಿದ ಪದ ಎಂದು ಗಣಿಸಲಾಗಿದೆ.

ಮರುವ (?Origanum majorana)

ಆಕರ: ಆ.ಪು. XI ೧೨೭

ಇದರ ಅನನ್ಯತೆ ತಕರಾರಿನ ವಿಷಯವಾಗಿದೆ. ಇಂದು ನಮಗೆ ಪರಿಚಿತವಾಗಿರುವ ಮರುಗವೇ ಇದು ಎಂದು ಸಾಮಾನ್ಯ ಭಾವನೆ. ಮನೋಹರವಾದ ಗಂಧ. ಪರಿಮಳದಿಂದ ಕೂಡಿದ ಸೌಂದರ್ಯ ಈಗಿನ ಮರುಗಕ್ಕಿರುವುದು ಅದರ ಎಲೆಗಳಲ್ಲಿ, ಹೂಗಳಲ್ಲಲ್ಲ. ಈ ಮರುಗ ಹೂ ತಳೆಯುವುದೇ ಅಪರೂಪ. ಮಧ್ಯ ಏಷಿಯಾ ಪ್ರದೇಶದಿಂದ ಕ್ರಿ.ಶ. ಸುಮಾರು 12/13ನೆ ಶತಮಾನಗಳಲ್ಲಿ ಭಾರತಕ್ಕೆ ಬಂದದ್ದು ಇದು. ಅಂದಿನಿಂದ ಕೃಷಿಗೆ ಒಳಪಟ್ಟಿದೆ. ಹೂ ಬಿಟ್ಟರೂ ಬೀಜ ಬಿಡದು. ನಾರಿನಿಂದಲೇ ಬೆಳೆಹಬ್ಬುತ್ತದೆ.

ಇಂಥ ಸುಗಂಧಗಿಡಕ್ಕೆ ಬಾರದೆ ಕುಸುಮನಿಚಯವನ್ನು ಹುಡುಕಿಕೊಂಡು ಹೋಗುವ ದುಂಬಿಗಳನ್ನು ಪಂಪನು ಮರುಳು ಎನ್ನುತ್ತಾನೆ. ದುಂಬಿ ಹೂವನ್ನರಸಿಕೊಂಡು ಹೋಗುವುದು ಅದರ ಪರಾಗಕ್ಕೆ, ಹೂವಿನಲ್ಲಿರಬಹುದಾದ ಮಧುವಿಗೆ; ವಾಸನೆಗಲ್ಲ.

ಪಂಪನ ಮರುವ ಯಾವುದು ಎಂಬುದನ್ನು ಕುರಿತು ಸಂಶೋಧನೆ ನಡೆಯಬೇಕಾಗಿದೆ.

ಮಲ್ಲಿಗೆ (Jasminum sp.)

ಪಂಪನು ಉಪಯೋಗಿಸಿರುವ ಪರ್ಯಾಯಪದಗಳು: ಮಲ್ಲಿಗೆ, ಪೊಸಮಲ್ಲಿಗೆ, ತೋರಮಲ್ಲಿಗೆ, ದೇವ ಮಲ್ಲಿಗೆ, ನವಮಾಳಿಕಾ

ಆಕರ: ವಿ.ವಿ.I ೫೫ ; II ೧೨ ; IV ೩೦ : IV ೬೮ ; IV ೧೧೦ ; V ೫ ಗ ;
V ೩೦ ; V ೩೩ ; V ೩೫ ; VII ೮೭
ಆ.ಪು. III ೩೯ ; XI ೮೫ ; XI ೮೭ ; XI ೯೫ ಗ;
XI ೧೦೭; XI ೧೦೮; XI ೧೦೯; XI ೧೧೦; XI ೧೨೨
(ಪ್ರ.ಕ. ಸಂಪುಟ 54, ಪುಟ 16 ನೋಡಿ)

ಬಿರಿದ ಮಲ್ಲಿಗೆಯನ್ನು ಕಂಡಾಗೆಲ್ಲ ಪಂಪನಿಗೆ ಬನವಾಸಿ ದೇಶದ ನೆನಪು ಮರುಕಳಿಸುತ್ತಿತ್ತು (ವಿವಿ. IV ೩೦). ಈ ಗಿಡ ವಸಂತ ಕಾಲದಲ್ಲಿ ಹೂತಳೆಯುತ್ತದೆ (ವಿ.ವಿ. V ೩೫); ಗೊಜ್ಜಗೆ ಮತ್ತು ಸಿಂದೂರ ಹೂಗಳ ಮಿಶ್ರಣ ಕಂಪನ್ನು ಹೊಮ್ಮುತ್ತದೆ (ವಿವಿ. V ೩೦); ಕಾಕಳಿಯೊಳಾಣತಿಗೆಯ್ದು ದುಂಬಿಗಳನ್ನು ಆಕರ್ಷಿಸುತ್ತದೆ. ದುಂಬಿಗಳು ಮಾತ್ರವಲ್ಲ, ಪ್ರಣಯಿಗಳ ಮೇಲೂ ಪರಿಣಾಮ

ಬೀರುತ್ತದೆ. "ಮಲ್ಲಿಗೆಗಳ್ ವಸಂತದೊಳ್ ಬಿರಿದೊಡೆ ನಲ್ಲರ ಮೆಲ್ಲೆರ್ದೆಗಳ್ ನಿರಂತರಂ ಬಿರಿವುದು" (ಆ.ಪು. XI ೧೧೦).ಮಲ್ಲಿಗೆಯ ಕಂಪನವುಂಕುತಿರ್ದ ತೆಂಕಣ ತಂಬೆಲರು ಸುಭದ್ರೆಯನ್ನು ರತಿಹಿಂಸೆ ಗೊಳಪಡಿಸಿತು(ವಿ.ವಿ. IV ೬೮). ಕುರುಜಾಂಗಣವೆಂಬ ನಾಡಿನಲ್ಲಿ ವಸಂತಕಾಲವಾದ ಮೇಲೆ ಕೂಡ ಮಲ್ಲಿಗೆ ಮುಗಿದು ಹೋಗದು; ಇತರ ಕಾಲಗಳಲ್ಲೂ ಹೂ ಬಿಡುತ್ತಲೇ ಇರುತ್ತದೆ (ವಿ.ವಿ. I ೫೫)

ನಮ್ಮ ಕಾಲದಲ್ಲಿರುವಂತೆಯೇ ಪಂಪನಕಾಲದಲ್ಲೂ ಮಲ್ಲಿಗೆಯ ಅನೇಕ ರಖಮುಗಳಿದ್ದಿರಬೇಕು.– ದೇವಮಲ್ಲಿಗೆ (ಆ.ಪು. XI ೧೦೮), ತೋರಮಲ್ಲಿಗೆ (ವಿ.ವಿ. VII ೮೭) 'ಪೂತ' ಪೊಸಮಲ್ಲಿಗೆ (ವಿ.ವಿ. II ೧೨) ಎನ್ನುತ್ತಾನೆ, ಪಂಪ. ಪೊಸಮಲ್ಲಿಗೆ ಎಂಬ ನುಡಿಕಟ್ಟನ್ನು ಅನೇಕ ಪದ್ಯಗಳಲ್ಲಿ ಉಪಯೋಗಿಸಿದ್ದಾನೆ. 'ಪೊಸ' ಎಂಬ ಪದಕ್ಕೆ ಸಾಮಾನ್ಯವಾಗಿ 'ಹೊಸದಾಗಿ ಅರಳಿದ' ಎಂದು ಅರ್ಥಮಾಡುವುದು ಸಾಧುವೇ ಆಗಿದೆಯಾದರೂ "ಪೂತ ಪೊಸಮಲ್ಲಿಗೆ" (ವಿ.ವಿ. II ೧೨) ಎಂಬ ಪ್ರಯೋಗದಲ್ಲಿ ಪೂತ, ಪೊಸ ಎಂಬ ಮಾತುಗಳು ದ್ವಿರುಕ್ತಿಯಾಗಿವೆ. ಹೀಗಿರುವುದರಿಂದ "ನವಮಾಳಿಕಾಲತೆ"(ಆ.ಪು. XI ೯೫ ಗ) "ಪೊಸಮಲ್ಲಿಗೆ"ಯೂ ಒಂದು ರಖಮಾಗಿರಬಹುದೆ ಎಂಬ ಸಂಶಯವನ್ನು ಎಬ್ಬಿಸುತ್ತದೆ. ಗುರ್ಜಾರ್ಣವನು ಇರುಳೆಲ್ಲ ಶಯ್ಯೆಯಲ್ಲಿ ರತಿಕ್ರೀಡೆಯಾಡುತ್ತಿದ್ದು ಬೆಳಗಾದಾಗ, ದೀಪದ ಕುಡಿಗಳು (ಎಣ್ಣೆ ಇಂಗಿ ಹೋಗಿ) ಕಾಂತಿಹೀನವಾದಾಗ (ಅಥವಾ ಬೆಳಗಿನೆದುರಲ್ಲಿ ಕುಡಿಯ ಕಾಂತಿ ಇಂಗಿದಾಗ), ಪೊಸಮಲ್ಲಿಗೆಯ ಕಂಪು ತಂಪುಗಾಳಿಯಲ್ಲಿ ಮೃದುವಾಗಿ ಲೀನವಾದಾಗ (ವಿ.ವಿ. IV ೧೧೦) ಎಂಬ ವರ್ಣನೆಯಿಂದ ಪ್ರಾತಃಕಾಲದಲ್ಲಿ ಅರಳುವ ಮಲ್ಲಿಗೆಯ ರಖಮೇ ಪೊಸಮಲ್ಲಿಗೆ (ನವಮಾಳಿಕಾ) ಎಂದು ಹೆಸರು ಗಳಿಸಿರುವಂತೆ ತೋರುತ್ತದೆ.

"ಪದವಿಟ್ಟು ಪೊದಳ್ದ ತೋರಮಲ್ಲಿಗೆ" ಎಂಬ ವರ್ಣನೆಯಿಂದ ತೋರಮಲ್ಲಿಗೆಯೆಂಬುದು ಬೇರೊಂದು ರಖಮನ್ನು ಸೂಚಿಸುತ್ತದೆ. ಪೂರ್ಣಚಂದ್ರನನ್ನು ರಾಹು ನುಂಗಿದಾದ ಬಳಿಕ ಮೆಲ್ಲ ಮೆಲ್ಲಗೆ ಉಗುಳುವ ಹಾಗೆ ತೋರಿತು, ತೋರಮಲ್ಲಿಗೆಯ ದಂಡೆಯನ್ನು ಮುಡಿದ ಊರ್ವಶಿಯ ತುರುಬು (ವಿ.ವಿ. VII ೮೭). ತೋರಮಲ್ಲಿಗೆಯಿಂದ ಪೋಣಿಸಿದ ಸರಿಗೆ ಆಭರಣದಿಂದ ಸುಭದ್ರೆ ಅಲಂಕಾರ ಮಾಡಿಕೊಂಡಿದ್ದಳು (V ೫ ಗ).

ಮಲ್ಲಿಗೆ ಹೂವಿನ ಅರಳುವಿಕೆಯನ್ನು ವೈಜ್ಞಾನಿಕ ರೀತಿಯಲ್ಲಿ ಚಿತ್ರಿಸಿದ್ದಾನೆ, ಪಂಪ (ವಿ.ವಿ. V ೩೩). ಮೊಗ್ಗಿನ ಬಣ್ಣ ಹಸುರು. ಎಂದರೆ ಹೂವಿನ ಇತರ ಭಾಗಗಳನ್ನು ಹಸುರು ಪುಷ್ಪಪಾತ್ರದ ಎಸಳುಗಳು (sepals) ಪೂರ್ಣವಾಗಿ ಮುಚ್ಚಿಕೊಂಡಿವೆ. ("ಪಸುರ್ಪನೆಯೊಳಿಡಿಸಿದ ಮಲ್ಲಿಗೆ" ಆ.ಪು. XI ೮೫ ಹೋಲಿಸಿ) ಇಂಥ ಎಳೆಮೊಗ್ಗು ಬೆಳ್ಪಡರುತ್ತದೆ. ಎಂದರೆ ಬೆಳೆವಣಿಗೆಯ ಮುಂದಿನ ಹಂತದಲ್ಲಿ ಪುಷ್ಪಪಾತ್ರದೊಳಗಿಂದ ಬಿಳಿಯ ದಳಸಮೂಹ ಹೊರಕ್ಕೆ ಕಾಣಿಸಿಕೊಂಡು ಬಲ್ಮುಗಿಲ್ (ಬಲಿತ ಮೊಗ್ಗು) ಆಗುತ್ತದೆ. ಪೊಜಿದೋಜಿ=ಮೃದುವಾದ ಬಿಳಿದಳಗಳು ಪೊರೆ ಪೊರೆಯಾಗಿ ಅರಳುತ್ತವೆ. ನಡು (ಹೂ ಕಾಂಡ)ಉಬ್ಬುತ್ತದೆ.

"ತಂಬೆಲರ್ ಪೊರೆವೊರೆಯಂ ಸಡಿಲ್ಚೆ (ತಂಪಾದ ಗಾಳಿ ದಳಗಳನ್ನು ಪದರಪದರವಾಗಿ ಸಡಲಿಸಿತು) ಎನ್ನುತ್ತಾನೆ ಪಂಪ. ಗಾಳಿ ಸುಳಿದಾಗ ಹೂ ಅರಳುತ್ತದೆ ಎಂದು ನಂಬಿರುವವರು ಈಗಲೂ ಇದ್ದಾರೆಯಾದರೂ, ಈ ಅಭಿಪ್ರಾಯಕ್ಕೆ ವೈಜ್ಞಾನಿಕ ಆಧಾರವಿಲ್ಲ. ಹೂವಿನ ಅರಳುವಿಕೆಗೆ ಕಾರಣಗಳೇನೆಂಬುದು ಸಸ್ಯಶಾಸ್ತ್ರದಲ್ಲಿ ಇನ್ನೂ ರಹಸ್ಯವಾಗಿಯೇ ಉಳಿದಿರುವ ಪ್ರಕರಣ. ವಿಜ್ಞಾನಿಗಳಲ್ಲೇ ಭಿನ್ನಾಭಿಪ್ರಾಯಗಳಿವೆಯಾದರೂ ಅರಳುವಿಕೆಯ ಕಾರಣ ಗಾಳಿಯಲ್ಲ ಎಂಬುವನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ; ಹವಾಗುಣದ ಶೀತೋಷ್ಣಗಳ ಏರಿಳಿತಗಳು ಕಾರಣವಾಗಿರಬಹುದೆಂದು ಊಹಿಸುತ್ತಾರೆ. ಗಿಡದಿಂದ ಬೇರ್ಪಡಿಸಿದ ಮಲ್ಲಿಗೆ ಮೊಗ್ಗು ತುರುಬಿನಲ್ಲಿ ಅರಳುವ ಸಂಗತಿ ಎಲ್ಲರಿಗೂ ತಿಳಿದದ್ದೆ. ಕತ್ತಲಲ್ಲಿಟ್ಟರೂ ಮೊಗ್ಗು ಅರಳುತ್ತದೆ. ಬೆಳಕಿನಲ್ಲೂ ಅರಳುತ್ತದೆ. ಗಾಳಿಯ ಚಲನೆಯಿಲ್ಲದ ವಾತಾವರಣದಲ್ಲೂ ಅರಳುತ್ತದೆ. ಅರಳುವಿಕೆಯ ಸತ್ವ ಮೊಗ್ಗಿನಲ್ಲೇ ಹವಣಾಗುತ್ತದೆ ಎಂಬುದು ಈಗಿನ ವೈಜ್ಞಾನಿಕರ ಊಹೆ.

ಮಂದಾರ

ಆಕರ: ವಿ.ವಿ. XVI ೧೭ ಗ

ಪಾರಿಜಾತದಂತೆ ಇದೊಂದು ಸ್ವರ್ಗೀಯ ಪುಷ್ಪವಾಗಿ ನಮ್ಮ ಪುರಾಣೇತಿಹಾಸ ಕಾವ್ಯಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ಮರ್ತ್ಯಲೋಕದಲ್ಲೂ ಕಾಣಬೇಕೆಂದು ಬಯಸಿದ ನಮ್ಮವರು ಅವರವರಿಗೆ ತೋರಿದ ಗಿಡಗಳಿಗೆ ಈ ಹೆಸರನ್ನು ಕೊಟ್ಟಿದ್ದಾರೆ. ಇದೊಂದು ಬಗೆಯ ಮಲ್ಲಿಗೆ (ಮಂದಾರ ಮಲ್ಲಿಗೆ) ಎನ್ನುವವರಿದ್ದಾರೆ; ಪಾರಿಜಾತವನ್ನೇ ಮಂದಾರ ಎನ್ನುವವರಿದ್ದಾರೆ; ಕಂಚುವಾಳದ ಹೂವೇ ಮಂದಾರ ಎಂದು ಸಾಧಿಸಹೊರಟವರೂ ಇದ್ದಾರೆ. ಹೀಗಾಗಿ ಶಾಸ್ತ್ರೀಯ ಅನನ್ಯತೆಯನ್ನು ನಿರ್ದೇಶಿಸುವುದು ಸಾಧ್ಯವಿಲ್ಲ.

ಮಾತುಲಿಂಗ (Citrus sp.)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಮಾತುಲಿಂಗ, ಮಾತುಳಂಗ, ಲುಂಗ

ಆಕರ: ವಿ.ವಿ. III ೨ ಗ; V ೮೦; V ೮೩
ಆ.ಪು. I ೬೭

ಹಣ್ಣಿನ ಭಾರದಿಂದ ನೆಲವನ್ನು ಮುಟ್ಟುವ ಮಾತುಲಿಂಗ (ಆ.ಪು. I ೬೭). ಇದರಲ್ಲಿ ಉತ್ಪ್ರೇಕ್ಷೆಯಿಲ್ಲ ಹಿಡಿಯನ್ನು ಮೀರಿದ ಗಾತ್ರ. ಅಂಡಾಕಾರ. ತುದಿಯಲ್ಲಿ ಮೂಗಿನಂತೆ ಮುಂಚಾಚಿರುವ ಗುಬುಟು. ಭಾರವಾದ ಹಣ್ಣು ಮಾತುಲಿಂಗ. ಸಣ್ಣ ಪೊದರು ಮರ. ಹರಡಿಕೊಂಡಿರುವ ರೆಂಬೆಕೊಂಬೆಗಳು. ಹೆಚ್ಚು ಕಡಿಮೆ ನಿಂಬೆ ಪೊದರಿನಂತೆ ಕಾಣುತ್ತದೆಯಾದರೂ ಎಲೆಯ ಗಾತ್ರ ದೊಡ್ಡದು. ಹೂವಿನ ರಚನೆಯೂ ಬೇರೆ. ಹಣ್ಣು ತಳೆದ ರೆಂಬೆಕೊಂಬೆಗಳು ಇನ್ನಷ್ಟು ಬಾಗಿ ನೆಲಮಟ್ಟದಲ್ಲಿ ಒರಗಿರುತ್ತವೆ. ಸಾಮಾನ್ಯವಾಗಿ ಮಲೆಗಾಡುಗಳಲ್ಲಿ ಬೆಳೆಯುತ್ತದೆ.

ಅರ್ಜುನನನ್ನು ಎದುರುಗೊಳ್ಳಲು ಬಂದ ಪಟ್ಟಣಿಗರು ತಂದಿದ್ದ ಮಂಗಳವಸ್ತುಗಳಲ್ಲಿ ಮಾತುಲಿಂಗವೂ ಒಂದಾಗಿತ್ತು (ವಿ.ವಿ. III ೨ ಗ). ಹಣ್ಣಿನ ಬಣ್ಣ ಹಸುರು ಮಿಶ್ರವಾದ ತಿಳಿಹಳದಿ; ಗುಬುಟು ಮೈ, ದಪ್ಪ ಸಿಪ್ಪೆ, ಬಿಳಿ ಬಣ್ಣ; ತಿರುಳು ಸಣ್ಣ. ತಿನ್ನುವ ಭಾಗ ಬಿಳಿಯ ಸಿಪ್ಪೆ. ಇದು ನವುರಾದ ಮಧುರವಾಸನೆಯುಳ್ಳದ್ದು. ತಿಳಿಯಾದ ಸಿಹಿರುಚಿಯುಳ್ಳದ್ದು. ಅದರೆ ಕಚಕಚವೆಂದು ಅಗಿದಗಿದು ತಿನ್ನಬೇಕು, ಹಸಿ ಸೌತೆಕಾಯನ್ನು ತಿಂದಹಾಗೆ. ಹಣ್ಣಿಗೆ ಮೃದುತ್ವವಿಲ್ಲ.

ಮಾತುಲಿಂಗ ರಸಾಯನವೆಂಬ ಆಯುರ್ವೇದ ಔಷಧ ಪ್ರಾಚೀನಕಾಲದಿಂದಲೂ ಹೆಸರು ಪಡೆದದ್ದು. ಗರ್ಭಿಣಿಯರಿಗೂ ಬಾಣಂತಿಯರಿಗೂ ರಕ್ತವೃದ್ಧಿ ಮಾಡಿಸುತ್ತದೆಯಂತೆ. ಇದೊಂದೂ ಅಲ್ಲದ ಹೆಂಗಸರೂ ಗಂಡಸರೂ ಕೂಡ ಸೇವಿಸಬಹುದು.

ಪಾಶುಪತಾಚಾರ್ಯ ಲಕುಲೀಶನ ಪ್ರತಿಮೆಯ ಎಡ ಕೆಳಗೈಯಲ್ಲಿ ಅಂಡಾಕಾರದ ವಸ್ತುವೊಂದು ಸಾಮಾನ್ಯವಾಗಿ ರೂಪಿತವಾಗಿದೆ. ಪುರಾತತ್ವ ಸಂಶೋಧಕರು ಇದನ್ನು ಮಾತುಲಿಂಗ ಫಲ ಎನ್ನುತ್ತಾರೆ. ಲಕುಲೀಶ–ಪಾಶುಪತಕ್ಕೂ ಈ ಹಣ್ಣಿಗೂ ಯಾವ ನಂಟೂ ಕಾಣದು. ಪಾಶುಪತ ಸೂತ್ರಗಳಲ್ಲೆಲ್ಲೂ ಮಾತುಲಿಂಗದ ಉಲ್ಲೇಖವಿಲ್ಲ. ಲಕುಲೀಶನ ಕೈಲಿರುವ ವಸ್ತು ಲಿಂಗವೇ ಆಗಿರಬೇಕೆಂಬುದು ನನ್ನ ಅಭಿಪ್ರಾಯ. ಹೀಗೆ ಗ್ರಹಿಸಿದರೆ ಪಾಶುಪತದ 'ಲಿಂಗಧಾರೀ' ಎಂಬ ಸೂತ್ರದ ಮೇಲೆ ಸ್ಪಷ್ಟವಾದ ಬೆಳಕು ಚೆಲ್ಲುತ್ತದೆ.

ದಾಳಿಂಬವನ್ನು ತಮಿಳರು ಮಾತುಲಿಂಗ, ಮಾದಾಳ ಎನ್ನುತ್ತಾರೆ. ಇದು ಸರಿಯಲ್ಲ. ಈಗಿನ ಕನ್ನಡದಲ್ಲಿ ಮಾದಾಳ ಮಾತುಲಿಂಗವನ್ನೇ ಸೂಚಿಸುತ್ತದೆ. ಮಾದಾಳದ ಪೂರ್ವರೂಪ ಮಾದೀಳೆ ಎಂದಿರಬಹುದೆ ಎಂಬ ಸಂದೇಹ ಬಲವಾಗಿದೆ. ಏಕೆಂದರೆ ಕಿತ್ತೀಳೆ, ಹೇರೀಳೆ ಮೊದಲಾದ ಪದಗಳಂತೆ ಮಾದೀಳೆಯೂ ಈಳೆ (ನಿಂಬೆ) ಜಾತಿಯ ಸಸ್ಯವರ್ಗಕ್ಕೆ ಸೇರಿದ್ದೆಂಬುದನ್ನು ಸೂಚಿಸುತ್ತದೆ.

ಮಾವು (Mangifera indica)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಮಾ, ಮಾವು, ಚೂತ, ಸಹಕಾರ, ಆಮ್ರ.

ಆಕರ: ವಿ.ವಿ. I ೫೫; II ೯೨ ಗ; II ೧೩; II ೧೪; II ೧೫; III ೪೦ ಗ; III ೪೧; III ೭೫; IV ೨೧; IV ೨೮; IV ೮೭ ಗ; V ೩; V ೧೧; V ೧೯; V ೨೨; V ೩೨; V ೮೨; XIV ೧೨; XIV೧೩

ಆ.ಪು. I ೬೫; I ೬೬; XI ೬೮; XI ೭೩ ಗ; XI ೮೧; XI೮೫; XI ೮೬; XI ೮೭; XI ೯೪; X1 ೯೮; XI ೧೦೧; XII ೧೭

(ಪ್ರ ಕ. ಸಂಪುಟ ೫೪, ಪುಟ ೧೦ ನೋಡಿ)

ಮಾವಿನ ಮರವನ್ನು ಕುರಿತ ಉಲ್ಲೇಖಗಳು ಪಂಪನ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣಬರುತ್ತವೆ. ಇದರಿಂದ ಪಂಪನಿಗೆ ಅತ್ಯಂತ ಪ್ರಿಯವಾದದ್ದು ಮಾವು ಎಂದು ನಿರ್ಣಯ ಮಾಡುವ ವಿಮರ್ಶಕರಲ್ಲಿ ನಾನೊಬ್ಬ ಅಲ್ಲ. ಪಂಪ ಸಸ್ಯಪ್ರಿಯ, ಯಾವಗಿಡದ ಚೆಲುವಿಗಾದರೂ ಅವನ ಕವಿಹೃದಯ ಮಿಡಿಯುತ್ತದೆ. ಒಂದೇ ಒಂದು ಪದ್ಯದಲ್ಲಿ ಸುರಹೊನ್ನೆಯ ಸೌಂದರ್ಯರಸವನ್ನು ಹಿಂಡಿಟ್ಟಿರುವ ಪಂಪನಿಗೆ ಆ ಹೂ ಅತ್ಯಂತ ಪ್ರಿಯವಲ್ಲವೆಂದು ಹೇಳಲಾದೀತೆ? ಪುನರುಕ್ತಿಯನ್ನು ಕವಿಯ ಪ್ರಿಯತೆಯ ಅಳತೆಗೋಲಾಗಿ ಹಿಡಿಯುವುದು ತಕ್ಕುದಲ್ಲವೆಂದು ನನ್ನ ಭಾವನೆ.

ಮರವನ್ನು ಕುರಿತು ಪಂಪನಾಡಿರುವ ಮಾತುಗಳು ಸ್ವತಂತ್ರವಾಗಿವೆಯೆಂಬುದರಲ್ಲಿ ಸಂದೇಹ ಬೇಡ. ಆದರೆ ಒಂದೇ ಭಾವವನ್ನು ತಿರುಗಿತಿರುಗಿಯೂ ಬಳಸಿದ್ದಾನೆ ಎಂಬುದನ್ನು ಒಪ್ಪಿಕೊಳ್ಳಬೇಕು. ಚೈತ್ರಾಗಮನವಾದಾಗಲೆಲ್ಲ ಚೂತಾಗಮನವಾಗುತ್ತದೆ; ಅದಿಮೂರ್ತಿ ವಸಂತದೂತಿಯಾದಂತೆ ಮಾವು ವಸಂತದೂತನಾಗಿ ಬಿಟ್ಟಿದ್ದಾನೆ! ತಾನು ಪ್ರತ್ಯಕ್ಷನಾದಾಗೆಲ್ಲ ದುಂಬಿ ಹಿಂಡನ್ನು ಕೂಡಿಕೊಂಡೇ ಬರುತ್ತಾನೆ! ಈ ಚರ್ವಿತಚರ್ವಣ ಪ್ರಯೋಗ ಸ್ವಲ್ಪ ಬೇಜಾರು ಹಿಡಿಸುತ್ತದೆ.

ಆದರೆ ಒಂದು ಮಾತು. ಮಾವನ್ನು ಎಷ್ಟು ಬಣ್ಣಿಸಿದರೂ, ಎಷ್ಟು ಹೊಗಳಿದರೂ ಪಂಪನಿಗೆ ತೃಪ್ತಿಯಿಲ್ಲ. ಕೆಲವು ಸಂದರ್ಭಗಳಲ್ಲಿ ಹೊಗಳುಭಟ್ಟ ವೃತ್ತಿಯನ್ನು ಕೈಕೊಂಡಿರುವನೋ ಎಂಬ ಸಂದೇಹ ಮೂಡುತ್ತದೆ. ಕೆಂದಳಿರ ಎಳಮಾವು, ಪೊಸನನೆ, ಪೊಸಮಾವು, ನವಚೂತ ಪಲ್ಲವ ಅಂಕುರ ಪಲ್ಲವ, ಕುಸುಮಾಳಂಕಾರದ ಚೂತ, ನನೆದೋಱಿದ ಮಾಮರ, ಚೂತಪಲ್ಲವ, ಸೊಗಯಿಸಿ ಬಂದ ಮಾಮರ, ಪೊಳೆವ ಮಾವಿನ ತಳಿರ್, ತಳಿರ್ತೆಳೆಮಾವು, ಮೊದಲಾದ ನುಡಿಗಟ್ಟುಗಳು ಪದೇ ಪದೇ ನಮ್ಮ ಕಣ್ಣೆದುರು ಬಂದು ನಿಂತು ವೆಗಟು ತಂದಿವೆಯೆಂದೇ ಹೇಳಬೇಕು. ಕೆಲವು ಸಂದರ್ಭಗಳಲ್ಲಿ ಮಾತ್ರ ಔಚಿತ್ಯಪೂರ್ಣವಾದ ಪದಪುಂಜಗಳು ಪಂಪನ ಕವಿತಾವರ್ಚಸ್ಸಿನ ಕಿಡಿಗಳಾಗಿವೆ. ಬಸಂತದೊಳ್ ಬಸದಿಯ ಬಾಗಿಲಂ ತೆಱಿದ ಮಾಟ್ಕೆಯೊಳಿರ್ದವು ಬಂದ ಮಾವುಗಳ್ (ಆ.ಪು. I ೬೬); ಅಂಕುರ ಪಲ್ಲವ ಕುಸುಮಾಳಂಕಾರದ ಚೂತಲತಿಕೆ ನರ್ತಕಿವೋಲ್ (ಆ.ಪು. XI ೯೪); ಮಾವಿನ ಕೋಡೆ ಕೋಡಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ (ವಿ.ವಿ. II ೧೫)

ಮಾವಿನ ಚಿಗುರಿಗೆ ಮನಸೋತ ಪಂಪ ಅದರ ಹಣ್ಣಿಗೂ ಮಿಡಿಗಾಯಿಗೂ ನಾಲಗೆ ಚಪ್ಪರಿಸಿದ್ದಾನೆ. ತನಿವಣ್ಣಾಗಿರ್ದುದಿಮ್ಮಾವು (ಆ.ಪು. XI ೬೮). ಕುರುಜಾಂಗಣದಲ್ಲೂ ಮಲಯಪರ್ವತದಲ್ಲೂ ಬಂದ (ಹಣ್ಣುತಳೆದ) ಮಾವು ಬೀಯದು (ಮುಗಿದು ಹೋಗದು); ಸರ್ವಋತುಗಳಲ್ಲೂ ಹೂಕಾಯಿಹಣ್ಣುಗಳನ್ನು ಉತ್ಪತ್ತಿ ಮಾಡುತ್ತಲೇ ಇರುತ್ತದೆ. "ಕುಡಿ ಬಿದಿರ ಕುಡಿಯ ಮಾವಿನ ಮಿಡಿಯ ಮಾರುಡಿಸ ಮೆಣಸುಗಡಲೆಯ ಪುಡಿಯೊಳಡಸಿದಲ್ಲವಲ್ಲಣೆಗೆಯ ಚಕ್ಕಣಂಗಳಂ" ವರ್ಷಪೂರ ಸವಿಸವಿದು ಸುಖಪಡಬಹುದು (ವಿ.ವಿ. IV ೮೭ ಗ). ಕಣ್ಣು ಬಾಯಿ ಮನಗಳಿಗೆ ಇಂಬುಗೊಡುವ

ಮಾವಿನ ಮರಕ್ಕೆ ಪಂಪ ಅಚ್ಚದೇಸಿಯ ಅಲೆಗಳಲ್ಲಿ ಹರಿಯುವ ಚೆಲುವಾದ ಪದ್ಯ ವೊಂದರಲ್ಲಿ ಅಂಜಲಿ ಸಲ್ಲಿಸಿದ್ದಾನೆ:

ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀಂ ನೀಳನೈ ಪುಷ್ಪಸಂ
ಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚೆಲ್ವನೈ ಪಣ್ತ ಪ
ಣ್ಗಳಿನೋವೋ ಪೆಱತೇನೊ ನೀನೆ ಭುವನಕ್ಕಾರಾಧ್ಯನೈ ಭೃಂಗ ಕೋ
ಕಿಳ ಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ

(ಆ.ಪು. XI ೯೮)

ಮಾರುಡ

ಆಕರ: ವಿ.ವಿ. IV ೮೭ ಗ

ಮಾರುಡಿನ, ಮಾರುದಿನ, ಮಾರುತಿನ ಎಂಬ ಪಾಠಾಂತರಗಳಲ್ಲಿ ಮೊದಲನೆಯದನ್ನು ಸ್ವೀಕರಿಸಿ ಕೊಂಡು ಅದಕ್ಕೆ "ಬಿಲ್ವಪತ್ರೆಕಾಯಿಯ ತಿರುಳಿನ" ಎಂಬ ಅರ್ಥವನ್ನು 'ದೀಪಿಕೆ' ಕೊಟ್ಟಿದೆ. ಪರಿಷತ್ತಿನ ಆವೃತ್ತಿಯು 'ಮಾರುದಿನ' ಎಂಬ ಪಾಠಾಂತರವನ್ನು ಒಪ್ಪಿಕೊಂಡು ಅರ್ಥಕ್ಕೆ ಪ್ರಶ್ನೆಯ ಚಿಹ್ನೆಯನ್ನು ಹಾಕಿದೆ.

ಶಿವನಿಗೆ (ಮಾರುಡ) ಪ್ರಿಯವಾದದ್ದು ಬಿಲ್ವ, ಮಾರುಡವೇ ಬಿಲ್ವಪತ್ರೆಯಾಗಿರಬೇಕು ಎಂಬ ತರ್ಕದಿಂದ 'ದೀಪಿಕೆ' ಅರ್ಥಮಾಡುವಂತಿದೆ. ಪಂಪನ ಕಾಲದ ಕರ್ನಾಟಕದಲ್ಲಿ ಬಿಲ್ವಕ್ಕೂ ಶಿವನಿಗೂ ನಂಟು ಬಿದ್ದಿತ್ತೆಂದು ತಿಳಿಯುವುದಕ್ಕೆ ಸಕಾರಣಗಳಿಲ್ಲ.

ಬಿಲ್ವ ಹಣ್ಣಿನ ತಿರುಳನ್ನು (ಬೇಲ ಹಣ್ಣಿನ ತಿರುಳಿನಂತೆ) ತಿನ್ನುವ ಬಳಕೆಯೇನೋ ಪ್ರಾಚೀನ ಕಾಲದಲ್ಲಿತ್ತು. ಆದರೆ ಅದು ಬಹುವಾಗಿ ವೈದ್ಯದಲ್ಲಿನ ವ್ಯವಧಾನ. ಮಂಗರಸನ ಸೂಪಶಾಸ್ತ್ರದಲ್ಲಿ ಬಿಲ್ವದ ತಿರುಳಿನಿಂದ ಪಾನಕ ತಯಾರಿಸುವ ಕ್ರಮವನ್ನು ವಿವರಿಸಲಾಗಿದೆ. ಪಂಪನ ಚಕ್ಕಣಗಳಲ್ಲಿ ಇದು ಸೇರಿತ್ತು ಎಂದು ತಿಳಿಯುವುದಕ್ಕೂ ಆಧಾರವಿಲ್ಲ. ಏಕೆಂದರೆ ಮದ್ಯ ಕುಡಿಯುವ ಸಂದರ್ಭದಲ್ಲಿ ನಡು ನಡುವೆ ಇನ್ನೊಂದು ಪಾನೀಯವನ್ನು ಕುಡಿಯುವ ಬಳಕೆ ಅಸಂಭವ. ಯಾವ ಚಕ್ಕಣವಾದರೂ ಅಗೆದು ತಿನ್ನುವ ಚಿರುದಿಂಡಿಯಾಗಿರಬೇಕೆಂದು ನನ್ನ ಗ್ರಹಿಕೆ.

ಮೆಣಸು (Piper nigrum)

ಆಕರ: ವಿ.ವಿ. IV ೮೭ ಗ

ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳಲ್ಲಿ (ಮುಖ್ಯವಾಗಿ ಮಲಬಾರು ಪ್ರದೇಶ) ಬೆಳೆಯುವ ಸಾಂಬಾರ ದಿನಸು ಇದು.

ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಮೆಣಸು ಕೊಟ್ಟನಾರ (ಕುಡನಾಡು?)ದಲ್ಲಿ ಮಾತ್ರ ಬೆಳೆಯುತ್ತಿತ್ತೆಂದು ಪೆರಿಪ್ಲಸಿನಲ್ಲಿ ಉಲ್ಲೇಖವಿದೆ. ಅದೇ ಕಾಲದ ಇತರ ಗ್ರೀಕ್ ಬರಹಗಳಿಂದ ಈ ಸರಕು ಪಶ್ಚಿಮ ಕರಾವಳಿಯ ಇನ್ನು ಕೆಲವು ಬಂದರುಗಳಿಂದಲೂ ಮೆಡಿಟರೇನಿಯನ್ ಪ್ರದೇಶಗಳಿಗೆ ಸಾಗಾಣಿಕೆ ಯಾಗುತ್ತಿತ್ತೆಂಬ ಸಂಗತಿ ತಿಳಿಯುತ್ತದೆ.

ಮೆಣಸಿನ ವನ್ಯನೆಲೆ ಭಾರತದಲ್ಲೆಲ್ಲೂ ಇಲ್ಲ. ಕ್ರಿಸ್ತಪೂರ್ವ ಶತಕಗಳಲ್ಲಿ ಈ ಸರಕು (ಮೆಣಸುಕಾಳು) ಕಡಲ ವಾಣಿಜ್ಯದ ವಸ್ತುಗಳಲ್ಲೊಂದಾಗಿತ್ತು. ಪೆಸಿಫಿಕ್ ದ್ವೀಪಗಳಿಂದ ದಕ್ಷಿಣ ಭಾರತದ ಮೂಲಕ ಪಾಶ್ಚಾತ್ಯ ದೇಶಗಳಿಗೆ ರವಾನೆಯಾಗುತ್ತಿತ್ತು. ಹೀಗೆ ಮೊದಲು ನಮಗೆ ಪರಿಚಯವಾದದ್ದು ಒಣ ಮೆಣಸುಕಾಳು. ಕ್ರಿಸ್ತಯುಗಾರಂಭ ಶತಕಗಳಲ್ಲಿ ಸಾಗುವಳಿ ಆರಂಭವಾಗಿರಬಹುದೆಂದು ನನ್ನ ತಿಳಿವಳಿಕೆ.

ಪಂಪನು ಮೆಣಸುಗಡಲೆ ಎನ್ನುತ್ತಾನೆ. 'ದೀಪಿಕೆ' ಇದನ್ನು ಮೆಣಸು ಮತ್ತು ಕಡಲೆ ಎಂದು ಒಡೆಯುತ್ತದೆ. ಇದು ಸರಿಯೇ ಇರಬಹುದು. ಮೆಣಸಿನ ಕಡಲೆ (=ಕಾಳು) ಎಂದು ಅರ್ಥಯಿಸ ಬಹುದಾದರೆ ಒಣಮೆಣಸು ಎಂದಾಗುತ್ತದೆ.

ಮೊಲ್ಲೆ (Jasminum auriculatum)

ಆಕರ: ವಿ.ವಿ. II ೯
ಆ ಪು. XI ೧೧೪
(ಪ್ರ.ಕ. ಸಂಪುಟ ೫೪, ಪುಟ ೧೮ ನೋಡಿ)

ಮೊಲ್ಲೆಗೂ ಮಲ್ಲಿಗೆಗೂ ಸಸ್ಯಶಾಸ್ತ್ರದಲ್ಲಿ ಅನ್ಯೋನ್ಯ ಸಂಬಂಧವಿದೆ. ಎರಡು ಗಿಡಗಳೂ ಒಂದೇ ಜೀನಸಿನ ಬೇರೆ ಬೇರೆ ಸ್ಪೀಷೀಸುಗಳು. ಸ್ಥೂಲ ನೋಟಕ್ಕೆ ಎರಡು ಗಿಡಗಳೂ ಒಂದೇ ಮಾದರಿ ಕಾಣುವ ಪೊದರು. ಮಲ್ಲಿಗೆ ರಖಮುಗಳಲ್ಲಿ ಕೆಲವು ಬೆಳಗ್ಗೆ ಅರಳುತ್ತವೆ, ಕೆಲವು ಸಂಜೆ ಅರಳುತ್ತವೆ, ಕೆಲವು ಇರುಳಿನಲ್ಲಿ ಅರಳುತ್ತವೆ. ಮೊಲ್ಲೆ ಮಧ್ಯಾಹ್ನದಲ್ಲಿ ಬಿರಿಯುತ್ತದೆ. ಮೊಲ್ಲೆಮೊಗ್ಗು ದುಂಡುಮಲ್ಲಿಗೆ ಗಿಂತಲೂ ಉದ್ದುದ್ದವಾಗಿದ್ದು ಚೂಪು ಮೊನೆಗೊಂಡಿರುತ್ತದೆ. ಈ ರೂಪಸಾದೃಶ್ಯವನ್ನು ಪಂಪ ಅರ್ಜುನನ ಹಲ್ಲುಗಳಿಗೆ ಒಪ್ಪವಿಟ್ಟಿದ್ದಾನೆ (ವಿ.ವಿ. II ೯) ಅವನು ಹೇಳುವಂತೆ ಸಮೃದ್ಧವಾಗಿ ಹೂಬಿಟ್ಟು (free flowering) ಕಂಗೊಳಿಸುವ ಪೊದರು ಮೊಲ್ಲೆ. ಮನ್ಮಥನ ನಲ್ಲಂಬು ಗಳಿಗೆ ಒಪ್ಪಿದ ಮೊಲ್ಲೆ (ಆ.ಪು.XI ೧೧೪)

ಯವ (Hordeum sativum)

ಆಕರ: XV ೩ ಗ

ದಕ್ಷಿಣ ಭಾರತಕ್ಕೆ ಅಷ್ಟಾಗಿ ಪರಿಚಯವಿಲ್ಲದ ಧಾನ್ಯ ಇದು. ಇಂಗ್ಲಿಷಿನಲ್ಲಿ ಬಾರ್ಲಿ ಎನ್ನುತ್ತಾರೆ.
ವೇದಕಾಲದಲ್ಲಿ ಬಹುಮುಖ್ಯವಾಗಿದ್ದ ಧಾನ್ಯ ಯವ. ನಾವು ಈಗ ಅಕ್ಕಿಯನ್ನು ಉಪಯೋಗಿಸುವ ರೀತಿಯಲ್ಲಿ, ಔತ್ತರೇಯರು ಗೋಧಿಯನ್ನು ಉಪಯೋಗಿಸುವ ರೀತಿಯಲ್ಲಿ, ಅಂದಿನ ಜನ ಬಳಸು ತ್ತಿದ್ದರು. ಸ್ವರ್ಗದಲ್ಲಿ ಜನಿಸಿದ ಚಿರಂಜೀವಿಗಳಲ್ಲಿ ಯವ ಒಂದು ಎನ್ನುತ್ತದೆ, ಅಥರ್ವವೇದ. ಯವದ ಹಿಟ್ಟಿನಿಂದ ಅಪೂಪ ತಯಾರಾಗುತ್ತಿತ್ತು. ಕಾಳನ್ನು ಹುರಿದು ಅರಳು ಮಾಡುತ್ತಿದ್ದರು: ಯವಾಗು, ಯಾವಕ ಎಂಬ ಗಂಜಿರಖಮುಗಳನ್ನು ಕಾಯಿಸುತ್ತಿದ್ದರು.
ಪಂಪನ ಕಾಲಕ್ಕೆ ಯವ 'ಧಾನ್ಯನಿಚಯ'ದೊಂದಿಗೆ ಸೇರಿತ್ತಾದರೂ ಅವರ ಉಪಯೋಗ ಕರ್ನಾಟಕದಲ್ಲಿತ್ತೇ ಎಂಬ ಸಂದೇಹ ಇದ್ದೇ ಇದೆ. ಈಗಂತೂ ಇಲ್ಲ.

ಲವಲೀ

ಆಕರ: ವಿ.ವಿ. V ೮೦ ; V ೮೬

ಈ ಗಿಡವನ್ನು 'ದೀಪಿಕೆ' ನೆಲ್ಲಿ ಎಂದಿದೆ. ವನವರ್ಣನೆಯಲ್ಲಿ ಪಂಪನು ಲವಲೀ ಪದವನ್ನು ಶಬ್ದಾ ಲಂಕಾರ ದೃಷ್ಟಿಯಿಂದ ಬಳಸಿರುವಂತಿದೆ. ಅನನ್ಯತೆಯನ್ನು ಕಂಡು ಹಿಡಿಯುವುದಕ್ಕೆ ಒದಗುವ ಯಾವ ಸೂಚನೆಯೂ ಇಲ್ಲ. ಸದ್ಯಕ್ಕೆ ಪ್ರಶ್ನಾರ್ಥಕವಾಗಿಯೇ ಉಳಿದಿದೆ.

ಲವಂಗ (Eugenia caryophyllata)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಲುಂಗ. ಲವಂಗ
ಆಕರ: ವಿ.ವಿ. V ೮೬
ಆ.ಪು. XVI ೫೨

ಈ ಸರಕನ್ನು ಕುರಿತು ಪಂಪ ಯಾವ ವಿವರಣೆಯನ್ನೂ ಕೊಟ್ಟಿಲ್ಲ. ಒಂದುಕಡೆ ಗಿಡಗಳ ಪಟ್ಟಿಯಲ್ಲಿ ಇರುಕಿಸಿದ್ದಾನೆ. (ವಿ.ವಿ. V ೮೭). ಇನ್ನೊಂದು ಕಡೆ ಪರಿಮಳದ್ರವ್ಯಗಳ ಪಟ್ಟಿಯಲ್ಲಿ ಸೇರಿಸಿದ್ದಾನೆ. (ಆ.ಪು. XVI ೫೨)

ಚರಕ ಸುಶ್ರುತರ ಕಾಲದಿಂದಲೂ ಔಷಧೀಯ ಗುಣಗಳಿಂದಾಗಿ ಪ್ರಸಿದ್ಧಿ ಪಡೆದಿದೆ, ಲವಂಗ. ಪೆಸಿಫಿಕ್ ಸಾಗರದ ಮೊಲಕ್ಕ ಮತ್ತು ಅದರ ಸುತ್ತುಮುತ್ತಲಿನ ದ್ವೀಪಗಳಲ್ಲಿ ಮಾತ್ರ ಲವಂಗ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇಲ್ಲಿಂದ ಬೇರೆ ಲವಂಗದೊಗ್ಗು ಪ್ರಾಚೀನ ಕಾಲದಿಂದಲೂ ಹಳೆಯ ಯೂರೋಪು ನಾಡುಗಳಿಗೆ ಕಡಲು ವ್ಯಾಪಾರದ ಮೂಲಕ ಪರಿಚಯವಾಯಿತು. ಕ್ರಿ.ಶ. ೧೬ನೆ ಶತಮಾನದ ವರೆಗೂ ಲವಂಗದ ಬೆಳೆ ತೌರನ್ನು ಬಿಟ್ಟಿದ್ದಿಲ್ಲ. ಮೊಟ್ಟಮೊದಲು ಫ್ರೆಂಚರು ತೌರಿನಿಂದ ಸಾಗಿಸಿಕೊಂಡು ಹೋಗಿ ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಬೆಳೆಸಿದರು. ಅಲ್ಲಿಂದ ಆಫ್ರಿಕದ ಜಾಂಜಿಬಾರಿಗೂ ಹಬ್ಬಿತು. ಇಂದಿಗೂ ಲವಂಗ ಭಾರತಕ್ಕೆ ಆಮದು ಸರಕಾಗಿಯೇ ಇದೆ.

ದುರ್ವಾಸನೆಯನ್ನು ಹೀರುವ ಗುಣ ಲವಂಗಕ್ಕಿದೆಯೆಂಬ ಸಂಗತಿ ಬಹಳ ಹಳೆಯದು. ಕ್ರಿ.ಪೂ ೩ನೆಯ ಶತಮಾನದ ಚೈನದಲ್ಲಿ ರಾಜಾಜ್ಞೆಯೊಂದಿತ್ತು: "ಆಸ್ಥಾನಕ್ಕೆ ಬರುವ ಅಧಿಕಾರಿಗಳು ಯಾವಾಗಲೂ ಬಾಯೊಳಗೆ ಲವಂಗವನ್ನಿಟ್ಟುಕೊಂಡು ಮಾತನಾಡಬೇಕು."

ಶಮಿ (Prosopis spicigera)

ಆಕರ: ವಿ.ವಿ. VIII ೧೦೦

ಈ ಮರ ವೇದಕಾಲದಿಂದಲೂ ಪರಿಚಿತವಾಗಿದೆ. ಆ ಕಾಲದ ಜನ ಬೆಂಕಿಯನ್ನು ಕಡೆಯುವುದಕೆ ಶಮಿಯ ಅರಣಿಗಳನ್ನು ಉಪಯೋಗಿಸುತ್ತಿದ್ದರು. ಸ್ರುಯ, ಮೇಕ್ಷಣ, ಧೃಷ್ಟಿ ಮೊದಲಾದ ಯಜ್ಞೋಪಕರಣಗಳನ್ನು ಶಮಿ ಚೌಬೀನೆಯಿಂದ ನಿರ್ಮಿಸಿಕೊಳ್ಳುತ್ತಿದ್ದರು.

'ವಿಕ್ರಮಾರ್ಜುನ ವಿಜಯ'ದ ಪಾಂಡವರು–ಮಹಾಭಾರತದಲ್ಲಿರುವಂತೆಯೇ–ಅಜ್ಞಾತವಾಸಕ್ಕೆ ಹೊರಟಾಗ ತಮ್ಮ ಆಯುಧಗಳನ್ನು ಶಮೀವೃಕ್ಷದ ಮೇಲೆ ಮೂಟೆಕಟ್ಟಿಟ್ಟಿದ್ದರು. ಹೇಡಿತನದಿಂದ ಓಡಿಹೋಗುತ್ತಿದ್ದ ಉತ್ತರನನ್ನು ಅರ್ಜುನ ಹಿಡಿದುಕೊಂಡು ಬಂದು, ಅವನ ಕೈಯಿಂದ ಆಯುಧಗಳನ್ನು ಕೆಳಗಿಳಿಸಿಕೊಳ್ಳುತ್ತಾನೆ.

ಶಮಿ ಅಸಾಧ್ಯವಾದ ಮುಳ್ಳು ಮರ. ಜೊಪ್ಪೆಳೆಯ ಜಾತಿಗೆ ಸೇರಿದ್ದು. ಭಾರತಾದ್ಯಂತ ಕುರುಚಲು ಕಾಡುಗಳಲ್ಲಿ ಬೆಳೆಯುತ್ತದೆ. ಮಾನವನ ಉಪಯೋಗಕ್ಕೆ ಅಷ್ಟೇನೂ ಒಗ್ಗಿಲ್ಲ; 'ಜಂಗ್ಲಿ' ಮರವಾಗಿಯೇ ಉಳಿದಿದೆ. ಆದರೆ ವಿಜಯದಶಮಿಯ ದಿನ ಶಮಿಗೆ ಎಂದೂ ಇಲ್ಲದ ಗೌರವ ಸಲ್ಲುತ್ತದೆ. (ಹಳೆಯ) ಮೈಸೂರಿಗರಿಗೂ ವಿಜಯನಗರದ ಚರಿತ್ರೆಯನ್ನು ಬಲ್ಲವರಿಗೂ ಬನ್ನಿಮಂಟಪವೂ ವಿಜಯದಶಮಿಯ ರಾಜವೈಭವವೂ ಪರಿಚಯವಾದವೇ. ಶಮಿಯೇ ಬನ್ನಿ, ತಮಿಳಿನಲ್ಲಿ ವನ್ನಿ. ಇವೆರಡೂ ಸಂಸ್ಕೃತದ ವಹ್ನಿ(=ಅಗ್ನಿ)ಯ ಅಪಭ್ರಂಶ ರೂಪಗಳು. ಹೀಗೆ ವೇದಸಂಸ್ಕೃತಿಯ ಅವಶೇಷವೂ ಮಹಾಭಾರತ ಸಂಸ್ಕೃತಿಯ ಅವಶೇಷವೂ ಇಂದಿಗೂ ಶಮಿಯನ್ನು ಅಂಟಿಕೊಂಡಿದೆ.

ಶರ

ಆಕರ: ವಿ.ವಿ. II ೮೩

ಕೃಪ ಹುಟ್ಟಿದ್ದು ಶರಸ್ತಂಬದಲ್ಲಿ. ಭೀಷ್ಮ ಮಲಗಿದ್ದು ಶರಶಯ್ಯೆಯಲ್ಲಿ. ಪೌರಾಣಿಕ ವ್ಯಾಖ್ಯಾನಕಾರರು ಶರ ಎಂಬುದಕ್ಕೆ ಬಾಣ ಎಂದು ಅರ್ಥ ಹೇಳಿದ್ದಾರೆಯಾದರೂ, ಜೊಂಡು ಎಂಬ ಅರ್ಥವನ್ನು ನಾನು ಒಪ್ಪಿಕೊಂಡಿದ್ದೇನೆ.

ಸೈಪರೇಸಿ ಎಂಬ ಬಳಗಕ್ಕೆ ಸೇರಿದ ಸಾವಿರಾರು ಸ್ಪೀಷೀಸುಗಳನ್ನೆಲ್ಲ ಒಟ್ಟಾಗಿ ಹೆಸರಿಸಬೇಕಾದರೆ ಇಂಗ್ಲಿಷಿನಲ್ಲಿ ಸೆಡ್ಜ್ (sedge)ಎನ್ನುತ್ತಾರೆ. ಈ ಸಂದರ್ಭಕ್ಕೆ ಜೊಂಡು ಎಂಬ ಪದ

ಸಮಂಜಸವಾಗಿದೆ. ಎಂದರೆ, ಜೊಂಡಿನಲ್ಲಿ ನೂರಾರು ಜೀನಸುಗಳಿವೆ; ನಿರ್ದಿಷ್ಟವಾಗಿ ಯಾವುದಿರ ಬಹುದು ಎಂದು ತಿಳಿಯಲಾಗದು.

ಜೊಂಡು ಒಣನೆಲದ ಮೇಲೂ, ಜೌಗು ನೆಲದ ಮೇಲೂ ಕೆರೆಕುಂಟೆಗಳಲ್ಲೂ ಬೆಳೆಯುತ್ತದೆ; ಭಾರತಾದ್ಯಂತ ದೊರಕುತ್ತದೆ. ತುಂಗೆಗಡ್ಡೆ ಎಂಬ ಜಾತಿ ಪರಿಮಳಗೊಂಡದ್ದು; ಗಂಧಯುಕ್ತಿಗ್ರಂಥ ಗಳಲ್ಲಿ ಉಲ್ಲೇಖಗೊಂಡಿದೆ. ನೀರಿನಲ್ಲಿ ಬೆಳೆಯುವ ಜೊಂಡು ಸ್ಪೀಷೀಸುಗಳು ೧೦–೧೨ ಅಡಿ ಎತ್ತರ ಬೆಳೆಯುತ್ತವೆ. ನಾವು ಉಪಯೋಗಿಸುವ ಚಾಪೆಗಳು ಈ ಕಾಂಡಗಳಿಂದ ಸೃಜನಗೊಳ್ಳುತ್ತವೆ. ಬುಟಿ ಮಕ್ಕರಿಗಳನ್ನೂ ತಯಾರಿಸುತ್ತಾರೆ.

ಶಾಲ್ಮಲಿ (Bombax malabaricum)

ಆಕರ: ಆಪು II ೨೬ ; V ೮೫ ಗ

ವೇದಕಾಲದ ಜನಕ್ಕೆ ಪರಿಚಯವಾಗಿದ್ದ ಮರ ಶಾಲ್ಮಲೀ (ಬೂರುಗ). ಮದುವಣಗರ ಮೆರವಣಿಗೆಗೆ ಬೂರುಗ ಮರದಿಂದ ನಿರ್ಮಿತವಾಗಿದ್ದ ರಥ ಬೇಕಿತ್ತು.

ಅಲ್ಲಿಂದೀಚೆಗೆ ಸಂಸ್ಕೃತಕಾವ್ಯಗಳನ್ನು ಹೊಕ್ಕಿತು. ಮರದ ಹಿರಿಯ ಗಾತ್ರವೂ,ಹಿರಿಯ ಕೆಂಪು ಹೂಗಳೂ ಕವಿಗಳನ್ನು ಆಕರ್ಷಿಸಿತು. ಮರ ಒಂದು 'ಪ್ರತಿಮೆ'ಯಾಯಿತು:

ಮರಗಟ್ಟೆಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತೆ ದಿಕ್ಚಕ್ರವಾಳಾಂ
ತರಮಂ ನೋಡಲ್ಕೆ ನೀಳ್ದಂತಿರೆ ಬೆಳೆದ ಮಹಾಶಾಖೆಗಳ್ ತಾಂಡವಾಡಂ
ಬರದೊಳ್ ನಾನಾವಿಧಂ ನರ್ತಿಪ ನಟನ ಭುಜಾದಂಡಮೋ ಪೇಟಿಮೆಂಬಂ
ತಿರಮೇಯಸ್ಕಂಧಮುಂ ಸಂಧಿಸೆ ಜರಠ ಮಹಾಶಾಲ್ಮಲೀ ವೃಕ್ಷಮಿರ್ಕುಂ
(ಕರ್ಣಾಟಕ ಕಾದಂಬರೀ)

ಸೊಗಸಾಗಿ ಒಪ್ಪುವ ವರ್ಣನೆ ಇದು. ತಮಿಳು ಸಂಘ ಕವಿಗಳು ಬೂರುಗದ ಒಂದೊಂದು ಅಂಗ ವನ್ನೂ ಸಹಜಕವಿದೃಷ್ಟಿಯಿಂದ 'ಪ್ರತಿಮೆ'ಯಿಟ್ಟು ವರ್ಣಿಸಿದ್ದಾರೆ (ಪ್ರಕಟವಾಗಲಿರುವ 'ಹಸುರು ಹೊನ್ನು' ಪುಸ್ತಕವನ್ನು ನೋಡಿ).

ಫಾಲ್ಗುಣದಲ್ಲಿ ಎಲೆ ಉದುರಿ ಮರ ನಗ್ನವಾಗುತ್ತದೆ. ಚೈತ್ರದಲ್ಲಿ ಮೊದಲು ಕೊನರುವುದು ಹೂ. ರೆಂಬೆ ಕೊಂಬೆಗಳ ಮೇಲೆಲ್ಲ ಕೆಂಪು ಹೂಗಳು ಬಿರಿದು ಸಾವಿರಾರು ಸೊಡರುಗಳು ಉರಿಯುವಂತೆ ಭಾಸವಾಗುತ್ತದೆ. ಹೂ ಉದುರುವ ಹೊತ್ತಿಗೆ ಚಿಗುರೆಲೆಗಳು ತಲೆದೋರಿ ಹಸುರೆಲೆಯ ಹೊದಿಕೆಯು ನಗ್ನತೆಯನ್ನು ಮುಸುಕುತ್ತದೆ.

ಬೂರುಗದ ಹಣ್ಣಿನಿಂದ ಉತ್ಪತ್ತಿಯಾದ ಹತ್ತಿಗೆ ನೂಲಾಗಿಯೋ ಬಟ್ಟೆಯಾಗಿಯೋ ಅಸು ವಾಗುವ ಯೋಗ್ಯತೆಯಿಲ್ಲ. ದಿಂಬನ್ನೂ ಸುಪ್ಪತ್ತಿಗೆಯನ್ನೂ ತುಂಬುವುದಕ್ಕೆ ಉಪಯೋಗವಾಗುತ್ತದೆ. ಚೌಬೀನೆ ಬಲು ಪೆಡಸು, ಹಗುರ. ಪ್ಲೈವುಡ್ ಹಲಗೆಗಳಿಗೂ ಬೆಂಕಿಕಡ್ಡಿಗಳಿಗೂ ಒದಗುತ್ತದೆ.

ಶಾಲಿ (Oryza sativa)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಶಾಳಿ, ಶಾಲಿ.

ಆಕರ: ವಿ.ವಿ. I ೫೨ ; I ೫೪ ; I ೬೦ ; III ೨೨ ; VII ೭೦
ಆ.ಪು. I ೬೦ ; I ೬ ಗ ; XV ೩ ಗ

ಪಂಪನ ಕಾಲದ ಕನ್ನಡ ನಾಡಿನಲ್ಲಿ ಬತದ ಅನೇಕ ರಖಮುಗಳು ಬೆಳೆಯಲ್ಲಿದ್ದವು: ಶಾಳಿ, ಗಂಧಶಾಳಿ, ವ್ರೀಹಿ, ಷಷ್ಟಿಕಾ, ಕಳಮ, ನೀವಾರ ರಖಮುಗಳು ಅವನ ಕಾಲಕ್ಕೂ ಹಿಂದೆಯೇ ಪರಿಚಿತ ವಾಗಿದ್ದವು. ಶಾಳಿ ರಖಮು ಮಾಗಿಯಕಾಲದಲ್ಲಿ ನಾಟಬೇಕಾದ್ದೆಂದೂ, ಷಷ್ಟಿಕಾ ರಖಮು

೬೦ ದಿನಗಳಲ್ಲಿ ತುಯ್ಲಿಗೆ ಬರುವುದೆಂದೂ ಪಾಣಿನಿಯು ಹೇಳಿಕೆ. ಸುಶ್ರುತ. ಅವನ ಕಾಲದ ಬತ್ತದ ರಖಮುಗಳನ್ನು ಶಾಲಿ, ವ್ರೀಹಿ ಮತ್ತು ಷಷ್ಟಿಕಾ ಎಂಬ ಮೂರು ಗುಂಪುಗಳಲ್ಲಿ ವಿಂಗಡಿಸಿದ್ದಾನೆ; ಕಳಮ ರಖಮು ಶಾಲಿ ಗುಂಪನ್ನು ಸೇರಿದ್ದು. ನೀವಾರ ಎಂಬುದು ವನ್ಯಜಾತಿಯ ಬತ್ತ.

ಸುಗಂಧಕವೆಂಬೊಂದು ರಖಮನ್ನು ಸುಶ್ರುತ 'ಶಾಲಿ' ಗುಂಪಿನಲ್ಲಿ ಸೇರಿಸಿದ್ದಾನೆ. ತರುವಾಯದ ಕಾಲದಲ್ಲಿ ಇದೇ ಗಂಧಶಾಲಿಯಾಗಿರಬಹುದೆಂದು ನನ್ನ ಊಹೆ. ಮಳೆಯಿಂದಲೇ ಸಾಗುವಳಿಯಾಗುವ ರಖಮು ಇದು ಎಂದಿದ್ದಾನೆ ಪಂಪ (ವಿ.ವಿ. I ೫೪). ಬತ್ತದ ತೆನೆಯ ಬಣ್ಣ ಹೊನ್ನಿನ ಕೆಂಪು ಎಂದಿದ್ದಾನೆ (ವಿವಿ. I ೫೨; ಆ.ಪು. I ೬೦). "ಪೊಸ ನೈದಿಲ ಕಂಪನೆ ಬೀಜಿ ಕಾಯ್ತು" (ವಿವಿ. I ೫೨) ಎಂದು ವಿಶ್ಲೇಷಿಸಿದ್ದಾನೆ. ಎಂದರೆ ಹೊಸತಾಗಿ ಅರಳಿದ ನೆಯ್ದಿಲು ಹೂವಿನ ವಾಸನೆಗೊಂಡಿದ್ದ ಗಂಧಶಾಳಿ. ವಿವಿ.VII ೭೦ನೆ ಪದ್ಯವನ್ನು ಕುರಿತು ಸುಗಂಧದ ಬತ್ತ ಎನ್ನುತ್ತದೆ 'ದೀಪಿಕೆ'. ಇಲ್ಲೊಂದು ನವುರನ್ನು ಗಮನಿಸಬೇಕು:-(ಸು)ಗಂಧವಿರುವುದು ಬತ್ತದಲ್ಲಿ ಅಲ್ಲ, ಬತ್ತವನ್ನು ಕುಟ್ಟಿ ಮಾಡಿದ ಬೆಂದ ಅಕ್ಕಿಯಲ್ಲಿ. ಅನ್ನದ ಪರಿಮಳವನ್ನು ಬತ್ತದ ಗಿಡಕ್ಕೇ ಅನ್ವಯಿಸುವುದೂ ಒಂದು ಬಗೆಯ ಕಾವ್ಯಾಲಂಕಾರವಾಗಬಹುದಲ್ಲವೆ? (ಚಂದನ ನೋಡಿ).

ಹೊನ್ನೆಂಪು ಬಣ್ಣಕ್ಕೆ ಮಾಗಿರುವ ಬತ್ತದ ತೆನೆಯನ್ನು ತಳೆದ ಗಂಧಶಾಳಿ ಗಿಡ ಪೂರ ಹೊಂಬಣ್ಣಕ್ಕೆ ತಿರುಗುತ್ತವೆ: ಹೀಗೆ ವರ್ಣಮಾರ್ಪಾಟು ಹೊಂದಿ ಮಾಗದ ಗಂಧಶಾಳಿಯಿಂದಲ್ಲಿ ಸುಳಿಯುವ (ಹಸುರು) ಗಿಳಿವಿಂಡಿನೋಳಿ ಹಾರಾಡುತ್ತಿವೆ. (ವಿವಿ.III ೨೨). ಈ ಬಣ್ಣಗಳ ಹಿಂದೆ ಸ್ವಚ್ಛ ನೀಲಾಕಾಶದ ತೆರೆ. ಚೌಕಟ್ಟೊಂದನ್ನು ಅಳವಡಿಸಿದರೆ ಸುಂದರವಾದ ವರ್ಣಚಿತ್ರ ಪಟವಾಗುತ್ತದೆ!

ಪಂಪನ ಕಾಲದ ಗಂಧಶಾಳಿ ಕಣ್ಮರೆಯಾಗಿಲ್ಲ. ಇವತ್ತಿಗೂ ಕನ್ನಡ ಕರಾವಳಿ ಪ್ರದೇಶಗಳಲ್ಲಿ ಕೃಷಿಯಾಗುತ್ತಿದೆ.

ಸಪ್ತಚ್ಛದ (Als:onia scholaris)

ಆಕರ: ಆ.ಪು. XIII ೧೧

ಏಳೆಲೆಗೊಂಚಲು ಗೆಣ್ಣುಗಳಿಂದ ಸಾಮಾನ್ಯವಾಗಿ ಏಳು ಎಲೆಗಳು ಹರಡುತ್ತವೆಯಾದದ್ದರಿಂದ ಮರವನ್ನು ಸಪ್ತಚ್ಛದ ಎಂದರು. ತಮಿಳಿನಲ್ಲಿ ಏಳಿಲೈಪಾಲ ಎನ್ನುತ್ತಾರೆ. ಮರದ ಚೌಬೀನೆ ಹಗುರವಾಗಿರುವುದರಿಂದ ಪಕ್ಕಿತಮಟೆಗಳ ತಯಾರಿಕೆಗೆ ಒಗ್ಗಿದೆ. ಬಹುಶಃ ಈ ಜಾಡನ್ನು ಹಿಡಿದು ಕನ್ನಡದಲ್ಲಿ ಮದ್ದಳೆಮರ ಎಂಬ ಹೆಸರು ಸಂದಿದೆ.

ಪಶ್ಚಿಮ ಘಟ್ಟಗಳ ನಿತ್ಯಹಸಿರು ಕಾಡುಗಳಲ್ಲಿ ಬೆಳೆಯುವ ಹೆಮ್ಮರ. ೪೦–೫೦ ಅಡಿ ಎತ್ತರ ಬೆಳೆದು ೮–೧೦ ಅಡಿ ಸುತ್ತಳತೆಯನ್ನು ತಾಳುತ್ತದೆ. ತುಂಬುವಲೆಹೊದಿಕೆಯಿಂದ ಕೂಡಿ ಸುಂದರವಾಗಿರುತ್ತದೆ. ಟೊಂಗೆಯ ತುದಿಯಿಂದ ಹೂಗೊಂಚಲು ಕೋರುತ್ತದೆ; ಸಣ್ಣ ಹೂ, ಮಾಸಲು ತಿಳಿಹಸುರು ಬಣ್ಣ, ಅಂಥದೇನೂ ಆಕರ್ಷಣೆಯಿಲ್ಲ. ಕಾಯಿಗಳು ೨೦–೨೫ ಅಂಗುಲ ಉದ್ದ ಬೆಳೆದು ಕುಚ್ಚುಗಳಲ್ಲಿ ತೊಂಗುತ್ತವೆ. ಮರಕ್ಕೆ ಅಲಂಕಾರದಂತಿರುತ್ತವೆ.

ಹಳೆಯ ಕಾಲದ ಬಂಗಾಳದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಪ್ತಚ್ಛದದ ಟೊಂಗೆಯನ್ನು ಕೊಡುವ ಸಂಪ್ರದಾಯವಿತ್ತಂತೆ (ಈ ಸಂಗತಿ ನೇರವಾಗಿ ನನಗೆ ತಿಳಿಯದು). ಲಾತಿನ್ ನಾಮದ್ವಯದ ಸ್ಕೊಲಾರಿಸ್ ಎಂಬ ಪದದ ಆಯ್ಕೆಗೆ ಈ ಬಳಕೆಯೇ ಕಾರಣವಾಗಿರಬಹುದು.

ಸರಳ

ಆಕರ: ವಿ.ವಿ. V ೫೨

'ದೀಪಿಕೆ' ಇದನ್ನು ತೇಗದ ಮರವೆಂದು ತಿಳಿಸುತ್ತದೆ. ಪಂಪನ ಪ್ರಕಾರ ಈ ಮರ ಯಮುನಾ ನದೀ ತೀರದಲ್ಲಿ ಬೆಳೆಯುತ್ತಿತ್ತು (ವಿವಿ. V ೫೦). ಈ ಪ್ರದೇಶದಲ್ಲಿ ತೇಗ (Tectona granisd)ದ ಸ್ವಾಭಾವಿಕವಾದ ಬೆಳವಣಿಗೆಯಿಲ್ಲ, ನೆಡುತೋಪು ಬೆಳೆಯೂ ಇಲ್ಲ.

ಸರಳ ಪದವನ್ನು ನಾಮಪದವಾಗಿ ಗಣಿಸಬೇಕೇ ಅಥವಾ ತಮಾಳದ ಗುಣವಾಚಕವಾಗಿ ಗಣಿಸಬೇಕೆ ಎಂಬ ಸಂದೇಹ ಇದ್ದೇ ಇದೆ. ಗುಣವಾಚಕವಾದರೆ 'ನೆಟ್ಟಗೆ ಬೆಳೆಯುವ ತಮಾಳ' ಎಂದು ಗ್ರಹಿಸಬೇಕಾಗುತ್ತದೆ. ಒಂದು ವೇಳೆ ನಾಮಪದವನ್ನಾಗಿಯೇ ಗ್ರಹಿಸಿದರೆ ಅದು ತೇಗ ಎಂದು ಅರ್ಥಯಿಸುವುದಕ್ಕೆ ಆಧಾರಗಳು ಸಾಲವು.

ಸಿರಿಸ (Albizzia lebbeck)

ಆಕರ: ಆ.ಪು. XI ೧೦೨

ಸಿರಿಸವು ಸಂಸ್ಕೃತ ಶಿರೀಷದ ತದ್ಭವವಾಗಿರಬೇಕೆಂದು ನನಗೆ ತೋರುತ್ತದೆ. ಸರಿಸದ ಬಾಸಿಗ ಎನ್ನುತ್ತಾನೆ, ಪಂಪ. ಹೂಗಳಿಂದ ಆಭರಣಗಳನ್ನು ಮಾಡಿಕೊಂಡು ಧರಿಸುವುದು ಪಂಪನ ಕಾಲದಲ್ಲಿ ಸಾಧಾರಣ ಬಳಕೆಯಾಗಿತ್ತೆಂದು ತೋರುತ್ತದೆ. ಸರಿಸಮರ ಆಡುಮಾತಿನಲ್ಲಿ ಬಾಗೆ (ಕನ್ನಡ), ವಾಗೈ (ತಮಿಳು) ಎಂದು ಪರಿಚಿತವಾಗಿದೆ.

ಪ್ರಾಚೀನ ತಮಿಳುನಾಡಿನಲ್ಲಿ 'ವಾಗೈ ಶೂಟ್ಟುದಲ್' ಎಂಬೊಂದು ಪದ್ಧತಿಯಿತ್ತು. ಯುದ್ಧದಲ್ಲಿ ಗೆದ್ದ ವೀರನ ತಲೆಗೆ ಬಾಗೆ ಹೂವಿನ ಮಾಲೆಯನ್ನು ಗೌರವಾರ್ಥವಾಗಿ ಮುಡಿಸುತ್ತಿದ್ದರು. ಯುದ್ಧಪ್ರಕರಣದಲ್ಲಲ್ಲದಿದ್ದರೂ ಅಲಂಕಾರಪ್ರಿಯತೆಯಿಂದ ಸಿರಿಸದ ಬಾಸಿಗವನ್ನು ತೊಡುವ ಬಳಕೆ ಪಂಪನ ಕಾಲದಲ್ಲಿ ಇದ್ದಿರಬಹುದು.

ಬಾಗೆ ಮರ ದಕ್ಷಿಣ ಭಾರತದ ಮೈದಾನ ಪ್ರದೇಶಗಳಲ್ಲಿ ಬೆಳೆಯುತ್ತದೆ. ಹೂ ಸಣ್ಣ. ಮಾಸಲು ಬಿಳಿ ಬಣ್ಣ. ತನಿಹೂವಿಗಾಗಲಿ ಹೂಗುತ್ತಿಗಾಗಲಿ ಆಕರ್ಷಕತೆಯಿಲ್ಲ. ಮರವು ಸಾಧಾರಣ ರಖಮಿನ ಚೌಬೀನೆಯನ್ನೊದಗಿಸುತ್ತದೆ; ಬಾಗಿಲು, ಕದ, ಅಟ್ಟದ ಹಲಗೆ ಮೊದಲಾದವುಗಳಿಗೆ ಉಪಯೋಗವಾಗುತ್ತದೆ.

ಸಲ್ಲಕಿ (Feronia elephantum)

ಆಕರ: ವಿ.ವಿ. I ೧೧೫

ಇದು ಬೇಲದ ಮರ. ಆನೆಬೇಲವೆಂದೂ ಕೆಲವೆಡೆ ಪ್ರಚಾರವಲ್ಲಿದೆ. ಆನೆಗೆ ಬೇಲದ ಹಣ್ಣು ಪ್ರಿಯವಾದ ತಿನಿಸು ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ. ಚಿಪ್ಪನ್ನು ಒಡೆಯದೆಯೇ ಆನೆಯು ಹಣ್ಣನ್ನು ನುಂಗುವುದೆಂದೂ, ತಿರುಳನ್ನು ಮಾತ್ರ ಜೀರ್ಣಿಸಿಕೊಂಡು ಚಿಪ್ಪನ್ನು ಹಾಗೆಯೇ ಲದ್ದಿಯ ಮೂಲಕ ಹೊರಗಾಗಿಸುವುದೆಂದೂ ದಂತಕತೆಯಿದೆ. ಒಡೆಯದ ಹಣ್ಣನ್ನು ಬಾಯಲ್ಲಿ ಹಾಕಿಕೊಳ್ಳುವುದೇನೋ ನಿಜವೇ. ಆದರೆ ಹಲ್ಲುಗಳಿಂದ ಅದನ್ನು ನಸುಕಿ ಅಗೆದು ನುಂಗುತ್ತದೆ.

ಸಾಧಾರಣವಾಗಿ ಮೈದಾನ ಪ್ರದೇಶಗಳಲ್ಲೂ ಸಮುದ್ರಮಟ್ಟದಿಂದ ೩೦೦೦ ಅಡಿ ಎತ್ತರ ಉಳ್ಳ ಕಾಡುಗಳಲ್ಲೂ ಬೇಲ ಬೆಳೆಯುತ್ತದೆ. ಹಣ್ಣಿನ ತಿರುಳು ಅಡುಗೆಮನೆಯಲ್ಲೂ ಆಯುರ್ವೇದದಲ್ಲೂ ಉಪಯೋಗವಾಗುತ್ತದೆ.

ಶಾಲ (Shorea robusta)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಶಾಲ, ಸಾಲ, ಸಾಳ.

ಆಕರ: ವಿ.ವಿ. I ೬೮; VII ೭೬; VIII ೪೫ ಗ
ಆ.ಪು. XI ೯೫ ಗ

ಭೀಷ್ಮನು ಸಾಲವೃಕ್ಷದಂತೆ ಪ್ರಾಂಶು (ಎತ್ತರ)ವಾಗಿದ್ದ (ವಿ.ವಿ. I ೬೮). ಬರಸಿಡಿಲಿನಿಂದ ಕಡೆದ ಸಾಲವೃಕ್ಷದಂತೆ ವಜ್ರಕಾಯರಾಗಿದ್ದರು. ಕೃತಾಂತಸಂಪದನನ ನಾಲ್ಕು ತಮ್ಮಂದಿರು (ವಿ.ವಿ. VIII ೪೫ ಗ). ಎತ್ತರವಾಗಿ ಘನವಾಗಿ ಆಜಾನುಬಾಹುವಾಗಿ ಬೆಳೆದುನಿಂತ ಸಾಲತರು ಪಂಪನಿಗೆ ಮಹಾಪುರುಷ ಲಕ್ಷಣವನ್ನು ನೆನಪು ತಂದಿತು.

ವಿ.ವಿ. VII ೭೬ನೆ ಪದ್ಯದ "ಸಾಳ ತಮಾಳ ಕಾನನ......" ಎಂಬಲ್ಲಿ ಮಾತ್ರ ಸಾಳಪದಕ್ಕೆ 'ದೀರ್ಘಿಕೆ'ಯು ತೀಗ ಎಂಬ ಅರ್ಥವನ್ನು ಇತ್ತಿದೆ. ಇದು ಸರಿಯಲ್ಲ. ಈ ವೃತ್ತದಲ್ಲಿ ಳಕಾರವನ್ನು ದ್ವಿತೀಯಾಕ್ಷರ ಪ್ರಾಸವನ್ನಾಗಿ ಬಳಸಿಕೊಂಡಿರುವುದರಿಂದ ಸಾಲ (ಶಾಲ) ಸಾಳವಾಗಿ ಪರಿಣಮಿಸಿದೆ. ಹೀಗೆಯೇ ಪದಲಾಲಿತ್ಯಕ್ಕಾಗಿ "ವಿನಿರ್ಜಿತಾಳಿ ಮಾಲಾ ವಿಳಾಸ ಸಾಳಕಾನನೆಯುರ್ ಸಾಳಕಾನನಂಗಳುಮಂ" ಎಂಬ ಪದಪುಂಜದಲ್ಲೂ (ಆ.ಪು. XI ೯೫ ಗ) ಳಕಾರ ಪ್ರಯೋಗ ನಡೆದಿದೆ.

ಪಂಪನಿಗೆ ಪರಿಚಿತವಾಗಿದ್ದ ವೆಂಗಿಪಳು ಪ್ರದೇಶದಲ್ಲಿ ಸಾಧಾರಣವಾಗಿ ಬೆಳೆಯುವ ಮರ ಸಾಲ. (ಅವನಿಗೆ ಪ್ರಿಯವಾದ ಬನವಾಸಿಯಲ್ಲಿ ಈ ಮರ ಬೆಳೆಯದು). ಉತ್ತಮವಾದ ಚೌಬೀನೆ ಯನ್ನೊದಗಿಸುತ್ತದೆ; ಅರಗುಹುಳುವಿನ ವ್ಯವಸಾಯಕ್ಕೆ ತಕ್ಕ ಪಟ್ಟಿನ ಆಶ್ರಯಕೊಡುತ್ತದೆ. ಪ್ರಾಚೀನ ಬೌದ್ಧರಿಗೆ ಪವಿತ್ರವಾಗಿದ್ದ ಮರ ಇದು. ಬುದ್ಧನು ದೇಹತ್ಯಾಗ ಮಾಡುವಾಗ ಹೂಮಳೆಗರೆಯುತ್ತಿದ್ದ ಸಾಲಮರದ ಕೆಳಗೆ ಪ್ರಶಾಂತನಾಗಿ ಮಲಗಿಕೊಂಡನಂತೆ.

ಸಿಂದುರ

ಆಕರ: ವಿ.ವಿ. V ೩೦
ಆ.ಪು. XI ೯೦ ; XI ೧೨೨

ಪೂರ್ವ ಮತ್ತು ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಕುಂಕುಮ ಎಂಬ ಮರ ಇದೇ ಇರಬಹುದೆ? ಕಾಯಿನ ಹೊರಮೈಯೆಲ್ಲ ಕೆಂಪು ಪುಡಿಯಿಂದ ಭೂಷಿತವಾಗುತ್ತದೆ. ಪಂಪ ಹೇಳಿರುವಂತೆ ಈ ಮರ ವಸಂತಕಾಲದಲ್ಲಿ ಹೂತಳೆಯುತ್ತದೆ. ಸದ್ಯಕ್ಕೆ ಇದರ ಅನ್ಯತೆಯನ್ನು ಮೆಲ್ಲೋಟಸ್ ಫಿಲಿಪಿನೆನ್ಸಿಸ್ (Mallotus philippineusis) ಎಂದಿಟ್ಟುಕೊಳ್ಳಬಹುದು.

ಸಂಪಗೆ (Michelia champaca)

ಪಂಪನು ಉಪಯೋಗಿಸಿರುವ ಪರ್ಯಾಯ ಪದಗಳು: ಸಂಪಗೆ. ಚಂಪಕ.

ಆಕರ: ವಿ.ವಿ. I ೧೪೩ ಗ ; IV ೨೮ : IV ೬೬ ; V ೩೦ ; V ೩೫ ; XII ೮೭
ಆ.ಪು. XI ೯೫ ಗ; XI ೧೦೯ ; XI ೧೦೮ ; XI ೧೦೯ ; XI ೧೩೦ ;
XIII ೧೧
(ಪ್ರ.ಕ. ಸಂಪುಟ ೫೪, ಪುಟ ೧೮ ನೋಡಿ)

ಬನವಾಸಿಯ ಬೆಟ್ಟಗುಡ್ಡಗಳಲ್ಲೂ ನಂದನವನಗಳಲ್ಲೂ ಸಾಧಾರಣವಾಗಿ ಬೆಳೆಯುತ್ತಿದ್ದ ಮರ ಸಂಪಗೆ (ವಿವಿ IV ೨೮). ಸಂಪಗೆ ಮೊಗ್ಗಿಗೆ ಯೋಗಿ ವಿಯೋಗಿಗಳಿಬ್ಬರೂ ಮನಸೋತರು. (ವಿವಿ. V ೩೫). ಅರಳಿದ ಸಂಪಗೆ ಹೂವಿನ ಪರಿಮಳ (ಮಲ್ಲಿಗೆಯುದರೊಡನೆ ಕಲೆತು?) ವಸಂತಮಾಸವನ್ನು ಅತಿಶಯವನ್ನಾಗಿ ಮಾಡಿತು (ವಿವಿ. V). ಅರ್ಜುನಗರ್ಭವನ್ನು ಧರಿಸಿದ್ದ ಕುಂತಿಯ ದೇಹ ಕಾಂತಿ ಅರಳಿದ ಸಂಪಗೆಹೂವಿನ ಬಣ್ಣಕ್ಕೆ ತಿರುಗಿತು. (ವಿ.ವಿ. I ೧೪೩ ಗ). ಅರ್ಜುನನನ್ನು ಕಂಡ ಸುಭದ್ರೆಯ ದೇಹಕಾಂತಿ ಕಾಮವೇದನೆಯಿಂದ ಕಳಿತ ಸಂಪಗೆಯಂತೆ ಬಿಳಿಚಿಹೋಯಿತು.
(ವಿ.ವಿ. IV ೬೬).

ನಮಗಾಗುವಂತೆಯೇ ದುಂಬಿಗೂ ಸಂಪಗೆಹೂವಿನ ಪರಿಮಳ ತೀಕ್ಷ್ಣ: "ಗಬ್ಬನೆ ಕೊಳೆ ಕಡು ಗಂಪು" ದುಂಬಿಯು ಕೂಡ ಎಲ್ಲಿ ವಾಸನೆ ವೆಗಟಾಗಿ ಬಿಡುವುದೋ ಎಂಬ ಅಂಜಿಕೆಯಿಂದ ದೂರ ನಿಂತಿತಂತೆ (ಆ.ಪು. XI ೧೦೯). ಹೀಗಾಗಿ "ದುಂಬಿಯೊಳ್ಪಗೆಗೊಂಡ ಸಂಪಗೆ" ಎನ್ನುತ್ತಾನೆ, ಪಂಪ (ಆ.ಪು. XI ೧೦೯) ಇದೇ ಭಾವವನ್ನೇ ಯುದ್ಧ ಮಾಡುವುದಕ್ಕೆ ಬಂದ ಶತ್ರುವು (ಸಂಪಗೆ) ಶಿಳೀಮುಖ (ದುಂಬಿ)ವೆಂಬ ಬಾಣಪ್ರಯೋಗವನ್ನು ಎದುರಿಸಲಾರದೆ ದೂರವಾಗಿ ನಿಂತ (ಓಮೈಟ್ಟಿದ) ಎಂದು ಒಪ್ಪವಿಟ್ಟಿರಬಹುದಲ್ಲವೆ? (ವಿ.ವಿ. XII ೮೭).

ವೃಕ್ಷದೋಹದ ಕ್ರಮದಲ್ಲಿ ಸಂಪಗೆಗೆ ಸಾಂಪ್ರದಾಯಿಕವಾಗಿ ಮೃದುಹಸನವಿಧಿ ಮೀಸಲಾಗಿದೆ. ತೀಕ್ಷ್ಣತರವಾದ ಪರಿಮಳವನ್ನು ಸೂಸುವ ಈ ಹೂವಿಗೆ ಮೃದುವಾದ ನಗು ಎಲ್ಲಿಯು ಸಾಟಿ ಎನಿಸಿರ ಬೇಕು, ಪಂಪನಿಗೆ. ಆದದ್ದರಿಂದ ಕ್ಷೀರಗಂಡೂಷ ವಿಧಿಯನ್ನು ಹೊಸತಾಗಿ ನಿಯಮಿಸಿದ್ದಾನೆ. (ಆ.ಪು. XI ೧೩೦ ಗ.) ಬಣ್ಣ ಪರಿಮಳಗಳೆರಡನ್ನೂ ಪಡೆದು ಇತರ ಹೂಗಳಿಗಿಂತಲೂ ಅಸಾಧಾರಣವಾದ ಮೇಲ್ಮೆಯನ್ನು ದಕ್ಕಿಸಿಕೊಂಡ ಸಂಪಗೆಗೆ (ಆ.ಪು. XI ೧೧೮), ಅದರ ನೆಲೆಗೆ ಸರಿದೂಗುವಂಥ ದೋಹದ ವಿಧಿ ಆವಶ್ಯಕವಾಗಿತ್ತಲ್ಲವೆ?

ಸುರಯಿ (Mammea longifolia = Ochrocarpus longifolius)

ಆಕರ: ವಿ.ವಿ. I ೫೮

ಆ.ಪು. XI ೧೦೩

ಹೊಸಮುತ್ತಿನ ಕುಚ್ಚಿಗೆ ಪೂತಸುರಯಿಯ ಮುಗುಳುಗುತ್ತಿ ಹೋಲಿಕೆಯಾಗಿದೆ (ಆ.ಪು. XI ೧೦೩); ಮರದಿಂದ ಸುರಿಯುವ ಮುಗುಳುಗಳನ್ನೂ ಕುರಿತು ಆಡಿದ್ದಾನೆ, ಪಂಪ (ವಿ.ವಿ. I ೫೮) ಇವೆರಡೂ ನಿಜವೇ. ಸುರಗಿ ಮೊಗ್ಗುತೆನೆ ಮುತ್ತಿನ ಕುಚ್ಚನ್ನೇ ಹೋಲುತ್ತದೆ. ಬಿರಿದ ಹೂಗಳು ಮರದಿಂದ ಮಳೆಗರೆಯುತ್ತವೆ. ದುಂಬಿಗಳಂತೂ ಝೇಂಕಾರ ಮಾಡುತ್ತ ಹೂಗಳನ್ನು ಹುಡುಕುತ್ತ ಅಟ್ಟಹಾಸ ಮಾಡುತ್ತವೆ.

ಮಾದಕೀಯತೆಯೊಂದಿಗೆ ಮಿಳಿತವಾದ ಪರಿಮಳ ಸುರಗಿಯದು. ಒಣಗಿದರೂ ಮಾಸಲು ಪರಿಮಳವಿದ್ದೇ ಇರುತ್ತದೆ. ನೀರು ಚಿಮುಕಿಸಿದರೆ ಮೊದಲಿನ ಸ್ಥಿತಿಗೆ ಬರುತ್ತದೆ. ಸೊರಬ ಸಾಗರ ಮೊದಲಾದ ಊರುಗಳಲ್ಲಿ ಒಣ ಹೂಸರಗಳು ವಿಕ್ರಯಕ್ಕಿವೆ.

ಪಶ್ಚಿಮ ಘಟ್ಟದ ಮಳೆಕಾಡುಗಳಲ್ಲಿ ಬೆಳೆಯುವ ಮರ ಇದು. ೬೦ ಅಡಿ ಎತ್ತರವನ್ನೂ ಮುಟ್ಟು ತ್ತದೆ. ಉದುರದ ಕಪ್ಪು–ಹಸುರು ಎಲೆಗಳು ಸದಾ ಮರವನ್ನು ಮುತ್ತಿರುತ್ತವೆ.

ಸೇವಂತಿಗೆ

ಆಕರ: ಆ.ಪು. XI ೧೨೫

(ಪ್ರ.ಕ. ಸಂಪುಟ ೫೪, ಪುಟ ೧೯ ನೋಡಿ)

ಮೇಲೆ ಕಾಣಿಸಿರುವ ಲೇಖನದಲ್ಲಿ "ಗೊಜ್ಜಗೆಯನ್ನು ಸೇವಂತಿಗೆ ಎಂದು ಬಗೆಯುಸಿವವರೂ ಉಂಟು" ಎಂದು ಬರೆದಿದ್ದೆ. ಇವೆರಡು ಗಿಡಗಳೂ ಬೇರೆ ಬೇರೆ ಎಂಬ ಅಭಿಪ್ರಾಯ ಈಚೀಚೆಗೆ ಸ್ಪಷ್ಟ ವಾಗಿ ಮೂಡತೊಡಗಿದೆ. ಸೇವಂತಿಗೆ, ಸೂರ್ಯಕಾಂತಿ, ಗೊಜ್ಜಗೆ, ಕುಸುಂಬೆ, ಆಸ್ಟರ್ ಮೊದಲಾದ ಜಾತಿಗಳೆಲ್ಲ ಕಂಪಾಸಿತೇ ಎಂಬ ಬಳಗಕ್ಕೆ ಸೇರಿದುವೇ ಆದರೂ ಒಂದೊಂದೂ ಪ್ರತ್ಯೇಕವಾದ ಜೀನಸಿನ ಸ್ಪೀಷೀಸುಗಳು.

ಆದರೆ ಪಂಪನು ಉಲ್ಲೇಖಿಸಿರುವ "ಮಗಮಗಿಪ ಕೆಂಪೆಸಳೊಳೆ ತಗುಳ್ದ" ಸೇವಂತಿಗೆ ಯಾವುದಿರ ಬಹುದು ಎಂಬ ಪ್ರಶ್ನೆ ಸದ್ಯಕ್ಕೆ ಬಗೆಹರಿಯದಾಗಿದೆ. ಈ ನುಡಿಕಟ್ಟಿನಿಂದ ಹೂವಿನ ಎಸಳು ಕೆಂಪು ಎಂದು ಅರ್ಥ ಬರುತ್ತದೆ. ಕೆಂಪು ಸೇವಂತಿಗೆಯನ್ನು ನಾನು ಕಾಣೆ. ನಮಗೆ ತಿಳಿದಿರುವ ಸೇವಂತಿಗೆ ಹೂಗಳು ಬಿಳಿಯ ಬಣ್ಣದವು ಅಥವಾ ಹಳದಿ ಬಣ್ಣದವು. "ಕೆಂಪೆಸಳೊಳ್" ಎನ್ನುವುದರ ಬದಲಾಗಿ "ಕಂಪೆಸೆಳೊಳ್" ಎಂದು ಪಾಠಭೇದ ಮಾಡಿಕೊಳ್ಳಬಹುದೆ?

ಹಿಂತಾಳ (Corypha umbraculifera)

ಆಕರ: ವಿ.ವಿ. V ೮೬

ಶಬ್ದಾಲಂಕಾರದ ಆರ್ಭಟದ ಸಂದಿನಲ್ಲಿ ಸಿಕ್ಕಿಕೊಂಡಿರುವ ಗಿಡ ಇದು. ತಾಳೆಮರದಿಂದ ಬೇರೆಯಾದದ್ದು. ಶ್ರೀತಾಳ ಇರಬಹುದೇ ಎಂದು ತಾತ್ಕಾಲಿಕವಾಗಿ ಊಹಿಸಿದ್ದೇನೆ. ಸಾಧಾರಣ ತಾಳೆಗಿಂತಲೂ ಶ್ರೀತಾಳ ಎತ್ತರ ಬೆಳೆಯುತ್ತದೆ; ಎಲೆಯ ಗಾತ್ರವೂ ಹಿರಿಯದಾಗಿರುತ್ತದೆ. ಪುಷ್ಪಗುಚ್ಛ ಕಾಂಡದ ತುದಿ ಭಾಗದಿಂದ ಮೇಲೆದ್ದು ೧೫–೨೦ ಅಡಿ ಎತ್ತರದ ಶಾಖೋಪಶಾಖೆಗಳಾಗಿ ಬೆಳೆಯುತ್ತವೆ.

ತಾಳೆಯೋಲೆ ಕಟ್ಟುಗಳ ಪರಿಚಯವುಳ್ಳವರಿಗೆ ತಾಳ ಶ್ರೀತಾಳಗಳ ಸೂಕ್ಷ್ಮಗಳು ತಿಳಿದಿರುತ್ತವೆ. ಶ್ರೀತಾಳದ ಹಾಳೆಗಳು ದೊಡ್ಡವು ೨½–೩ ಅಂಗುಲ ಅಗಲ, ಎರಡಡಿ ಉದ್ದದ ಓಲೆಗಳನ್ನು ಕತ್ತರಿಸಬಹುದು. ಶ್ರೀತಾಳದ ಕಾಯನ್ನು ಪುಡಿಮಾಡಿ ಅಡಕೆಪುಡಿಯೊಂದಿಗೆ ಬೆರಕೆಮಾಡುವ 'ಮೋಸಕಲೆ' ಈಗ ಅಭಿವೃದ್ಧಿಯಲ್ಲಿದೆ. ಶ್ರೀತಾಳ ಮರವೂ ಎಲೆಯೂ ತಾಳೆಯ ಉಪಯೋಗಗಳನ್ನೇ ಪಡೆದಿವೆ.

ಎನ್. ವಿ. ಶಿವಕುಮಾರ್

ಬಯಕೆ

ಅಜ್ಜನಜ್ಜನ ಕಾಲದಿಂದ
ಈ ಮನೆಯ ಪದರುಪದರುಗಳಲ್ಲಿ
ಮಡಿಕೆಯಾಗಿ ಮೇಲೇರಿ ಕುಳಿತ
ಮಡಿ–ಮೈಲಿಗೆಗಳಿಗೆ
ಹಿಡಿಗೆ ಸಿಕ್ಕಿದ ಕಸಗುಡಿಸುವ
ಬರಲಾಗುವ ಬಯಕೆ.
ದೇವರಕೋಣೆಯ ಮೂಲೆಮೂಲೆಯ
ಸರಕುಗಳಲ್ಲಿ, ಬಿರುಕು–ಬಿಟ್ಟಿಗಳಲ್ಲಿ
ಇಳಿಬಿದ್ದ ಜಂಗು, ಜಾಗಟೆ, ಜೋಳಿಗೆಗಳಿಗೆ
ಇತಿಶ್ರೀಯಾಗುವ ಬಯಕೆ
ಮನೆಮುಂದಿಯ ತುಂಬ ಆವರಿಸಿ
ಆವಾಸಮಾಡಿರುವ
ಕೊನೆಯಿಲ್ಲದ ದೇವರು–ದಿಂಡಿರುಗಳ ಕಥೆಯ
ಅಂತೆ–ಕಂತೆಗಳಿಗೆ
ಕಿವುಡ–ಕುರುಡ–ಮೂಕನಾಗುವ ಬಯಕೆ
ಇಂಥೆಲ್ಲಕ್ಕೂ
ಇನ್ನೆಂದೂ–ಬಲಿಯ ಮೇಲೇಳದಂತೆ ಮೆಟ್ಟಿದ
ವಾಮನನಾಗುವ ಬಯಕೆ.

ಎಂ. ಚಿದಾನಂದಮೂರ್ತಿ

'ಪಗರಣ' (ಹಗರಣ)-ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ

ಈಗ 'ಹಗರಣ' ಎಂಬ ಮಾತಿಗೆ ಗಲಾಟೆ, ಜಗಳ, ಅವ್ಯವಸ್ಥೆ, ಹಾಸ್ಯಾಸ್ಪದ ಇತ್ಯಾದಿ ಅರ್ಥಗಳಿರುವುದು ಎಲ್ಲರಿಗೂ ತಿಳಿದ ಸಂಗತಿ. ಆದರೆ 'ಹಗರಣ'ವು ಮೂಲತಃ ಸಾಮಾನ್ಯ ಜನರು ಅಥವಾ ಅವಿದ್ಯಾವಂತರು ಹಾಕುತ್ತಿದ್ದ ವೇಷಗಳನ್ನು ಸೂಚಿಸುತ್ತದೆಯೆಂಬುದನ್ನು ಬಹಳ ಜನರು ತಿಳಿದಿರಲಾರರು. ಅದನ್ನು ಸ್ಪಷ್ಟಪಡಿಸುವುದು ಈ ಲೇಖನದ ಉದ್ದೇಶವಾಗಿದೆ.

1

'ಹಗರಣ'ದ ಹಿಂದಿನ ರೂಪ 'ಪಗರಣ'. ಇದು ಸಂಸ್ಕೃತದ 'ಪ್ರಕರಣ'ವೇ ಆಗಿದೆ (ಅಥವಾ ಇದು ಪ್ರಾಕೃತದ ಮೂಲಕ ಬಂದ 'ಪಗರಣ' ಪದವಾಗಿರಬಹುದು.). ಸಂ. ಪ್ರಕರಣ (ಪ್ರಾಕೃತ. ಪಗರಣ)→ ಪಗರಣ. ಈ ರೂಪ ಒಂಬತ್ತನೇ ಶತಮಾನದ ಕವಿರಾಜಮಾರ್ಗದಲ್ಲೂ, ಅದರಿಂದ ಸ್ವಲ್ಪ ಈಚಿನ ವಡ್ಡಾರಾಧನೆಯಲ್ಲೂ, ಕ್ರಿ.ಶ. 1112ರ ನಯಸೇನನ ಧರ್ಮಾಮೃತದಲ್ಲೂ ದೊರಕುತ್ತದೆ. ಹಳಗನ್ನಡದ ಪದಾದಿಯ ಪ್– ನಡುಗನ್ನಡದಲ್ಲಿ ಹ್– ಆದಾಗ, 'ಹಗರಣ'ವೆನ್ನುವ ರೂಪ ಪ್ರಯೋಗಕ್ಕೆ ಬಂತು. ಹನ್ನೆರಡನೇ ಶತಮಾನದ ವಚನಕಾರರಲ್ಲಿ ಮತ್ತು ಈಚಿನ ಕೃತಿಗಳಲ್ಲಿ ಈ ಎರಡನೆಯ ರೂಪವೇ ಕಂಡು ಬರುತ್ತದೆ.

ಸಂಸ್ಕೃತದ 'ಪ್ರಕರಣ' ಒಂದು ಬಗೆಯ ರೂಪಕವನ್ನು ಸೂಚಿಸುತ್ತದೆ. ಅದರ ವಸ್ತು ಕಲ್ಪಿತವೂ ಲಘುವೂ ಆಗಿದ್ದು, ಅದರಲ್ಲಿ ರಾಜವೈಭವವಾಗಲಿ ದಿವ್ಯತೆಯ ಅಂಶವಾಗಲಿ ಇರಬಾರದು.[1] ಎಂದರೆ ಪ್ರಕರಣವು ಬಹುಮಟ್ಟಿಗೆ ಲಘುನಾಟಕವಾಗಿದ್ದು, ಅದರಲ್ಲಿ ವಿಶೇಷವಾಗಿ ಸೇವಕರು, ವಿಟರು, ವರ್ತಕರು, ಅನೇಕ ಬಗೆಯ ದುಷ್ಟರು ಕಾಣಿಸಿಕೊಳ್ಳುತ್ತಾರೆ.[2] ಅದರಲ್ಲಿ ಶೃಂಗಾರವೇ ಪ್ರಧಾನವಾಗಿರಬೇಕಾದರೂ ವೀರರಸವೂ ಕಾಣಿಸಿಕೊಳ್ಳಬಹುದೆಂದು ದಶರೂಪಕದ ಕರ್ತೃ ಧನಂಜಯ ಅಭಿಪ್ರಾಯ ಪಡುತ್ತಾನೆ.[3] ಧನಂಜಯ 'ಪ್ರಕರಣ'ವನ್ನು ಹೀಗೆ ವಿವರಿಸಿದ್ದಾನೆ:

---

[1] Hari Ram Mishra : The Theory of Rasa in Sanskrit Drama (Chatarpur, M. P. 1964), p. 178.

[2] A. B. Keith : The Sanskrit Drama (Oxford University Press), 1964, p. 346.

[3] A. B. Keith : The Sanskrit Drama (Oxford University Press), p. 346

"......ಪ್ರಕರಣದಲ್ಲಿ ಲೋಕವನ್ನು ಆಶ್ರಯಿಸಿ [ಎಂದರೆ, ಜಗತ್ತಿನಲ್ಲಿ ಸಾಮಾನ್ಯವಾಗಿ ನಡೆಯುಬಹುದಾದ ಕಥೆಯನ್ನು ಆಶ್ರಯಿಸಿ] [ಕವಿಯಿಂದ] ಕಲ್ಪಿತವಾದ [ಉತ್ಪಾದ್ಯ] ವಸ್ತು [ಇರತಕ್ಕದ್ದು]. ಮತ್ತು [ಅದರಲ್ಲಿ] ಮಂತ್ರಿ, ಬ್ರಾಹ್ಮಣ, ವೈಶ್ಯ–ಇವರಲ್ಲಿ ಒಬ್ಬನನ್ನು ನಾಯಕನನ್ನಾಗಿ ಮಾಡತಕ್ಕದ್ದು; [ಆ ನಾಯಕನು] ಧರ್ಮ, ಕಾಮ, ಅರ್ಥ ಆಸಕ್ತಿಯುಳ್ಳ, [ಜೀವನದಲ್ಲಿ ಹಲವಾರು] ಕಷ್ಟಗಳು ತುಂಬಿರುವ 'ಧೀರಪ್ರಶಾಂತ' [ವರ್ಗದವ]ನಾಗಿರತಕ್ಕದ್ದು. ಸಂಧಿ ಪ್ರವೇಶಕ ರಸ ಮುಂತಾದ ಉಳಿದ ವಿಷಯಗಳು ನಾಟಕದಂತೆಯೇ[ಯೋಜಿತವಾಗಿರತಕ್ಕದ್ದು]"[4]

ನಾಯಕ ಅನುದಾತ್ತನಾಗಿರಲೂ ಸಾಧ್ಯ.[5] ನಾಯಿಕೆಯು ಕುಲಸ್ತ್ರೀ ಅಥವಾ ವೇಶ್ಯೆಯಾಗಿರಬಹುದು, ಅಥವಾ ಇಬ್ಬರೂ ಬರಬಹುದು.[6] ಎಂದರೆ, ಪ್ರಕರಣದ ವಸ್ತು, ಪಾತ್ರಗಳು ಸಾಮಾನ್ಯ ಜನಜೀವನಕ್ಕೆ ಬಹಳ ಹತ್ತಿರವಾದುವು ಎಂಬುದು ಗಮನಿಸಬೇಕಾದ ಸಂಗತಿ. ಪ್ರಕರಣಕ್ಕೆ ಒಳ್ಳೆಯ ನಿದರ್ಶನವಾದ ಮೃಚ್ಛಕಟಿಕದ ಮೂವತ್ತು ಪಾತ್ರಗಳಲ್ಲಿ ಆರು ಮಾತ್ರ ಸಂಸ್ಕೃತವನ್ನು ಆಡುತ್ತವೆ;ಉಳಿದುವು ಶೌರಸೇನಿ, ಅರ್ಧಮಾಗಧಿ ಮತ್ತು ಮಿಶ್ರಪ್ರಾಕೃತವನ್ನು ಆಡುತ್ತವೆ[7]. ಮತ್ತು ಆ ರೂಪಕದಲ್ಲಿ ಜೂಜುಕೋರರು, ಕಳ್ಳರು, ಧೂರ್ತರು, ಘಟಿಂಗ ಚಂಡಾಲರು ಬರುವುದನ್ನು ಗಮನಿಸಬೇಕು. ಈ ರೂಪಕದಲ್ಲಿ ಹಾಸ್ಯವು ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ ಎಂಬುದೂ ಲಕ್ಷಿಸಬೇಕಾದ ಸಂಗತಿ.

2

ಕರ್ನಾಟಕದ ಪಗರಣವು–ನಾವು ಮುಂದೆ ನೋಡುವಂತೆ–ನೂರಕ್ಕೆ ನೂರರಷ್ಟು ಸಂಸ್ಕೃತದ ಪ್ರಕರಣವೇ ಆಗದಿದ್ದರೂ, ಎರಡಕ್ಕೂ ಸ್ವಲ್ಪವಾದರೂ ಸಾಮ್ಯವಿದೆಯೆಂಬುದರಲ್ಲಿ ಅನುಮಾನವಿಲ್ಲ. ಪ್ರಕರಣದ ವಸ್ತು ಜನಸಾಮಾನ್ಯಕ್ಕೆ ಸಂಬಂಧಿಸಿದ್ದು; ನಾಯಕ ಅನುದಾತ್ತನಾಗಿರಬಹುದು; ಶೃಂಗಾರ, ವೀರ, ಹಾಸ್ಯಗಳಿಗೆ ಅಲ್ಲಿ ಪ್ರಾಧಾನ್ಯ ಉಂಟು. ಪಗರಣವು ಜನಸಾಮಾನ್ಯರು ಕೇವಲ ಮನರಂಜನೆಗಾಗಿ ಹಾಕುತ್ತಿದ್ದ ವೇಷವಾಗಿದ್ದಿತು. ಹಾಸ್ಯ, ಒರಟು ಶೃಂಗಾರಗಳಿಗೆ ಇಲ್ಲಿಯೂ ಪ್ರಾಧಾನ್ಯವಿದ್ದಿತು. 'ಪ್ರಕರಣ'ವು ನಾಟಕವಾದರೆ ಪಗರಣವು ವೇಷಗಳ ಸರಣಿ, ಮತ್ತು ಪ್ರಾಚೀನ ನಾಟಕದ ಲಕ್ಷಣಗಳನ್ನು ಗರ್ಭೀಕರಿಸಿಕೊಂಡಿರುವ ಒಂದು ಕಲಾಪ್ರಕಾರ.

ವಡಾರಾಧನೆ ಗದ್ಯಗ್ರಂಥದ (ಸು. ಕ್ರಿ.ಶ. 920) ಕಾರ್ತಿಕೇಯ ಮುನಿಗಳ ಕತೆಯಲ್ಲಿ ಪಗರಣದ ಆರಂಭದ ಬಗ್ಗೆ ಒಂದು ಸಂಗತಿಯಿದೆ. ವೀರಶ್ರೀ ಎಂಬ ರಾಣಿ ತನ್ನ ಅಣ್ಣನನ್ನು ಕಳೆದುಕೊಂಡು ಗೋಳಾಡುತ್ತಿರುತ್ತಾಳೆ. ಅವಳು ನಗುವಂತೆ ಮಾಡಿದವರಿಗೆ ಒಸಗೆ ಮಾಡಿಸುತ್ತೇನೆ ಎಂದು ರಾಜ ಘೋಷಿಸುತ್ತಾನೆ:

"ಅದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಂ ಎಂತುಂ ಅೞ್ಕೆ ಮಟ್ಗಿದಿರ್ದೊಡೆ, ಒರ್ವಂ ಕರಿಯ ಕಚ್ಚುಟಮನುಟ್ಟು ಮೆಯ್ಯೆಲ್ಲಂ ಮಸಿಯಂ

---

[4] ದಶರೂಪಕ (ಅನು: ಕೆ.ವಿ. ಸುಬ್ಬಣ್ಣ, ಸಾಗರ ೧೯೫೪), ಪು. ೧೭೭–೮

[5] ಅದೇ.

[6] ಅದೇ. ಪು. ೧೭೮

[7] ಎ. ಆರ್. ಕೃಷ್ಣಶಾಸ್ತ್ರೀ: ಸಂಸ್ಕೃತನಾಟಕ (ಮೈಸೂರು ೧೯೫೫), ಪು. ೧೧೨; ಸಂಸ್ಕೃತವು ಪಂಡಿತರ, ಶಿಷ್ಟಜನರ, ಮುಖ್ಯವಾಗಿ ಗ್ರಾಂಥಿಕವಾದ ಭಾಷೆ; ಶೌರಸೇನಿ ಮುಂತಾದುವು ಜನತೆ ಆಡುತ್ತಿದ್ದ ವ್ಯಾವಹಾರಿಕ ಭಾಷೆಗಳು.

ಪೂಸಿ ಬೋಟಿದಲೆವೆರಸು ಜಾಯೊಳ್ ಕವಡಿಕೆಗಳಂ ಪಲ್ಲಿಳಂತೆ ಮಾಡಿ ಕುಂಚಮುಮಂ ಗುಂಡಿಗೆಯುಮಂ ಪಿಡಿದು ಬರ್ಪೊನನ್ ಅರಸಂ ಕಂಡು ಇಂತೆಂದನ್ 'ಎಲೆ ಅರಸಿ ನಿನ್ನ ಸಹೋದರಂಗಳಪ್ಪ ಭಟಾರರ್ ಆ ಬರ್ಪೊರೆ' ಎಂದು ಪೇಟ್ವಾಗಳ್ 'ಎಲ್ಲಿರ್ದರ್' ಎಂದು ಎಟ್ಟು ನೋಡಿ ಕಾಣದೆ ಆ ರೂಪಂ ಕಂಡು ನಕ್ಕು ದುಃಖಮಂ ಮಱೆದೊಳ್. ಅಗಳ್ ಆ ನಗಿಸಿದ ಪಗರಣಗಂಗೆ ಪಿರಿದು ಕಸವರಮನಿತ್ತೊನ್. ಅಂದಿಂದೆ ಇತ್ತ ಬಾದುಬ್ಬೆಯ ಪರ್ವಮುಂ ಪಗರಣದ ಆಟಪಾಟಮುಂ ಆದುವು......"8

ವಡ್ಡಾರಾಧನೆಯ ಈ ಕಥೆ ಸ್ವಾರಸ್ಯವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ಇಲ್ಲಿ ಗಮನಿಸ ಬೇಕಾದ ಸಂಗತಿಯೆಂದರೆ–ವಡ್ಡಾರಾಧನೆ ಒಂದು ಅನುವಾದ ಗ್ರಂಥ; ಅದಕ್ಕೆ ಮೂಲವಾಗಿದ್ದಿರ ಬಹುದಾದ ಭಗವತೀ ಆರಾಧನಾ ಕೃತಿಯ ಪ್ರಾಕೃತ ವ್ಯಾಖ್ಯಾನ ಈಗ ದೊರೆಯುತ್ತಿಲ್ಲ. 'ಬೃಹತ್ಕಥಾ ಕೋಶ'ದಲ್ಲಿ ಬಂದಿರುವ ಕಾರ್ತಿಕೇಯ ಸ್ವಾಮಿಗಳ ಕತೆಯಲ್ಲಿ ಮೇಲಿನ ಪ್ರಸಂಗವಿಲ್ಲ.[9] ಬಹುಶಃ ಹಗರಣಕ್ಕೆ ಸಂಬಂಧಿಸಿದ ಮೇಲಿನ ಕತೆಯನ್ನು ಕನ್ನಡ ವಡ್ಡಾರಾಧನೆಯ ಕರ್ತೃ ಕಲ್ಪಿಸಿರಬಹುದು. ಅಥವಾ ಬೇರೆ ಕಡೆಯಿಂದ ತೆಗೆದುಕೊಂಡಿರಬಹುದು. ಅಥವಾ ಜನಪದ ಕಥಾಸಾಹಿತ್ಯದಲ್ಲಿದ್ದುದನ್ನು ಇಲ್ಲಿ ಬಳಸಿಕೊಂಡಿರಬಹುದು. ಅನೇಕ ಹಬ್ಬಗಳಿಗೆ, ದೈವಗಳಿಗೆ ಜೈನಮೂಲವನ್ನು ಕಲ್ಪಿಸಿ ಹೇಳುವುದು ಇತರ ಜೈನಕೃತಿಕಾರರಲ್ಲೂ ಕಂಡುಬರುತ್ತದೆ. ಅದೇನೇ ಇರಲಿ, ಪಗರಣದ ಆಟಪಾಟಗಳು ಬಾದು ಬ್ಬೆಯ[10] ಹಬ್ಬದ ದಿನ (ವಿಶೇಷವಾಗಿ) ನಡೆಯುತ್ತಿದ್ದುವೆಂಬ ಅಂಶ ಮೇಲಿನ ಕತೆಯಿಂದ ಸೂಚಿತವಾಗು ತ್ತದೆ. ಮತ್ತು, ಪಗರಣಗಳಲ್ಲಿ ಸಾಮಾನ್ಯ ಜನರು ('ಲೋಗರ್') ಬೇರೆ ಬೇರೆ ರೀತಿಯ ಪಾತ್ರಗಳನ್ನು ಧರಿಸಿ, ವಿಚಿತ್ರವೇಷಗಳನ್ನು ಹಾಕಿಕೊಂಡು ತಮ್ಮ ಆಟಗಳಿಂದ, ಮಾತಿನಿಂದ ಜನರನ್ನು ನಗಿಸುತ್ತಿದ್ದ ರೆಂಬ ಸಂಗತಿಯೂ ಅಲ್ಲಿ ಸೂಚಿತವಾಗುತ್ತದೆ.

ಹಗರಣದ ವೇಷಗಳನ್ನು ಬಾದುಬ್ಬೆ ಹಬ್ಬದ ದಿನಗಳಲ್ಲಿ ಮಾತ್ರವಲ್ಲದೆ, ಕಾರಹುಣ್ಣಿಮೆಯ ಹಬ್ಬದ ದಿನದಲ್ಲೂ ಧರಿಸುತ್ತಿದ್ದರೆಂದು ಕಾಣುತ್ತದೆ. ಚೆನ್ನಬಸವಣ್ಣನವರ ಈ ವಚನವನ್ನು ನೋಡಿ:[11]

ಕೇಶಕಾಷಾಯಾಂಬರ ವೇಷಲಾಂಛನವಾದಡೇನೋ!
ಗ್ರಾಸಕ್ಕೆ ಭಾಸನರಲ್ಲದೆ ಲಿಂಗಕ್ಕೆ ಭಾಜನರಲ್ಲ.
ಈ ಆಸೆಯ ವೇಷವ ಕಂಡಡೆ
ಕಾರಹುಣ್ಣಿಮೆಯ ಹಗರಣವೆಂಬೆ ಕಾಣಾ
ಕೂಡಲ ಚೆನ್ನಸಂಗಮದೇವಾ.

ಸ್ವತಂತ್ರ ಸಿದ್ಧಲಿಂಗೇಶ್ವರ ವಚನವೊಂದರಲ್ಲಿ (ಸಂಖ್ಯೆ 149), ಏನು ಎಂತು ಎಂಬುದು ತಿಳಿಯದೆ ಜನ ಹಗರಣದ ಹಬ್ಬಕ್ಕೆ ನೆರೆದು 'ಗೊಂದಣ'ಗೊಳ್ಳುತ್ತಿದ್ದ ವಿಷಯ ಬಂದಿದೆ[12]. ಈಗಲೂ ಹಬ್ಬದ ದಿನಗಳಲ್ಲಿ ವೇಷ ಧರಿಸುವ ರೂಢಿ ಹಳ್ಳಿಗಳಲ್ಲುಂಟು. ಹಾಲಕ್ಕಿ ಒಕ್ಕಲಿಗರಲ್ಲಿ ಗಡಿಹಬ್ಬ, ಹಣ್ಣಬ್ಬ,

---

8 ವಡ್ಡಾರಾಧನೆ (ಸಂ. ಡಿ. ಎಲ್. ನರಸಿಂಹಾಚಾರ್. ಮೈಸೂರು ೧೯೪೯), ಪುಟ ೧೧೩.

9 ನೋಡಿ–ಬೃಹತ್ಕಥಾಕೋಶ (ಸಂ. ಎ.ಎನ್. ಉಪಾಧ್ಯೆ, ಬೊಂಬಾಯಿ, ೧೯೪೩), ಪು. ೩೪.

10 'ಬಾದುಬ್ಬೆ' ದೇವತೆಯ ವಿವರಗಳಿಗೆ, ನೋಡಿ–ಎಂ. ಚಿದಾನಂದಮೂರ್ತಿ: 'ಅಮ್ಮ, ಅಬ್ಬೆ, ಅಲ್ಲಮ, ಬಾದುಬ್ಬೆ', (ಸಂಶೋಧನ ತರಂಗ, ಮೈಸೂರು ೧೯೬೬). ಪು. ೧೩೪–೪೦.

11 ಚೆನ್ನಬಸವಣ್ಣನವರ ವಚನಗಳು (ಸಂ. ಆರ್.ಸಿ. ಹಿರೇಮಠ, ಧಾರವಾಡ ೧೯೬೫), ಪು.೯೬.

12 ಹಗರಣದಂತೆಯೇ 'ಗೊಂದಲ' ಎನ್ನುವ ಮಾತು ಮೂಲತಃ ಕಲೆಯೊಂದನ್ನು ಸೂಚಿಸುತ್ತಿದ್ದು, ಕ್ರಮೇಣ ಗಲಾಟೆ, ಅವ್ಯವಸ್ಥೆ ಎಂಬ ಅರ್ಥವನ್ನು ಪಡೆದಂತೆ ತೋರುತ್ತದೆ. 'ಗೊಂದಲಿಗ'ರೆಂಬ ತಿರುಗಾಡುವ ಕಲಾವಿದರು ಈಗಲೂ ಕರ್ನಾಟಕದಲ್ಲಿದ್ದಾರೆ.

ಮನೆಹೊದಿಕೆಯ ದಿನವಂತಹ ವಿಶೇಷದಿನಗಳಲ್ಲಿ, ದೇಪಿಕಾನ ಅಮ್ಮ (ಮಾರಿಕಾಂಬ)ನ ಉತ್ಸವದಲ್ಲಿ ಈಗಲೂ 'ಹಗಣ'ವನ್ನು ನಡೆಸುತ್ತಾರೆ (ವಿವರಗಳಿಗೆ, ಮುಂದೆ ನೋಡಿ.)

ಪಗರಣಕ್ಕೆ ಸಂಬಂಧಿಸಿದ ಇನ್ನೊಂದು ಪ್ರಮುಖ ಉಲ್ಲೇಖವೆಂದರೆ ಕವಿರಾಜಮಾರ್ಗದ್ದು[13]

ಮಿಗೆ ದುಷ್ಕರ ಕಾವ್ಯಂಗಳೊ
ಳಗರ್ಹಿತಪ್ರಾಯಮಕ್ಕುಮಾ ಶ್ರುತಿಕಷ್ಟಂ।
ಪಗರಣದೊಳುೞಿದ ಮೂಱುಂ
ನಗಿಸುಗುಮಪ್ಪುದಱಿನಲ್ಲಿಗಂತದದೋಷಂ॥

ಶ್ರುತಿಕಷ್ಟ, ಶ್ರುತಿದುಷ್ಟ, ಅರ್ಥದುಷ್ಟ ಮತ್ತು ಕಲ್ಪನೋಕ್ತಿ ಕಷ್ಟಗಳು ಕಾವ್ಯ ದೋಷಗಳು. ಶ್ರುತಿಕಷ್ಟ ಎಲ್ಲ ಕಡೆಗೂ ದೋಷವೇ. ಆದರೆ ಉಳಿದ ಮೂರು (ಶ್ರುತಿದುಷ್ಟ, ಅರ್ಥದುಷ್ಟ, ಕಲ್ಪನೋಕ್ತಿಕಷ್ಟ) ಜನರನ್ನು ನಗಿಸುತ್ತವೆಯಾದ್ದರಿಂದ 'ಪಗರಣ'ದಲ್ಲಿ ಮಾತ್ರ ಅದೋಷವಾಗುತ್ತವೆ–ಇದು ಮೇಲಿನ ಪದ್ಯದ ತಿರುಳು.

ಪಗರಣದ ಉದ್ದೇಶವೇ ಹಾಸ್ಯವಾಗಿರುವುದರಿಂದ ಕೆಟ್ಟಮಾತು. ಕೆಟ್ಟಅರ್ಥ, ಕಲ್ಪನೋಕ್ತಿ ಕಷ್ಟ(=ಕವಿಯ ಆಶಯವೇನೆಂಬುದನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಗಿರುವುದು)–ಇವು ಮೂರೂ ಅಲ್ಲಿ ದೋಷವಾಗುವುದಿಲ್ಲ. ಅಶ್ಲೀಲ ಎಂದು ಹೇಳಬಹುದಾದ ಮಾತುಗಳೂ ಹಾಡುಗಳೂ ಪಗರಣ ದಲ್ಲಿರುತ್ತಿದ್ದುವೆಂದು ಇದರಿಂದ ಊಹಿಸಬಹುದು. ಅರ್ಥಾತ್. ಪಗರಣದಲ್ಲಿ ವಾಚಿಕಾಂಶವು ಅಭಿನಯಾಂಶದೊಡನೆ ಮಿಳಿತವಾಗಿದ್ದಿತು. ವಾಚಿಕಾಂಶವು ಅಪ್ರಧಾನವೂ ಹೌದು ಎಂಬುದು ಇದರಿಂದ ಸೂಚಿತವಾಗುತ್ತದೆ. ಶ್ರವ್ಯಕ್ಕಿಂತ ದೃಶ್ಯವೇ ಮುಖ್ಯವೆಂದು ಹೇಳಬಹುದು ಪಗರಣದಲ್ಲಿ.

ಇದಕ್ಕೆ ಇನ್ನೊಂದು ಆಧಾರವನ್ನು ಕೊಡಬಹುದು. ಅಂಬಿಗರ ಚೌಡಯ್ಯನ ವಚನವೊಂದು ಹೀಗಿದೆ:[14]

---

[13] ಕವಿರಾಜಮಾರ್ಗ (ಸಂ. ಎಂ.ವಿ. ಸೀತಾರಾಮಯ್ಯ. ಬೆಂಗಳೂರು ೧೯೬೮). ೧–೬೮.

[14] ವಿಶೇಷಾನುಭವ ಷಟ್ಸ್ಥಲ: (ಸಂ. ಆರ್.ಸಿ. ಹಿರೇಮಠ). ಪು. ೮೨–೩; ಈ ವಚನಕ್ಕೆ ಇರುವ ಟೀಕು ಹೀಗಿದೆ–"ತತ್ ತತ್ ಸ್ಥಾನಗಳಲ್ಲಿ ರುದ್ರಾಕ್ಷಿಯಂ ಧರಿಸಿ ಸದ್ವರ್ತನೆಯಲ್ಲಿ ನಡೆಯಲು. ಸರ್ವದೋಷಂಗಳಂ ಪರಿಹರಿಸಿ ಚಿಂತಿತಾರ್ಥವನೀವ ಮುಕ್ತಿಚಿಂತಾಮಣಿಗಳಾಗಿಹವು. ದುರ್ವರ್ತನೆ ಯಲ್ಲಿ ಚರಿಸಲು ಬಹುರೂಪನಂತಲ್ಲದೀ ಸದ್ಗತಿಯಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ" (–ಅದೇ) ಇಲ್ಲಿಯ ಬಹುರೂಪಕಾಜಿ ಅಥವಾ ಬಹುರೂಪಿಯು ಡೊಂಬನಂತೆ ಹಾರಿ. ಕುಣಿದು. ಕುಪ್ಪಳಿಸುತ್ತಾನೆ: ಹಗರಣಿಗನಂತೆ ವೇಷಧರಿಸಿರುತ್ತಾನೆ ಎಂಬುದು ಸ್ವಾರಸ್ಯದ ಸಂಗತಿ.

ಬಹುರೂಪಿ ಚೌಡಯ್ಯ ಎಂಬುವವನು ವಚನಕಾರನಾಗಿದ್ದ. ಇವನು ರಾಮಾಯಣ. ಭಾರತಾದಿ ಗಳ ಕತೆಯನ್ನು ಅಭಿನಯಿಸುತ್ತಿದ್ದ. ಭೈರವೇಶ್ವರ ಕಾವ್ಯ ಕಥಾ ಸೂತ್ರ ರತ್ನಾಕರದ ಪ್ರಕಾರ (೧.ಪು. ೨೨೨–೩) ಇವನು ಜಾತಿಕಾರ ವಿದ್ಯದಲ್ಲಿ ಹದಿನೆಂಟು ಜಾತಿಯ ನೂರೊಂದು ಕುಲದ ವೇಷಮಂ ತೊಟ್ಟು ಭಾಷೆಯನಾಡುವ ಕಲೆಯನ್ನು ಬಲ್ಲವನಾಗಿದ್ದ. ಗಾನ, ನರ್ತನ. ಭರತ ವಿದ್ಯೆಗಳಲ್ಲಿ ಪ್ರವೀಣ ನಾಗಿದ್ದ. ಚೌಡಯ್ಯ ಶಿವನ ಇಪ್ಪತ್ತೈದು ಲೀಲೆಗಳನ್ನು ಆಡಿ ತೋರಿಸಿದನೆಂದೂ ಉಲ್ಲೇಖವಿದೆ. ಆದ್ದರಿಂದ 'ಬಹುರೂಪ' ಎನ್ನುವುದು ಏಕವ್ಯಕ್ತಿಯ ಅಭಿನಯ; ಆ ವ್ಯಕ್ತಿ ಒಬ್ಬನೇ ಬೇರೆ ಬೇರೆ ಪೌರಾಣಿಕ ಪ್ರಸಂಗ ಗಳನ್ನು ಉಚಿತವಾದ ವೇಷ. ಮಾತಿನೊಡನೆ ಅಭಿನಯಿಸುತ್ತಿದ್ದುದಲ್ಲದೆ ಸಮಕಾಲೀನ ಜೀವನದ ಬೇರೆ ಬೇರೆ ಅಂಶಗಳನ್ನು –ವ್ಯಕ್ತಿಗಳನ್ನು. ಘಟನೆಗಳನ್ನು–ಅಭಿನಯಿಸುತ್ತಿದ್ದುದಾಗಿ ಮೇಲಿನ ಮಾತಿ ನಿಂದ ತಿಳಿದು ಬರುತ್ತದೆ. ಬೇರೆ ಬೇರೆ ಜಾತಿಯ ಜನರಂತೆ ವೇಷಧರಿಸಿ. ಅವರವರ ಮಾತನ್ನು ಅನುಕರಿ ಸುತ್ತಿದ್ದರು. ಆದ್ದರಿಂದಲೇ ಆ ಕಲಾವಿದನನ್ನು 'ಬಹುರೂಪಿ' ಎಂದು ಕರೆಯುತ್ತಿದ್ದುದು. 'ಕಲಕೇತ'

ಮಸ್ತಕದಲ್ಲಿ ರುದ್ರಾಕ್ಷಿಯಂ ಧರಿಸಿ ಅನ್ಯದೈವದ ಗುಡಿಯ ಹೊಗಲಾಗದು;
ಶರಣ ಕರ್ಣಂಗಳಲ್ಲಿ ರುದ್ರಾಕ್ಷಿಯಂ ಧರಿಸಿ, ಹರನಿಂದೆ ಗುರುನಿಂದೆಯ
ಕೇಳಲಾಗದು;
ಶರಣ ತೋಳುಗಳಲ್ಲಿ ರುದ್ರಾಕ್ಷಿಯಂ ಧರಿಸಿ ಅನ್ಯರಿಗೆ ಕೈಮುಗಿಯಲಾಗದು.
ಶರಣ ಇದನರಿದು ಧರಿಸಿದಡೆ, ಶ್ರೀ ರುದ್ರಾಕ್ಷಿಯಹುದು;
ಅಂತಲ್ಲದಿರ್ದೊಡೆ, ಡೊಂಬ ಹಗರಣವ ಹೊತ್ತು ಬಂದಂತೆ,
ಎಂದಾತನಂಬಿಗರ ಚೌಡಯ್ಯ.

ಇಲ್ಲಿ ಶರಣನು ರುದ್ರಾಕ್ಷಿ ಧರಿಸಿ, ಮೇಲೆ ಹೇಳಿದ ಬೇರೆ ಬೇರೆ ಅನುಚಿತ ಕಾರ್ಯಗಳನ್ನು ಮಾಡಿದರೆ ಡೊಂಬ ಹಗರಣದ ವೇಷಧರಿಸಿ ಬಂದಂತೆ ಇನ್ನೂ ಹಾಸ್ಯಾಸ್ಪದವಾಗುತ್ತದೆ ಎಂಬುದು ಸ್ವಾರಸ್ಯವಾಗಿದೆ. ಡೊಂಬನಲ್ಲಿ ವೇಷ ಮುಖ್ಯವಲ್ಲ, ದೈಹಿಕ ಚಲನೆಗಳು ಮುಖ್ಯ. ಹಗರಣದಲ್ಲಿ ವೇಷ ಪ್ರಧಾನ. ಎರಡೂ ಹಾಸ್ಯದ ಪಾತ್ರಗಳೇ. ರುದ್ರಾಕ್ಷಿ ಧರಿಸಿದ ಶರಣ ತನ್ನ ಮತವಿರೋಧಿ ಕಾರ್ಯಗಳನ್ನು ಮಾಡಿದರೆ, ಡೊಂಬ ಹಗರಣದ ವೇಷಧರಿಸಿದಂತೆ ಎಂಬ ಮಾತು ಪರಿಣಾಮಕಾರಿ. ಇಲ್ಲಿ ಹಗರಣವು ವೇಷ ಪ್ರಧಾನವೆಂಬುದು ಸೂಚಿತವಾಗಿರುವುದು ಗಮನಾರ್ಹ.

ಹಗರಣಗಳಿಗೆ ಸಂಬಂಧಿಸಿದಂತೆ ವಿವರಗಳು ಒಟ್ಟಾರೆ ಎಲ್ಲೂ ದೊರಕದಿದ್ದರೂ, ಬೇರೆ ಬೇರೆ ಕಾವ್ಯ, ಶಾಸನಗಳಲ್ಲಿ ದೊರಕುವ ಸಣ್ಣ ಸಣ್ಣ ವಿವರಗಳನ್ನು ಒಂದು ಕ್ರಮದಲ್ಲಿ ಸೇರಿಸಿದರೆ ಅವುಗಳ ತಕ್ಕಮಟ್ಟಿನ ಸಮಗ್ರಚಿತ್ರ ದೊರಕುತ್ತದೆ. ಹಗರಣವನ್ನು 'ನಾಟಕ'ವೆಂದೇ ಹಲವೆಡೆ ಕರೆದಿದ್ದಾರೆ. (ನೋಡಿ–ತೊರವೆ ರಾಮಾಯಣ. ಸಂ. ಎಸ್. ಬಸವಾರಾಧ್ಯ. ಸಂಪುಟ1. ಮೈಸೂರು, ೧೯೫೭. ಪು. ೨೫೧) "...ಒಗುವ ಕಿವಿ ಮೂಗುಗಳ ರಕುತದ ಹಗರಣದ ಹೊಸ ನಾಟಕದ ಹಲುವೆಗೆದ ರಕ್ಕಸಿ ಬಂದ ಳೊದಱುತ ಖರನ ಪಟ್ಟಣಕೆ". ಅದೇ ಕೃತಿಯಲ್ಲಿ (ಯುದ್ಧಕಾಂಡ, ೨೭–೫೮) 'ಹಗರಣ' ಎಂಬುದಕ್ಕೆ 'ನಾಟಕ' ಎಂಬ ಪಾಠಾಂತರವಿದೆ. ಕ್ರಿ.ಶ. ೧೨೨೨ರ ಉದ್ಯೋಗಸಾರದಲ್ಲಿ (ಸಂ. ಎಸ್. ಬಸವಾರಾಧ್ಯ, ಮೈಸೂರು. ೧೯೬೩, ಪದ್ಯಸಂಖ್ಯೆ ೩೩೧) ಹಗರಣಿಗರು ಅನೇಕ ರೀತಿಯ ವೇಷಗಳನ್ನು ಧರಿಸಿ 'ಉಚಿತ ಮಾತಾಡುತ್ತ' ನಟಿಸುವ ಚಿತ್ರವನ್ನು ಕೊಟ್ಟಿದೆ.

ಪಗರಣಿಗರುಚಿತ ವಚನರ್
ಸೊಗಯಿಪ ಪಲತೆಱದ ಜೋಹಮಂ[15] ಪೆತ್ತು ಮನಂ
ಬುಗೆ ನಟಿಯಿಪಂತೆ ದೇಹಿಗ
ಳಗಣಿತ ಸಂಸಾರರಂಗದೊಳ್ ನಟಿಯಿಸುವರ್॥

ಎಂಬ ಇನ್ನೊಂದು ವರ್ಗದ ಕಲಾವಿದರು ಇದ್ದರು. (ಅವರೇ ಈಗಿನ ಬಹುಶಃ ಕಿಳ್ಳಿಕ್ಯಾತರು). ಕಲಕೇತ ಬೊಮ್ಮಯ್ಯ ಎಂಬ ಶರಣ ಮುಂದಲೆಯಲ್ಲಿ ಮುಡಿಕಟ್ಟಿ ಹಣೆಗೆ ಭಸ್ಮವಿಟ್ಟು, ಕಿವಿಯಲ್ಲಿ ಕೆಂಪು ಚಿಗುರು ಇಟ್ಟು, ಕಾಸೆ ಹಾಕಿ, ಎರಡೂ ಕಾಲಲ್ಲಿ ಅಂದುಗೆ ಧರಿಸಿ, ಒಂದು ಕಾಲಿಗೆ ಗೆಜ್ಜೆಕಟ್ಟಿ ಎಡಗೈಲಿ ಟಗರಿನ ಕೊಂಬು, ಬಲಗೈಲಿ ಬೆಳಿಕೋಲು ಹಿಡಿದು ಬರುತ್ತಿದ್ದನಂತೆ. ಇದೇ 'ಕಲಕೇತ ವೇಷ' ಎಂದು ಬಸವಪುರಾಣ ವರ್ಣಿಸುತ್ತದೆ (೪೯–೩–೮). ಅವನು ಮನೆಮನೆಗೆ ಬಂದು ಮೋರೆ ತಿರುವುತ್ತ, ಏನೇನೋ ಮಾತಾಡುತ್ತ ಜನರನ್ನು ನಗಿಸುತ್ತಿದ್ದ. ಹಗರಣ, ಬಹುರೂಪ, ಕಲಕೇತಗಳು ಪರಸ್ಪರ ಹೋಲಿಕೆಯಿರುವ ಜನಪದ ಕಲೆಗಳೆಂಬುದು ಸ್ಪಷ್ಟ.

[15] 'ಜೋಹ' ಎಂದರೆ ವೇಷ. ಇದರ ಮೂಲ ಪ್ರಾಯಶಃ ಸಂಸ್ಕೃತದ 'ಯೋಗ' (ಅಥವಾ ಪ್ರಾಕೃತದ 'ಜೋಗ'). 'ಯೋಗ'ಕ್ಕೆ ಸೊಗಹೂಡು, ಸಿದ್ಧಪಡಿಸು, ಏರ್ಪಾಡು ಮಾಡುವಿಕೆ ಇತ್ಯಾದಿ ಅರ್ಥಗಳುಂಟು. ಜೊತೆಗೆ ಮೋಸ, ಇಂದ್ರಜಾಲ, ತೋರಿಕೆ ಎಂಬರ್ಥಗಳೂ ಉಂಟು. 'ಯೋಗ' ಶಬ್ದಕ್ಕೆ ಆಧ್ಯಾತ್ಮಿಕವಾದ ಅರ್ಥವಂತೂ ಸುಪ್ರಸಿದ್ಧವೇ.

ಇಲ್ಲಿಯ 'ವಚನ' 'ನಟಿಸು', 'ಜೋಹ', 'ರಂಗ' ಮುಂತಾದ ಮಾತುಗಳನ್ನು ಗಮನಿಸಿ, ಪಗರಣದಲ್ಲಿ ಅನೇಕ ಜನ ಬೇರೆ ಬೇರೆ ವೇಷಗಳನ್ನು ಧರಿಸಿ ಪ್ರದರ್ಶನ ಮಾಡುತ್ತಿದ್ದರೆಂದು ಹೇಳಬಹುದು. ಭರತೇಶ ವೈಭವದಲ್ಲಿ ಶತ್ರುವು ಸ್ನೇಹಿತನಾಗುವ, ಸ್ನೇಹಿತ ಶತ್ರುವಾಗುವ ಈ ಸಂಸಾರವು 'ಪಗರಣ'ದಂತಿದೆ ಎಂಬಲ್ಲಿಯೂ ಪಗರಣವು ವೇಷವೆಂದೇ ಸೂಚಿತವಾಗಿದೆ.16

ಶಬ್ದಮಣಿ ದರ್ಪಣದಲ್ಲಿ (ಮದ್ರಾಸ್, ೧೯೫೯, ಪು. 51) 'ನಾಟ್ಟಿಗರಣ' ಎಂಬ ಮಾತು ಬರುತ್ತದೆ. ಇದು ಸಾಮಾನ್ಯರು ಆಡುತ್ತಿದ್ದ ಪಗರಣ ಎಂಬರ್ಥವನ್ನು ಕೊಡುತ್ತದೆ. ಕುಮಾರವ್ಯಾಸ ಭಾರತದಲ್ಲಿ ಬರುವ (ಆರಣ್ಯಕ ಪರ್ವ, ೧೩–೪೧; ಕರ್ಣಪರ್ವ, ೨೪–೩) 'ನಾಡಾಡಿಗಳ ನಾಟಕ' ಇದೇ ಇರಬಹುದೆಂದು ತೋರುತ್ತದೆ–

ಖೇಡನಾದನಜಾತರಿಪು ಮಾ
ತಾಡಿಸಿದನಹಿಪತಿಯ ನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ॥
(ಅರಣ್ಯಪರ್ವ, ೧೩–೪೧)
ನೋಡಲೀ ವ್ಯಥೆಯುಂಟೆ ಭುವನದ
ಗೂಡು ಕೃಷ್ಣನ ದೇಹವಿದು ನಾ
ಡಾಡಿಗಳ ನಾಟಕವಲೇ ನರನಾಥ ಕೇಳೆಂದ॥
(ಕರ್ಣಪರ್ವ, ೨೪–೩)

"ನಾಡಾಡಿಗಳ ನಾಟಕವಂತೂ ಕನ್ನಡವೇ ಆಗಿರಬೇಕು ಎಂದು ಬೇಕಾದಷ್ಟು ವ್ಯಕ್ತವಾಗುತ್ತದೆ" ಎಂಬ ಎಂ. ಗೋವಿಂದ ಪೈಯವರ ಅಭಿಪ್ರಾಯ17 ಸಾಧುವಾದುದು. ಶಬ್ದಮಣಿದರ್ಪಣದಲ್ಲಿ ಬರುವ 'ರಕ್ಕಸವಗರಣ' ಎಂಬ ಮಾತು (ಪು. ೨೮೪) ರಾಕ್ಷಸ ಪಾತ್ರಗಳಿರುತ್ತಿದ್ದ ಪಗರಣಗಳನ್ನು ಸೂಚಿಸುವಂತೆ ಕಾಣುತ್ತದೆ. ಅಥವಾ ಪಗರಣದ ಒರಟುತನವನ್ನು 'ರಕ್ಕಸ' ಎಂಬ ಮಾತು ಸೂಚಿಸಬಹುದು.

ಈಶ್ವರನ 'ನಾಟ್ಯ'ವನ್ನು 'ಹಗರಣ' ಎಂದು ಕರೆದಿರುವಲ್ಲಿ ಚೆನ್ನಬಸವಣ್ಣನವರು ಪಗರಣಗಳ ಅಭಿನಯಾಂಶವನ್ನು ಸೂಚಿಸಿದ್ದಾರೆ.

ಸಂಸ್ಕೃತದ 'ಯೋಗ' (ಅಥವಾ ಪ್ರಾಕೃತದ 'ಜೋಗ') ತಮಿಳಿನಲ್ಲಿ 'ಚೋಕಮ್' (ಉಚ್ಚಾರಣೆ 'ಚೋಹಮ್') ಆಗಿ, ಅಲ್ಲಿಂದ 'ಚೋಹ' ಆಗಿ ಕನ್ನಡಕ್ಕೆ ಬಂದಿರುವಂತೆ ಕಾಣುತ್ತದೆ.

'ಸಿದ್ಧಪಡಿಸುವಿಕೆ', 'ಇಂದ್ರಜಾಲ', 'ತೋರಿಕೆ', ಈ ಅರ್ಥಗಳು 'ವೇಷಧಾರಣೆ', 'ವೇಷ', ಎಂಬರ್ಥಗಳಿಗೆ ಸುಲಭವಾಗಿ ದಾರಿಮಾಡಿಕೊಡುತ್ತವೆ. ('ಯೋಗಕ್ಕೆ' ಸಂವಾದಿಯಾಗಿ ನೇಪಾಲಿಯಲ್ಲಿ 'ಜೋಹ್' ಇದೆ). 'ಸೋಗು' ಎಂಬುದೂ ಇದಕ್ಕೇ ಸಂಬಂಧಿಸಿದ ಪದ.

16 ಭರತೇಶ ವೈಭವ (ಸಂ. ಜಿ. ಬ್ರಹ್ಮಪ್ಪ, ಹಂಪ. ನಾಗರಾಜಯ್ಯ, ಕಮಲಾ ಹಂಪನಾ, ಬೆಂಗಳೂರು ೧೯೬೭), ೬೫–೫೩.

ಪಗೆಯೊಮ್ಮೆ ಕೆಳೆಯಾಗುವನೊಮ್ಮೆ ಕೆಳೆಯನೆ। ಪಗೆಯಾಗುವನವರಿಂದ।
ಪಗರಣದಂತಿರ್ದ ಭವದೊಳಿನ್ನಾರಾರ। ಬಗೆದೆಣಿಸುವೆನೆಂದರವರು॥

17 'ಕನ್ನಡ ನಾಟಕದ ಹಳಮೆ' (ಕನ್ನಡ ರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ. ಸಂ ಎನ್. ಎಸ್. ವೀರಪ್ಪ. ಮೈಸೂರು. ೧೯೪೮)

ಅಸುರರ ಸುರರ ಶಿರೋಮಾಲೆಯ ಕೊರಳಲ್ಲಿಕ್ಕಿ
ಶಿವಕಳೆಯೆದ್ದಾಡುವಲ್ಲಿ ಅವಕಳೆಯಾಗದೆ?
ಅಸುರ ದೇವಾದಿಗಳೆಲ್ಲಿಯಯ್ಯಾ?
ನೀ ಮಾಡಿದ ಧಾರುಣಿ ರಸಾತಳಕ್ಕಿಳಿದು, ಕೂರ್ಮ ಕುಸಿದು,
ದಿಗುದಂತಿಗಳು ಛೀಳಿಟ್ಟು, ಫಣಿಯ ಹೆಡೆ ಮುಱಿದು,
ನಿನ್ನ ಪಾದದ ಗುಡುಗಾಟದಿಂದ ಕೆಂಧೂಳಿ ನೆಗೆದು,
ನರಲೋಕ, ಸುರಲೋಕ, ಬ್ರಹ್ಮಲೋಕ, ವಿಷ್ಣುಲೋಕ,
ಇಂದ್ರಲೋಕ, ಸೂರ್ಯಲೋಕ, ಚಂದ್ರಲೋಕ, ತಾರಾಲೋಕ,
ಅಸುರ ಲೋಕಂಗಳು ಬೂದಿಯಲ್ಲಿ ಮುಸುಕಿದುವಯ್ಯಾ!
ಪ್ರಭುವೆದ್ದು ಹಗರಣವಾಡುತ್ತಿರಲು,
ಈರೇಳು ಭುವನದೊಳಗುಳ್ಳ ಆತ್ಮಾದಿಗಳೆಲ್ಲ ದೆಸೆದೆಸೆಗೆಡಲು,
ಶಶಿಧರ ನಾಟ್ಯಕ್ಕೆ ನಿಂದಲ್ಲಿ,
ಇನ್ನಾರಯ್ಯಾ ಸಂತೈಸುವರು ಕೂಡಲ ಚನ್ನಸಂಗಯ್ಯಾ!18

ನಾಟ್ಯವಾಡುವುದು ಶಿವನಿಗೆ ಒಂದು ಅಭಿನಯ, ವೇಷಧಾರಣೆ ಎಂಬುದು ಮಾತ್ರ ಈ ವಚನದಲ್ಲಿ ಸೂಚಿತವಾಗಿದೆ. ಅದನು ಶಾಸ್ತ್ರಬದ್ಧ ನರ್ತನವಲ್ಲ, ಹಗರಣದಂತೆ ಸ್ವಚ್ಛಂದ ಕುಣಿತ ಎಂಬುದೂ ಇಲ್ಲಿ ಸೂಚಿತವಾಗಿರಬಹುದು.

ಹಗರಣದಲ್ಲಿ ಆಟಪಾಟಗಳು, ವಿನೋದ ನೃತ್ಯಗಳು ಪ್ರಧಾನವಾಗಿದ್ದುವೆಂಬುದು ಈಗಾಗಲೇ ಸ್ಪಷ್ಟವಾಗಿದೆ. ಈ ದೃಶ್ಯಗಳನ್ನು ಅದಕ್ಕಾಗಿ ನಿರ್ಮಿಸಿದ್ದ ರಂಗದಲ್ಲಿ ಅಭಿನಯಿಸುತ್ತಿದ್ದಿರಬಹುದು. (ರಂಗ ಎಂಬ ಉದ್ಯೋಗಸಾರದ ಮಾತನ್ನು ಗಮನಿಸಿ). ಊರಿನ ಬೀದಿಯಲ್ಲಿ ಅಭಿನಯಿಸುತ್ತಿದ್ದರು ಎಂದು ಹೇಳಲು ಅಲ್ಲಮನ ವಚನಗಳಿಗೆ ವ್ಯಾಖ್ಯಾನ ಬರೆದಿರುವ ಮಹಾಲಿಂಗದೇವನ ಒಂದು ಮಾತು ಅವಕಾಶ ಮಾಡಿಕೊಡುತ್ತದೆ.

"ಲಿಂಗವನರಿದು ಆ ಲಿಂಗದಲ್ಲಿ ಸಮರಸವಹ ಭೇದವ
ತಿಳಿಯಲರಿಯದ ಅಜ್ಞಾನಿಗಳ ಸಂಭ್ರಮವೆಲ್ಲವು ಬೀದಿಯ
ಭಂಡಾಟದ ಹಗರಣದಂತಿದ್ದಿತೆಂಬುದೀ ವಚನ ತಾತ್ಪರ್ಯಾರ್ಥ"19

('ಭಂಡ' ಎಂದರೆ ತಮಾಷೆಗಾರ, ಕೋಡಂಗಿ; 'ಭಂಡಾಟ'ವು ಹಗರಣಗಳ ಪ್ರಮುಖ ಲಕ್ಷಣವಾಗಿದ್ದಿತು.) ಹಗರಣದ ವೇಷಗಳನ್ನು ಧರಿಸಿ ಉತ್ಸವದ ಸಮಯದಲ್ಲಿ ಬೀದಿ ಬೀದಿಗಳಲ್ಲಿ ಬರುತ್ತಿದ್ದುದು ಇಲ್ಲಿ ಸೂಚಿತವಾಗುತ್ತದೆ.

ಅವು ಜನಸಾಮಾನ್ಯರು ಹಾಕುತ್ತಿದ್ದ ವೇಷಗಳಾದರೂ, ನಟರು ಅವುಗಳನ್ನು ಮುಂಚೆಯೇ ಅಭ್ಯಾಸ ಮಾಡಿರಬೇಕಾಗುವುದು ತಾನೆ! ಹಳ್ಳಿಗಳಲ್ಲಿ ಈಗ 'ನಾಟಕದ ಮನೆ'ಗಳಿರುವಂತೆ (=ನಾಟಕ ಅಭ್ಯಾಸ ಮಾಡುವ ಮನೆ), ಆಗಲೂ 'ಹಗರಣದ ಮನೆ'ಗಳು ಇದ್ದಿರಬೇಕು. ಅವುಗಳಲ್ಲಿ ಜನ ತಮಗೆ ಬಿಡುವಾದಾಗ, ಹಗರಣಗಳನ್ನು ಅಭ್ಯಾಸ ಮಾಡುತ್ತಿದ್ದರು. ಹಗರಣಗಳ ಅಭ್ಯಾಸಕ್ಕಾಗಿದ್ದ ಮನೆಗಾಗಿ ದತ್ತಿಯೊಂದನ್ನು ಬಿಟ್ಟುಕೊಟ್ಟ ಶಾಸನವಿದೆ–"ಹಗರಣದ ಮನೆಯ ಕೊಡಗಿಗೆ ಅಳುಪಿದವರು...". ಹಗರಣದ ಮನೆಯ ಕೊಡುಗೆಗೆ ಆಸೆಪಟ್ಟವರು ನರಕವನ್ನನುಭವಿಸುತ್ತಾರೆ ಎಂಬುದು ಇಲ್ಲಿಯ

---

18 ಚನ್ನಬಸವಣ್ಣನವರ ವಚನಗಳು (ಸಂ. ಆರ್. ಸಿ. ಹಿರೇಮಠ, ಧಾರವಾಡ.), ಪು. ೨೩೭.
19 ಪ್ರಭುದೇವರ ವಚನಗಳು (ಸಂ. ಫ.ಗು. ಹಳಕಟ್ಟಿ), ಪು. ೨೨೩.

ಧ್ವನಿತಾರ್ಥ[20]. ಇನ್ನೊಂದು ಶಾಸನದಲ್ಲಿ "ಹಗರಣದ ಕದಂಬ" ಎಂದು ಮಾತ್ರ ಇದೆ.[21] ಈ ಮಾತು ಅರ್ಥವಾಗುವುದಿಲ್ಲ.[22]

ಹಗರಣಿಗರ ವೇಷಗಳ ಬಗ್ಗೆ ಕೆಲವು ವಿವರಗಳು ದೊರಕುತ್ತವೆ. ವೇಷಗಳು ಸಾಮಾನ್ಯವಾಗಿ ಹಾಸ್ಯವನ್ನು ಉಕ್ಕಿಸುತ್ತಿದ್ದವು. ತಮ್ಮ ಭಕ್ತಿ, 'ಹಗರಣದ ಜೋಹದಂತೆ (ಜೋಹ=ವೇಷ) ಹಾಸ್ಯಾಸ್ಪದ ಎಂದು ಬಸವಣ್ಣನವರು ಒಂದು ಕಡೆ ಕೊರಗಿದ್ದಾರೆ.[23] ಹಗರಣದ ವೇಷಗಳು 'ಬಹುರೂಪ ವಿಕೃತ' ವಾಗಿರುತ್ತಿದ್ದವು.[24] (ವಡ್ಡಾರಾಧನೆಯಲ್ಲಿ ಬರುವ ವರ್ಣನೆಯೂ ಇದನ್ನೇ ಸಮರ್ಥಿಸುತ್ತದೆ). ಹನ್ನೆರಡನೆಯ ಶತಮಾನದ ಹೊತ್ತಿಗಾಗಲೇ 'ಹಗರಣಿಗ' ಎಂಬ ಮಾತು ವೇಷಧಾರಿ, ವಂಚಕ ಎಂಬ ಅರ್ಥವನ್ನು ಪಡೆದುಕೊಂಡಿದ್ದಿತು. ಬಸವಣ್ಣನವರನ್ನು ವಂಚಿಸಲು ಬಂದ ವೇಷಧಾರಿ ಜಂಗಮರನ್ನು 'ಹಗರಣಿಗ'ರೆಂದು ಚೆನ್ನಬಸವಣ್ಣನವರ ವಚನವೊಂದರಲ್ಲಿ[25] ಚೆನ್ನಬಸವ ಪುರಾಣದಲ್ಲಿ (೫೭-೭೭) ಕರೆದಿದೆ. 'ಸಂಸಾರ'ವನ್ನು ಹಗರಣಕ್ಕೆ ಹೋಲಿಸಿ ಅಕ್ಕಮಹಾದೇವಿ ಒಂದು ಸುಂದರವಾದ ವಚನವನ್ನು ಬರೆದಿದ್ದಾಳೆ:

ಅಕ್ಕಟಕ್ಕಟಾ, ಸಂಸಾರದ ಹಗರಣ ಬಂದಾಡಿತ್ತಲ್ಲಾ
ಅಪ್ಪಾ ಬೊಪ್ಪಾ ಎಂಬ ಜೋಹವು ಅದು ಮೊಟ್ಟಮೊದಲಲ್ಲಿ ಬಂದಾಡಿತ್ತು
ತುಪ್ಪದ ತೊಡೆದಂತೆ ಮೀಸೆಯ ಜೋಹವು ಅದು ನಟ್ಟನಡುವೆ
ಬಂದಾಡಿತ್ತು.
ಮುಪ್ಪು ಮುಪ್ಪು ಎಂಬ ಜೋಹವು, ಅದು ಕಟ್ಟಕಡೆಯಲಿ ಬಂದಾಡಿತ್ತು
ನಿಮ್ಮ ನೋಟವು ತೀರಲೊಡನೆ
ಜಗದಾಟವು ತೀರಿತ್ತು ಕಾಣಾ ಚನ್ನಮಲ್ಲಿಕಾರ್ಜುನ

---

20 E. C. VII. Shimoga 8 (ಶಾಸನದ ಕಾಲ ಗೊತ್ತಿಲ್ಲ.)

21 Karnataka Inscriptions, V (Ed. B. R. Gopal), NO. 53

22 ಹಗರಣದಲ್ಲಿ ವಿಶೇಷ ಪರಿಶ್ರಮ ಉಳ್ಳ ಜನರೂ ಇದ್ದಿರಬೇಕು. ಇದಕ್ಕೆ ಆಧಾರ ಕುಮಾರ ರಾಮನ ಸಾಂಗತ್ಯ (II ಪು.೭೪). ಹೊಸಮಲೆಯನ್ನು ವರ್ಣಿಸುತ್ತ ಅಲ್ಲಿ ಪಡೆವಳರ, ರಸಿಕರ, ವರ್ತಕರ, ಗಮಕಿಗಳ, ನಗೆಕಾರರ ಕೇರಿಗಳಿದ್ದಂತೆಯೇ 'ಹಗರಣಿಗ'ರ ಕೇರಿಗಳೂ ಇದ್ದುವೆಂದು ಕವಿ ವರ್ಣಿಸುತ್ತಾನೆ. ಹಗರಣಿಗ ಎಂಬುದು ಹಗರಣವನ್ನು ವಿಶೇಷವಾಗಿ ನಟಿಸುತ್ತಿದ್ದ ಒಂದು ವರ್ಗದ (ಜಾತಿಯ) ಜನರನ್ನು ಹೇಳುವಂತೆ ಕಾಣುತ್ತದೆ. ಹಗರಣ ಈಗ ಜೀವನೋಪಾಯದ ವೃತ್ತಿಯಲ್ಲವಾಗಿರುವುದರಿಂದ (ಮುಂದೆ ನೋಡಿ) ಹಿಂದೆಯೂ ವೃತ್ತಿ ಆಗಿದ್ದಿರಲಾರದು. (ಕುಮಾರರಾಮ ಸಾಂಗತ್ಯದ ಉಲ್ಲೇಖದ ಕಡೆ ನನ್ನ ಗಮನ ಸೆಳೆದವರು ಪ್ರೊ. ಎಂ.ವಿ. ಸೀತಾರಾಮಯ್ಯನವರು).

23 ಬಸವಣ್ಣನವರ ಷಟ್ಸ್ಥಲದ ವಚನಗಳು (ಸಂ. ಶಿ.ಶಿ. ಬಸವನಾಳ. ಧಾರವಾಡ. ೧೯೬೮), ಪು. ೨೪೫.

24 ವರ್ಧಮಾನ ಪುರಾಣ (ಸಂ. ಎಂ. ಮರಿಯಪ್ಪ ಭಟ್ ಮತ್ತು ಎಂ. ಗೋವಿಂದ ರಾವ್, ಮದ್ರಾಸ್ ೧೯೫೩), ೭.೫೩

"ಜಾಱಿಂ ಗಳ ನಮ್ಮರಸಂ।
ಪಾಱುವ ಬಹುರೂಪ ವಿಕೃತಮಂ ಪಲತೆಱದಿಂ।
ತೋಱುವ ಹಗರಣವಿವರೊಳ್।
ಮಾಱಾಂತೊಡನಾಡೆ ನಗೆಗೆಡೆಯಕ್ಕುಂ॥"

25 ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ (ಸಂ. ಎಲ್. ಬಸವರಾಜು. ಚಿತ್ರದುರ್ಗ, ೧೯೬೯), ಪು.೬೫

ಇಲ್ಲಿಯೂ 'ಪಗರಣ' ಎಂಬ ಮಾತು ವೇಷ, ಮಾಯೆ, ಮೋಸ, ಛದ್ಮ ಎಂಬ ಅರ್ಥವನ್ನು ಹೊಂದಿದೆ. [ಪಗರಣದಲ್ಲಿ ಒಬ್ಬರಾದ ಮೇಲೆ ಒಬ್ಬರು ವೇಷಧರಿಸಿಕೊಂಡು ಬಂದು ಆಡುವುದನ್ನು ಈ ವಚನ ಸೊಗಸಾಗಿ ಸೂಚಿಸುತ್ತದೆ.] ಹೀಗೆ, 'ಪಗರಣಿಗ' ಎಂಬುದು ನಿಂದೆಯ, ಹಾಸ್ಯದ ಮಾತಾಗಿ ಪರಿಣಮಿಸಿತ್ತು. ಬಸವಪುರಾಣದಲ್ಲಿ (೫೧–೫೩) ಜೈನರನ್ನು 'ತಟ್ಟುಗೆಳ ಪಗರಣಿಗ'ರೆಂದು ನಿಂದಿಸಿರುವುದನ್ನು ಇಲ್ಲಿ ಗಮನಿಸಬಹುದು.

ನಯಸೇನನ ಧರ್ಮಾಮೃತದಲ್ಲಿ (೧೦–೬೭) "ಮೂಱುದಿನದ ಪಗರಣಕ್ಕೆ ಗಡ್ಡ ಮೀಸೆ ಮುಂಡೆಯಂ ಬೋಳಿಸಿಕೊಳ್ವಂತೆ" ಎಂಬ ಮಾತು ಬರುತ್ತದೆ. ಪಗರಣಗಳ ವೇಷವನ್ನು ಹಾಕಿಕೊಂಡವರು ಅನೇಕ ದಿವಸ ಅದೇ ವೇಷದಲ್ಲಿದ್ದು ಆಟಗಳನ್ನಾಡುತ್ತಿದ್ದರೆಂದೂ, ಸ್ತ್ರೀಯರು ಮತ್ತು ಸನ್ಯಾಸಿಯರ ವೇಷಗಳನ್ನು ಧರಿಸಿಕೊಳ್ಳುವುದಕ್ಕಾಗಿ ಗಡ್ಡ, ಮೀಸೆ, ಮುಂಡೆಗಳನ್ನು ಬೋಳಿಸಿಕೊಳ್ಳುತ್ತಿದ್ದರೆಂದೂ ಇದರಿಂದ ಸೂಚಿತವಾಗುತ್ತದೆ. ಹೆಂಗಸರ ಪಾತ್ರಗಳನ್ನು ಗಂಡಸರೇ ಧರಿಸುತ್ತಿದ್ದರೆಂದೂ ಇದರಿಂದ ಪರ್ಯಾಯವಾಗಿ ಧ್ವನಿತವಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಹೆಗ್ಗಡೆ ಎಂಬ ಊರಿನ ಜಾತ್ರೆಯಲ್ಲಿ ಒಟ್ಟಿಗೆ ನಾಲು ದಿನ 'ಪಗಣ' ನಡೆಯುವುದನ್ನು ಇಲ್ಲಿ ನೆನೆಯಬಹುದು. ಈಗಲೂ ಪಗಣಗಳಲ್ಲಿ ಸ್ತ್ರೀಯರು ವೇಷಧರಿಸುವುದಿಲ್ಲ.[26]

ಪಗರಣಗಳ ವಸ್ತುವನ್ನು ಕುರಿತು ಹೆಚ್ಚಿನ ಸಂಗತಿಗಳು ತಿಳಿದು ಬರುವುದಿಲ್ಲ. ಪಗರಣಗಳಲ್ಲಿ ವೇಷದ ಆನೆಗಳು, ಹಾವಿನ ಬೊಂಬೆಗಳು ಇರುತ್ತಿದ್ದುವು. "ಪಗರಣದ ಆನೆಯಂತೆ......ಪ್ರೇಕ್ಷಕರ್ಗೆ ರಂಜಿಸುವ ಬಹಿರಾಳಾಪದ ಡೊಂಬನಲ್ಲದೆ"–(ಧರ್ಮಾಮೃತ, ೮–೯೪). (ನಾನು ನೋಡಿದ 'ಪಗಣ'ದಲ್ಲಿ ವೇಷದ ಸಿಂಹ, ಹುಲಿಗಳು ಇದ್ದುವು.) ಅಲ್ಲಿಯ ಕತೆಗಳಲ್ಲಿ ರಾಜನ ಪಾತ್ರವಿರುತ್ತಿತ್ತು. 'ಪಗರಣದ ಅರಸ' ಎನ್ನುವುದು ತಮಾಷೆಯ ಮಾತಾಗಿ ಸಮಾಜದಲ್ಲಿ ಬಳಕೆಯಾಗುತ್ತಿತ್ತು.[27] ಏಕೆಂದರೆ, ಅವನು ವೇಷದಲ್ಲಿ ಮಾತ್ರ ರಾಜ. ನಿಜದಲ್ಲಿ ಅತ್ಯಂತ ಸಾಮಾನ್ಯ ವ್ಯಕ್ತಿ. ಪಗರಣದ ವಾದ್ಯಗಳು ಹಳ್ಳಿಗಳ ಕೆಳವರ್ಗದ ಜನರ ಒರಟುವಾದ್ಯಗಳು: ಅವು ಕೂಡ ಜನರ–ಸುಸಂಸ್ಕೃತ ವರ್ಗದವರ–ನಗೆಗೆ ಗುರಿಯಾಗಿದ್ದುವು.[28] (ಧರ್ಮಾಮೃತದ ಪ್ರಕಾರ, ಹೊಲೆಯರು ಬಡಿಯುತ್ತಿದ್ದ ಪರೆ (=ಹರೆ)ಗಳಿಗನುಗುಣವಾಗಿ ಪಗರಣಿಗರು ಕುಣಿಯುತ್ತಿದ್ದರು, ಜನರು ನೋಡಿ ನಗುತ್ತಿದ್ದರು. ವಿನೋದವೇ ಪ್ರಧಾನ

---

26 ಮೋಳಿಗೆಯ ಮಾರಯ್ಯನ ವಚನವೊಂದರಲ್ಲಿ ಬರುವ ಈ ಮಾತು ಪಗರಣದಲ್ಲಿ ಸ್ತ್ರೀಯರು ಪಾತ್ರಧರಿಸುತ್ತಿದ್ದರೆಂಬ ಅರ್ಥವನ್ನು ಕೊಡಬಹುದು– "......ಮುಖ ಬಿರ ಬೋಳಾದವೇನೋ ಹುಸಿ ಕೊಲೆ ಕಳವು ಪಾರದಾರ ಅತಿಕಾಂಕ್ಷೆಯ ಬಿಡದನ್ನಕ್ಕರ. ಗಡ್ಡ ಜಡೆ ಕಂಥೆ ಲಾಂಛನದ ತೊಟ್ಟು ಭೈರವನಂತೆ ಜಗದೊಳಗೆ ಸುಳಿವ ಬದ್ದುಕತನದಲ್ಲಿ ದ್ರವ್ಯಕ್ಕೆ ಗೊತ್ತೆಯನರಿವ ದೊಡ್ಡಮುದ್ರೆಯ ಕಳ್ಳರು ತುರುಬು ಚಿಮ್ಮುರಿಗಳ ಕಟ್ಟಿ ಪಗರಣದ ಸಿರಿಗುರುಳ ಬಾಲೆಯರ ಮುಂದೆ ತಿರುಗುತ್ತಿಪ್ಪ ಬರಿವಾಯ ಭುಂಜಕರುಗಳು ತಾವು ಅರಿವುಳ್ಳವರೆಂದು ಬೀಗಿ ಬೆರೆಯುತ್ತಿದ್ದರು......" (ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು. ಸಂ. ಚೆನ್ನಪ್ಪ ಉತ್ತಂಗಿ ಮತ್ತು ಸಂ. ಶಿ. ಭೂಸನೂರ ಮಠ, ೭೦ನೇ ವಚನ). ಇಲ್ಲಿ ವೇಷಧಾರಿಗಳಾದ ಗುರುಗಳು ವೇಷದಿಂದ ಮರುಳು ಮಾಡುವ ('ಪಗರಣದ') ಹೆಣ್ಣುಮಕ್ಕಳ ಮುಂದೆ ಓಡಾಡುವ ಚಿತ್ರವಿದೆಯೇ ಹೊರತು, ಪಗರಣದಲ್ಲಿ ಪಾತ್ರವಹಿಸುವ ಸ್ತ್ರೀಯರ ಚಿತ್ರವಿಲ್ಲ.

27 ನೋಡಿ: ಆದಿಪುರಾಣ, ೧೨–೯೮; ಧರ್ಮಾಮೃತ, ೧–೧೮೮; ಚೆನ್ನಬಸವ ಪುರಾಣ ೮–೧೨,

28 "......ಪಗರಣದ ವಾದ್ಯದಂತೆ ನಗೆಗೆಡೆಯಾಗುತ್ತಿಪ್ಪರು"–ಚೆನ್ನಬಸವಣ್ಣನವರ ವಚನಗಳು (ಸಂ. ಆರ್. ಸಿ. ಹಿರೇಮಠ), ಪು. ೩೪೩. (ಇದಕ್ಕೆ "ಪಗರಣದ ವಾದ್ಯದವರಂತೆ..." ಎಂಬ ಪಾಠಾಂತರವಿದೆ.)

ವಾಗಿದ್ದ ಪಗರಣಗಳು ಒರಟುಮಾತು, ಅಶ್ಲೀಲಗಳಿಂದ ತುಂಬಿರುತ್ತಿದ್ದುವು. ಅವುಗಳನು ನೋಡಲು ಸ್ತ್ರೀಯರಿಗೆ ಅವಕಾಶ ಕೊಡಬಾರದೆಂದು ಚಂದ್ರರಾಜನು ಎಚ್ಚರಿಕೆ ಕೊಟ್ಟಿದ್ದಾನೆ:

ಕೊಳಲ ಬೆಡಂಬೆಯು (ಬೆದಂಡೆಯ) ಪಗರಣ
ದಳಿಗಳ ಪರದೈವಮಾಡುವವರ್ಗಳ ಮಾತಿ
ಗುಳಿಪರ ಪರಜಾತೆಯುವರ್ಗಳ
ತುಳಿಗಳ ದೆಸೆಬೋಗಲೀಯಲಾಗದು ವಧುವಂ॥29

ಅವನ ಪ್ರಕಾರ. ಪಗರಣವು ಗೌರವಸ್ಥರು ನೋಡುವಂತಹುದಲ್ಲ. ಅದು ಜನರ ಮನಸ್ಸನ್ನು ವಿಭ್ರಮೆಗೊಳಿಸತಕ್ಕದ್ದು. ಪಗರಣಗಳು ಜಾನಪದವಾದ್ದರಿಂದ, ಅವುಗಳಲ್ಲಿ ಶಿಷ್ಟಕಲೆಯ ಅಥವಾ ಸಾಹಿತ್ಯದ ಲಕ್ಷಣವನ್ನು ಕಾಣಲು ಸಾಧ್ಯವಿಲ್ಲ. ಆದ್ದರಿಂದಲೇ ವಿದ್ವಾಂಸರು ಅವುಗಳಲ್ಲಿ ಲಕ್ಷಣವನ್ನು ನೋಡುವುದಿಲ್ಲ ('ಲಕ್ಷಣಮಂ ನೋಡರ್') ಎಂದು ನಯಸೇನ ಹೇಳುತ್ತಾನೆ.

ಆ ಕಾರಣದಿಂದ ಪಗರಣದ ಶೌರ್ಯವಾಗಲಿ, ದುಃಖವಾಗಲಿ. ಗಂಭೀರವಾದ ಸನ್ನಿವೇಶವಾಗಲಿ–ಎಲ್ಲವೂ ನಗೆಯನ್ನು ಉಕ್ಕಿಸುತ್ತಿದ್ದುವು. "ದುಃಖವಿಲ್ಲದ ಅಕ್ಕೆ, ಹಗರಣಿಗನ ತೆಜನಂತೆ" ಎಂಬ ಬಸವಣ್ಣನವರ ಮಾತನ್ನು ಇಲ್ಲಿ ನೋಡಬಹುದು. ಹಗರಣಿಗರ ಉದ್ದೇಶವೂ ವಿನೋದವೇ ಹೊರತು ಬೇರೆ ರೀತಿಯ ಅನುಭವಗಳನ್ನು ತಂದುಕೊಡುವುದಾಗಿರಲೇ ಇಲ್ಲವೆಂದು ತೋರುತ್ತದೆ (ಈ ಮಾತು ಇಂದಿಗೂ ನಿಜ.)

3

'ಹಗರಣ' ಎಂಬ ಮಾತಿಗೆ ಮೂಲಾರ್ಥದ ಜೊತೆಗೆ ಕ್ರಮೇಣ ತಮಾಷೆ, ವಿನೋದ ಎಂಬರ್ಥಗಳೂ ಬಂದುವು. ಕೆಳಗಿನ ಉದಾಹರಣೆಗಳನ್ನು ಗಮನಿಸಿ:

ನಗುತ ಭೂಪತಿಯೆದ್ದನಲ್ಲಿಂದ ಮುಂದಣು
ಜ್ಜುಗವನವರೆ ಬಲ್ಲರದರ
ಸೊಗಸನಂತಿಂತೆಂದು ನುಡಿದೆನಾದರೆ ಬಲು
ಹಗರಣವಹುದಂತಿರಲಿ॥30

ಉಗುರ ತಿದ್ದಿಸುವುದು, ಮುಗುಳುನಗೆ ನಗಿಸುವುದು
ಹಗರಣದ ಮಾತ ನುಡಿಸುವುದು ಬೋನದ
ಬಗೆಯ ನೋಡೆಂದ ಸರ್ವಜ್ಞ॥31

ಇಲ್ಲಿ "ವಿನೋದ" ಎಂಬರ್ಥವೇ ಮುಖ್ಯವಾಗಿದೆಯೆಂಬುದನ್ನು ಗಮನಿಸಬೇಕು. ಹಗರಣಗಳಲ್ಲಿ ಭಾಗವಹಿಸುತ್ತಿದ್ದ ಜನಗಳಲ್ಲಿ ಅವ್ಯವಸ್ಥೆ, ಗಲಾಟೆ, ಶಿಸ್ತಿನ ಅಭಾವ ಇವುಗಳಿರುತ್ತಿದ್ದುದರಿಂದ, ಕ್ರಮೇಣ 'ಹಗರಣ'ವು ಜಗಳ, ಗಲಾಟೆ, ಅವ್ಯವಸ್ಥೆ, ತೋರಿಕೆ, ನಿಂದೆ ಇತ್ಯಾದಿ ಹೀನಾರ್ಥಗಳನ್ನು ಪಡೆಯಿತು. ಈ ಅರ್ಥಗಳು ವಚನಕಾರರ ಕಾಲಕ್ಕೇ ಬಂದಿದ್ದುವು. ಮುಂದೆ ಜಗಳ, ಹಾಸ್ಯಾಸ್ಪದ ಎಂಬ ಅರ್ಥವೇ ಪ್ರಮುಖವಾಯಿತು.

---

29 ಮದನ ತಿಲಕ (ಸಂ. ಆರ್. ಎಸ್. ಪಂಚಮುಖಿ), ೮–೫೯. ಈ ಪದ್ಯದ ಪಾಠ ಬಹಳವಾಗಿ ಕೆಟ್ಟಿದೆ.

30 ಭರತೇಶ ವೈಭವ, ೧೦–೧೦೦

31 ಸರ್ವಜ್ಞವಚನಗಳು (ಸಂ. ಉತ್ತಂಗಿ ಚನ್ನಪ್ಪ, ಧಾರವಾಡ, ೧೯೨೪) ಪು. ೩೦೮

ಮಗನ ಮದುವೆಯು ಎಂದು ಸಾಲವನು ಮಾಡಿ ನೀ
ಸುಗುಣೆಯೆನ್ನಿಸಿಕೊಳ್ಳಲು ವ್ಯಯಮಾಡಿದೆ
ಹಗರಣವ ಪಡಿಸಿವರೆ ಸಾಲಗಾರರು ಬಂದು
ಬಗೆ ಬಗೆಯೊಳವರ ಕಾಲ್ಗೆರಗಿ ಬಿದ್ದಿರುವೆ॥[32]

ಹಗರಣವನು ಮಾಡುವಳೆಂದು ನೆನೆಯುವೆ
ಮಿಗೆ ಯೋಚಿಸಿ ನೋಡು ಮನದಿ॥[33]

ಇಲ್ಲಿ ಜಗಳ, ರಾದ್ಧಾಂತ ಎಂಬ ಅರ್ಥವೇ ಮುಖ್ಯವಾದುದು. ಹೊಸಗನ್ನಡದಲ್ಲಿಯೂ ಹಗರಣ ಮಾತಿಗೆ ಹಾಸ್ಯಾಸ್ಪದ, ಜಗಳ, ಗಲಾಟೆ ಎಂಬರ್ಥವೇ ಮುಖ್ಯವಾದುದು.

'ಪಗರಣ' ಮಾತು ಕ್ರಿ.ಶ. ೧೦೦೭ರ ಲಕ್ಕುಂಡಿ ಶಾಸನದಲ್ಲಿ ಬಂದಿರುವುದನ್ನು ಗಮನಿಸಬಹುದು:

ಪಗರಣಂ ಅಣ್ಣ, ಮೆಚ್ಚು ಪಸಿ. ಧ್ವಾಂಕ್ಷಿಯೆ ಬೂದಿಯ ಬೊಟ್ಟು. ಗಂಡವಾ।
ತು ಉಗಿಬಗಿ. ಕೀರ್ತಿ ಕುಪ್ಪಸಂಜಿ. ಮುತ್ತರ ಮುಂಡಲೆ ಪೆಂಪು. ವಿಕ್ರಮಂ।
ಭಗವತಿಯ ಪಿಜು. ಶೌಚಗುಣಂ ಅತ್ತಿಯ ಪಣ್. ಎನಿಪ ವಿಳಪ್ರಂಪರಂ।
ತೆಗಳ್ವುದು ಉದಾರ ಚಾರುಚರಿತಪ್ರಭೆಯಿಂ ಪಡೆವಳ್ಳ ತೈಲಪ॥[34]

ಸಾಮಾನ್ಯರ, ದುಷ್ಟರ ಶೌರ್ಯವೆಲ್ಲವೂ ಕೇವಲ 'ಪಗರಣ'–ಅರ್ಥಾತ್, ಅದೆಲ್ಲವೂ ಪನಿದ್ದರೂ ನಟನೆ, ತೋರಿಕೆ, ತಿರುಳಿಲ್ಲದ ಆಬ್ಬರ ಎಂಬುದು ಪದ್ಯದ ಮೊದಲ ಉಕ್ತಿಯ ಅರ್ಥ. ಎಂದರೆ, 'ಪಗರಣ' ಮಾತಿಗೆ ಹೀನಾರ್ಥ ಕ್ರಿ.ಶ. ೧೦೦೭ರ ಕಾಲಕ್ಕೇ ಪ್ರಾಪ್ತವಾಗಿತ್ತೆಂದು ಹೇಳಲವಕಾಶವಾಗುತ್ತದೆ. ೧೩–೧೪ನೇ ಶತಮಾನಗಳ ಬಳಿಕ ಹಾಸ್ಯಾಸ್ಪದವಾದ ಜಗಳ. ಗಲಾಟೆ ಎಂಬರ್ಥಗಳು ರೂಢಿಗೆ ಬಂದಂತೆ ತೋರುತ್ತದೆ. ಪುರಂದರ ದಾಸರ ಕಾಲವಾದ ಬಳಿಕ. ಎಂದರೆ ಹದಿನಾರನೇ ಶತಮಾನದ ಬಳಿಕ 'ಹಗರಣ' ಎಂಬ ಮಾತು ವೇಷ ಎಂಬರ್ಥವನ್ನು ಬಿಟ್ಟುಕೊಟ್ಟು. ಬರಿಯ ದೊಂಬಿ, ಜಗಳ ಎಂಬರ್ಥವನ್ನು ಮಾತ್ರ ಉಳಿಸಿಕೊಂಡು ಬಂದಿತು. ಕ್ರಿ.ಶ. ೧೫೮೫ರ ಚೆನ್ನಬಸವ ಪುರಾಣದಲ್ಲಿ 'ಹಗರಣ'ದ ಉಲ್ಲೇಖವಿದೆ (೮–೧೨). ಅದಕ್ಕಿಂತ ಬಹುಶಃ ಈಚಿನ. ಸು. ೧೬೦೦–೫೦ರ ನರಹರಿಯ ತೊರವೆ ರಾಮಾಯಣದಲ್ಲಿ "ಹಗರಣದ ಹೊಸನಾಟಕ" ಎಂಬ ಮಾತು ಬರುತ್ತದೆ. ಇದನ್ನು ಈಚಿನ ಒಂದು ಸ್ಥೂಲಮಿತಿಯಾಗಿ ಇಟ್ಟುಕೊಂಡು 'ಪ(ಹ)ಗರಣ' ಮಾತಿನ ಅರ್ಥ ಕಾಲಕ್ರಮೇಣ ಬದಲಾಗುತ್ತಾ ಬಂದುದನ್ನು ಕೆಳಗೆ ತೋರಿಸಿದೆ:

ಆದಿಯಿಂದ(?) ಕ್ರಿ.ಶ.ಸು. ೧೦೦೦ದ ವರೆಗೆ	ಪಗರಣ = ಲಘುನಾಟಕ. ವೇಷ. ಜನಪದ ನಾಟಕ.
ಕ್ರಿ.ಶ.ಸು. ೧೦೦೦೦ದಿಂದ ಕ್ರಿ.ಶ.ಸು. ೧೬೦೦ರ ವರೆಗೆ	ಪಗರಣ = ೧. ಲಘುನಾಟಕ. ವೇಷ; ಜನಪದ ನಾಟಕ (ಹಗರಣ) ೨. ತೋರಿಕೆ; ಆಡಂಬರ; ವ್ಯರ್ಥ ಪ್ರದರ್ಶನ, ಹಾಸ್ಯಾಸ್ಪದ.
ಕ್ರಿ.ಶ.ಸು. ೧೬೦೦ರಿಂದ ಆಧುನಿಕ ಕಾಲದ ವರೆಗೆ	ಹಗರಣ = ೧. ತೋರಿಕೆ; ಆಡಂಬರ; ವ್ಯರ್ಥಪ್ರದರ್ಶನ, ಹಾಸ್ಯಾಸ್ಪದ

---

32 ಶ್ರೀಪುರಂದರದಾಸರ ಸಾಹಿತ್ಯ–೨: ಆರ್ತಭಾವ (ಧಾರವಾಡ ೧೯೬೪) ಪು. ೭೦

33 ಜಿನದತ್ತರಾಯ ಚರಿತೆ, ೪–೧೫೯.

34 B. K. I., I i NO ೫೨, ೧೦೦೭ ಈ ಪದ್ಯದ ವ್ಯಾಖ್ಯಾನಕ್ಕೆ ನೋಡಿ: ಎಂ. ಚಿದಾನಂದಮೂರ್ತಿ: 'ಭಗವತಿಯೇಜು ಮತ್ತು ಲಕ್ಕುಂಡಿ ಶಾಸನದ ಒಂದು ಪದ್ಯ' (ಕರ್ನಾಟಕ ಭಾರತಿ, ೫–೧, ೧೫೫–೧೬೦).

೨. ಜಗಳ; ಗಲಾಟೆ; ಅದರಲ್ಲೂ ಹಾಸ್ಯಾ-ಸ್ಪದವಾದ ಜಗಳ, ಗಲಾಟೆ.

ಈಗ ಹಗರಣ= ಜಗಳ, ಗಲಾಟೆ, ಅದರಲ್ಲೂ ಹಾಸ್ಯಾಸ್ಪದವಾದ ಜಗಳ, ಗಲಾಟೆ.

ಮೇಲೆ ಕೊಟ್ಟಿರುವ ಕಾಲಮಿತಿ ಬಹಳಸ್ಥೂಲವಾದುದು

೪

ಹಾಲಕ್ಕಿ ಒಕ್ಕಲಿಗರಲ್ಲಿ 'ಹಗಣ', ಒಂದು ಜೀವಂತ ಸಂಪ್ರದಾಯ ಹಗರಣವು ಒಂದು ಮನರಂಜನೆಯ ಸಾಧನವಾಗಿ ಇಂದು ಕರ್ನಾಟಕದಿಂದ ಬಹುಮಟ್ಟಿಗೆ ಲುಪ್ತವಾಗಿ, ಅದು ಬರಿಯ ಮಾತಿನಲ್ಲಿ, ಹೀನಾರ್ಥ ಸಮೇತವಾಗಿ ಉಳಿದುಕೊಂಡಿದೆ ಆದರೆ ಉತ್ತರ ಕನ್ನಡ ಜಿಲ್ಲೆಯ ಕೆಲವು ಹಿಂದುಳಿದ ಜನಾಂಗಗಳಲ್ಲಿ ಅದು ಇನ್ನೂ ಜೀವಂತ ಕಲೆಯಾಗಿ ಉಳಿದುಕೊಂಡು ಬಂದಿರುವುದು ಅತ್ಯಂತ ಸೋಜಿಗದ ಸಂಗತಿಯಾಗಿದೆ.[35] ಹಿಂದೆ ಕರ್ನಾಟಕದಲ್ಲಿ ಇದ್ದ ಪಗರಣಕ್ಕೂ ಈಗ ಇರುವ 'ಹಗಣ'ಕ್ಕೂ ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದಾದರೂ, ಈಗಿನ ಹಗಣವು ಹಿಂದಿನ ಪಗರಣಕ್ಕೆ ಸಂಬಂಧಿಸಿದ ಅನೇಕ ಉಲ್ಲೇಖಗಳನ್ನು ಸರಿಯಾದ ರೀತಿಯಲ್ಲಿ ವ್ಯಾಖ್ಯಾನಿಸುವುದಕ್ಕೆ ಸಹಾಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕಡಲತಡಿಯ ಊರುಗಳಾದ ಹೊನ್ನಾವರ, ಕುಮಟ, ಗೋಕರ್ಣ ಪ್ರದೇಶಗಳಲ್ಲಿ ಹಾಲಕ್ಕಿ ಒಕ್ಕಲಿಗರು, ಮುಕ್ರಿಗಳು, ಅಂಬಿಗರು, ಹರಕಂತರು ಮುಂತಾದ ಬಹು ಹಿಂದುಳಿದ ಜನಾಂಗಗಳಿವೆ. ಇವರಲ್ಲಿ 'ಹಗಣ'ವನ್ನು ನಡಸುವವರೆಂದರೆ ವಿಶೇಷವಾಗಿ ಹಾಲಕ್ಕಿ ಒಕ್ಕಲಿಗರು ಮತ್ತು ಮುಕ್ರಿಗಳು. ಅದರಲ್ಲೂ ಹಾಲಕ್ಕಿ ಒಕ್ಕಲಿಗರಲ್ಲೇ ಅದು ಹೆಚ್ಚು. ಹಾಲಕ್ಕಿ ಒಕ್ಕಲಿಗರ ಪ್ರಧಾನ ವೃತ್ತಿ ವ್ಯವಸಾಯ ಮತ್ತು ಮೀನುಗಾರಿಕೆ. ಇಂದಿಗೂ ಬಹುತೇಕ ಅವಿದ್ಯಾವಂತರೇ ಇರುವ ಈ ಸಮಾಜ ಈಗ ನಿಧಾನವಾಗಿ ನಾಗರಿಕತೆಯತ್ತ ಕಣ್ಣು ಹಾಯಿಸುತ್ತಿದೆ. ಮೂಢನಂಬಿಕೆ, ಕುಡಿತ, ಜೂಜು, ಅಜ್ಞಾನ, ಪಾರಂಪಾರಿಕ ದಾಸ್ಯಗಳಿಗೆ ತುತ್ತಾಗಿರುವ ಈ ಜನಾಂಗದಲ್ಲಿ ಬಹು ಹಿಂದಿನ ಕಾಲದ ಪದ್ಧತಿಯೊಂದು ಹೇಗೋ ಉಳಿದುಕೊಂಡು ಬಂದಿರುವುದು ನಿಜವಾಗಿಯೂ ಆಶ್ಚರ್ಯದ ಸಂಗತಿಯಾಗಿದೆ. 'ಹಗಣ'ವು ವರ್ಷವಿಡೀ ದುಡಿದು ಬೇಸತ್ತ ಈ ಜನಕ್ಕೆ ಮನರಂಜನೆಯನ್ನೂ ಹೊಸ ಹುಮ್ಮಸ್ಸನ್ನೂ ತಂದುಕೊಡುವ ಸಾಧನಗಳಲ್ಲೊಂದಾಗಿದೆ. ಹಾಲಕ್ಕಿ ಒಕ್ಕಲಿಗರು 'ಪಗಣ'ವೆಂದು ಕರೆಯುವುದನ್ನೇ ಅದೇ ಪ್ರದೇಶದ ಉಳಿದ ವಿದ್ಯಾವಂತ ವರ್ಗದವರು 'ಹಗರಣ'ವೆಂದು ಸ್ಪಷ್ಟವಾಗಿ ಹೆಸರಿಸುವುದರಿಂದ, 'ಪ(ಪ)ಗರಣ'ವೇ ಈಗಿನ 'ಹಗಣ'ವೆಂಬ ಬಗ್ಗೆ ಯಾವುದೇ ಅನುಮಾನವೂ ಇಲ್ಲ.

---

35 ಎರಡು ವರ್ಷಗಳ ಹಿಂದೆ ಪಗರಣ ಮತ್ತು ಯಕ್ಷಗಾನಗಳ ಬಗ್ಗೆ ಇದ್ದಿರಬಹುದಾದ ಸಂಬಂಧವನ್ನು ಕುರಿತು ಡಾ. ಶಿವರಾಮ ಕಾರಂತರೊಡನೆ ಪ್ರಸ್ತಾಪ ಮಾಡಿದಾಗ, ಅವರು ಹಗರಣವು ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಲೂ ಇದೆಯೆಂದು ಯಾರೋ ಹೇಳಿದ ನೆನಪು ತಮಗಿರುವುದಾಗಿ ತಿಳಿಸಿದರು. ಹಗರಣ ಈಗಲೂ ಜೀವಂತವಾಗಿದೆಯೆಂಬ ಸಂಗತಿ ನನಗೆ ತಿಳಿದಿದ್ದು ಅವರಿಂದಲೇ. ಆಮೇಲೆ ಕುಮಟಾ ತಾಲೂಕಿನವರನ್ನು ವಿಚಾರಿಸಿದಾಗ ಆ ಸಂಗತಿ ಇನ್ನೂ ದೃಢವಾಯಿತು. ಈ ಬಗ್ಗೆ ನನಗೆ ಸಹಾಯ ಮಾಡಿರುವ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಶ್ರೀ. ಕೆ. ಪಿ. ಭಟ್, ಕುಮಟಾ ತಾಲೂಕಿನ ಉಂಚಗಿ ಗ್ರಾಮದ ಪ್ರಭಾಕರ್ ಹೆಗ್ಗಡೆ ಮತ್ತು ಗಜಾನನ ಹೆಗ್ಗಡೆ ಅವರಿಗೆ ಕೃತಜ್ಞನಾಗಿದ್ದೇನೆ. ಅದೇ ತಾಲೂಕಿನವರಾದ ಸುಪ್ರಸಿದ್ಧ ಜಾನಪದ ವಿದ್ವಾಂಸ ಡಾ. ಎಲ್. ಆರ್. ಹೆಗ್ಗಡೆಯವರಿಂದಲೂ ಮಾಹಿತಿ ದೊರಕಿದೆ. ಅದೇ ತಾಲೂಕಿನ ಮೂರೂರಿನ ಎಲ್. ಜಿ. ಭಟ್ ವಿಸ್ತಾರವಾಗಿ ಕಾಗದ ಬರೆದು ಅನೇಕ ಸಂಗತಿಗಳನ್ನು ತಿಳಿಸಿದ್ದಾರೆ. ('ಹಗಣ'ದ ಬಗ್ಗೆ ಅವರು ಲೇಖನವನ್ನೂ ಬರೆದಿದ್ದಾರೆ. ಕನ್ನಡ ಪ್ರಭ, ೨೩-೭-೧೯೭೭). ಇವರಿಗೂ ನಾನು ಕೃತಜ್ಞ.

ನಾನು ಗಮನಿಸಿರುವಂತೆ, ಮೂರು ರೀತಿಯ ಹಗಣಗಳುಂಟು.

೧. ಜಾತ್ರೆ, ಉತ್ಸವಗಳಲ್ಲಿ ನಡೆಯುವ ಹಗಣಗಳು–ಇವು ಒಂದೇ ಊರಲ್ಲಿ, ಸಾರ್ವಜನಿಕರಿಗಾಗಿ ನಡೆಯುವಂಥವು.

೨. ಸುಗ್ಗಿ ಹಗಣ–ಹೋಳೀ ಹಬ್ಬಕ್ಕೆ ಐದು ದಿನ ಮುಂಚಿನಿಂದ ನಡೆಯುವಂಥವು. ಇಲ್ಲಿ ವೇಷ ಹಾಕಿದವರು ಊರೂರಿಗೆ ಹೋಗಿ ಹಗಣ ಕುಣಿದು ಬರುತ್ತಾರೆ. ಇದೂ ಸಾರ್ವಜನಿಕರಿಗಾಗಿ ನಡೆಯುವಂಥದು.

೩. ಹಾಲಕ್ಕಿ ಸಮಾಜದ ಯಜಮಾನ ಅಪ್ಪಣೆ ಕೊಟ್ಟು ತನ್ನ ಮನೆಯ ಮುಂದೆ ನಡೆಸುವ ಹಗಣಗಳು: ಇವು ಆ ಸಮಾಜದ ಜನರಿಗೆ ಮಾತ್ರ ಸೀಮಿತ (ಬೇರೆಯವರೂ ಹೋಗಿ ಹಗಣವನ್ನು ನೋಡುವುದಕ್ಕೆ ಅಡ್ಡಿಯೇನೂ ಇರುವುದಿಲ್ಲ).

ಮೇಲಿನ ಮೂರೂ ಸ್ವರೂಪತಃ ಬೇರೆ ಬೇರೆಯೇನೂ ಅಲ್ಲ: ಎಲ್ಲಕ್ಕೂ ಕೆಲವು ಸಮಾನ ಲಕ್ಷಣಗಳಿವೆ. ವ್ಯತ್ಯಾಸವಿರುವುದು ಹಗಣಗಳು ನಡೆಯುವ ಪರಿಸರದಲ್ಲಿ (ಇನ್ನೂ ಬೇರೆ ಪರಿಸರಗಳಲ್ಲಿ ಹಗಣಗಳು ನಡೆಯಬಹುದು–ಆ ಬಗ್ಗೆ ನನಗೆ ಮಾಹಿತಿ ಸಾಲದು).

೧. ಜಾತ್ರೆ ಹಗಣ

ಕೆಲವು ಸುಪ್ರಸಿದ್ಧ ಜಾತ್ರೆಗಳ ಅಂಗವಾಗಿ ಹಗಣಗಳನ್ನು ನಡೆಸುತ್ತಾರೆ. ನಾನು ಸಂದರ್ಶಿಸಿ ಪ್ರತ್ಯಕ್ಷವಾಗಿ ಪರಿಶೀಲಿಸಿದ ಒಂದು ಜಾತ್ರೆ ಹಗಣವನ್ನು ವರ್ಣಿಸುತ್ತೇನೆ.[36] ಕುಮಟಾ ತಾಲೂಕಿನ ಹೆಗಡೀಪುರದ ದೇವಿಕಾನ ಹುಣ್ಣಿಮೆಯ (=ದೇವಿಯ ಕಾನಿನ ಹುಣ್ಣಿಮೆ. ಕಾನು=ಕಾಡು) ಹಬ್ಬದ ಹಿಂದಿನ ರಾತ್ರಿ ನಡೆಯುವ ಹಗಣ ಸುಪ್ರಸಿದ್ಧವಾದುದು. ಊರ ಹೊರಗಡೆ, ಗದ್ದೆಗಳ ಮಧ್ಯೆ ದುರ್ಗಾದೇವಿಯ ಸುಂದರ ದೇವಾಲಯವಿದೆ. ಪಕ್ಕದಲ್ಲೇ ಬೀರನ ಗುಡಿಯೂ ಮಾಸ್ತಿಗುಡಿಯೂ ಇದೆ. ಆ ರಾತ್ರಿ ದೇವಿಯನ್ನು ಚನ್ನಾಗಿ ಅಲಂಕರಿಸಿ, ಊರಿನ ಬೇರೆ ಬೇರೆ ದೇವಾಲಯಗಳಿಗೆ ಒಯ್ದು ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೆ ಮೆರವಣಿಗೆಯಲ್ಲಿ ಹಿಂದಕ್ಕೆ ತರಲಾಗುತ್ತದೆ. ಉತ್ಸವವು ನಿಧಾನವಾಗಿ ದೇವಸ್ಥಾನದ ಕಡೆಗೆ ಬಂದಂತೆ ಗದ್ದೆಗಳ ಮಧ್ಯೆ ದಾರಿಬಿಟ್ಟು ಇಬ್ಬದಿಗಳಲ್ಲೂ ಸಾವಿರಾರು ಜನರು ನೆರೆಯುತ್ತಾರೆ. ಜನರು ಮಧ್ಯಕ್ಕೆ ಬಂದು ವೇಷಧಾರಿಗಳಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಲು ಬೆಂಕಿಯ ಕೊಳ್ಳಿಗಳನ್ನು ಹಿಡಿದು ಹುಡುಗರು ಉದ್ದಕ್ಕೂ ದಾರಿಯ ಅಂಚಿನಲ್ಲಿ ಓಡಿಬರುತ್ತಾರೆ. ಮೈತುಂಬ ಕೆಸರನ್ನು ಬಳಿದುಕೊಂಡು, ಕೆಸರಲ್ಲಿ ಅದ್ದಿದ ಮರದ ಟೊಂಗೆಗಳನ್ನು ಹಿಡಿದು, ಅಥವಾ ಕೈಲಿ ಕೇರೆಹಾವು ಹಿಡಿದು ಕೆಲವರು ಓಡಿಬರುತ್ತಾರೆ. ಬೆಂಕಿ, ಕೆಸರು, ಹಾವುಗಳಿಗೆ ಹೆದರಿದ ಜನ ರಸ್ತೆಯ ಅಂಚಿನಲ್ಲಿ ನಿಲ್ಲುತ್ತಾರೆ. ಮಧ್ಯೆ ಹಗಣ ನಡೆಯುತ್ತದೆ.

ಹಗಣವೆನ್ನುವುದು ಬೇರೆ ಬೇರೆ ವೇಷಗಳ ಮಾಲಿಕೆ. ಎತ್ತರವಾದ ಮರದ ಕಾಲುಗಳನ್ನು ಕಟ್ಟಿಕೊಂಡು ನಡೆಯುವ ವೇಷಗಳಿರುತ್ತವೆ. (ಇದನ್ನು 'ಮರಗಾಲು' ಎಂದು ಕರೆಯುತ್ತಾರೆ.). ಸಿಂಹದ ವೇಷವನ್ನು ಹಾಕಿದವನು ಮಂಚದ ಮೇಲೆ ಗರ್ಜಿಸುತ್ತಿರುತ್ತಾನೆ: ಆ ಸಿಂಹವನ್ನು ಕೆಳಗೆ ಮಂಚದ ಮೇಲೆ ಹೊತ್ತಿರುತ್ತಾರೆ. ಇಪ್ಪತ್ತು ಮೂವತ್ತು ಜನ ಕೈಯಲ್ಲಿ ಉದ್ದಕ್ಕೂ ಬೊಂಬುಗಳನ್ನು ಹಿಡಿದು, ಕಡಲಲ್ಲಿ ದೋಣಿಯನ್ನು ನಡೆಸುವ ಅಂಬಿಗರಂತೆ ನಟಿಸುತ್ತ, ಕುಣಿಯುತ್ತ, ಅಂಬಿಗರ ಹಾಡಿನ ಪಲ್ಲವಿಯನ್ನು ಕೂಗುತ್ತ ಉದ್ದಕ್ಕೂ ಓಡಾಡುತ್ತಾರೆ.ರಾಮ-ಲಕ್ಷ್ಮಣ-ಸೀತೆ, ಹಿರಣ್ಯಕಶಿಪು-ಪ್ರಹ್ಲಾದ-ನರಸಿಂಹ, ಭೀಷ್ಮ–ಕರ್ಣ ಮುಂತಾದ ಪೌರಾಣಿಕ ವೇಷಗಳನ್ನು ಧರಿಸಿದವರು ಇರುತ್ತಾರೆ. ಈ ಪಾತ್ರಗಳು ಮಂಚಗಳ ಮೇಲೆ ಏನೋ ಮಾತನಾಡುತ್ತಿರುತ್ತವೆ, ಕೂಗುತ್ತಿರುತ್ತವೆ; ಅದು ಯಾರಿಗೂ ಕೇಳಿಸುವುದಿಲ್ಲ. ನೆಲದ ಮೇಲೆ ಹುಲಿವೇಷದವರು ಕುಣಿಯುತ್ತಿರುತ್ತಾರೆ. ಕುಡುಕರ, ಪೋಲೀಸರ ವೇಷಗಳೂ

---

36 ಕುಮಟಾ ತಾಲೂಕಿನ ಹೆಗಡೀಪುರದಲ್ಲಿ ಈ ವರ್ಷ ಹಗಣವು ೫–೫–೧೯೭೪ರಂದು ನಡೆಯಿತು

ಉಂಟು. ಎಲ್ಲವೂ ಅಸ್ತವ್ಯಸ್ತ. ಜನ ಸಿಕ್ಕಲ್ಲಿ ಓಡುತ್ತಾರೆ; ಕೆಳಗೆ ಬೆಂಕಿ, ಮುಳ್ಳು. ಯಾರು ಯಾರನ್ನು ಬೇಕಾದರೂ ತಳ್ಳಿ ಹೋಗಬಹುದು, ಕಾಲು ತುಳಿಯಬಹುದು. ಇದೇ ನಿಜವಾದ ಹಗಣ: 'ಹಗರಣ' ಎಂಬ ಮಾತಿಗೆ ಹಾಸ್ಯಾಸ್ಪದ, ಗಲಾಟೆ, ಜಗಳ ಎಂಬರ್ಥಗಳು ಏಕೆ ಬಂದುವೆಂಬುದನ್ನು ತಿಳಿಯಬೇಕಾದರೆ ಹಗಣವನ್ನು ಒಮ್ಮೆ ನೋಡಬೇಕು.

ಈ ವೇಷಗಳು ದಾರಿಯಲ್ಲಿಯೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುತ್ತು ಹಾಕುತ್ತ ದೇವಸ್ಥಾನದ ಕಡೆ ಸಾಗಿದರೆ, ಅಸಾಧ್ಯ ಗದ್ದಲದ ಚಂಡೆ ಇತ್ಯಾದಿ ವಾದ್ಯಗಳ ಸಮೇತ ದೇವಿಯು ದೇವಸ್ಥಾನಕ್ಕೆ ಬಿಜಯಗೆಯ್ಯುತ್ತಾಳೆ. ಅಲ್ಲಿ ಭಕ್ತರು ಕೆಂಡತುಳಿಯುತ್ತಾರೆ. ಅದಾದನಂತರ ದೇವಿಗೆ ಮಂಗಳಾರತಿ ನಡೆಯುತ್ತದೆ. ಬಳಿಕ ದೇವಸ್ಥಾನದ ಮುಂದೆ ಉದ್ದಕ್ಕೂ ದಾರಿ ಬಿಡಿಸಿ ಜನರನ್ನು ಆಚೆ ಈಚೆ ಕೂರಿಸುತ್ತಾರೆ. ಇಲ್ಲಿ ಹಿಂದೆ ಮೆರವಣಿಗೆಯಲ್ಲಿ ಭಾಗವಹಿಸಿದ ಒಂದೊಂದು ವೇಷವೂ ನಿಧಾನ ವಾಗಿ ನಡೆದುಬಂದು, ತನ್ನ ಅಭಿನಯವನ್ನು ತೋರಿಸಿ ಮುಂದೆ ಹೋಗುತ್ತದೆ. ಆ ಪಾತ್ರಗಳು ಆಡುವ ಮಾತುಗಳು ಇಲ್ಲಿ ಕೇಳಿಸುತ್ತವೆ. ಆದರೆ ಮಾತು ಯಾರಿಗೂ ಬೇಡ. ಜನಕ್ಕೆ ಬೇಕಾದ್ದು ವೇಷ, ತಮಾಷೆ, ಹಾಸ್ಯ ಮತ್ತು ಅವ್ಯವಸ್ಥೆ.

ಪೌರಾಣಿಕದ ಪಾತ್ರಗಳೆಲ್ಲವೂ ಯಕ್ಷಗಾನದ ಅನುಕರಣೆಗಳು. ದುರ್ಬಲ ಅನುಕರಣೆಗಳೆಂದರೂ ಸರಿಯೇ ಯಕ್ಷಗಾನಗಳಲ್ಲಿ ಕೆಳವರ್ಗದ ಜನ ಪಾತ್ರಗಳನ್ನು ವಹಿಸುವ ಅವಕಾಶವಿಲ್ಲವಾದ್ದರಿಂದ, ಅವರ ಆ ಬಯಕೆ ಇಲ್ಲಿ ತೃಪ್ತಿಹೊಂದುತ್ತದೆ. ವೇಷ, ಅಲಂಕರಣಗಳು ತೀರಾ ಸಾಮಾನ್ಯ. ಇಲ್ಲಿ ಗಾಂಭೀರ್ಯ ಮುಖ್ಯ ಅಲ್ಲವೇ ಅಲ್ಲ. ರಾಮ ಸೀತೆ, ಲಕ್ಷ್ಮಣರ ಪಾತ್ರಗಳು ಯಕ್ಷಗಾನದಲ್ಲಿ ಅತ್ಯಂತ ಗಂಭೀರ ಪಾತ್ರಗಳು ಮತ್ತು ಜನ ಅವರ ಮಾತನ್ನು ಲಕ್ಷ್ಯವಿಟ್ಟು ಕೇಳುತ್ತಾರೆ. ಇಲ್ಲಿ ರಾಮ ಕೈಗೆ ಗಡಿಯಾರ ಕಟ್ಟಿರಬಹುದು. ಸೀತೆ ಆಧುನಿಕ ಸ್ತ್ರೀ ವೇಷಧಾರಿಯಾದ ಪುರುಷ. ಅವನಿಗೆ ಮೀಸೆ ಮಾತ್ರ ಇರುವುದಿಲ್ಲ. (ಸ್ತ್ರೀಯರ ವೇಷಗಳನ್ನು ಪುರುಷರೇ ಹಾಕುತ್ತಾರೆ). ಎಲ್ಲವೂ ತಮಾಷೆ. ಪಾತ್ರಗಳು ಆಡುವ ಮಾತೆಲ್ಲ ಯಕ್ಷಗಾನಗಳಿಂದ ಕಲಿತದ್ದು, ಅದೂ ತಪ್ಪುತಪ್ಪಾಗಿ ಗ್ರಹಿಸಿದ್ದು. ಯಾವ ಕಥೆ ಯನ್ನೂ ಇಲ್ಲಿ ಪೂರ್ತಿಯಾಗಿ ಅಭಿನಯಿಸುವುದಿಲ್ಲ. ಪಾತ್ರಗಳು ವೇಷಧರಿಸಿ ಬಂದು, ಒಂದೆರಡು ನಿಮಿಷ ಮಾತನಾಡಿ ಹೋಗಿಬಿಡುತ್ತಾರೆ. ಹಿರಣ್ಯಕಶಿಪು ಬಂದು ಏನೋ ಹೇಳಿ ಗರ್ಜಿಸಿದರೆ ಪ್ರೇಕ್ಷಕರು ಗಟ್ಟಿಯಾಗಿ 'ಸ್ಪೈಡ್ ಕಮೆಂಟ್' ಮಾಡಿ ಲೇವಡಿಮಾಡಬಹುದು.

ನಾನು ನೋಡಿದ ಹಿರಣ್ಯಕಶಿಪು–ಪ್ರಹ್ಲಾದರ ಸಂಭಾಷಣೆಯ ಪ್ರಸಂಗವನ್ನು ವಿವರಿಸುತ್ತೇನೆ. ಹಿರಣ್ಯಕಶಿಪು, ಪ್ರಹ್ಲಾದರ ವೇಷಧರಿಸಿದ ವ್ಯಕ್ತಿಗಳು ಮುಂದೆ ಬಂದು ಹರಿ, ಹರರ ಬಗ್ಗೆ ವಾದ ಮಾಡುತ್ತಾರೆ. ಅವರ ಹಿಂದೆ ಉದಯವಾಣಿ, ಪ್ರಜಾಮತ ಇತ್ಯಾದಿ ಪತ್ರಿಕೆಗಳಿಂದ ಮುಚ್ಚಿದ ಪಾಲಕಿ ಯನ್ನು ಹೊತ್ತುತಂದು ಇರಿಸುತ್ತಾರೆ. 'ಹರಿಯನ್ನು ಇಲ್ಲಿ ತೋರಿಸು' ಎಂದು ಹಿರಣ್ಯಕಶಿಪು ಗರ್ಜಿಸಿ ಪಾಲಕಿಯನ್ನು ಹೊಡೆದಾಗ ಹರಿದ ಉದಯವಾಣಿ. ಪ್ರಜಾಮತಗಳನ್ನು ಕಿತ್ತುಕೊಂಡು ನರಸಿಂಹ ಹೊರಗೆ ಬರುತ್ತಾನೆ. ಜನ ಹೋಯೆಂದು ಕೂಗಿ ನಗುತ್ತಾರೆ. ಹಾಸ್ಯಮಾಡುತ್ತಾರೆ.

ಈ ವೇಷ ಪ್ರದರ್ಶನ ಬೆಳಗಿನ ಜಾವದವರೆಗೂ ನಡೆಯುತ್ತದೆ. ಬೇರೆ ಹಗಣದ ಪ್ರಭೇದ ಗಳಿದ್ದರೂ, ಈ ರೀತಿಯ ಹಗಣವೇ ನಿಜವಾದ ಹಗಣವೆಂದು ಅಲ್ಲಿಯ ಜನರ ಅಭಿಪ್ರಾಯ.

೨. ಸುಗ್ಗಿ ಹಗಣ

ಇದನ್ನು 'ಹೋಳಿಹುಣ್ಣಿವೆ ಹಗಣ' ಎಂದೂ ಕರೆಯುತ್ತಾರೆ.37 ಸುಗ್ಗಿ ಹಬ್ಬದಲ್ಲಿ (=ಹೇರಿ ಸುಗ್ಗಿ ಮರುವರ್ಷ ಹಿರಿಯ ಸುಗ್ಗಿ), 'ಕಿರೀ ಸುಗ್ಗಿ' ಎಂಬ ಭೇದಗಳುಂಟು ಮತ್ತು ಇದನ್ನು ಒಂದು ವರ್ಷವಾದ ಮೇಲೆಹೀಗೆ ಒಂದಾದಮೇಲೊಂದರಂತೆ ಪರ್ಯಾಯವಾಗಿ ಆಚರಿಸುತ್ತಾರೆ. ಎಂಟು, ಹತ್ತು ಜನ ತಲೆಗೆ

37 ಇದರ ಬಗ್ಗೆ ತಿಳಿಸಿದವರು ಕುಮಟಾ ತಾಲೂಕಿನ ಬೆಟ್ಗೇರಿ ಗ್ರಾಮದ ಎಸ್. ಎಸ್. ಜೋಷಿ ಅವರು

ಪೇಟಸುತ್ತಿ, ಅದಕ್ಕೆ ಬೆಂಡಿನ ತುರಾಯಿಯನ್ನು ಸಿಕ್ಕಿಸಿ, ಕೈಯಲ್ಲಿ ನವಿಲುಗರಿ ಕುಂಚ ಮತ್ತು ಕೋಲು ಹಿಡಿದು ಕುಣಿಯುತ್ತಾರೆ. (ಹಿರೇ ಸುಗ್ಗಿಯಲ್ಲಿ ಪೇಟಕ್ಕೆ ತುರಾಯಿ ಕಟ್ಟುವುದು ಕಡ್ಡಾಯ.) ಗುಮ್ಮಟೆ, ಜಾಗಟೆ, ತಾಳಗಳ ನಾದಕ್ಕೆ ಕಾಲು ಹಾಕುತ್ತಾ, ಕೋಲು ಕುಟ್ಟುತ್ತಾ ನರ್ತಿಸುತ್ತಾರೆ. ಇದಲ್ಲದೆ, ಉಳಿದವರು ರಾಮಾಯಣ, ಮಹಾಭಾರತ ಕತೆಗಳಿಗೆ ಸಂಬಂಧಿಸಿದ ಪಾತ್ರಗಳನ್ನು ವೇಷಸಮೇತ ಅಭಿನಯಿಸುತ್ತ ಅವರ ಜೊತೆ ಬರುತ್ತಾರೆ. ಇವರ ಜೊತೆಗೆ ಸಮಕಾಲೀನ ಸಮಾಜದ ಹೆಣ್ಣು, ಪೋಲೀಸ್, ಕಳ್ಳ, ಹೆಂಡ, ಕುಡಿಯುವವನು, ಕೋಡಂಗಿ ಇತ್ಯಾದಿ ವೇಷಗಳನ್ನು ಧರಿಸಿ ಕುಂಚದವರ ಜೊತೆ ಬರುತ್ತಾರೆ. ಕುಂಚದವರ ಜೊತೆ ಹಾಡು ಕೇಳುತ್ತಾ ಇವರೂ ಕುಣಿಯುತ್ತಾರೆ.

ಈ ಮೇಳವು ಹೋಳೀ ಹುಣ್ಣಿಮೆಗೆ ಐದುದಿನ ಮುಂಚೆ ತಮ್ಮ ಊರಿನಿಂದ ಹೊರಟು, ತಮ್ಮ ಊರಿನ ದೇವಾಲಯ, ಪ್ರಮುಖರ ಮನೆಗಳ ಮುಂದೆ ಮೊದಲು ಕುಣಿದು ಬೇರೆ ಬೇರೆ ಊರುಗಳಿಗೆ ಹೋಗಿ ಅಲ್ಲೂ ಕುಣಿಯುತ್ತಾರೆ. ಆಯಾ ಊರಿನವರು ಇವರ ಊಟ, ವಸತಿಗೆ ಏರ್ಪಾಟು ಮಾಡಿ, ಹಣ, ತೆಂಗಿನ ಕಾಯಿ, ಎಣ್ಣೆ, ಅಕ್ಕಿಗಳನ್ನು ಕೊಟ್ಟು ಕಳಿಸುತ್ತಾರೆ. ಐದನೇ ದಿನ ತಮ್ಮ ಊರಿಗೆ ಹಿಂದಕ್ಕೆ ಬಂದು, ಕಾಮನನ್ನು ಸುಟ್ಟು, ಸುಟ್ಟ ಬೂದಿ ಕಲಸಿದ 'ಕರಿನೀರ'ಲ್ಲಿ ಸ್ನಾನ ಮಾಡುತ್ತಾರೆ. ಎಲ್ಲರೂ ಸೇರಿ ಪ್ರಸಾದ ಸ್ವೀಕರಿಸುತ್ತಾರೆ. ಈ ಹಬ್ಬ ಬೆಳೆಗಳು ಕೈಗೆ ಬಂದು, ಕೈಯಲ್ಲಿ ಇನ್ನೂ ಹಣವಿರುವ ಸಮಯದಲ್ಲಿ ನಡೆಯುವುದರಿಂದ, ವರ್ಷವಿಡೀ ದುಡಿದ ಆ ಜನ ಸಂಭ್ರಮದಿಂದ ಇದನ್ನು ಆಚರಿಸಿ ಸಂತೋಷಪಡುತ್ತಾರೆ. ಸುಗ್ಗಿ ಹಗಣದಲ್ಲಿ ಮರಗಾಲು ಕಟ್ಟುವುದಿಲ್ಲ.

೩. ಹಗಣ

ಮನೆಯಲ್ಲಿ ದೇವರ ಸೇವೆ ಮಾಡಿಸಿದರೆ, ಜಟ್ಟಿಗ, ಮಾಸ್ತಿ ಹಬ್ಬಗಳಲ್ಲಿ, 'ಹಣ್ಣುಬ್ಬ'ದಲ್ಲಿ ('ಹಣ್ಣುಬ್ಬ' ಆದ ಹೊರತು ಹಲಸಿನ ಹಣ್ಣಿನ ಕಜ್ಜಾಯವನ್ನು ತಿನ್ನಬಾರದೆಂಬ ನಂಬಿಕೆ ಇದೆ), ವರ್ಷಕ್ಕೊಮ್ಮೆ ತೆಂಗಿನಗರಿಗಳಿಂದ ಮನೆಯನ್ನು ಹೊದಿಸುವ ಸಮಾರಂಭ—ಇಂತಹ ದಿನಗಳಲ್ಲಿ ನಡೆಯುವುದನ್ನೂ 'ಹಗಣ'ವೆಂದೇ ಕರೆಯುತ್ತಾರೆ.[38]

ಹಗಣದ ಮೊದಲೇ ಬೇರೆ ಬೇರೆ ಊರುಗಳಿಗೆ ಆಹ್ವಾನ ಹೋಗುತ್ತದೆ. ಹಗಣದ ಸಂಜೆ ಎಲ್ಲರಿಗೂ ಪಾಯಸದ ಊಟವಾದ ಮೇಲೆ, ಯಜಮಾನ ಗೌಡನ ಮನೆಯ ಮುಂದಿನ ತುಳಸೀಕಟ್ಟೆಯ ಮುಂದೆ, ಗ್ಯಾಸ್‌ಲೈಟ್ ಬೆಳಕಿನಲ್ಲಿ ಎಲ್ಲರೂ ನೆರೆಯುತ್ತಾರೆ. ಯಜಮಾನ ಹಗಣವನ್ನು ಯಶಸ್ವಿಗೊಳಿಸಬೇಕೆಂದು ಕಲಾವಿದರಿಗೆ ವೀಳ್ಯಕೊಟ್ಟು ಕೇಳಿಕೊಳ್ಳುತ್ತಾನೆ. ಹಗಣ ಆರಂಭವಾಗುತ್ತದೆ.

ಹಿನ್ನೆಲೆಯಲ್ಲಿ ೮–೧೦ ಜನ ಗುಮ್ಮಟೆ.[39] ತಾಳ, ಜಾಗಟೆ ಹಿಡಿದು ಬಡಿಯುತ್ತ ಹಾಡುತ್ತ ನಿಂತುಕೊಳ್ಳುತ್ತಾರೆ. ಹಾಡು ಯಾವುದೇ ಕಥನಗೀತವಾಗಿರಬಹುದು. ಉದಾಹರಣೆಗೆ, ಒಬ್ಬ ಶ್ರೀಮಂತ ತಂಗಿಯ ಮನೆಗೆ ಬರುತ್ತಾನೆ. ಆಕೆಯ ಗಂಡ ಭಾವನನ್ನು ರಾತ್ರಿ ಉಳಿಯಲು ಒತ್ತಾಯ ಮಾಡುತ್ತಾನೆ. ರಾತ್ರಿ ಭಾವನ ಕೊಲೆಮಾಡಿ, ಅವನ ದೇಹವನ್ನು ಹಾಳುಬಾವಿಗೆ ಹಾಕುತ್ತಾರೆ. ಮೃತನ ತಾಯಿ ಹುಡುಕಿಕೊಂಡು ಬಂದರೆ ಮಗಳು, ಅಳಿಯ ಇಬ್ಬರೂ ಸುಳ್ಳುಹೇಳುತ್ತಾರೆ. ಮುಂದೆ, ಮೃತನ ದೇಹ ಬಾವಿಯಲ್ಲಿ ಸಿಕ್ಕಿ, ಮಗಳು ಅಳಿಯರಿಗೆ ಸೆರೆಮನೆ ವಾಸ ಪ್ರಾಪ್ತವಾಗುತ್ತದೆ. ಇಂತಹ ಕಥೆ ಹಾಡಿನ ರೂಪದಲ್ಲಿ ನಿರೂಪಿತವಾಗುತ್ತದೆ. ಅಥವಾ ದೇವರ ಸ್ತೋತ್ರವನ್ನು ಅವರು ಹಾಡುತ್ತಾ ಹೋಗಬಹುದು. ಅವರು ಹಾಡುತ್ತಿರುವಾಗ, ಇದ್ದಕ್ಕಿದ್ದಂತೆ ಅಷ್ಟ ವೇಷದವರು ಮುಂದೆ ಬರುತ್ತಾರೆ(ಇದೇ

---

38 ಈ ಹಗಣದ ಬಗ್ಗೆ ಶ್ರೀ ಎಲ್. ಜಿ. ಭಟ್ ಅವರು ಕನ್ನಡಪ್ರಭ ಪತ್ರಿಕೆಯಲ್ಲಿ (೨೩–೬–೧೯೮೭) ಲೇಖನವನ್ನು ಬರೆದಿದ್ದಾರೆ. ಜೊತೆಗೆ ವಿಸ್ತಾರವಾದ ಪತ್ರವನ್ನು ಬರೆದು ಅನೇಕ ಸಂಗತಿಗಳನ್ನು ನನಗೆ ತಿಳಿಸಿದ್ದಾರೆ. ಈ ಭಾಗದ ವಿವರಗಳೆಲ್ಲ ನನಗೆ ಶ್ರೀ ಭಟ್ಟರಿಂದ ದೊರಕಿವೆ.

39 ಗುಮ್ಮಟೆಯು ಆಕಾರದಲ್ಲಿ ಮೃದಂಗವನ್ನು ಹೋಲುವ ವಾದ್ಯ. ಒಂದು ಭಾಗವನ್ನು ಉಡುವಿನ ಚರ್ಮದಿಂದ ಬಿಗಿದಿರುತ್ತಾರೆ. ಇನ್ನೊಂದು ಮುಖ ತೆರೆದುಕೊಂಡಿರುತ್ತದೆ.

'ಹಗಣ'). ಈ ಅಪ್ಪವೇಷದ ಪಾತ್ರಗಳಿಗೂ ಗುಮಟೆ ಹಾಡುಗಳಿಗೂ ಏನೂ ಸಂಬಂಧವಿರುವುದಿಲ್ಲ. ಅಪ್ಪವೇಷದವರು ಬಂದ ತಕ್ಷಣ ಗುಮಟೆ ಹಾಡುಗಳನ್ನು ನಿಲ್ಲಿಸುತ್ತಾರೆ.

ಅಪ್ಪವೇಷಗಳಲ್ಲಿ ಎರಡು ಮನೆತನಗಳ ಮಧ್ಯೆ ಮದುವೆಯ ಏರ್ಪಾಟಿನ ದೃಶ್ಯ, ಮೀನುಗಾರರ ವೇಷ, ಬಲೆ ಹೆಣೆಯುವ ದೃಶ್ಯ, ಹನುಮನ ವೇಷ ಇತ್ಯಾದಿಗಳು ಅಭಿನಯಗೊಳ್ಳುತ್ತವೆ. ಇವರಲ್ಲಿ ಸಂಭಾಷಣೆಗಳುಂಟು ಅಥವಾ ಸ್ವಗತದ ಏಕಪಾತ್ರಾಭಿನಯವುಂಟು. ಉದಾಹರಣೆಗೆ, ಒಬ್ಬ ರಂಗ ಪ್ರವೇಶ ಮಾಡಿ, "ಓಹೋ! ನಾನು ಎಲ್ಲಿಗೆ ಬಂದೆ? ಆ ಊರಿನಲ್ಲಿ ಹಗಣ ಎಂದು ಕೇಳಿದ್ದೇನೆ. ಅಲ್ಲಿಗಾದರೂ ಹೋಗುತ್ತೇನೆ", ಎಂದು ಹೇಳಿ ಮುಂದೆ ಬಂದು, "ಹೇಗೂ ಬಂದದ್ದಾಯಿತು. ಏನು ಮಾಡಲಿ" ಎಂದು ಕ್ಷಣಕಾಲ ಯೋಚಿಸಿ, "ಒಂದು ಪದ್ಯವನ್ನಾದರೂ ಹೇಳುತ್ತೇನೆ" ಎಂದು ಒಂದು ಪದ್ಯ ಹೇಳಬಹುದು.

ಉದ್ದುದ್ದಿ ಮೂಗ್ನವಲೇ
ಬೆಂಡೆಕಾಯ್ ಬೆಲ್ಲವಲೇ
ಮೊಗೆಕಾಯ್ ಮೊಲೆಯವಲೇ
ಮೀನಿನ ಕಣ್ಣವಲೇ
ಬಾಳೆಕಂಬದ ತೊಡೆಯವಲೇ
ಕಲ್ಮೆರಗ್ಯಂತ ಕುಂಡ್ಯವಲೇ

ಇಲ್ಲಿಯ ಸ್ತ್ರೀವರ್ಣನೆಯಲ್ಲಿ 'ಅಶ್ಲೀಲ' ಇದೆ ಎಂದು ಅನ್ನಿಸಿದರೆ, ಅದು ಹಗಣದ ತಪ್ಪಲ್ಲ. ಹಗಣವೇ ಅಂತಹುದು. ('ಪಗರಣ' ನೋಡಲು ಹೆಣ್ಣುಮಕ್ಕಳನ್ನು ಕಳಿಸಬೇಡಿ ಎಂದು ಚಂದ್ರರಾಜ ಎಚ್ಚರಿಸಿರುವುದು ಇಲ್ಲಿ ಜ್ಞಾಪಕಕ್ಕೆ ಬರಬಹುದು.)

ಅಥವಾ ಮೀನುಗಾರ, ಅವನ ಮಗ ಮೀನು ಹಿಡಿಯಲು ಹೋಗುವ ಮುನ್ನ, ಬಲೆ ಹೆಣೆಯುತ್ತ ಸಂಭಾಷಣೆ ನಡೆಸಬಹುದು. ಮಗ ಬಲೆ ಹೆಣೆಯುತ್ತಿದ್ದರೆ ಅಪ್ಪ ಹಾಡು ಹೇಳುತ್ತಾನೆ. ಬೇರೆ ಬೇರೆ ಊರಿನ ಗೌಡರ ಮನೆಯಲ್ಲಿ ದುಡ್ಡು, ಊಟ, ಮಾಂಸ ಇತ್ಯಾದಿಗಳಿಗೂ ಕೊರತೆಯಿಲ್ಲ. ಹೋಗಿ ಬರುವವರಿಗೂ ಕೊರತೆಯಿಲ್ಲ ಎಂದು ಹೇಳಿ ಕೊನೆಯಲ್ಲಿ,

......ಗೌಡರ ಮನೆಯಲ್ಲಿ
ಶೂಲೇರ್‌ಗೇನ್ ಕೊರತಿಲ್ಲ
ಶೂಲೇರ್‌ಗೇನ್ ಕೊರತಿಲ್ಲ ಹೋಗ್
ಬರವರ್ಗೇನ್ ಕೊರತಿಲ್ಲ॥

ಎಂದು ಚಟಾಕಿ ಹಾರಿಸಬಹುದು. ಅದೇ ಊರಿನ ಗೌಡನ ಹೆಸರು ಅಲ್ಲಿ ಪ್ರಸ್ತಾಪಗೊಂಡಾಗ ಇಡೀ ಪ್ರೇಕ್ಷಕವರ್ಗ ನಕ್ಕುನಕ್ಕು ಬೀಳುತ್ತದೆ. ಇನ್ನೊಂದು ಪ್ರಸಂಗ: ಗಂಡ ಹೆಂಡತಿಗೆ ಒಂದು ಬೊಂಬೆ ತಂದು ಕೊಟ್ಟಿದ್ದಾನೆ. ಅದು ಕಳೆದು ಹೋಗುತ್ತದೆ. ಬೇರೆ ಬೊಂಬೆ ತಂದುಕೊಡುತ್ತೇನೆ ಎನ್ನುತ್ತಾನೆ. ಬಡಗಿ, ಅಕ್ಕಸಾಲಿ, ಗುಡಿಗಾರರು ಮಾಡಿದ ಬೊಂಬೆಗಳೆಲ್ಲವನ್ನೂ ಆಕೆ ಕೇಳುಕೊಳ್ಳುತ್ತಾಳೆ. ಆಗ ಪ್ರಿಯ ಏನೂ ತೋಚದೆ ತಲೆಮೇಲೆ ಕೈಹೊತ್ತು ಕುಳಿತಾಗ, ಆಕೆ

ಎಲ್ಲಾ ಬೊಂಬೆಯು ಹೋಗಲಿ ಗೆಣೆಯಾ
ಎಲ್ಲಿಲ್ಲದ್ ಬೊಂಬೆಯ ತೋರಿಸುವೆ

ಎನ್ನುತ್ತಾಳೆ. ಆ ಎಲ್ಲಿಲ್ಲದ ಬೊಂಬೆ ಯಾವುದೆಂಬ ಧ್ವನಿ ಸ್ಪಷ್ಟವಾಗಿಯೇ ಇದೆ. ಶೃಂಗಾರ, ಹಾಸ್ಯಗಳು ಹೊಂದಿಕೊಂಡು ಬರುವ ಬಗೆ ಹೀಗೆ.

ಅಷ್ಟವೇಷಗಳು ಬಂದು ಹೋಗುತ್ತಲೇ ಮತ್ತೆ ಗುಮ್ಮಟೆ ಹಾಡುಗಳು ಮುಂದುವರಿಯುತ್ತವೆ. ಮತ್ತೆ ಅಷ್ಟವೇಷ. ಮತ್ತೆ ಗುಮ್ಮಟೆಹಾಡು–ಹೀಗೆ ರಾತ್ರಿಯೆಲ್ಲಾ ಹಗಣ ಸಾಗುತ್ತದೆ. ಹಾಡಿನಿಂದ ಕಿವಿಗೆ ಸಂತೋಷ; ಹಗಣದಿಂದ ಕಣ್ಣಿಗೆ, ಮನಸ್ಸಿಗೆ ವಿನೋದ.

ಮೇಲಿನ ಮೂರು ಬಗೆಯ ಹಗಣಗಳಲ್ಲಿ ಮೊದಲನೆಯದು ದೇವರ ಜಾತ್ರೆಯಲ್ಲಿ ನಡೆಯತಕ್ಕದ್ದು; ಎರಡನೆಯದು, ಊರೂರಿಗೆ ತಿರುಗುವ ಮೇಳಕ್ಕೆ ಸಂಬಂಧಿಸಿದ್ದು; ಮೂರನೆಯದು ವಾಸದ ಮನೆಯ ಮುಂದೆ ನಡೆಯತಕ್ಕದ್ದು. ಮೂರರಲ್ಲೂ ವೇಷಗಳು ಉಂಟು; ಹಾಡು, ಮಾತುಕತೆ ಉಂಟು. ಮೂರರಲ್ಲೂ ಸಮಾನತೆ ಸಾಕಷ್ಟು ಇದೆಯೆಂಬುದು ಎದ್ದುಕಾಣುತ್ತದೆ.

ಒಂದು ಊರಿನಲ್ಲಿ ಹಗಣ ವೇಷ ಹಾಕುವ ಕಲಾವಿದರಿಗೆ ಬಣ್ಣ, ವೇಷಗಳ ಖರ್ಚನ್ನು ಆಯಾ ಊರಿನವರೇ ವಹಿಸುತ್ತಾರೆ. ರಾತ್ರಿ ಬಿಡುವಿನ ವೇಳೆಯಲ್ಲಿ ಉತ್ಸಾಹಿಗಳಾದ ಚಿಕ್ಕ ಹುಡುಗರಿಗೆ ಹಗರಣದ ವೇಷ ಹಾಕುವುದನ್ನು ಹಿರಿಯರು ಹೇಳಿಕೊಡುತ್ತಾರೆ. ಸಂಭಾಷಣೆ ಕಲಿಸುತ್ತಾರೆ. ಹೊಲಗಳಲ್ಲಿ, ರಾತ್ರಿ ಕಾವಲಿಗಾಗಿ ಹೋದಾಗಲೂ ಪ್ರಾಸಂಗಿಕವಾಗಿ ಹೇಳಿಕೊಡುವುದೂ ಉಂಟು. ವೇಷ ಹಾಕುವುದನ್ನು ಕಲಿಸುವ 'ಗುರು'ಗಳೂ ಇಲ್ಲ; ಅದನ್ನು 'ವಿಧ್ಯುಕ್ತವಾಗಿ' ಯಾರೂ ಕಲಿಸುವುದೂ ಇಲ್ಲ. ಹಗರಣದ ಕಲೆ ವಂಶಪಾರಂಪರ್ಯ ಅಲ್ಲವಾದರೂ ತಂದೆಯ ಕಲೆಯನ್ನು ಮಗ ರೂಢಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಈ ಕಲೆ ಜೀವನೋಪಾಯದ ಮಾರ್ಗವಲ್ಲ. ಜನಜೀವನದ ಆಧುನೀಕರಣ ಹೆಚ್ಚಾದಂತೆ, ಅದರ ಪ್ರಭಾವ ಹಗರಣದ ಮೇಲೂ ವೇಷ, ಭೂಷಣ, ಹಾಡು, ಸಂಭಾಷಣೆಗಳ ಮೇಲೂ ಆಗುತ್ತಿದೆ. ಹಾಲಕ್ಕಿ ಒಕ್ಕಲಿಗರು ಮತ್ತು ಇತರ ಸಮಾಜದವರು ತೀರಾ ಅವಿದ್ಯಾವಂತರೂ ಸಂಪ್ರದಾಯಪ್ರಿಯರೂ ಆಗಿರುವುದರಿಂದ ಹಗಣ ಪದ್ಧತಿಯು ಇನ್ನೂ ಕೆಲವು ಕಾಲ ಉಳಿಯಬಹುದು. ಮೂರೂ ರೀತಿಯ ಹಗಣಗಳೂ ದೇವತೆಗಳಿಗೆ ಸಂಬಂಧಿಸಿದಂತೆ ನಡೆಯುವ ಆರಾಧನೆಗಳ ಭಾಗವಾಗಿ ಬರುವುದರಿಂದ, ಬಹುಕಾಲ ಉಳಿಯುವ ಸಾಧ್ಯತೆಗಳೂ ಇವೆ.

ಕರ್ನಾಟಕದಲ್ಲಿ ಹಿಂದೆ ಸಾರ್ವತ್ರಿಕವಾಗಿ ಬಳಕೆಯಲ್ಲಿದ್ದ ಪಗರಣವು ಈಗಿನ ಹಗಣದಲ್ಲಿ ಅದೇ ಸ್ವರೂಪದಲ್ಲಿ ಉಳಿದುಕೊಂಡು ಬಂದಿದೆಯೆಂದು ಭಾವಿಸುವುದು ತಪ್ಪಾಗುತ್ತದೆ. ಹಿಂದಿನ ಕಾಲದಲ್ಲೇ ಪಗರಣದಲ್ಲಿ ಪ್ರಾದೇಶಿಕ ವೈಲಕ್ಷಣ್ಯಗಳಿದ್ದಿರಬಹುದು. ಈ ನೂರಾರು ವರ್ಷಗಳಲ್ಲಿ ಪಗರಣವು ಅನೇಕ ಮಾರ್ಪಾಟುಗಳನ್ನು ಪಡೆದಿರಬಹುದು. ಅಲ್ಲದೆ, ಪಗರಣದ ಕೆಲವಾದರೂ ಮುಖ್ಯ ಲಕ್ಷಣಗಳನ್ನು ಈಗಿನ ಹಗಣವು ಉಳಿಸಿಕೊಂಡು ಬಂದಿರಬಹುದೆಂದು ಭಾವಿಸುವುದೇ ಉಚಿತವಾದುದು. ಇಂದಿನ ಕರ್ನಾಟಕದ ಒಂದು ಪ್ರದೇಶದ ಕೆಲವು ವರ್ಗಗಳ ಜೀವಂತ ಕಲೆಯಾಗಿದೆ ಎನ್ನುವುದರ ದೃಷ್ಟಿಯಿಂದ ಮತ್ತು ಹಿಂದಿನ ಪಗರಣವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯಕ ಎನ್ನುವುದರ ದೃಷ್ಟಿಯಿಂದ ಈಗಿನ ಹಗಣದ ಪ್ರಾಮುಖ್ಯವನ್ನು ಗುರುತಿಸಬೇಕಾಗುತ್ತದೆ.

ಅನುಬಂಧ

ಯಕ್ಷಗಾನ ಬಯಲಾಟವು ಎಂದಿನಿಂದ ಆರಂಭವಾಯಿತೋ ತಿಳಿಯದು. ಕೆ. ಶಿವರಾಮ ಕಾರಂತರ ಗ್ರಂಥಾಧಾರದಿಂದ ಹೇಳುವುದಾದರೆ, ನಮಗೆ ಈಗ ದೊರಕುವ ಪ್ರಾಚೀನ ಯಕ್ಷಗಾನಗಳೆಲ್ಲ ಹದಿನಾರನೇ ಶತಮಾನದಿಂದ ಈಚಿನವು.[40] ಪಗರಣಗಳ ಅವನತಿ ಮತ್ತು ಮರೆ, ಯಕ್ಷಗಾನಗಳ ಉದಯ, ಅಭ್ಯುದಯ ಇವುಗಳು ಸರಿಸುಮಾರು ಆ ಕಾಲದಲ್ಲಿ ಕಾಣಿಸಿಕೊಳ್ಳುವುದಕ್ಕೆ ಏನಾದರೂ ಮಹತ್ವವಿದೆಯೋ ಇಲ್ಲವೆ ಎಂಬುದು ವಿಚಾರಣೀಯ ಸಂಗತಿಯಾಗಿದೆ. ಈಗಲೇನೋ ಹಗಣವು ಯಕ್ಷಗಾನದ

---

40 ಯಕ್ಷಗಾನ ಬಯಲಾಟ: (ಪುತ್ತೂರು ೧೯೬೩) ಪು. ೧೮೫. ಈ ಅನುಬಂಧದಲ್ಲಿ ಬರುವ ಒಂದೆರಡು ಅಭಿಪ್ರಾಯಗಳು ಮೂಡಿದ್ದು ಶ್ರೀ ಚಂದ್ರಶೇಖರ ಕಂಬಾರ ಅವರ ಜೊತೆ ನಾನು ಚರ್ಚಿಸಿದಾಗ. ಅವರು ಈ ಪ್ರಬಂಧವನ್ನು ಓದಿ ಉಪಕರಿಸಿದ್ದಾರೆ.

ಜೊತೆ ಸ್ಪರ್ಧಿಸಲಾರದು ಮತ್ತು ಎರಡೂ ಸ್ವರೂಪತಃ ಬೇರೆ ಬೇರೆಯೇ ಆಗಿರುವುದರಿಂದ ಎರಡನ್ನೂ ಹೋಲಿಸುವುದು ಅಸಾಧುವಾದುದು. ಹಗಣದ ಮೇಲೆ ಯಕ್ಷಗಾನದ ತೀವ್ರ ಪ್ರಭಾವವಿದೆ. ಹೀಗಿದ್ದರೂ, ಒಂದು ಕಾಲಕ್ಕೆ ಶಿಕ್ಷಿತ ವರ್ಗದ ಕಲೆಯಾದ ಯಕ್ಷಗಾನವು ಹಗರಣದಿಂದಲೋ ಹಗರಣದಂತಹ ಜನಪದ ಕಲೆಯಿಂದಲೋ ಏಕೆ ಮೂಡಿ ಬಂದಿರಲಾರದು ಎಂಬ ಊಹೆಯನ್ನು ಮಾಡುವ ಮನಸ್ಸಾಗುತ್ತಿದೆ. ಇದನ್ನು ಸರಿಯೆಂದು ಸಾಧಿಸಿ ತೋರಿಸಲು ಅನೇಕ ಕಷ್ಟಗಳಿವೆ ಎಂಬ ಸಂಪೂರ್ಣ ಅರಿವು ನನಗಿದೆ.

ಪಗರಣ ಎಂಬ ಹೆಸರಿನ ಜನಪದ ವೇಷಧಾರಣೆ ಭಾರತದ ಬೇರೆ ಪ್ರಾಂತಗಳಲ್ಲಿರಲಿಲ್ಲ. ಆದರೆ ಅಂತಹ ಕಲೆಯೇ ಅಲ್ಲಿರಲಿಲ್ಲವೆಂದು ಇದರ ಅರ್ಥವಲ್ಲ. ಕರ್ಣಾಟಕದ ಪಗರಣವನ್ನು ಹೋಲುವ ಬೇರೆ ಬೇರೆ ಜನಪದ ನಾಟಕಗಳು ಬೇರೆ ಬೇರೆ ಪ್ರಾಂತಗಳಲ್ಲಿದ್ದಿರಬೇಕು. ಅವುಗಳಲ್ಲಿ ಈಗಲೂ ಕೆಲವು ಉಳಿದುಕೊಂಡು ಬಂದಿವೆ ಮತ್ತು ಅವು ಎಷ್ಟೋ ಲಕ್ಷಣಗಳಲ್ಲಿ ಪಗರಣವನ್ನು ಹೋಲುತ್ತವೆ. ಆ ಜನಪದ ನಾಟಕಗಳೂ ಮೂಲತಃ ಜೀವನದ ದೃಶ್ಯಗಳನ್ನು ಅನುಕರಿಸಿ ತೋರುವ ಹಗರಣದಂತಹ ಪ್ರದರ್ಶನಗಳಿಂದ ಮೂಡಿರಬಹುದು.

ಕರ್ಣಾಟಕದಲ್ಲಿ ಹಗಲುವೇಷದವರು ಇದ್ದರು, ಈಗಲೂ ಇದ್ದಾರೆ. ಇವರು ದಿನಕ್ಕೊಂದು ವೇಷ ಹಾಕಿಕೊಂಡು ಊರೊಳಕ್ಕೆ ಬಂದು, ಬೀದಿಬೀದಿಗಳಲ್ಲಿ ಯಾವುದಾದರೂ ಕಥೆ ಅಥವಾ ಸನ್ನಿವೇಶವನ್ನು ಅಭಿನಯಿಸುತ್ತಾ, ಜನರನ್ನು ರಂಜಿಸುತ್ತಿದ್ದರು. ವಿನೋದವೇ ಅಲ್ಲಿ ಪ್ರಧಾನವಾಗಿರುತ್ತಿತ್ತು. ಹೀಗೆ ಹತ್ತು ಹದಿನೈದು ದಿನಗಳಾದ ಮೇಲೆ ಊರಿನ ಪಟೇಲನ ನೇತೃತ್ವದಲ್ಲಿ ಅವರು ಮನೆಮನೆಯಿಂದ ದವಸಧಾನ್ಯವನ್ನು ಬಟ್ಟೆ ಹಣವನ್ನು ಸಂಗ್ರಹಮಾಡಿಕೊಳ್ಳುತ್ತಿದ್ದರು.[41] (ತೆಲುಗುನಾಡಿನಲ್ಲಿ ಇವರನ್ನು 'ಪಗಟಿ ವೇಷಾಲು' ಎಂದು ಕರೆಯುತ್ತಾ). ಹಗಲು ವೇಷದವರ ಆಟ ಒಂದಿನ ಪಗರಣವೇ ಆಗಿದೆ ಎಂದು ಹೇಳುವುದು ಕಷ್ಟದ ಮಾತು. ಏಕೆಂದರೆ ಹಗಲುವೇಷದವರು ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು; ಆದರೆ ಪಗರಣಿಗರು ಬಹುಶಃ ಹವ್ಯಾಸಿಗಳು. ಆದರೆ ಮೊದಲು ಹವ್ಯಾಸವಾಗಿದ್ದುದು ಆಮೇಲೆ ವೃತ್ತಿಯಾಗಿ ಪರಿಣಮಿಸಿದುದರ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಕರ್ಣಾಟಕದ 'ಪಗರಣ'ಕ್ಕೂ ಸಂಸ್ಕೃತದ 'ಪ್ರಕರಣ'ಕ್ಕೂ ಭಾಷಿಕ ಸಂಬಂಧವೂ, ತಕ್ಕಮಟ್ಟಿಗೆ ಲಕ್ಷಣ ಸಾದೃಶ್ಯವೂ ಇರುವುದನ್ನು ಗುರುತಿಸಿದ್ದೇವೆ. ಸಂಸ್ಕೃತದಲ್ಲಿಯೇ 'ಪ್ರಹಸನ' ಮತ್ತು 'ಭಾಣ' ಎಂಬ ವಿನೋದ ಪ್ರಧಾನವಾದ ರೂಪಕಗಳಿದ್ದುವು. ಇವುಗಳೂ ಉಪರೂಪಕಗಳಲ್ಲೊಂದಾದ 'ಪ್ರಕರಣ'ವೂ ಜನಪದ ರಂಗ ಮಂದಿರದ ಕೊಡುಗೆಗಳು.[42] 'ಭಾಣ' ಮತ್ತು ಇತರ ಪ್ರಭೇದಗಳಲ್ಲಿ ಸಾಮಾ

---

41 ಸುಮಾರು ೨೫–೩೦ ವರ್ಷಗಳ ಹಿಂದಿನ ಮಾತು. ನಾನಿನ್ನೂ ಚಿಕ್ಕ ಹುಡುಗ. ಒಂದು ದಿನ ಇದ್ದಕ್ಕಿದ್ದಂತೆ ಒಬ್ಬರು ಅಧಿಕಾರಿಯಂತೆ ವೇಷಧರಿಸಿ. ಕುದುರೆಹತ್ತಿ ಊರೊಳಕ್ಕೆ ಬಂದರು: ಅವರ ಜೊತೆ ಕೆಲವು 'ಪೋಲೀಸ'ರೂ ಬಂದರು. ಬಂದವರೇ 'ಗೌಡನ್ ಕರ್ರೀರಿ' ಎಂದು ಅಜ್ಞೆಯಾಯ್ತು. ಗೌಡರು ಓಡೋಡಿ ಬಂದರು. "ಏನ್ ಗೌಡಾ. ಏನ್ ಮಾಡ್ತಿದ್ದೆ" ಎಂದದ್ದೇ ಗೌಡರು ಬೆವತು ಹೋದರು. ಆ ದಿನ ಮೊದಮೊದಲು ಆ 'ಅಧಿಕಾರಿ' ಮಾಡಿದ ಅಜ್ಞೆಗಳನ್ನು ಕೇಳಿ ಊರಿನ ಜನತೆಯೇ ನಡುಗಿ ಹೋಯ್ತು. 'ಈ ಮನೆ ಕಿತ್ತು ಆ ಕಡೆ ಹಾಕ್ಬೇಕು"–ಇದು ಅಂತಹ ಅಜ್ಞೆಗಳಲ್ಲೊಂದು. ಇಂತಹ ಕೆಲವು ವಿಲಕ್ಷಣ ಅಜ್ಞೆಗಳಾದ ಮೇಲೆ ಜನಕ್ಕೆ ಇವರು ವೇಷದವರೆಂಬುದು ಗೊತ್ತಾಗಿ ಹೋಯ್ತು. ಭಯದ ಜಾಗದಲ್ಲಿ ಹಾಸ್ಯದ ಹೊಳೆ ಹರಿಯಿತು. ಮಧ್ಯಾಹ್ನವಾದ ಮೇಲೆ ಆ ಹಗಲು ವೇಷದವರ ಮುಖಂಡ ಗೌಡರ ಹತ್ತಿರ ಕ್ಷಮೆ ಕೇಳಿಕೊಂಡ. ವಾಸ್ತವವಾಗಿ ಅದರ ಅಗತ್ಯವಿರಲಿಲ್ಲ: ಏಕೆಂದರೆ. ಗೌಡರೂ ಸೇರಿದಂತೆ ಊರಿನ ಜನ ಆ ಹೊತ್ತಿಗೆ ನಕ್ಕು ನಲಿದಿದ್ದರು.

42 C. B. Gupta : The Indian Theatre (Motilal Banarasidass, Banaras, 1954), p. 143.

ಜಿಕ ವಿಡಂಬನೆ ಸಾಕಷ್ಟು ಇರುತ್ತಿದ್ದಿತು.[43] ವಿನೋದವೇ ಮುಖ್ಯ ಗುರಿಯಾಗಿದ್ದು, ಮುಚ್ಚುಮರೆಯಿಲ್ಲದ ಶೃಂಗಾರವಿದ್ದು, ಸಾಮಾಜಿಕ ವಿಡಂಬನೆಯನ್ನು ಮಾಡಲು ಕತೆಯನ್ನು ಮಾಧ್ಯಮವಾಗಿ ಮಾಡಿಕೊಳ್ಳುವ ಜನಪದ ನಾಟಕಗಳು ಭಾರತದ ಬೇರೆ ಬೇರೆ ಕಡೆಗಳಲ್ಲುಂಟು. ಉದಾಹರಣೆಗೆ, ಹಿಮಾಚಲ ಪ್ರದೇಶದ 'ಕರಿಯಾಲಾ'ವನ್ನು ನೋಡಬಹುದು. ಈ ನಾಟಕಗಳು ಒರಟು. ವಸ್ತು ಬಹಳ ಶಿಥಿಲ. ಕತೆಯಲ್ಲಿ ಸಮಕಾಲೀನ ಸಮಾಜವಿಮರ್ಶೆ ಹೆಣೆದುಕೊಂಡುಬರುತ್ತದೆ.[44] ಉದಾಹರಣೆಗೆ, ಒಂದು ಕತೆಯಲ್ಲಿ ಬರುವ ಆರು ಜನ ಸಾಧುಗಳು ಊರಿನವರಿಗೆ ಉಪದೇಶ ಮಾಡುತ್ತ ಮಾಡುತ್ತ ಅವರ ಕಾಪಟ್ಯವೂ ಬಯಲಾಗುತ್ತಾ ಹೋಗುತ್ತದೆ. ಇನ್ನೊಂದು ನಾಟಕದ ವಸ್ತು ಎಪ್ಪತ್ತರ ಮುದುಕ ಎರಡನೆ ಬಾರಿ ಮದುವೆ ಮಾಡಿಕೊಳ್ಳುವುದು. ಮಹಾರಾಷ್ಟ್ರದ 'ತಮಾಷಾ' ಬಿಹಾರಿನ 'ಬಿದೇ ಶಿಆ' ಇದೇ ಜಾತಿಯವು. ಇಲ್ಲೆಲ್ಲ ಸಂಭಾಷಣೆಗಳು ಕೆಲವು ಸಾರಿ ಬಹು ಅಶ್ಲೀಲವಾಗಿ ಬಿಡುವುದುಂಟು. ಪಂಜಾಬಿನ 'ಸಂಗ್' ಎಂಬುವರ ವಸ್ತು ಸಾಮಾಜಿಕ. ಇಲ್ಲೆಲ್ಲ ಹಾಸ್ಯ, ವಿಡಂಬನೆ, ಅಪಹಾಸ್ಯ ಪ್ರಧಾನವಾಗಿರುತ್ತದೆ. ಸಮಕಾಲೀನ ಸಮಾಜ, ರಾಜಕೀಯ ಸಂಗತಿಗಳೂ ಅಲ್ಲಿ ಬರುತ್ತವೆ. ಈ ನಾಟಕಗಳನ್ನು ಯಾರೂ ಬರೆದಿಟ್ಟಿರುವುದಿಲ್ಲ. ಇವುಗಳನ್ನು ಅಲೆಮಾರಿಗಳಾದ ಭಂಡ್, ಭಗ್ತಿಯ ಮತ್ತು ಧಾಡಿಗಳು ಆಡುತ್ತಾರೆ. ಅದರಲ್ಲೂ ಭಂಡ್ ಜನ ಮಗ ಹುಟ್ಟಿದ ಮನೆಗಳಿಗೆ, ಮದುವೆ ಮನೆಗಳಿಗೆ ತಾವೇ ಹುಡುಕಿಕೊಂಡು ಬಂದು ಆಟ ಆಡಿಸುವಂತೆ ಕೇಳಿಕೊಳ್ಳುತ್ತಾರೆ.[45] ಹತ್ತೊಂಬತ್ತನೇ ಶತಮಾನದ ತಮಿಳುನಾಡಿನ ನಾಟಕರಂಗದ ಪರಿಸ್ಥಿತಿಯ ಚಿತ್ರ ಒಂದು ಕಡೆ ದೊರಕುತ್ತದೆ. ಊರಿನ 'ಕಣ'ದಲ್ಲಿ ನಾಟಕ–ಅಭಿನಯ, ವೇಷ ಭೂಷಣ, ಮಾತು ಎಲ್ಲವೂ 'ಅನಾಗರಿಕ'. ಪುರಾಣದ ಕತೆಯಾದರೂ ಮಧ್ಯೆ ಮಧ್ಯೆ ಸಮಾಜ ವಿಡಂಬನೆ ಇರುತ್ತಿತ್ತು. ಮಾತೆತ್ತಿದರೆ ಸಂಗೀತ. ಆದರೂ ನಾಟಕದ ಶಿಷ್ಟಪಾಠವೇನೂ ಇರುತ್ತಿರಲಿಲ್ಲ. ಈ ನಾಟಕವನ್ನು ಆಡುತ್ತಿದ್ದವರು ಸಮಾಜದ ಕೆಳವರ್ಗದವರು. ಇದರಿಂದಾಗಿ ಶಿಷ್ಟವರ್ಗದವರು ಸಾಮಾನ್ಯವಾಗಿ ಇವುಗಳನ್ನು ನೋಡುತ್ತಿರಲಿಲ್ಲ. ಮತ್ತು ತಮ್ಮ ಕಡೆಯವರಿಗೆ ನೋಡಲು ಅವಕಾಶ ಕೊಡುತ್ತಿರಲಿಲ್ಲ.[46] ಆಂಧ್ರದ 'ವೀಥಿ ನಾಟಕಮ್' (ತಮಿಳು: ತೆರುವಕ್ಕೂತ್ತು, ತೆರು = ಬೀದಿ) ಎಂಬುದು ಅಲೆದಾಡುವ ಜನರಿಂದ ಬೀದಿಗಳಲ್ಲಿ ಅಭಿನಯಗೊಳ್ಳುವ ನಾಟಕ. ಇದು ನಮ್ಮ 'ಯಕ್ಷಗಾನ' ('ದೊಡ್ಡಾಟ')ವನ್ನು ಬಹುವಾಗಿ ಹೋಲುತ್ತದೆ.

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ 'ದಾಸರಾಟ' ಗಮನಾರ್ಹವಾದುದು.[47] ಇದರಲ್ಲಿ ಹೆಂಗಸರು ಮತ್ತು ಗಂಡಸರು ಪ್ರತ್ಯೇಕ ಮೇಳಗಳಾಗಿ ನಿಂತು ('ಹೆಣ್ಣುದಾಸ'ರು ಮತ್ತು 'ಗಂಡುದಾಸ'ರು) ಇದರಲ್ಲಿ ಭಾಗವಹಿಸುತ್ತಾರೆ. ನಾಯಕ (ಇವನನ್ನು 'ಗೊಡ್ಡಿ ಭೀಮಣ್ಣ' ಎನ್ನುತ್ತಾರೆ). ನಾಯಕಿಯಲ್ಲಿ ಪ್ರಣಯಭಿಕ್ಷೆಯನ್ನು ಬೇಡುತ್ತಾನೆ. ನಾಯಕಿ ತಿರಸ್ಕರಿಸುತ್ತಾಳೆ. ಮುಂದೆ ಇವರಲ್ಲಿ ವಾದ, ವಿವಾದ, ಹಾಡು ಎಲ್ಲ ನಡೆಯುತ್ತದೆ. ವಿದೂಷಕ ('ಜವಾರಿ')ಮಧ್ಯೆ ನಗಿಸಲು ಸಿದ್ಧನಾಗಿರುತ್ತಾನೆ.[48]

---

[43] J. C. Mathur: Drama in Rural India (Asia Publishing House, Bombay, 1964), p. 80.

[44] ಅದೇ ಪು. ೮೧–೨.

[45] Indian Drama (The Publication Division, Ministry of Information and Broadcasting, New Delhi, 1956) p. 91.

[46] ಅದೇ.

[47] ಮಹಾರಾಷ್ಟ್ರದ 'ತಮಾಷಾ' ಕರ್ನಾಟಕದ 'ದಾಸರಾಟ'ದಿಂದ ಪ್ರೇರಿತವಾದದ್ದು ಎಂಬ ಅಭಿಪ್ರಾಯವಿದೆ. (H. K. Ranganath: The Karnataka Theatre; Dharwar, 1960).

[48] ಅದೇ ಪು. ೩೯–೪೦.

ಇವುಗಳಲ್ಲಿ ಯಾವುದಾದರೂ ಒಂದನು ಪಗರಣದ ಜೊತೆ ಸಮೀಕರಿಸಲು ಖಂಡಿತ ಸಾಧ್ಯವಿಲ್ಲ. ಆದರೂ ಈ ಎಲ್ಲ ಜನಪದ ನಾಟಕಗಳಲ್ಲಿರುವ ಕೆಲವು ಸಮಾನ ಅಂಶಗಳು ಪಗರಣದಲ್ಲಿಯೂ ಇವೆ. ಉದಾಹರಣೆಗೆ ಇವುಗಳಲ್ಲೆಲ್ಲ ಶೃಂಗಾರ ಮತ್ತು ಹಾಸ್ಯ ಅತಿಮುಖ್ಯ. ಪಗರಣದಲ್ಲಿ ಸಾಮಾಜಿಕ ವಿಡಂಬನೆ ಮಧ್ಯೆ ಕಾಣಿಸಿಕೊಳ್ಳುತ್ತಿತ್ತು. ಉಳಿದ ನಾಟಕಗಳಂತೆ. ಆದರೆ, ಉಳಿದುವು ಬೆಳೆದು ನಿಂತ ನಾಟಕಗಳು; ಪಗರಣವು ನಾಟಕ ಲಕ್ಷಣಗಳನ್ನು ಗರ್ಭೀಕರಿಸಿಕೊಂಡಿರುವ ಒಂದು ಕಲೆ. ಮೇಲೆ ಕೊಟ್ಟಿರುವ ಮೂರನೆಯ ಬಗೆಯ ಪಗಣದ ಪ್ರಕಾರವು (Form) ರಚನೆಯ ದೃಷ್ಟಿಯಿಂದ ಬಹಳ ಗಮನಾರ್ಹವಾದುದು. ಅದರ ಇನ್ನೂ ಆಳವಾದ ಪರಿಶೀಲನೆ ಭಾರತೀಯ ನಾಟಕ ಪರಂಪರೆಯ ಉಗಮದ ಬಗ್ಗೆ ವಿಚಾರ ಮಾಡಲು ಕೆಲವು ಮೌಲಿಕ ಸೂಚನೆಗಳನ್ನು ಕೊಡಬಹುದು.

'ಪಗರಣ' ಸಾಮಾನ್ಯ ಜನತೆಯ ವಿನೋದಕ್ಕಾಗಿ ಇದ್ದಂತೆಯೇ, ಸೂತ್ರದ ಬೊಂಬೆಯಾಟ, ತೊಗಲುಬೊಂಬೆಯಾಟಗಳೆಂಬ ಜನಪದ ನಾಟಕಗಳೂ ಇದ್ದುವು. ಸೂತ್ರದ ಬೊಂಬೆಯಾಟಗಳನ್ನು ಆಡಿಸುವವನು 'ಸೂತ್ರಧಾರ.' ಬೊಂಬೆಗಳನು 'ಸೂತ್ರದ ಹಾಹೆ'ಗಳೆಂದೂ ಕರೆಯುತ್ತಿದ್ದರು. 'ಕಪ್ಪಡದ ಹಾಹೆ' (ಬಸವರಾಜ ದೇವರ ರಗಳೆ, ಪು. ೫೦) ಎಂಬ ಮಾತು ಬಟ್ಟೆಯಲ್ಲಿ ಹೊಲಿದ ಬೊಂಬೆಗಳನ್ನು ಸೂಚಿಸುತ್ತದೆ. ವಿಜಯನಗರ ಕಾಲದಲ್ಲಿದ್ದ ನೂರೊಂದು ವಿರಕ್ತರಲ್ಲಿ 'ಬೊಂಬೆ ಕಟ್ಟಿ ಮೆರೆಸುವ ಶಾಂತ', 'ಬೊಂಬೆಯ ಮಾಳ್ಪ ಶಾಂತ', ಎಂಬ ಇಬ್ಬರು ಸನ್ಯಾಸಿಗಳಿದ್ದಂತೆ ತಿಳಿದುಬರುತ್ತದೆ.[49] ಈ ಕಲೆಗಳ ಬಗ್ಗೆ ದೊರಕುವ ಉಲ್ಲೇಖಗಳನ್ನು ಆಧಾರವಾಗಿಟ್ಟುಕೊಂಡು ಬೇರೊಂದು ಪ್ರಬಂಧವನ್ನು ಬರೆಯುವ ಅಗತ್ಯವಿದೆ.

---

49 ಷಟ್‌ಸ್ಥಲ ಜ್ಞಾನಸಾರಾಮೃತ (ಸಂ. ಆರ್. ಸಿ. ಹಿರೇಮಠ. ಧಾರವಾಡ, ೧೯೬೪), ಮುನ್ನುಡಿ, ಪು. ೧೨ ನೋಡಿ.

(ಅನು) ಕೆ. ಎಸ್. ಶಿವರಾಂ
ಎಚ್. ಎಸ್. ಹರಿಶಂಕರ್

ಬಿಳಿ ಕೊಂಬು

ಉಸಲ್ಕೈವ್ ತನ್ನ ಕುದುರೆಯನ್ನು ನಿಲ್ಲಿಸಿ ಹಿಂದಿರುಗಿ ನೋಡಿದ. ದೂರದಲ್ಲಿ ಗಂಭೀರವಾಗಿ ಬೆಟ್ಟವೊಂದು ನಿಂತಿತ್ತು. ಅದರ ತುಟ್ಟ ತುದಿಯಲ್ಲಿ ಬಿಳುಪಾದ ಹಲ್ಲು ಕಾಣುತ್ತಿತ್ತು. ಆ ಬೆಟ್ಟ ಸುತ್ತಮುತ್ತಲ ಬೆಟ್ಟಗಳಿಗಿಂತ ಎತ್ತರವಾಗಿತ್ತು. ಅದರ ಮೊನಚಾದ ತುದಿ ಒಂದು ಬೃಹದಾಕಾರವಾದ ಕೊಂಬನ್ನು ಹೋಲುತ್ತಿತ್ತು.

ಉಸಲ್ಕೈವ್ ದೀರ್ಘಕಾಲ ಆ ಕಡಿದಾಗಿ ಏರಲು ದುಸ್ಸಾಧ್ಯವಾದ ಬೆಟ್ಟವನ್ನೇ ದಿಟ್ಟಿಸುತ್ತಿದ್ದನು. ಅವನಿಗೆ ನಾಚಿಕೆಯಾಯಿತು. ಅವನು ಇನ್ನೇನು ತುದಿ ತಲುಪುವುದರಲ್ಲಿದ್ದಾಗ ಹಿಂದಿರುಗಿ ಬಂದಿದ್ದನು. ಅವನು ಬೆಟ್ಟದ ಬುರುಜಾದ ಇಳಿಜಾರಿನಲ್ಲಿ ಜೋತಾಡುತ್ತಾ ನಿಂತಿದ್ದನು. ಅಲ್ಲಿ ಮೇಲಿನಿಂದ ಕಲ್ಲುಗಳು ಬೀಳುತ್ತಿದ್ದವು. ಸ್ವಲ್ಪ ಕೆಳಕ್ಕಾಗಲಿ ಮೇಲಕ್ಕಾಗಲಿ ಚಲಿಸಲು ಪ್ರಯತ್ನಿಸಿದರೆ ತಾನು ಅಲ್ಲಿಂದ ನೇರವಾಗಿ ನೆಲಕ್ಕೆ ಉರುಳಿ ಬೀಳಬಹುದೆಂದು ಅವನಿಗನ್ನಿಸಿತು. ಸಮಯ ನಿಧಾನವಾಗಿ ಮುಂದೋಡಿತು.ಅವನು ಕೊನೆಗೂ ನಿರ್ಧರಿಸಿ, ಪಕ್ಕಕ್ಕುರುಳಿ, ಹೊರಳಾಡುತ್ತ ಬಂದು ತನ್ನ ಬೆರಳುಗಳ ಆಸರೆಯಿಂದ ಒಂದು ಕಲ್ಲನ್ನು ಹಿಡಿದು ನಿಂತನು.

ಒಬ್ಬಂಟಿಗನಾಗಿ ಆತ ಸಾವಿನ ದವಡೆಯಲ್ಲಿ ಹೋರಾಡುತ್ತಿದ್ದನು.

ಭೂವಿಜ್ಞಾನ ದಳದವರ ಕೆಲಸ ಮುಗಿಯುತ್ತ ಬಂದಿತ್ತು. ಉಸಲ್ಕೈವ್ ಹೇಳಿದಂತೆ ಅಲ್ಲೇನು ಸತುವಿನ ಭಾರಿ ನಿಕ್ಷೇಪಗಳು ಕಂಡುಬಂದಿರಲಿಲ್ಲ. ಬಿಳಿಯ ಕೊಂಬು ಮಾತ್ರ ಇದಕ್ಕೆ ಉತ್ತರವಾಗಿತ್ತು. ಅದರ ತುಟ್ಟತುದಿಯಲ್ಲಿ, ಬೆಟ್ಟದಡಿಯಲ್ಲಿ ಅಡಗಿರಬಹುದಾದಂಥ ಭಾರಿ ನಿಕ್ಷೇಪಗಳ ಸೂಚನೆಯಿತ್ತು. ಸತು! ದೇಶಕ್ಕೆ ಎಷ್ಟು ಅಗತ್ಯವಾಗಿ ಬೇಕಾಗಿದ್ದ ಖನಿಜ! ಆ ಭೂವಿಜ್ಞಾನಿಗೆ ಇದು ಚೆನ್ನಾಗಿ ಮನವಟ್ಟಾಗಿತ್ತು. ಅದ್ದರಿಂದ ತನಗೆ ಈ ನಿಸ್ಸಹಾಯಕ ಸ್ಥಿತಿ ಒದಗಿದ್ದಕ್ಕಾಗಿ ಆತ ಬಹಳ ಪೇಚಾಡಿಕೊಂಡಿದ್ದ. ತಾನು ಸಾವಿನಿಂದ ಪಾರಾದದ್ದು ಅದ್ಭುತವೆಂದೆನಿಸಿದರೂ ಮತ್ತೊಮ್ಮೆ ಅದನ್ನು ಹತ್ತಲು ನಿರ್ಧರಿಸಿದ.

ನಿಜವಾಗಿಯೂ, ಉಸಲ್ಕೈವ್ ತನ್ನ ಸಹಾಯಕ ಅರಸ್ಲಾನನೊಂದಿಗೆ ಮತ್ತೊಮ್ಮೆ ವಿಜಯ ಸಾಧಿಸಲು ಮುನ್ನಡೆದನು.

ಅವನಿಗೆ ಈ ಸಾರಿ ನೂರು ಮೀಟರ್‌ಗಳಷ್ಟು ಮೇಲೇರಲು ಸಾಧ್ಯವಾಯಿತು. ಅಂದರೆ ಬೆಟ್ಟದ ಒಂದನೇ ಮೂರು ಭಾಗವನ್ನು ಏರಿದ್ದನು. ತುದಿ ತಲುಪಬೇಕಾದರೆ ಇನ್ನೂ ಇನ್ನೂರು ಮೀಟರ್ ಗಳಷ್ಟು ಕಡಿದಾದ, ಹತ್ತಲಸಾಧ್ಯವಾದ ಎತ್ತರವಿತ್ತು.

ಭೂವಿಜ್ಞಾನಿ ಬಹಳ ಹೊತ್ತು ತುದಿಯನ್ನೇ ನೋಡುತ್ತಿದ್ದ. ಆ ಕ್ಷಣದಲ್ಲಿ ಹಲ್ಲಿನಂತಿದ್ದ ತುದಿಯ ಬುಡದಲ್ಲಿ ಒಂದು ಸಮ ಪ್ರದೇಶ ಕಾಣಿಸಿತು. ಆ ಪ್ರದೇಶದ ಮೇಲ್ಮೈ ಅವನು ನಿಂತಲ್ಲಿಂದ ಕಾಣಿಸುತ್ತಿರಲಿಲ್ಲ.

"ಹೀಗಾಗಲು ಹೇಗೆ ಸಾಧ್ಯ. ನನಗೆ ಹಿಂದೆ ಈ ಸಮಪ್ರದೇಶ ಏಕೆ ಕಾಣಿಸಿರಲಿಲ್ಲ? ಅಲ್ಲಿ ತಲುಪಿದರೆ ತುದಿ ಮುಟ್ಟಿದಂತೆಯೇ"

ಉಸಲ್ಯೆಸೆವ್‌ನಿಗೆ ನಿಂತು ಆಯಾಸವಾಗಿತ್ತು, ಬೆಟ್ಟದ ತುದಿಯಿಂದ ಕಣ್ಣು ಕೀಳದಂತೆ ಹತ್ತಿರದಲ್ಲೇ ಇದ್ದ ಒಂದು ಕಲ್ಲಿನ ಮೇಲೆ ಕುಳಿತ.

"ಯಾಕೋ ಪೆಚ್ಚಾಗಿದ್ದೀಯ ಉಸಲ್ಯೆಸೆವ್–ಮಾತಾಡದೆ ಸುಮ್ಮನೆ ಕುಳಿತಿದ್ದೀಯ. ನೀನು ಬಿಳಿ ಕೊಂಬನ್ನು ಬಹಳ ಪ್ರೀತಿಸುತ್ತೀಯೆಂದು ನನಗೆ ಗೊತ್ತು" ಸಂಗಾತಿ ನಗುತ್ತ ಹೇಳಿದ, "ಬಿಳಿ ಕೊಂಬನ್ನು ಏರಿದ ವ್ಯಕ್ತಿಯ ಬಗ್ಗೆ ನಮಲ್ಲೊಂದು ಕಥೆಯಿದೆ."

"ಏಕೆ ಮೊದಲೇ ಆ ವಿಷಯ ನನಗೆ ಹೇಳಲಿಲ್ಲ. ಅರಸ್ಲಾನ್! ಈಗ ಹೇಳು" ಉಸಲ್ಯೆಸೆವ್ ಕೌತುಕದಿಂದ ಕೇಳಿದ.

ಅರಸ್ಲಾನ್ ಕಥೆ ಹೇಳಲು ಪ್ರಾರಂಭಿಸಿದ.

ಈ ನಾಡನ್ನು ಹಿಂದೆ ಒಬ್ಬ ಧೀರ ಖಾನ್ ದೊರೆ ಆಳುತ್ತಿದ್ದ. ಒಂದು ದಿನ ತನ್ನ ದೊಡ್ಡ ಸೈನ್ಯದೊಂದಿಗೆ ದೂರದ ಊರಿಗೆ ಹೋದ. ಅಲ್ಲಿ ದರೋಡೆಗಾರರ ಗುಂಪನ್ನು ಎದುರಿಸಿದ. ರಕ್ತಪಾತದಿಂದ ಕೂಡಿದ ಹೊಡೆದಾಟವಾಯಿತು. ದರೋಡೆಗಾರರು ಹೊಡೆತ ತಿಂದು ದಿಕ್ಕಾಪಾಲಾದರು. ಖಾನನಿಗೆ ಭಾರಿ ನಿಕ್ಷೇಪ ದೊರಕಿತು. ಎಲ್ಲಕ್ಕಿಂತ ಹೆಚ್ಚಾಗಿ ಖಾನನಿಗೆ ಆ ಗುಂಪಿನಲ್ಲಿದ್ದ ಅಸಾಧಾರಣ ಚೆಲುವೆಯೊಬ್ಬಳ ಮೇಲೆ ಬಹಳ ಮನಸ್ಸಾಯಿತು. ಅವಳು ಯಾವುದೋ ದೂರದ ಊರಿನಿಂದ ತನ್ನ ತಂದೆ ಬಳಿ ಹೋಗುತ್ತಿದ್ದಾಗ ಫಿರ್‌ಗಾನ್ ಕಣಿವೆಯಲ್ಲಿ (ಉಸ್‌ಬೆಕ್–ತಜಕಿ ಮತ್ತು ಕಿರ್‌ಗಿಜ್ ಪ್ರಾಂತ್ಯಗಳಲ್ಲಿಯ ಕರಾವಳಿಯಲ್ಲಿರುವ ಕಣಿವೆ) ದರೋಡೆಗಾರರು ಅಪಹರಿಸಿದ್ದರು. ಖಾನ್ ಅವಳನ್ನು ಈ ಗುಡ್ಡಗಾಡಿಗೆ ಕರೆತಂದು ಇಲ್ಲಿನ ಹಳೆಯ ಪದ್ಧತಿಯಂತೆ ತನ್ನ ಮತ್ತು ತನ್ನ ಇಬ್ಬರು ದೊಡ್ಡ ಗಂಡು ಮಕ್ಕಳ ಉಪಪತ್ನಿಯಾಗಿ ಇರಿಸಿಕೊಂಡ.

ಎರಡು ವರುಷ ಹೀಗೆ ಕಳೆಯಿತು. ಆ ವರುಷ ಬೇಸಿಗೆಯಲ್ಲಿ ಖಾನನು ಹಸಿರು ಕಣಿವೆಯ ಅಂಚಿನಲ್ಲಿ ಬಿಡಾರ ಮಾಡಿದನು. ಅಕ್ಕಪಕ್ಕದ ಸ್ನೇಹಮಯಿ ಗುಂಪಿನ ನಾಯಕರು ಅವನಲ್ಲಿಗೆ ಅತಿಥಿಗಳಾಗಿ ಬಂದರು.

ಅನಿರೀಕ್ಷಿತವಾಗಿ ಈ ಜಾಗಕ್ಕೆ ಒಬ್ಬ ಸೈನಿಕ ಬಂದ. ಅವನು ಕುದುರೆಯನ್ನೇರಿರದೆ ಒಂದು ಬಿಳಿ ಒಂಟೆಯ ಮೇಲೆ ಬಂದಿದ್ದ. ಬಂದವನೆ ತನ್ನನ್ನು ಖಾನನ ಬಳಿಗೆ ಕರೆದೊಯ್ಯಬೇಕೆಂದು ಆಜ್ಞಾಪಿಸಿದ್ದ. ನಿಧಾನವಾಗಿ ಅವನು ತನ್ನ ಆಯುಧಗಳನ್ನು ರತ್ನಕಂಬಳಿಯ ಮೇಲಿಡುತ್ತಾ ಗೌರವದಿಂದ ಹಾಗೂ ಧೈರ್ಯದಿಂದ ಖಾನನಿಗೆ ವಂದಿಸಿದನು.

ಧೈರ್ಯಶಾಲಿ ನಾಯಕ ಮತ್ತು ಪ್ರಾಮಾಣಿಕ ಮನುಷ್ಯನ ಮೋರೆಯಂತೆ ಸೈನಿಕನ ಹುಬ್ಬು ಗಂಟಿಕ್ಕಿದ ಮೋರೆ ಕಾಣುತ್ತಿತ್ತು.

"ಖಾನ್ ಪ್ರಭುಗಳೆ", ಸೈನಿಕ ಹೇಳಿದ. "ನಾನು ಬಹುದೂರದ ಬಿಸಿಲು ಪ್ರದೇಶದಿಂದ ನಿಮ್ಮಲ್ಲಿಗೆ ಬಂದಿದ್ದೇನೆ. ನನ್ನ ಪ್ರಯಾಣ ಬಹಳ ಪ್ರಯಾಸಕರವಾಗಿತ್ತು. ವರ್ಷವಿಡೀ ಗುಡ್ಡಗಾಡಿನಲ್ಲಿ ಕಣಿವೆಗಳಲ್ಲಿ ದಾರಿ ತಪ್ಪಿ ಓಡಾಡುತ್ತಿದ್ದೆ. ಪಿಸುಮಾತುಗಳು ಮತ್ತು ಕತೆಗಳು ನನ್ನನ್ನು ಇಲ್ಲಿಗೆ ಕರೆತಂದವು. ಸೈದ್ಯುರುಷ್ ಎಂಬ ಹೆಣ್ಣು ನಿಮ್ಮಲ್ಲಿದೆಯೆ?"

ಖಾನ್ ಹೌದೆಂಬಂತೆ ತಲೆಯಾಡಿಸಿದ. ಸೈನಿಕ ಮಾತು ಮುಂದುವರೆಸಿದ.

"ಖಾನ್, ಆ ಹುಡುಗಿ ನನ್ನ ಪ್ರೇಯಸಿ. ನಾನು ಅವಳಿಗಾಗಿ ಬಹಳ ಊರುಗಳನ್ನು ಸುತ್ತಾಡಿದೆ. ಹಿಂದಿನಂತೆಯೇ ನನಗೆ ಅವಳಲ್ಲಿ ಪ್ರೇಮ ಗಾಢವಾಗಿದೆ. ಅವಳನ್ನು ನನಗೆ ಹಿಂದಿರುಗಿಸು, ಖಾನ್ ಪ್ರಭು. ಅವಳು ನನಗಾಗಿ ದೀರ್ಘಕಾಲ ನಂಬಿಕೊಂಡು ಕಾದಿರುವಳೆಂದು ನನಗೆ ಗೊತ್ತು."

ತಿಳಿನಗೆ ಖಾನನ ಮುಖದ ಮೇಲೆ ಹರಿದಾಡಿತು. ಅವನು ಹೇಳಿದ

"ಸ್ನೇಹಮಯಿ ಸೈನಿಕನೆ, ನೀನು ನನ್ನ ಅತಿಥಿಯಾಗಿರು."

ಆ ಸೈನಿಕ ಆಹ್ವಾನವನ್ನು ಸ್ವೀಕರಿಸಿದ. ಸಮಾರಂಭಕ್ಕೆ ಬಹಳ ಅತಿಥಿಗಳು ಬಂದಿದ್ದರು. ಸಂಗೀತಗಾರರು ಖಾನ್ ಮತ್ತು ಅವನ ಮಕ್ಕಳ ಪ್ರೀತಿಪಾತ್ರಳಾಗಿದ್ದ ಸೈದ್ಯುರುಷಳನ್ನು ಹೊಗಳುತ್ತಾ ಹಾಡುಗಳನ್ನು ಹಾಡಿದರು.

ಸೈನಿಕನ ಮುಖ ಆಗ ಹೇಗೆ ಹೆಚ್ಚು ಹೆಚ್ಚಾಗಿ ಹೆಚ್ಚಾಗುತ್ತಿತ್ತೆಂದು ಖಾನ್ ಗಮನಿಸಿದ. ಒಬ್ಬ ವೃದ್ಧ ಸಂಗೀತಗಾರ ಸೈದ್ಯುರುಷಳು ತನ್ನ ನಾಯಕರನ್ನು ಅಪಾರವಾಗಿ ಪ್ರೀತಿಸುತ್ತಾಳೆಂಬ ಬಗ್ಗೆ ಹಾಡನ್ನು ಹೇಳಿದಾಗ. ಸೈನಿಕ ಕುಳಿತಲ್ಲಿಂದ ದಿಗ್ಗನೆದ್ದು ಆ ಸಂಗೀತಗಾರನತ್ತ ಅರಚಿದ

"ಮುಚ್ಚು ಬಾಯಿ–ನೀನು ಹೇಳುತ್ತಿರುವುದೆಲ್ಲ ಸುಳ್ಳು."

ಆ ಕೂಗು ಬಂದಿದ್ದ ಅತಿಥಿಗಳ ಗಮನ ಸೆಳೆಯಿತು. ಹಲವಾರು ಯುವಕರು ಈತನ ಮೇಲೆ ಎರಗಿದರು. ಕತ್ತಿಗಳು ಝಳಪಿಸಿದವು. ಆ ಸೈನಿಕನಾದರೊ ಧೈರ್ಯದಿಂದ ಶತ್ರುಗಳನ್ನು ಎದುರಿಸಿದ. ಇಬ್ಬರು. ಮೂವರು. ಐವರು ರಕ್ತಕಾರುತ್ತ ಕೆಳಕ್ಕುರುಳಿದರು. ಆದರೆ ಸೈನಿಕ ಏನೂ ಆಗದಂತೆ ನಿಂತಿದ್ದ.

"ನಿನಗೇನು ಬೇಕು–?" ಖಾನ್ ಕೋಪೋದ್ರಿಕ್ತನಾಗಿ ಕೇಳಿದ.

"ಸತ್ಯ" ಸೈನಿಕ ಹೇಳಿದ.

"ಸತ್ಯ?" –"ಒಳ್ಳೆಯದು. ತಿಳಿದುಕೋ ನಾನು ಎಂದೂ ಸುಳ್ಳನ್ನು ಹೇಳದಿದ್ದವನು ನಿನಗೆ ಹೇಳುತ್ತೇನೆ. ಸಂಗೀತಗಾರರು ಹೇಳಿದ್ದೆಲ್ಲಾ –ಸತ್ಯ!"

ಸೈನಿಕ ಮುಂದೆ ಹೆಜ್ಜೆ ಇಡಲು ಹೋಗಿದ್ದವನು ತನ್ನ ಆಯುಧವನ್ನು ಚೀಳಿಸಿದ–ಶೋಕತಪ್ತತೆಯಿಂದ ಮತ್ತು ವಯಸ್ಸಾದವನಂತೆ ಅವನ ಮುಖ ಕಂಡಿತು.

"ಏನು ಅವಳನ್ನು ನಿನಗೊಪ್ಪಿಸಬೇಕೆಂದು ಮತ್ತೆ ನೀನು ಕೇಳುತ್ತಿಯೇನು?" ಖಾನ್ ಪ್ರಶ್ನಿಸಿದ.

ಸೈನಿಕ ಕಣ್ಣುಗಳನ್ನು ಮಿಟುಕಿಸುತ್ತಾ ನೆಟ್ಟಗೆ ನಿಂತ

"ಹೌದು ಖಾನ್–" ಎಂದು ಉತ್ತರಿಸಿದ.

ಖಾನ್ ನಕ್ಕ

"ಆಗಲಿ–ನಾನು ಅವಳನ್ನು ಕಳುಹಿಸುವೆ. ಆದರೆ ನೀನದಕ್ಕೆ ಅಪಾರ ಬೆಲೆ ಕೊಡಬೇಕು."

"ನಾನು ಸಿದ್ಧ" ಸೈನಿಕ ಹೇಳಿದ.

ಖಾನ್ ನಕ್ಕ

"ಇದು ಎತ್ತಿನ ವರುಷ ಯಾರು ತನ್ನ ಕತ್ತಿಯನ್ನು ಈ ಕಲ್ಲಿನ ಎತ್ತಿನ ಕೊಂಬಿನ ಮೇಲಿಡುತ್ತಾರೊ ಅವರು ತಮ್ಮ ವಂಶದ ಮರ್ಯಾದೆಯನ್ನು ಸಾವಿರವರುಷಗಳವರೆಗೆ ಕಾಪಾಡುತ್ತಾರೆ. ಹಲವು ಧೈರ್ಯಶಾಲಿಗಳು ಹಾಗೆ ಮಾಡಲು ಯತ್ನಿಸಿದರು, ಎಲ್ಲರೂ ಸತ್ತರು. ಬೆಳ್ಳಿಯ ಕೊಂಬು ಯಾರಿಗೂ ಎಟುಕಲಾರದೆ ಹೋಯಿತು". "ನಿನ್ನ ಪ್ರೇಯಸಿಗಾಗಿ ನಿನ್ನಿಂದ ಬರಬೇಕಾದ ಕಾಣಿಕೆ" ಖಾನ್ ಹೇಳಿದ "ಬಿಳಿ ಕೊಂಬಿನಮೇಲೆ ಹತ್ತಿ ಅದರ ತುದಿಯಲ್ಲಿ ನನ್ನ ಚಿನ್ನದ ಕತ್ತಿಯನ್ನಿಡು–ಆಗ ನೀನು ನಿನ್ನ ಹೆಣ್ಣನ್ನು ಹಿಂದಕ್ಕೆ ಪಡೆಯುವೆ."

ಖಾನನ ಧ್ವನಿ ಮರಣದಂಡನೆಯ ಆಜ್ಞೆಯಂತೆ ಕೇಳಿಸಿತು. ಆದರೆ ಸೈನಿಕ ಅಲ್ಲಾಡಲಿಲ್ಲ. ಖಾನನ ಪ್ರಖ್ಯಾತ ಚಿನ್ನದ ಕತ್ತಿಯನ್ನು ಸೇವಕರು ತಂದರು. ಸಾವಿರಾರು ಜನ ಬಿಳಿ ಕೊಂಬಿನ ಬೆಟ್ಟಕ್ಕೆ ಹೋದರು. ಸಂಜೆಯ ವೇಳೆಗೆ ಖಾನ್ ಮತ್ತು ಅವನ ಅತಿಥಿಗಳು ದಣಿದ ಕುದುರೆಗಳಿಂದ ಕೆಳಗಿಳಿದರು. ಖಾನ್ ಸೈನಿಕನಿಗೆ ಸುಧಾರಿಸಿಕೊಳ್ಳುವಂತೆ ಹೇಳಿದ. ಆ ಸೈನಿಕ ಖಾನನ ಸೈನಿಕರ ರಕ್ಷಣೆಯಲ್ಲಿ ರಾತ್ರಿ ಸುಖವಾಗಿ ನಿದ್ರಿಸಿದ.

ಮರುದಿನ ಬೆಳಕು ಹರಿಯಿತು. ಕಡಿದಾದ ಬೆಟ್ಟದ ಸುತ್ತಲೂ ಗಾಳಿ ಸುಯ್‌ಗುಡುತ್ತಿತ್ತು. ಸೈನಿಕ ತನ್ನ ಬಟ್ಟೆ ಕಳಚಿ ಖಾನನ ಚಿನ್ನದ ಕತ್ತಿಯನ್ನು ಬೆನ್ನಿಗೆ ಕಟ್ಟಿಕೊಂಡನು. ಇದುವರೆಗೂ ಎಲ್ಲರಿಗೂ ಏನು ಅಸಾಧ್ಯವಾಗಿತ್ತೊ ಅದನ್ನು ಅವನು ಸಾಧಿಸಿದನು. ಅವನು ಕತ್ತಿಯನ್ನು ಕೊಂಬಿನ ಮೇಲಿಟ್ಟು ಮರಳಿ ಇಳಿದು ಬಂದನು. ಖಾನ್ ತನ್ನ ವಚನವನ್ನು ಪಾಲಿಸಿದನು. ಸೇವಕರು ಸೈದ್ಯುರುಷಳನ್ನು ಸೈನಿಕನಿಗೆ ತಂದೊಪ್ಪಿಸಿದರು. ಅವನನ್ನು ನೋಡುತ್ತಿದ್ದಂತೆ ಅವಳು ಭಯದಿಂದ ಹಿಂಜರಿದಳು. ಸೈನಿಕ ಅಧಿಕಾರ ವಾಣಿಯಿಂದ ಅವಳನ್ನು ತನ್ನಲ್ಲಿಗೆ ಎಳೆದುಕೊಂಡನು. ಅವಳ ಮುದ್ದು ಮೊಗವನ್ನು ಮೇಲಕ್ಕೆತ್ತಿ ಬಹಳ ಹೊತ್ತು ತನ್ನ ಕಳಾಹೀನವಾದ ನೋಟದಿಂದ ನೋಡಿದನು. ಅನಂತರ ಕಠಾರಿ ಹಿರಿದು ಅವಳ ಎದೆಗೆ ತಿವಿದನು. ಖಾನನ ಮಕ್ಕಳು ರೋಷಾವೇಶದಿಂದ ಸೈನಿಕನ ಮೇಲೆರಗಿದರು. ಆದರೆ ಖಾನ್ ಅವರನ್ನು ತಡೆದನು.

"ಅವನು ಅವಳಿಗಾಗಿ ಅಪಾರ ಬೆಲೆಯನ್ನು ಕೊಟ್ಟಿದ್ದಾನೆ. ಅವಳು ಅವನ ಸೊತ್ತು. ಅವನಿಗೆ ಆಯುಧ ಮತ್ತು ಒಂಟೆಯನ್ನು ಹಿಂದಿರುಗಿಸಿ."

ಸೈನಿಕ ಹೆಮ್ಮೆಯಿಂದ ಖಾನನಿಗೆ ವಂದಿಸಿದ. ಸ್ವಲ್ಪ ಸಮಯದಲ್ಲಿ ಅವನ ಬಿಳಿಯ ಒಂಟೆ ದೂರ ದಲ್ಲಿ ನಡೆದಿತ್ತು.

* * * *

ಬಿರುಗಾಳಿಯಿಂದ ದೂಡಲ್ಪಟ್ಟ ಮೋಡಗಳು ಆಕಾಶದಲ್ಲಿ ಬೇಗ ಬೇಗ ಚಲಿಸಿದವು. ಬೆಟ್ಟಗಳು ಕಳಾವಿಹೀನವಾಗಿ ಕಂಡವು. ಉಸಲ್ಸೈವನಿಗೆ ಗಂಟಲು ಬಿಗಿದಂತಾಯಿತು. ಅವನು ಹೆಚ್ಚಿನ ಬಟ್ಟೆ ಗಳನ್ನು ಕಳಚಿ, ಬೂಟುಗಳನ್ನು ಬಿಚ್ಚಿಹಾಕಿ ಕೈಯಲ್ಲಿ ಸುತ್ತಿಗೆಯನ್ನು ತೆಗೆದುಕೊಂಡನು.

ಬಹಳ ಹೊತ್ತು ಕಳೆಯಿತು. ಭೂವಿಜ್ಞಾನಿ ಕಳೆದ ಬಾರಿ ಸಾಹಸದಿಂದ ಹಿಂದಿರುಗಿದ ಸ್ಥಳಕ್ಕಿಂತ ಇನ್ನೂ ಎತ್ತರದಲ್ಲಿದ್ದನು. ಈಗ ಅವನು ನೂರೈವತ್ತು ಮೀಟರ್‌ಗಳ ಎತ್ತರದಲ್ಲಿ ಒಂದು ಮೊನಚಾದ ಕಲ್ಲಿನಂಚಿನ ಮೇಲೆ ಬೆರಳುಗಳ ಆಸರೆಯಲ್ಲಿ ನಿಂತು ಆಯಾಸದಿಂದಾಗಿ ನಡುಗುತ್ತಿದ್ದನು. ಒಂದು ಗಳಿಗೆ ಕೈಯನ್ನು ಬಿಟ್ಟರೂ ತಾನು ಉಳಿಯುವುದಿಲ್ಲವೆಂದು ಅವನಿಗೆ ಅರಿವಾಯಿತು. ಅವನ ಪರಿಸ್ಥಿತಿ ನಿರಾಶಾದಾಯಕವಾಗಿತ್ತು. ಅವನ ಹೃದಯಾಂತರಾಳದಲ್ಲಿ ಹತಾಶೆ ಉಕ್ಕೇರುತ್ತಿತ್ತು. ಆ ಕ್ಷಣದಲ್ಲಿ ಅವನು ಯೋಚಿಸಿದ. "ಆ ಸೈನಿಕ ಹೇಗೆ ಹತ್ತಿದ? ಗಾಳಿ...ಹೌದು ಅವನೂ ಇದೇ ಬಿರುಗಾಳಿಯಲ್ಲೇ ಹತ್ತಿದ್ದನು."

ಉಸಲ್ಸೈವ್ ಅರಿವಿಲ್ಲದಂತೆಯೇ ಪಕ್ಕಕ್ಕೆ ಸರಿದು ಸಣ್ಣ ದಿಬ್ಬವನ್ನು ದಾಟಿ ನುಣುಪಾದ ಕಲ್ಲಿನ ಮೇಲೆ ಬೆರಳುಗಳಿಂದ ಬಿಗಿ ಹಿಡಿದ... ಹಿಂದಕ್ಕೆ ಸರಿದ. ಆ ಕ್ಷಣದಲ್ಲಿ ಗಾಳಿ ಅವನ ಬೆನ್ನಿಗೆ ಬಡಿಯಿತು. ಅವನು ನಿಂತಿದ್ದ ಬಂಡೆಯ ಹತ್ತಿರ ಗಾಳಿಯ ಒತ್ತಡ ಬಿರುಸಾಗಿತ್ತು. ಗಾಳಿಯ ಸಹಾಯದಿಂದ ಮೇಲೇರ ಬಹುದೆಂದು ಉಸಲ್ಸೈವ್‌ನಿಗೆ ಅರಿವಾಯಿತು. ಅವನು ಇನ್ನೂ ಐವತ್ತು ಮೀಟರ್‌ಗಳಷ್ಟು ಮೇಲೇರಿ ದನು. ಭೂವಿಜ್ಞಾನಿ ರಕ್ತದಿಂದ ತೊಯ್ದಿದ್ದ ತನ್ನ ಕಾಲನ್ನು ಮೆಲ್ಲ ಮೆಲ್ಲಗೆ ಸರಿಸುತ್ತಾ ಇನ್ನೂ ಮೇಲೆ ಮೇಲೆ ಏರಿದನು. ಹಾಗೂ ತನ್ನ ಕಾಲು ಜಾರದಿದ್ದುದನ್ನು ಕಂಡು ಆಶ್ಚರ್ಯಚಕಿತನಾದನು. ಹಲವಾರು ಬಾರಿ ಕೈ ಜಾರಿತು. ಕೈಗಳ ಆಸರೆಯಿಂದ ಬಂಡೆಗಳನ್ನು ಹಿಡಿದು ನೇತಾಡುತ್ತ ಮನಸ್ಸಿನಲ್ಲೆ ತನ್ನ ಆಯಸ್ಸು ಮುಗಿಯಿತೆಂದು ಲೆಕ್ಕ ಹಾಕಿದನು. ಕೊನೆಗೆ ತನ್ನ ಶಕ್ತಿಯೆಲ್ಲವನ್ನೂ ಒಟ್ಟುಗೂಡಿಸಿ ಬಿಳಿಕೊಂಬಿನ ಬುಡದಲ್ಲಿದ್ದ ಸಮಪ್ರದೇಶದ ತುದಿಗೆ ಕೈ ಹಾಕಿ ಬೆರಳುಗಳ ಆಸರೆಯಿಂದ ಹಿಡಿದು ನಿಂತು ಕೈಯನ್ನು ಮಿಡಿಯುತ್ತ ಆ ಪ್ರದೇಶಕ್ಕೆ ಹತ್ತಿ ನಿಂತನು. ಆಯಾಸದ ಪರಿಣಾಮವಾಗಿ ಬಹಳ ಹೊತ್ತು ಹಾಗೆ ನೆಲದ ಮೇಲೆ ಉರುಳಿಕೊಂಡಿದ್ದನು. ಅವನಿಗೆ ಗಾಳಿಯ ಸುಯ್ ಶಬ್ದವೊಂದೇ ಕೇಳುತ್ತಿತ್ತು. ಅನಂತರ ತನ್ನ ಮಂಡಿಯೂರಿ ಮೇಲೇಳುತ್ತಾ ತನ್ನ ಮುಖವನ್ನು ಬಿಳಿಕೊಂಬಿನ ಕಡೆ ತಿರುಗಿಸಿದನು. ಈಗ ಅವನು ಅದರ ಮುಂದಿದ್ದನು. ಅದನ್ನು ಕೈಯಿಂದ ಮುಟ್ಟಿ ನೋಡಬಹುದಾಗಿತ್ತು. ಅದರಿಂದ ತನಗೆ ಬೇಕಾದಷ್ಟು ಮಾದರಿ ಕಲ್ಲು ತುಂಡುಗಳನ್ನು ತೆಗೆದುಕೊಳ್ಳಬಹುದಿತ್ತು.

ಆದರೆ ಬಿಳಿಕಲ್ಲಿನ ಮಧ್ಯದಲ್ಲಿರುವುದು ಸತುವಿನ ಅದುರು ಎಂದು ಖಚಿತ ಪಡಿಸಿಕೊಳ್ಳಲು ಒಂದೇ ಒಂದು ನೋಟ ಸಾಕಾಗಿತ್ತು. ಇದೇ ಅವನ ಸಾಹಸದ ಗುರಿಯಾಗಿತ್ತು.

ಭೂವಿಜ್ಞಾನಿ ಕೆಳಗೆ ನೋಡಿದ–ಬೆಟ್ಟ ಬಹಳ ಇಳಿಜಾರಾಗಿತ್ತು. ತನಗೂ ಮತ್ತು ಬೆಟ್ಟದ ಬುಡದಲ್ಲಿರುವ ಪ್ರಪಂಚಕ್ಕೂ ಎಲ್ಲ ರೀತಿಯ ಸಂಬಂಧ ಕಡಿದುಹೋಯಿತೆಂದು ಭಾವಿಸಿದ.

ಉಸಲ್ಟ್ಸೆವ್ ಈ ಎಲ್ಲ ಭಾವನೆಗಳನ್ನೂ ಬದಿಗೊತ್ತಿ ತನ್ನ ಕರ್ತವ್ಯದಲ್ಲಿ ನಿರತನಾದ. ಅವನ ಸುತ್ತಿಗೆಯ ಹೊಡೆತದಿಂದಾಗಿ ಬಿಳಿಯ ಕಲ್ಲಿನ ತುಂಡುಗಳು ಸದ್ದು ಮಾಡುತ್ತಾ ಬೆಟ್ಟದ ಇಳಿಜಾರಿನಲ್ಲಿ ಬಿದ್ದವು. ಅವು ಬೀಳುತ್ತಿದ್ದ ಜಾಗವನ್ನು ಗಮನದಲ್ಲಿಟ್ಟುಕೊಂಡು ತನ್ನ ಕೈಪಿಡಿಯ ನಕ್ಷೆಯ ಮೇಲೆ ಗುರುತು ಮಾಡಿದನು.

ಭೂವಿಜ್ಞಾನಿ ತನ್ನ ಪುಸ್ತಕದ ಮೊದಲ ಹಾಳೆಯನ್ನು ಬಿಡಿಸಿ ಅದರಲ್ಲಿ ಅಷ್ಟಷ್ಟು ದಪ್ಪ ಅಕ್ಷರಗಳಲ್ಲಿ ಸ್ಪಷ್ಟವಾಗಿ ಹೀಗೆ ಬರೆದನು.

"ಗಮನಿಸಿ! ಇದರಲ್ಲಿ ನಾನು ಸಂಶೋಧಿಸಿದ ಬಿಳಿ ಕೊಂಬಿನ ನಿಕ್ಷೇಪದ ಬಗ್ಗೆ ಮಾಹಿತಿಯಿದೆ."

ಪುಸ್ತಕವನ್ನು ಜೇಬಿನಲ್ಲಿಟ್ಟು ಗುಂಡಿಯನ್ನು ಹಾಕಿದನು. ಅನಂತರ ಸೊಂಟಕ್ಕೆ ಬಿಗಿದಿದ್ದ ಹಗ್ಗವನ್ನೂ ಬಿಚ್ಚಿದನು. ಅದು ಸಣ್ಣದಾಗಿತ್ತು. ಆದರೂ ತಾನು ನಿಂತ ಜಾಗದಿಂದ ಇಳಿಜಾರನ್ನು ಇಳಿಯಲು ಸಾಕಷ್ಟು ಉದ್ದವಿದ್ದಂತೆ ಕಾಣುತ್ತಿತ್ತು.

ಈ ಹಗ್ಗ ಎಲ್ಲಿಗೆ ಕಟ್ಟುವುದು?

ಅದನ್ನು ಬಿಗಿಯಲು ಒಂದು ಆಸರೆಯನ್ನು ಹುಡುಕುತ್ತಾ ಭೂವಿಜ್ಞಾನಿ ತನ್ನ ಸುತ್ತಿಗೆಯಿಂದ ನೆಲವನ್ನು ಅಗೆಯಲು ಪ್ರಾರಂಭಿಸಿದ. ಸುತ್ತಿಗೆ ಇದ್ದಕ್ಕಿದ್ದ ಹಾಗೆ ಯಾವುದೋ ಲೋಹಕ್ಕೆ ಬಡಿದಂತಾಯಿತು. ಆ ಸದ್ದು ಭೂವಿಜ್ಞಾನಿಯನ್ನು ನಿಶ್ಚೇಷ್ಟಿತನನ್ನಾಗಿ ಮಾಡಿತು. ಅವನು ಭೂಮಿಯಲ್ಲಿ ಅಡಗಿದ್ದ ಉದ್ದನೆಯ ಕತ್ತಿಯನ್ನು ಹಿಡಿದೆಳೆದನು. ಆ ಕತ್ತಿಯ ಚಿನ್ನದ ಹಿಡಿ ಪ್ರಕಾಶಮಾನವಾಗಿ ಹೊಳೆಯುತ್ತಿತ್ತು. ಅವನಿಗೆ ಜೀವ ಹಾರಿ ಹೋದಂತಾಯಿತು.

ಜಾನಪದ ಕಥೆಯ ಸೈನಿಕ ಬಿಳಿಕೊಂಬನ್ನು ಪಡೆದ ಧೀರ ಯೋಧ ಅವನ ಮುಂದೆ ಜೀವಂತವಾಗಿ ಬಂದು ನಿಂತಂತಾಯಿತು. ಗತಕಾಲದಲ್ಲಿ ನಡೆದ ಕತೆ ಆ ಮನುಷ್ಯನ ಸಾಹಸ ಎರಡೂ ಈತನನ್ನು ಮೂಕನನ್ನಾಗಿ ಮಾಡಿತು.

ಭೂವಿಜ್ಞಾನಿಗೆ ಯಾವುದೋ ಹೊಸ ಶಕ್ತಿ ಆತನ ದೇಹದಲ್ಲಿ ಹರಿದಂತಾಯಿತು. ಈ ಜಾಗದಲ್ಲಿ ಯಾರಿಗೂ ನಿಲುಕದ ಎತ್ತರದಲ್ಲಿ ಯಾವುದೋ ಸ್ನೇಹಿತ ಧೈರ್ಯದ ಮಾತುಗಳನ್ನಾಡಿದಂತಾಯಿತು. ಅವನು ಎಚ್ಚರಿಕೆಯಿಂದ ಕತ್ತಿಯನ್ನು ಎತ್ತಿ ಅದನ್ನು ಬಿಗಿಯಾಗಿ ಸೊಂಟಕ್ಕೆ ಬಿಗಿದನು. ನಗುತ್ತಾ ತನ್ನ ಸುತ್ತಿಗೆಯನ್ನು ಆ ಜಾಗದಲ್ಲಿಟ್ಟನು. ...

ಆ ಸಮ ಪ್ರದೇಶದ ತುಟ್ಟತುದಿಯಲ್ಲಿ ಭೂವಿಜ್ಞಾನಿ ಚಲಿಸದೆ ನಿಂತನು. ಗಾಳಿ ನೂಕುತ್ತಿದ್ದ ಮೋಡಗಳು ಅವನ ಮುಖದ ಮೇಲೆ ಹಾದುಹೋದವು. ಉಸಲ್ಟ್ಸೆವ್‌ನಿಗೆ ತನ್ನ ಶಕ್ತಿಯಲ್ಲಿ ನಂಬಿಕೆ ಬಂದಿತು. ಅವನು ಗಾಳಿಗೆ ಎದೆಯೊಡ್ಡುತ್ತ ತನ್ನ ಕೈಗಳನ್ನು ಅಗಲವಾಗಿ ಚಾಚಿ ತನ್ನ ಸಮತೋಲನವನ್ನು ಗಾಳಿಯ ಸಹಾಯದಿಂದ ಪಡೆಯುತ್ತ ಬೇಗ ಬೇಗ ಇಳಿಯಲು ಪ್ರಾರಂಭಿಸಿದನು. ಉಸಲ್ಟ್ಸೆವ್ ಬಂಡೆಗಳ ಮೇಲೆ ಜಾರುತ್ತ, ಅಲ್ಲಲ್ಲಿ ಅವನ್ನು ಆಸರೆಯಾಗಿ ಹಿಡಿದು ನಿಲ್ಲುತ್ತಾ ಉರುಳಾಡುತ್ತ ಮತ್ತೆ ಜಾರಿದನು. ತಾನು ಬಿಳಿ ಕೊಂಬಿನಿಂದ ಹೇಗೆ ಇಳಿದನೆಂಬುದು ಆತನಿಗೆ ಅರಿವೇ ಆಗಲಿಲ್ಲ. ಕೊನೆಯ ಗಳಿಗೆಗಳು ಮಾತ್ರ ಅವನ ಸ್ಮೃತಿಯಲ್ಲುಳಿದವು. ಬಳಲಿದ್ದ ಉಸಲ್ಟ್ಸೆವ್ ಒಂದಕ್ಕೆ ತೂರಾಡುತ್ತ ತನ್ನ ಗಾಯಗೊಂಡ ಕೈಗಳನ್ನು ಕೆಳಗೆ ಬಿಡುತ್ತಾ ಕೆಳಕ್ಕೆ ಹಾರಿದನು ......

ತಣ್ಣನೆಯ ನೀರು ಅವನ ಹಣೆಯ ಮೇಲೆ ಬಿದ್ದು, ಬಾಯಿಗೂ ಬಿತ್ತು. ಉಸಲ್ಟೈವ್ ನಿರಂತರ ವಾಗಿ ನೀರು ಕುಡಿಯುತ್ತಿದ್ದನು. ನೀರಡಿಕೆಯಿಂದ ಆತನ ದಾಹ ಹೆಚ್ಚುತ್ತಿತ್ತು. ಅವನು ಕಣ್ಣುಬಿಟ್ಟಾಗ ತಲೆಯ ಮೇಲೆ ತಿಳಿಯಾದ ನೀಲಿ ಆಕಾಶವನ್ನೂ ಭಯಗೊಂಡಿದ್ದ ತನ್ನ ಸಹಾಯಕನ ಮುಖವನ್ನೂ ಕಂಡನು. ಭೂವಿಜ್ಞಾನಿ ಮಂಡಿಯೂರಿ ಮೇಲೆದ್ದನು. ಮುದುಕ ಭೀತಿಯಿಂದ ಒಮ್ಮೆಟ್ಟಿದನು.

"ಏಕೆ ಭಯಪಡುತ್ತಿದ್ದೀಯೆ ಅರಸ್ಲಾನ್? ನಾನು ಜೀವಂತವಾಗಿದ್ದೇನೆ."

"ಎಲ್ಲಿ ಹೋಗಿದ್ದೆ ಯಜಮಾನ?" ಅರಸ್ಲಾನ್ ಕೇಳಿದ.

"ಅಗೋ ಅಲ್ಲಿ!"ಉಸಲ್ಟೈವ್ ಬೆರಳುಗಳನ್ನು ಮುಗಿಲಿಗೆತ್ತಿದನು. ಕಣಿವೆಗಳ ಮೇಲ್ಭಾಗದಲ್ಲಿ ಬಿಳಿಕೊಂಬು ಒಂಟಿಯಾಗಿ ನಿಂತಿತ್ತು–ಇಲ್ಲಿ ನೋಡು! ಅವನು ಅರಸ್ಲಾನನಿಗೆ ಚಿನ್ನದ ಒಡಿಯಿದ್ದ ಕತ್ತಿಯನ್ನು ತೆಗೆದು ತೋರಿಸಿದನು.

ಮುದುಕ ಮಂಡಿಯೂರಿ ಕೆಳಗೆ ಕುಳಿತನು. ಆದರೆ ಕತ್ತಿಯನ್ನು ಮುಟ್ಟಲಿಲ್ಲ.

"ಏಕೆ ಭಯ ತೆಗೆದುಕೊ, ನೋಡು" ಭೂವಿಜ್ಞಾನಿ ಪುನಃ ಹೇಳಿದ.

"ಇಲ್ಲ" ಮುದುಕ ತಲೆಯಾಡಿಸಿದ, "ಇದನ್ನು ಕೈಗೆ ತೆಗೆದುಕೊಳ್ಳಲು ಧೈರ್ಯವಿಲ್ಲ–ನಿನ್ನಂಥ ಧೀರನಿಗೆ ಮಾತ್ರ......"

---

* ಮೂಲ ರಷ್ಯನ್: ಇ. ಎಫ್ರೆಮೊಫ್. "ಬೈಲಿ ರೋಕ್"

ಜಿ. ಜಿ. ಮಂಜುನಾಥನ್

ಒಂದು ಸಂಕೇತಭಾಷೆ—ಕರಪಲ ಸವೃಜ್ಞಕಂ

ಜಡವಸ್ತು ಮತ್ತು ತಿರ್ಯಕ್‌ಪ್ರಾಣಿಗಳಿಂದ ಮನುಷ್ಯನನ್ನು ಬೇರ್ಪಡಿಸುವ ಒಂದು ವಿಶೇಷ ಅಂಶ ಭಾಷೆ. ಭಾಷೆ ಮಾನವ ಜೀವನದ ಒಂದು ಅನಿವಾರ್ಯ ಅಂಗ. ಅನಿಸಿಕೆಗಳನ್ನು ಹೊರಪಡಿಸುವಲ್ಲಿ ಮನುಷ್ಯ ಭಾಷೆಯನ್ನು ಬಳಸುತ್ತಾನೆ. ಅಂದರೆ ಭಾಷೆ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಒಂದು ಸಾರ್ವಜನಿಕಸಂಕೇತ. ಆ ಭಾಷೆಗೆ ಎರಡು ರೂಪಗಳು. ಒಂದು ಚಾಕ್ಷುಷ ಮತ್ತೊಂದು ಶಾಬ್ದಿಕ. ವಾತ್ಸ್ಯಾಯನನ ಕಾಮಶಾಸ್ತ್ರದ ವ್ಯಾಖ್ಯಾನಕಾರ ಜಯಮಂಗಲ ಸಾಭಾಸ, ನಿರಾಭಾಸ ಎಂದು ಭಾಷೆಯನ್ನು ವಿಂಗಡಿಸುತ್ತಾನೆ. ಅಭಿಪ್ರಾಯವನ್ನು ಭಾಷೆಯಲ್ಲಿ ವ್ಯಕ್ತಗೊಳಿಸುವಾಗ ಕೆಲವು ಬಾರಿ ರಹಸ್ಯವನ್ನು ಕಾಪಾಡಿಕೊಳ್ಳಬೇಕಾಗಿ ಬರುತ್ತದೆ ಅಥವಾ ಒಂದು ಸಂಗತಿಯನ್ನು ಸಂಕ್ಷೇಪವಾಗಿ ಹೇಳಬೇಕಾಗುತ್ತದೆ. ಆ ಸಂದರ್ಭವೇ ಸಂಕೇತಭಾಷೆಯ ಹುಟ್ಟು, ಬಹುಶಃ ಮಾನವ ಭಾಷೆಯನ್ನು ಬಳಸಲು ಆರಂಭಿಸಿದಂದಿನಿಂದಲೇ ಪ್ರಾರಂಭವಾದ ಸಂಕೇತಭಾಷೆ ಇಂದಿಗೂ ನಾಗಾಗಳಲ್ಲಿ, ಅಮೆರಿಕನ್ ಇಂಡಿಯನ್‌ಗಳಲ್ಲಿ ಪ್ರಮುಖ ಅಭಿವ್ಯಕ್ತಿಮಾಧ್ಯಮವಾಗಿರುವುದನ್ನು ಕಾಣಬಹುದು. ಬೇಡೆನ್‌ಪೋವೆಲ್‌ರ ಧ್ವಜ ಸಂಕೇತಗಳು ಮತ್ತು ತಂತಿ ಸಂದೇಶಗಳಲ್ಲಿ ಬಳಸುವ ಮೋರ್ಸ್ ಅವರ ಸಂಕೇತಗಳು ವೈಜ್ಞಾನಿಕವಾಗಿ ಬೆಳೆದು ಬಂದ ಸಂಕೇತಭಾಷೆಗಳು.

ಸಂಕೇತಭಾಷೆಯ ಉಪಯೋಗ ಭಾರತೀಯರಿಗೆ ಹೊಸದಲ್ಲ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ದೊರೆಯುವ ಉಲ್ಲೇಖಗಳು ಈ ಭಾಷೆಯ ಹಳಮೆಯನ್ನು ತೋರಿಸುತ್ತವೆ. ರಾಜನಿಗೆ ಸಮಾಚಾರವನ್ನು ತಿಳಿಸುವಾಗ "ಸಂಸ್ಥೆಗಳಲ್ಲಿನ ಅಂತೇವಾಸಿಗಳು (ಅಧಿಕಾರಿಗಳು) ಸಂಕೇತ ಕಲ್ಪಿತವಾದ ಅಕ್ಷರಗಳಿಂದ ಪತ್ರಗಳನ್ನು ಬರೆದು ತನ್ಮೂಲಕ ಒಳ ಹೊರಗಿನ ಸಮಾಚಾರಗಳನ್ನು ರಾಜನಿಗೆ ತಿಳಿಸಬೇಕು"1 ಹೀಗೆಯೇ ಶತ್ರುಗಳ ವೃತ್ತಾಂತವನ್ನು ತಿಳಿಯಬೇಕಾದ ಸಂದರ್ಭವನ್ನು ಹೀಗೆ ವರ್ಣಿಸುತ್ತಾನೆ. "ತಾಪಸ ವೈದೇಹಕರ ಶಿಷ್ಯರ ಮೂಲಕ, ವೈದ್ಯರ ಮತ್ತು ಪಾಷಂಡವೇಷವನ್ನು ಧರಿಸಿದವರ ಮೂಲಕ, ಉಭಯ ವೇತನದವರ ಮೂಲಕ ಶತ್ರುಗಳ ವೃತ್ತಾಂತವನ್ನು ತಿಳಿಯಬೇಕು. ಅವರಿಗೆ ಮಾತನಾಡಲು ಅನುಕೂಲವಾಗದಿದ್ದರೆ ಯಾಚಕರ, ಮತ್ತರ, ಉನ್ಮತ್ತರ ಮತ್ತು ನಿದ್ದೆ ಮಾಡಿದವರ ಪ್ರಲಾಪದಂತಿರುವ ಮಾತುಗಳಿಂದಲೋ, ಗೂಢಪುರುಷರಿಗೆ ಸೇರಲು ಅನುಕೂಲವಾದ ದೇವಾಲಯವೇ ಮೊದಲಾದ ಸ್ಥಳಗಳಲ್ಲಿ ಗೋಡೆಯಲ್ಲಿ ಬರೆದ ಚಿತ್ರಲೇಖಾವಿಶೇಷದ ಸಂಜ್ಞೆಯಿಂದಲೋ ಅಕ್ಷರ ವಿಶೇಷ ಸಂಜ್ಞೆಯಿಂದಲೋ ಶತ್ರುಗಳ ವೃತ್ತಾಂತವನ್ನು ತಿಳಿಯಬೇಕು. ಅದಕ್ಕನುಸಾರವಾದ ಭೇದೋಪಾಯವನ್ನು ಪ್ರಯೋಗಿಸಬೇಕು. '2

ಮುಂದೆ ಸಂಕೇತಭಾಷೆಯ ಉಲ್ಲೇಖ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಬರುತ್ತದೆ. ಆತ ಕಾಮಸೂತ್ರಕ್ಕೆ ಅವಯವಭೂತವಾದ ಚತುಃಷಷ್ಟಿ ಅಂಗ ವಿದ್ಯೆಗಳಲ್ಲಿ ಒಳಸೆಯದಾಗಿ 'ಅಕ್ಷರಮುಷ್ಟಿಕಾ

---

1 ಶ್ರೀ ಸಚ್ಚಿದಾನಂದ ಶಂಕರ ಭಾರತೀ, ಕೌಟಿಲೀಯ ಅರ್ಥಶಾಸ್ತ್ರ (ಕನ್ನಡ ಅನುವಾದ) ಪುಟ–೨೬

2 ಕೌಟಲೀಯ ಅರ್ಥಶಾಸ್ತ್ರ–ಅನು ಕೆ. ಕೃಷ್ಣ ಭಟ್ಟ

ಕಥನ' ೪೫ನೆಯದಾಗಿ 'ಮ್ಲೇಚ್ಛಿತ ವಿಕಲ್ಪ' ಮತ್ತು ೪೬ನೆಯದಾಗಿ 'ದೇಶ ಭಾಷಾಜ್ಞಾನ' ಎಂಬುದಾಗಿ ಮೂರು ವಿಧ ಸಂಕೇತ ಭಾಷೆಗಳನ್ನು ಹೇಳುತ್ತಾನೆ. ವ್ಯಾಖ್ಯಾನಕಾರ ಜಯಮಂಗಲನು ಕೆಳಕಂಡ ವಿವರಗಳನ್ನು ಒದಗಿಸುತ್ತಾನೆ.

ಅಕ್ಷರಮುಷ್ಟಿಕಾ ಕಥನ

ಮುಷ್ಟಿಯೊಳಗಿರುವ ವಸ್ತುವು ಗೋಪ್ಯವಾಗಿರುವಂತೆ ಅಕ್ಷರಮುಷ್ಟಿಕಾ ಎಂದರೆ ನಿಗೂಢವಾದ ಅಕ್ಷರಗಳು ಎಂದರ್ಥ. ಅದು ಸಾಭಾಸ, ನಿರಾಭಾಸ ಎಂದು ಎರಡು ವಿಧ. ಅದರಲ್ಲಿ ಸಾಭಾಸಕ್ಕೆ ಅಕ್ಷರ ಮುದ್ರೆ ಎಂದೂ ಹೆಸರು. ನಿಗೂಢವಸ್ತು ಸೂಚನೆಯಲ್ಲಿ ಗ್ರಂಥ ಸಂಕ್ಷೇಪದಲ್ಲಿ ಇದರ ಬಳಕೆ. ಇದಕ್ಕಾಗಿ ಆಚಾರ್ಯರವಿಗುಪ್ತನ ಚಂದ್ರಪ್ರಭಾವಿಜಯ ಕಾವ್ಯದಲ್ಲಿ ಪ್ರತ್ಯೇಕ ಪ್ರಕರಣವಿದೆ. ಎಲ್ಲವೂ ಗಹನವೂ ಪ್ರಸನ್ನವೂ ಆಗಿ ಕೆಲವೇ ಸೂತ್ರಗಳಿಂದ ಕೂಡಿದ ಬಹುಮುಖವಾಗಿರುವ ಅಕ್ಷರಮುದ್ರೆಯನ್ನು ಅಭ್ಯಸಿಸದವನು ವಾದಸಮುದ್ರದಲ್ಲಿ ತೇಲಿಹೋಗುತ್ತಾನೆ. ಅದಕ್ಕೆ ಉದಾಹರಣೆ–

"ಮೇವೃಮಿಕ ಸಿಂ ಕ ತು ವೃ ಧ ಮ ಕು ಮೀ ಮೂಧಸ ಬಾಸು
ಶಕು ನಿಧಕ ಆವ್ಯಾಃ।
ಫಾ ಚೈ ವೈ ಜ್ಯೇ ಆ ಶ್ರಾ–ಭಾ ಆ ಕಾ ಮಾ ಪೌ ಮಾ ಚೈವ' ಇತಿ

ಈ ಆರ್ಯಾವೃತ್ತದ ಮೊದಲ ಪಾದದಲ್ಲಿ ಮೇಷಾದಿ ರಾಶಿಗಳು ಹೇಳಿವೆ. ಎರಡನೆಯದರಲ್ಲಿ ರಾಶಿಗಳಿಗೆ ಲಗ್ನ ಮೊದಲುಗೊಂಡು ಮೂರ್ತಿ ಧನ ಸಹಜ ಬಾಂಧವ ಸುತ ಶತ್ರು ಕಲತ್ರ ನಿಧನ ಧರ್ಮ ಕರ್ಮ ಆಯ ವ್ಯಯ ಮೊದಲಾದ ವಿಶೇಷ ಸಂಜ್ಞೆಗಳಿವೆ. ಉಳಿದ ಅರ್ಧಭಾಗದಲ್ಲಿ ಫಾಲ್ಗುಣಾದಿ ಮಾಸಗಳಿವೆ.

ನಿರಾಭಾಸಕ್ಕೆ ಭೂತಮುದ್ರೆ ಎಂದೂ ಹೇಳುತ್ತಾರೆ. ಗುಪ್ತವಸ್ತು ಸೂಚನೆಗಾಗಿ ಅದು ಉಕ್ತವಾಗಿದೆ.

ಮುಷ್ಟಿಃ ಕಿಸಲಯಂಚೈವಚ್ಛಟಾಚಾರೀ ಪತಾಕಿಕಾ
ಪತಾಕಾಂಕುಶ ಮುದ್ರಾಶ್ಚ ಮುದ್ರಾವರ್ಗೇಷು ಸಪ್ತಸು
ಅಂಗುಲ್ಯಾಶ್ಚಾಕರಾಣ್ಯೇಷಾಂ ಸ್ವರಾಶ್ಚಾಂಗುಲಿ ಪರ್ವಸು
ಸಂಯೋಗಾದಕ್ಷರಂ ಯುಕ್ತಂ ಭೂತಮುದ್ರಾ ಪ್ರಕೀರ್ತಿತಾ'ಇತಿ॥

ಮುಷ್ಟಿ ಕಿಸಲಯಚ್ಛಟಾ ಚಾರೀ ಪತಾಕಿಕಾ ಪತಾಕಾ ಅಂಕುಶ ಈ ಏಳು ನಿರಾಭಾಸ ಮುದ್ರೆಗಳು. ಈ ಏಳರಲ್ಲಿ ಬೆರಳುಗಳೇ ಅಕ್ಷರಗಳು. ಬೆರಳಿನ ಗಿಣ್ಣುಗಳು ಸ್ವರಗಳು. ಈ ಎರಡೂ ಕೂಡಿ ಅಕ್ಷರ. ಇದಕ್ಕೆ ಭೂತಮುದ್ರಾ ಎಂದು ಹೆಸರು.

ಮ್ಲೇಚ್ಛಿತವಿಕಲ್ಪ

ಒಂದು ಪದ ಸಾಧುವಾಗಿ ಕಂಡರೂ ಅಕ್ಷರಗಳ ವ್ಯತ್ಯಾಸದಿಂದ ಅಸ್ಪಷ್ಟಾರ್ಥವಾಗುತ್ತದೆ. ಅದು ಮ್ಲೇಚ್ಛಿತ. ಗೂಢವಸ್ತುವನ್ನು ಹೇಳುವಲ್ಲಿ ಬಳಕೆಗೆ ಬರುತ್ತದೆ. ಪೂರ್ವಾಚಾರ್ಯರು ಅದಕ್ಕೆ ವಿಕಲ್ಪವಾದುವನ್ನು ಬೇಕಾದಷ್ಟನ್ನು ಹೇಳಿದ್ದಾರೆ. ಕೌಟಿಲೀಯದಲ್ಲಿ ಹೀಗಿದೆ:

"ದಾದೇಃ ಕ್ಷಾಂತಸ್ಯಕಾದೇಶ್ಚ ಸ್ವರಯೋರುಭಯೋರಪಿ
ಬಿಂದೂಷ್ಮಣೋರ್ವಿಪರ್ಯಾಸಾದ್ ದುರ್ಬೋಧಮಿತಿ ಸಂಜ್ಞಿತಮ್'
ಅಕೌ ಖಗೌ ಘಙ ಚೈವ ಚಟಾ ಜಣೌ ತಪೌ ನಮೌ
ಯಶೌ ರಷೌ ಲಸೌ ಚೇತಿ ಮೂಲದೇವೀಯಮುಚ್ಯತೆ॥
ಗ್ರಹನಯನ ವಸುಸಮೇತಂ ಷಡಾನನಾಖ್ಯಾನಿಸಾಗರಾಮುನಯಃ
ಜ್ವಲನಾಂಗಂ ತುಕಶೃಂಗಂ ದುರ್ಲಿಖಿತಂ ಗೂಢಲೇಖ್ಯಮಿದಮಿತಿ

ಹೀಗೆಯೇ ಉಳಿದವನ್ನು ನೋಡಿಕೊಳ್ಳತಕ್ಕದ್ದು.

ದೇಶಭಾಷಾ ವಿಜ್ಞಾನ

ಕಣ್ಣಿಗೆ ಕಾಣದುದನ್ನು ಜ್ಞಾಪಿಸುವುದರಲ್ಲಿ ಮತ್ತು ಅನ್ಯಾದೇಶೀಯರಲ್ಲಿ ವ್ಯವಹರಿಸುವುದಕ್ಕೋಸ್ಕರ ಇದನ್ನು ಬಳಸುತ್ತಾರೆ.

ಮುಂದೆ ಸಂಕೇತಭಾಷೆಯ ವಿವರಗಳನ್ನು ನಾಗರಸರ್ವಸ್ವಕಾರನಾದ ಬೌದ್ಧಭಿಕ್ಷು ಪದ್ಮಶ್ರೀ ಪಂಡಿತನು ತಿಳಿಸುತ್ತಾನೆ. ಅವನ ಪ್ರಕಾರ ಅಂಗಸಂಕೇತ. ಭಾವಾಸಂಕೇತ. ಪೋಟಲಿ ಸಂಕೇತ. ವಸ್ತ್ರ ಸಂಕೇತ, ತಾಂಬೂಲ ಸಂಕೇತ. ಪುಷ್ಪಮಾಲಾ ಸಂಕೇತಗಳಿವೆ. ಸಂಕೇತ ಭಾಷಾಜ್ಞಾನವಿಲ್ಲದ ತರುಣ ನಾಗರಕನನ್ನು ಮಲಿನ ನಿರ್ಮಾಲ್ಯ ಪುಷ್ಪವನ್ನು ಕಳೆಯುವ ಹಾಗೆ ಕಳೆಯಬೇಕು ಎಂಬುದಾಗಿ ತಿಳಿಸುತ್ತಾನೆ. ಅವನು ಹೇಳುವ ಅಂಗ ಸಂಕೇತಗಳು ಹೀಗಿವೆ–

ಕ್ಷೇಮಪ್ರಶ್ನೆಯಲ್ಲಿ ಕಿವಿಯನ್ನು ಮುಟ್ಟಬೇಕು. ಅದು ಕಥನ ಮತ್ತು ಕಥಿತಕ್ಕೂ ಅನ್ವಯಿಸುತ್ತದೆ. ಕಾಮಾರ್ತನಾದವನು ಕೇಶವನ್ನು ಸ್ಪರ್ಶಿಸಬೇಕು. ಸ್ನೇಹದಲ್ಲಿ ಎದೆಯನ್ನು ಮುಟ್ಟಬೇಕು. ಇದು ಪತಾಕದ ಕಾರ್ಯ.

ಅವಸರಪ್ರಶ್ನೆ ಎಂದರೆ ಸಮಾಗಮಾನುಕೂಲ ಸಮಯವನ್ನು ಪ್ರಶ್ನಿಸುವಲ್ಲಿ ಪತಾಕಾಮುದ್ರೆಯಲ್ಲಿ ಮಧ್ಯದ ಬೆಟ್ಟನ್ನು ತೋರುಬೆರಳಿನ ಹಿಂಭಾಗಕ್ಕೆ ಜೋಡಿಸಬೇಕು. ಸಮಾಗಮಾನುಕೂಲ ಸೂಚನೆಯಲ್ಲಿ ಅಂಜಲಿ (ಬೊಗಸೆಯಂತೆ ಕೈಯನ್ನು ಜೋಡಿಸುವುದು). ಆಹ್ವಾನಿಸುವಲ್ಲಿ ಅಂಗುಷ್ಠವನ್ನು ಬಿಟ್ಟು ಉಳಿದ ಎಲ್ಲ ಬೆಟ್ಟುಗಳನ್ನು ಜೋಡಿಸಿ ಮುಂದಕ್ಕೆ ಬಾಗಿಸುವುದು (ಬಾ ಎಂದು ಕೈಯಿಂದ ಸೂಚಿಸುವ ಸಂಕೇತ).

'ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳನ್ನು ಕ್ರಮವಾಗಿ ಅಂಗುಷ್ಠ, ತರ್ಜನೀ, ಮಧ್ಯಮ ಮತ್ತು ಅನಾಮಿಕಾ ಬೆರಳುಗಳು ಸೂಚಿಸುತ್ತವೆ. ಕಿರುಬೆರಳಿನ ಮೂಲದಿಂದ ಆರಂಭವಾಗಿ ಹೆಬ್ಬೆರಳಿನ ಮೇಲಿನ ರೇಖೆ ಅಂತ್ಯವಾಗಿ ಸ್ಮೃತಿಗಳು ಪ್ರತಿಪದಾದಿ ಹದಿನೈದು ತಿಥಿಗಳನ್ನು ತಿಳಿಸುತ್ತವೆ. ಎಡಗೈ ಶುಕ್ಲಪಕ್ಷವನ್ನು ಬಲಗೈ ಕೃಷ್ಣ ಪಕ್ಷವನ್ನು ಸೂಚಿಸುತ್ತದೆ.

ಹೀಗೆ ಸಂಕೇತಭಾಷೆಗಳು ಬೆಳೆದುಕೊಂಡು ಬಂದು ಭಾರತೀಯ ಜನಜೀವನದಲ್ಲಿ ಅಂತರ್ಗತವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಶಾಂತಲಿಂಗದೇಶಿಕಕೃತ ಭೈರವೇಶ್ವರ ಕಾವ್ಯದ ಕಥಾ ಮಣಿ ಸೂತ್ರ ರತ್ನಾಕರದ ಒಂದು ಪ್ರಸಂಗವನ್ನು ಗಮನಿಸಬಹುದು.

> "ಅರಸಂಚೆಯೆಂಬ ಪಟ್ಟಣದಲ್ಲಿ ಭಾಗ್ಯನಿಧಿಯೆಂಬರಸು. ಬುದ್ಧಿ ಶರೀರಿಯೆಂಬ ಮಂತ್ರಿಯು. ಚತುರಂಗ ಬಲಗೂಡಿ ಬೇಂಟೆಯಂ ಪೋಗಿ ಬಳಲಿ ವನಮಂ ಸಾರಲು, ಅಲ್ಲಿಗೆ ಕಲಾವತಿಯೆಂಬ ರಾಜಕುಮಾರಿತಿ ಜಲಕೇಳಿಗೆ ಬಂದಿರೆ, ಆರಾಯ ಕಂಡು ಮನಸೋಲಲು. ಅವಳು ಮನಸೋತು ಸೂಚಿಸಿದಳು: ತಾವರೆಯ ಪೂವ ಕಯ್ಯಲ್ಲಿ ಪಿಡಿದು, ಉರದಲ್ಲಿಟ್ಟು, ಕರ್ಣದಲ್ಲಿಟ್ಟು, ಮೇಲಕ್ಕೆತ್ತಿದಳು. ಅದ ಪ್ರಧಾನಿ ಅರಿದು. "ಕರದಲ್ಲಿ ಹೂವ ಪಿಡಿಯೆ ಕರದುದು, ಎದೆಯಲ್ಲಿಡೆ ಕೂಟದಿಚ್ಛೆ, ಕರ್ಣದಲ್ಲಿಡೆ ಮಾತನಾಡಿದುದು, ಮೇಲಕ್ಕೆತ್ತೆ ಉಪ್ಪರಮುಪ್ಪರಿಗೆ ಮೇಲಿಪ್ಪೆನೆಂದುದು" ಎಂದು ಮಂತ್ರಿರಾಯಗೆ ಪೇಳೆ, ಒಬ್ಬ ಮಾಲೆಗಾರತಿಯ ಕಳುಹಲು ಆ ಕಳಾವತಿಯು ಮತ್ತೆ ಸಂಜ್ಞೆಯಿಂದ ಗಂಧದ ಕಯ್ಯಿಂದ ಹೊಯ್ಯಲು ಬೆಳುದಿಂಗಳು ಪೋಗಲೆಂದುದು, ತಂಬುಲದಿಂದಿಡೆ ರಜಸ್ವಲೆಯಾದಳೆಂದಱುದುದು, ಸರ್ಪಣಿಯ ಕೊರಳಿಗಿಕ್ಕಿಯೆಳೆಯಲು ನಾಲ್ಕು ದಿನಕೆ ಇದು ವೇಳೆಯೆಂದಱುವುದು, ಉಪ್ಪರಿಗೆಯ ಮೇಲೆ ರಾಯ ಪೋಗಿ ಕಳಾವತಿಯೊಡನಿಪ್ಪಲ್ಲಿ"

ಹೀಗೆಯೇ ಈ ಪ್ರಸಂಗ ಮುಂದುವರಿಯುತ್ತದೆ.

ಇಂದಿಗೂ ಕರ್ಣಾಟಕದಲ್ಲಿ ಕರಪಲ ಎನ್ನುವ ಒಂದು ಸಂಕೇತಭಾಷೆ ಪ್ರಚಲಿತವಿದೆ. ಡಾ. ಜೀ. ಶಂ. ಪರಮಶಿವಯ್ಯನವರು 'ಅಪೂರ್ವ ಜನಪದ ಕಲೆ ಕರಪಾಲಮೇಳ' ಎನ್ನುವಲ್ಲಿ ಕರಪಾಲವನ್ನು ಜೀವನ ವೃತ್ತಿಯನ್ನಾಗಿ ಉಳ್ಳ ಜನರ ವೇಷಭೂಷಣಗಳು ಮತ್ತು ಹಾಡನ್ನು ಪರಿಚಯ ಮಾಡಿ ಕೊಟ್ಟಿದ್ದಾರೆ. ಡಾ. ಎಂ. ಚಿದಾನಂದಮೂರ್ತಿಯವರು 'ಕರಪಲ್ಲ'ವನ್ನು ವೃತ್ತಿಯನ್ನಾಗಿ ಮಾಡಿ ಕೊಂಡಿರುವ ವೀರಶೈವ ಅಯ್ಯ ಗಡ್ಡದಯ್ಯನವರ ಮಠದ ಗದಿಗೆಯ್ಯ ಅವರಿಂದ ಸಂಗ್ರಹಿಸಿದ ಸಂಜ್ಞಾ ವಿಶೇಷವನ್ನು ಕೂಲಂಕಷವಾಗಿ ವಿಶ್ಲೇಷಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಸೂತ್ರಗಳು ಹಸ್ತಪ್ರತಿಗಳ ಪರಿಶೀಲನೆ ನಡೆಸುವಾಗ ಪ್ರಾಸಂಗಿಕವಾಗಿ ಕಣ್ಣಿಗೆ ಬಿದ್ದುವು. ಓಲೆಗರಿಯ ಅಂಚಿನಲ್ಲಿ 'ಕರಪಲ ಸವುಜ್ಞೆ' ಎಂದು ಬರೆದಿರುವ ಸೂತ್ರಗಳು ಕೆಳಕಂಡಂತೆ ಇವೆ–

"ಕನಿಷ್ಠಂ ಚ ಘಂಟಾಹಸ್ತಂ ಚಕ್ರ ಝಲ್ಲೀ ಚ ಟಂಕಯೋಃ
ಡಮ್ಮೃಗಂ ಶೂಲ ತಾಳಂಚ ಧೇನುರ್ನಖ ಫಣಿದ್ವಯಂ
ಮಧ್ಯಂಗುಲಂಚ ಕುಮುದಂ ರಂಧ್ರಂ ಖಡ್ಗ ವಸು ತ್ರಿಯಂ
ಶೌರ್ಯಯಿಾರಿತ ಹಸ್ತಂಚ ಛತ್ರಂಚಾರ್ಧಚಂದ್ರಾಕೃತಿಂ
ಚತುರ್ವಿಂಶತಿ ವರ್ಣಾನಿ ಕರಾಂಗುಲ್ಯೇನ ದೃಶ್ಯತೆ
ಕನಿಷ್ಠ ತರ್ಜನಿಮೂಲೆ ತರ್ಜನ್ಯಾಂತು ಕನಿಷ್ಠಕಂ
ಹ್ಯಕಾರಂ ಅರ್ಕ ಸಂಜ್ಞೀಯಂ ಬಿಂದು ಮುಷ್ಟೀಚ ಮುಕುಳಿತಂ
ಕನಿಷ್ಠಾನಾಮಿಕೋ ಮಧ್ಯ ತರ್ಜನ್ಯ ಅಥವೂರ್ಧ್ವಯೋಃ
"ಇಕಾರಾದ್ಯೌಕಾರಾಂತಂ॥ ಇತಿ ಕರಪಲ ಸವುಜ್ಞಕಂ"

ಈ ಸೂತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಕರಪಲದ ವರ್ಣ ಸಮಾಮ್ನಾಯವನ್ನು ಹೀಗೆ ಮಾಡಬಹುದು.

೧. ವರ್ಗೀಯ ವ್ಯಂಜನಗಳು

ಕನಿಷ್ಠ (ಕಿರುಬೆರಳನ್ನು ತೋರಿಸುವುದು)–ಕ(ಖ)
ಘಂಟಾಹಸ್ತ (ಘಂಟೆಯನ್ನು ಅಲ್ಲಾಡಿಸುವ ರೀತಿಯಲ್ಲಿ ಕೈಯನ್ನು ಆಡಿಸುವುದು)–(ಗ) ಘ
ಚಕ್ರ (ಚಕ್ರದ ಆಕಾರದಲ್ಲಿ ಕೆಯನ್ನು ಆಡಿಸುವುದು)–ಚ (ಛ)
ಝಲ್ಲಿ (ಝಲ್ಲಿಯನ್ನು ಬೀಸುವ ರೀತಿಯಲ್ಲಿ ಕೈಯನ್ನು ಆಡಿಸುವುದು)–(ಜ) ಝ
ಟಂಕ (ಮುದ್ರೆಯನ್ನು ಒತ್ತುವ ರೀತಿಯಲ್ಲಿ ಕೈಯನ್ನು ಆಡಿಸುವುದು)–ಟ (ಠ)
ಡಮ್ಮೃಗಂ (ಡಮರುಗದ ರೀತಿಯಲ್ಲಿ ಕೈಯನ್ನು ಆಡಿಸುವುದು)–ಡ (ಢ)
ಶೂಲ–ಣ?

ತಾಳಂ (ತಾಳವನ್ನು ಬಾರಿಸುವ ರೀತಿಯಲ್ಲಿ ಕೈಯನ್ನು ಆಡಿಸುವುದು)–ತ (ಥ)
ಧೇನು (ಹಸುವನ್ನು ಸೂಚಿಸುವ ರೀತಿಯಲ್ಲಿ ಕೈಯನ್ನು ಆಡಿಸುವುದು)–ಧ (ದ)
ನಖ (ಉಗುರನ್ನು ತೋರಿಸುವುದು)–ನ
ಫಣಿದ್ವಯಂ (ಹಾವಿನ ಹೆಡೆಯ ರೀತಿಯಲ್ಲಿ ಕೈಯನ್ನು ಆಡಿಸುವುದು. ದ್ವಯಂ ಎಂಬುದು ಪ ಮತ್ತು ಬಗಳೆರಡನ್ನೂ ಸೂಚಿಸಬಹುದು (?)–ಫ (ಪ, ಬ, ಭ)
ಮಧ್ಯಂಗುಲಂ (ಮಧ್ಯದ ಬೆಟ್ಟನ್ನು ತೋರಿಸುವುದು)–ಮ

೨. ಕುಮುದಂ ರಂಧ್ರಂ ಖಡ್ಗ ವಸುತ್ರಿಯಂ ಶೌರ್ಯಮಿಾರಿತ ಹಸ್ತಂಚ = (?)

೩. ಅವರ್ಗೀಯ ವ್ಯಂಜನಗಳು

ಕನಿಷ್ಠ ತರ್ಜನಿಮೂಲೆ ತರ್ಜನ್ಯಾಂತು ಕನಿಷ್ಠಕಂ ಪ್ರಕಾರಂ=ಕಿರುಬೆರಳಿನಿಂದ ತರ್ಜನಿಮೂಲೆಗೆ

ಅವರ್ಗೀಯ ವ್ಯಂಜನಗಳು



ತರ್ಜನಿಯ ಅಂತ್ಯದಿಂದ ಕನಿಷ್ಠಕ್ಕೆ ಹ ಸ ಷ ಶ ವ ಲ ರ ಯ

ಚತುರ್ವಿಂಶತಿ ವರ್ಣಾನಿ ಕರಾಂಗುಲ್ಯೇಸ ದೃಶ್ಯತೆ–೨೪ ಅಕ್ಷರಗಳು ಕೈಯ ಬೆಟ್ಟುಗಳಲ್ಲಿ ಕಾಣುತ್ತವೆ.

೪. ಸ್ವರಗಳು

ಅರ್ಕಸಂಜ್ಞೇಯಂ–[ಸೂರ್ಯನನ್ನು ತೋರಿಸುವಂತಹ ಸಂಜ್ಞೆ (ಐದು ಬೆರಳುಗಳನ್ನೂ ಅಂಗೈ ಮೇಲಾಗಿ ಚಾಚುವುದು–ಡಾ. ಎಂ. ಚಿದಾನಂದಮೂರ್ತಿ)] ಅ. ಆ.

ಕನಿಷ್ಠಾನಾಮಿಕೋ ಮಧ್ಯ ತರ್ಜನ್ಯ ಅಧಊರ್ಧ್ವಯೋಃ ಇಕಾರಾದಿ ಔಕಾರಾಂತಂ,

ಕನಿಷ್ಠ, ಅನಾಮಿಕ, ಮಧ್ಯತರ್ಜನ್ಯ ಬೆರಳುಗಳಲ್ಲಿ ಕೆಳಗಿನಿಂದ ಮೇಲಕ್ಕೆ ಹೋದರೆ ಇಕಾರಾದಿ ಔಕಾರಾಂತ ಸ್ವರಗಳು ಬರುತ್ತವೆ.

ಸ್ವರಗಳು



೫. ಅನುಸ್ವಾರ–'ಂ'

ಬಿಂದು ಮುಷ್ಟಿಂಚ ಮುಕುಳಿತಂ– ಕೈಯನ್ನು ಹಿಡಿಯ ಅಕಾರಕ್ಕೆ ತಂದು ಮೊಗ್ಗಿನ ಆಕಾರಕ್ಕೆ ತಂದಾಗ ಅದು 'ಂ'ನ್ನು ಸೂಚಿಸುತ್ತದೆ.

೬. ಅರ್ಕಾವತ್ತು ಮತ್ತು ರವತ್ತು

ಛತ್ರಂ ಚ ಅರ್ಧಚಂದ್ರಾಕೃತಿ

ಛತ್ರ = ೯

ಅರ್ಧಚಂದ್ರಾಕೃತಿ = ្ರ

ಈ ಮೇಲಿನ ವಿಶ್ಲೇಷಣೆಯಿಂದ ಕರಪಲ ವರ್ಣಸಮಾಮ್ನಾಯವನ್ನು ಹೀಗೆ ಮಾಡಬಹುದು.

ಸ್ವರಗಳು:

ಅ ಆ	೨
ಇ ಯಿಂದ ಔ	೧೨
ವರ್ಗೀಯ ವ್ಯಂಜನಗಳು (ಙ, ಞ ಬಿಟ್ಟು)	೨೩
ಅವರ್ಗೀಯ ವ್ಯಂಜನಗಳು (ೞ ಬಿಟ್ಟು)	೮
ಅನುಸ್ವಾರ (ವಿಸರ್ಗ ಇಲ್ಲ)	೧
ಒಟ್ಟು	೪೬

ಅಂದರೆ ಈ ಸೂತ್ರದಿಂದ ಹೊರಪಡುವ ಸಂಗತಿಯೆಂತೆ ಙ ಮತ್ತು ಞ ಎಂಬ ಕವರ್ಗ ಮತ್ತು ಚವರ್ಗ ಪಂಚಮಾಕ್ಷರಗಳಿಗೆ ಸಂಜ್ಞೆಗಳಿಲ್ಲ. ಳಕ್ಕೆ ಭಿನ್ನ ಸಂಕೇತವಿಲ್ಲ. ಅರ್ಕಾವತ್ತು ಮತ್ತು ರವತ್ತುಗಳಿಗೆ ಬೇರೆ ಬೇರೆ ಸಂಕೇತಗಳಿವೆ. ಈ ಶ್ಲೋಕದ ಅರ್ಥವಾಗದ ಭಾಗ "ಕುಮುದಂ ರಂಧ್ರಂ ಖಡ್ಗ ವಸುತ್ರಯಂ ಶೌರ್ಯಮಿರಿತ ಹಸ್ತಂಚ "ಏನನ್ನು ಸೂಚಿಸುತ್ತದೆಯೋ ತಿಳಿಯದು. ಇಲ್ಲಿ ಕೆಲವು ಅಕ್ಷರಗಳಿರುವುದು ಅಸಂಭಾವ್ಯವೇನಲ್ಲ.

ಡಾ. ಎಂ. ಚಿದಾನಂದಮೂರ್ತಿಯವರು ಸ್ವರ ಮತ್ತು ವ್ಯಂಜನಗಳಿಗೆ ತಮ್ಮ ಪಕ್ಕ್ಯವಿನಿಂದ ಸಂಗ್ರಹಿಸಿದ ವಿವರಗಳನ್ನೆಲ್ಲ ಕೊಟ್ಟನಂತರ "ಕನ್ನಡದ ವರ್ಣಮಾಲೆಯನ್ನಿಟ್ಟುಕೊಂಡು ಸಂಜ್ಞೆಗಳನ್ನು ಕಲ್ಪಿಸಿದ್ದಾರೆ ಎಂಬುದು ಇದರಿಂದ ಬಹುಸ್ಪಷ್ಟವಾಗುತ್ತದೆ" ಎಂದಿದ್ದಾರೆ. ಕನ್ನಡ ವರ್ಣಮಾಲೆಗೆ ಸಂಸ್ಕೃತ ವರ್ಣಮಾಲೆ ಮಾದರಿ. ಆದುದರಿಂದ ಕರಪಲದ ಸಂಜ್ಞೆಗಳು ಕನ್ನಡ ವರ್ಣಮಾಲೆಗೂ ಅನ್ವಯಿಸುತ್ತವೆಯೇ ವಿನಃ ಕನ್ನಡ ವರ್ಣಮಾಲೆಗಾಗಿಯೇ ಈ ಸಂಜ್ಞೆಗಳ ಸೃಷ್ಟಿಯಾಗಿಲ್ಲ. ಹಾಗಿದ್ದರೆ 'ಙ' ಮತ್ತು 'ಞ' ಚಿಹ್ನೆಗಳ ಬಗ್ಗೆ ಉತ್ತರಿಸುವುದು ಕಷ್ಟವಾಗುತ್ತದೆ.

ಒಟ್ಟಿನಲ್ಲಿ ಕರಪಲಕ್ಕೆ ಸಂಬಂಧಿಸಿದ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು–

೧. ಕರಪಲ ವರ್ಣಸಮಾಮ್ನಾಯವನ್ನುಳ್ಳ ಒಂದು ಸಂಜ್ಞಾಭಾಷೆ.
೨. ಅಕ್ಷರ ಮುಷ್ಟಿಕಾ ಕಥನದ ಗುಂಪಿಗೆ ಸೇರಿದುದು.
೩. ಕೌಟಿಲ್ಯನಿಗಿಂತಲೂ ಹಳೆಯದು.
೪. ರಹಸ್ಯ ಪಾಲನೆಗಾಗಿ ಮತ್ತು ಗ್ರಂಥ ಸಂಕ್ಷೇಪಕ್ಕಾಗಿ ಇದನ್ನು ಬಳಸುತ್ತಿದ್ದರು.
೫. ಕರ್ಣಾಟಕಕ್ಕೆ ಮಾತ್ರ ಸೀಮಿತವಾಗದೆ ಅಖಿಲ ಭಾರತ ಮಟ್ಟದ್ದು.

ಕಡೆಯದಾಗಿ ಕರಪಲದ ನಿಷ್ಪತ್ತಿಯ ಬಗ್ಗೆ ಒಂದು ಮಾತು– ಕರ್ಪಾಲ್ಲಿ, ಕರಪಲ, ಕರಪಲ್ಲ, ಕರಪಲ್ಲವ, ಕರಪ್ಲ ಎನ್ನುವ ಈ ಸಂಜ್ಞಾಭಾಷೆಯ ಹೆಸರುಗಳಲ್ಲಿ ಕರಪಲ ಅಥವಾ ಕರಪ್ಲ ಎನ್ನುವ ರೂಪಗಳು ಸರಿಯಾದ್ದು ಎಂದು ಮೇಲು ನೋಟಕ್ಕೆ ತಿಳಿದು ಬರುತ್ತದೆ. ಆದರೆ ಕರಪಲ ಅಥವಾ ಕರಪ್ಲ ಎಂದರೆ ಕಯ್ಯ ಚೇಷ್ಟೆ. ಉದಾಹರಣೆಗೆ ಲಕ್ವ ಹೊಡೆದು ಕೈಯ ಮೇಲಿನ ಹತೋಟಿಯನ್ನು ಕಳೆದುಕೊಂಡು ಸದಾ ಒದರುತ್ತಿರುವುದು. ಮಕ್ಕಳು ಏನಾದರೂ ಕಯ್ಯಚೇಷ್ಟೆಯನ್ನು ಮಾಡುತ್ತಿದ್ದರೆ "ನಿನ್ನ ಕೈಗೆ ಕರಪ್ಲ ಬಡಿಯ" ಎಂದು ಬಯ್ಯುವುದು ಇಂದಿಗೂ ರೂಢಿ. ಕರಪಲ ಎನ್ನುವ ರೂಪ ಮೂಲವಾಗಿದ್ದು ಆಡುಮಾತಿನಲ್ಲಿ ಕರಪ್ಲ ಆಗಿರುವ ಸಾಧ್ಯತೆ ಬಹಳ. ಈ ಸಂಜ್ಞಾ ಭಾಷಾ ಪ್ರಯೋಗದಲ್ಲಿ ಕಯ್ಯ ಚೇಷ್ಟೆಯೇ ಪ್ರಧಾನವಾಗಿರುವುದನ್ನು ಗಮನಿಸಿದಾಗ 'ಕರಪಲ'ಎನ್ನುವುದನ್ನುನಾವು ಅಂಗೀಕರಿಸಬಹುದು. ಇದಕ್ಕೆ ಸುಮಾರು ೩೦೦ ವರ್ಷಗಳ ಬರವಣಿಗೆಯ ರೂಪವೂ ದೊರೆತಿರುವುದು ಮತ್ತೊಂದು ಸಮರ್ಥನೆ.

ಆದರೆ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಅಂತೇ ವಾಸಿಗಳು ಅಂದರೆ ಅಧಿಕಾರಿಗಳು ರಾಜನಿಗೆ ರಹಸ್ಯ ವೃತ್ತಾಂತವನ್ನು ಸಂಕೇತ ಭಾಷೆಯ ಮೂಲಕ ತಿಳಿಸಬೇಕು ಎಂದಿದೆ. ಕರಪಾಲ ಎಂದರೆ ತೆರಿಗೆ ಅಧಿಕಾರಿ ಈ ಸೀಮಿತ ಅರ್ಥ ಮುಂದೆ ವಿಸ್ತಾರಗೊಂಡು ಅಧಿಕಾರಿ ಎಂದಾಗಿ ಕರಪಾಲ ಸವ್ವಜ್ಞಕಂ ಎಂದರೆ ಅಧಿಕಾರಿಗಳು ಬಳಸುವ ಸಂಜ್ಞೆಯೆಂದಾಗಿರಬಹುದು. ಈರೂಪ "ಕರಪಾಲ ಮೇಳ" ಎನ್ನುವಲ್ಲಿ ಉಳಿದುಕೊಂಡಿದೆ. ಅಂದರೆ ಅಧಿಕಾರಿಗಳು ಮೇಳಗೊಂಡಾಗ ಪರಸ್ಪರ ಹೀಗೆ ಮಾತನಾಡುತ್ತಿದ್ದಿರಬಹುದು. ಆ ಕರಪಾಲ ಉಚ್ಚಾರಣಾ ಸೌಲಭ್ಯಕ್ಕಾಗಿ ಕರಪಲ, ಕರಪ್ಲ ಇತ್ಯಾದಿ ಆಗಿದೆ. ಅಲ್ಲದೆ ಕರಪ್ಲ =ಕೈಚೇಷ್ಟೆ ಎಂದು ಅರ್ಥ ಮಾಡಿ ಸವೃಜ್ಞಕಂ ಸೇರಿಸಿದರೆ ಕರದ ಜೊತೆಯಲ್ಲಿರುವ 'ಪ್ಲ' ಅಥವಾ 'ಪಲ' ಸಂಸ್ಕೃತ ಶಬ್ದವೇ ಕನ್ನಡ ಶಬ್ದವೇ. ಕನ್ನಡ ಶಬ್ದವಾದರೆ ಅರಿಸಮಾಸವಾಗುತ್ತದೆ. ಆದರೆ ಕರಪಾಲ→ಕರಪಲ→ಕರಪ್ಲ ಆಗಿ ಅವರು ಬಳಸುತ್ತಿದ್ದ ಕೈಚೇಷ್ಟೆಯನ್ನು ಕಂಡವರು ಕರಪ್ಲ (ಕರಪಾಲ)= ಕೈಚೇಷ್ಟೆ ಎನ್ನುವ ಅರ್ಥವೂ ಉಂಟಾಗಿ ಮುಂದೆ ಕರಪ್ಲ =೧. ಅಧಿಕಾರಿ ೨. ಕೈ ಚೇಷ್ಟೆ ಎನ್ನುವ ಅರ್ಥ

ಗಳಲ್ಲಿ ೨ನೆಯ ಅರ್ಥವೇ ನಿಂತು ಅರ್ಥ ಸಂಕೋಚವಾಗಿರಬಹುದು. ಆದುದರಿಂದ ಕರಪಲ ಕರಪಲ್ಲ ಕರಪಾಲ ಕರಪ್ಲ ಎನ್ನುವ ಮಾತುಗಳಲ್ಲಿ ಕರಪಾಲ ಮೂಲಶಬ್ದವಾಗಿದ್ದು ಕರಪಲ, ಕರಪ್ಲ ಎನ್ನುವುದು ಉಚ್ಚಾರಣಾ ಸೌಲಭ್ಯಕ್ಕೆ ಆಗಿರುವ ರೂಪಗಳೆಂಬುದು ಸಿದ್ಧವಾಗುತ್ತದೆ.*

ಆಕರಗಳು

೧. ಭಾಸ್ಕರ ಗಣಿತ. ಕೆ. ೨೧೩. ಕನ್ನಡ ಅಧ್ಯಯನ ಸಂಸ್ಥೆಯ ಪ್ರತಿ
೨. ವಾತ್ಸ್ಯಾಯನನ ಕಾಮಸೂತ್ರ (ಜಯಮಂಗಲನ ವ್ಯಾಖ್ಯಾನದೊಂದಿಗೆ) ಚೌಖಂಬಾ ಪ್ರಕಟಣೆ.
೩. ನಾಗರ ಸರ್ವಸ್ವ, ಪದ್ಮಶ್ರೀ ಪಂಡಿತ, ಮಣಿಲಾಲ್ ಇಚ್ಚಾರಾಂ ದೇಶಾಯಿ ಪ್ರಕಟಣೆ.
೪. ಜನಪದ ಸಾಹಿತ್ಯ ಸಮೀಕ್ಷೆ (ಕರಪಾಲ ಮೇಳ), ಡಾ. ಜೀ. ಶಂ. ಪರಮಶಿವಯ್ಯ, ಮೋಹನ ಪ್ರಕಾಶನ, ಮೈಸೂರು, ೧೯೬೭.
೫. ಜಾನಪದ-೧ (ಕರಪಲ್ಲ)-ಡಾ ಎಂ. ಚಿದಾನಂದಮೂರ್ತಿ, ಕರ್ನಾಟಕ ಜಾನಪದ ಪರಿಷತ್ತು, ಮಾನಸ ಗಂಗೋತ್ರಿ, ಮೈಸೂರು-೬.
೬. ಕೌಟಲೀಯ ಅರ್ಥಶಾಸ್ತ್ರ, ಅನು. ಶ್ರೀ ಸಚ್ಚಿದಾನಂದ ಶಂಕರ ಭಾರತೀ, ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ.
೭. ಕೌಟಲೀಯ ಅರ್ಥಶಾಸ್ತ್ರ, ಅನು. ಕೆ. ಕೃಷ್ಣಭಟ್ಟ, ಸಮಾಜ ಪುಸ್ತಕಾಲಯ, ಧಾರವಾಡ ೧೯೬೨.
೮. ಕನ್ನಡ ವಿಶ್ವಕೋಶ.

*ಸಂಸ್ಕೃತ ಶ್ಲೋಕಗಳನ್ನು ಕನ್ನಡಕ್ಕೆ ಅನುವಾದಿಸುವಾಗ ಶ್ರೀ ಎಸ್. ಎನ್. ಕೃಷ್ಣ ಜೋಯಿಸ ರಿಂದ ಉಪಕೃತನಾಗಿದ್ದೇನೆ. ಶ್ರೀ ಕೆ. ಬಿ. ಸದಾನಂದ ಅವರು ರೇಖಾಚಿತ್ರಗಳನ್ನು ಕೃಪೆಯಿಟ್ಟು ರಚಿಸಿ ಕೊಟ್ಟಿದ್ದಾರೆ.

ಕೆ. ಕುಶಾಲಪ್ಪಗೌಡ

ಚತುರ್ಥೀ ವಿಭಕ್ತಿ

ಯಾವುದಾದರೂ ಒಂದು ವಸ್ತುವನ್ನು ಯಾರಿಗಾದರೂ ಕೊಡುವುದನ್ನು ಸೂಚಿಸುವ ಸಂದರ್ಭದಲ್ಲಿ ಚತುರ್ಥೀ ವಿಭಕ್ತಿಯು ಆ ವಸ್ತುವನ್ನು ಸ್ವೀಕರಿಸುವವನನ್ನು ನಿರ್ದೇಶನಮಾಡುತ್ತದೆ. ಚತುರ್ಥೀ ವಿಭಕ್ತಿ ಬರುವ ವಾಕ್ಯದಲ್ಲಿ ಸ್ಥಳನಿರ್ದೇಶಕವಲ್ಲದ ನಾಮ (Non-locational noun) ಒಂದು ಕರ್ಮಪದ ಮತ್ತು ಸಕರ್ಮಕ ಕ್ರಿಯಾಪದಗಳು ಮೂಲತಃ ಇರಬೇಕಾದ ಅಂಗಗಳು. ಈ ವಿಭಕ್ತಿಯನ್ನು ಕನ್ನಡದಲ್ಲಿ –ಕ್ಕೆ, –ಕೆ, –ಗೆ, –ಇಗೆ ಎಂಬ ಪ್ರತ್ಯಯಗಳು ನಿರ್ದೇಶಿಸುತ್ತವೆ. –ಕೆ ಎಂಬುದು ಶಾಸನಭಾಷೆಯಲ್ಲಿ –ಕ್ಕೆಯ ಬದಲಿಗೆ ಬರುವ ಸ್ವಚ್ಛಂದ ಪರಿವರ್ತಕ ರೂಪ (free variation form). ಉದಾ: ಅಗ್ರಕ್ಕೆ–ಅಗ್ರಕೆ(ಉತ್ತರ ಕನ್ನಡ ೧೪ನೇ ಶತಮಾನ); ಗ್ರಾಮಕ್ಕೆ (ಮಂಗಳೂರು ೧೪ನೇ ಶತಮಾನ); ಯತಿವರಗ್ಗೆ (ಕೊಡಗು ೧೧ನೇ ಶತಮಾನ); ಕೆರೆಗೆ (ಕೊಡಗು ೧೧ನೇ ಶತಮಾನ); ಪೆರ್ಮ್ಮಂಗೆ (ಕೊಡಗು ೧೨ನೇ ಶತಮಾನ) ಇತ್ಯಾದಿ. –ಕೆ, –ಗೆ, ಎಂಬ ಪ್ರತ್ಯಯಗಳು ಹೊಸಗನ್ನಡದ ಶಿಷ್ಟರೂಪದಲ್ಲಿ ಬಳಕೆಯಲ್ಲಿಲ್ಲ. ಸಾಧಾರಣವಾಗಿ –ಕ್ಕೆ ಪ್ರತ್ಯಯ ಬರಬೇಕಾದೆಡೆಯಲ್ಲಿ ಅದು ಲೋಪವಾಗಿರುವ ಒಂದೆರಡು ಉದಾಹರಣೆಗಳು ಶಾಸನಭಾಷೆಯಲ್ಲಿ ಬಂದಿವೆ. ಉದಾ: ಅಂಗರಂಗ ಭೋಗ ಬಿಟ್ಟರು[1] (ಕೊಡಗು.೧೪ನೇ ಶತಮಾನ); ಪಾಪ ನರಕ ಬಿದ್ದ (ಕೊಡಗು, ೧೪ನೇ ಶತಮಾನ). ಕನ್ನಡದಲ್ಲಿ ಈ ಪ್ರತ್ಯಯಗಳಿರುವ ನಾಮಪದಗಳೆಲ್ಲ ಚತುರ್ಥೀ, ಅಂದರೆ, ಸಂಪ್ರದಾನವನ್ನು ನಿರ್ದೇಶಿಸುತ್ತವೆಯೆಂದು ಹೇಳಿಕೊಳ್ಳುವುದು ವಾಡಿಕೆ. ಮೇಲ್ಮೈಯ ಸ್ತರದಲ್ಲಿ (surface struture ಇದು ಸರಿಯೆಂದು ಕಂಡರೂ ನಾವು ಆಳವಾಗಿ ವಿವೇಚಿಸಿದಾಗ ಈ ಪ್ರತ್ಯಯಗಳು ಬರುವ ನಾಮಪದಗಳೆಲ್ಲವೂ ಚತುರ್ಥೀ–ಅಂದರೆ ಸಂಪ್ರದಾನವನ್ನು ನಿರ್ದೇಶಿಸುವುದಿಲ್ಲವೆಂದು ತಿಳಿದು ಬಂದೀತು. ಮೇಲ್ಮೈ ಸ್ತರದಲ್ಲಿ ಚತುರ್ಥಿಯ ಪ್ರತ್ಯಯವಿದ್ದರೂ ಹಲವು ಸಂದರ್ಭದಲ್ಲಿ ಅಂತರಾಳ ಸ್ತರದಲ್ಲಿ ಅವು ಬೇರೆಯೇ ಕಾರಕ ಸಂಬಂಧವನ್ನು ನಿರ್ದೇಸುತ್ತವೆಯೆಂದು ತೋರುತ್ತದೆ.

---

1. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೨: ಶಾಸನಸಂಖ್ಯೆ ೭೫ (೪೯), ಗೆರೆ ೬;೫೨ರಲ್ಲಿಈ ಪ್ರಯೋಗಗಳನ್ನು ಕಾಣಬಹುದು. ಕನ್ನಡ, ತುಳು, ಕೊಡಗು ಮತ್ತು ಮಲೆಯಾಳಂ ಭಾಷೆಗಳಲ್ಲಿ ಚತುರ್ಥಿಯ ಪ್ರತ್ಯಯ ಲೋಪವಾಗುವ ಸಂದರ್ಭಗಳೇ ಇಲ್ಲ. ತಮಿಳು ಮತ್ತು ತೆಲುಗುಗಳಲ್ಲಿ ಮಾತ್ರ ಊರ ಹೆಸರನ್ನು ಹೇಳಿದಾಗ, ಚತುರ್ಥಿಯನ್ನು ಐಚ್ಛಿಕವಾಗಿ ಲೋಪಮಾಡಬಹುದು. ಚೋಳ ಸಾಮ್ರಾಜ್ಯಾಂಕಿತಕ್ಕೆ ಕೊಡಗು ಕೆಲಸಮಯ ಒಳಪಟ್ಟಿದ್ದಿರಬಹುದೆಂಬ ಕಾರಣದಿಂದಲೂ, ಕೊಡಗಿನಲ್ಲಿ ತಮಿಳು–ಮಲೆಯಾಳಂ ಶಾಸನಗಳು ಕೆಲವು ಸಿಗುವುದರಿಂದಲೂ ಈ ಶಾಸನದ ಲೇಖಕನಿಗೆ ತಮಿಳಿನ ಪ್ರಭಾವ ಬಿದ್ದಿರಬಹುದೆಂದು ಊಹಿಸಬಹುದು. ಕನ್ನಡದ ಯಾವ ಆಡುನುಡಿಯಲ್ಲೂ ಗ್ರಾಂಥಿಕಭಾಷಾರೂಪದಲ್ಲಿಯೂ ಇಂತಹ ಪ್ರಯೋಗಗಳು ದೊರೆಯುವುದಿಲ್ಲ.

ಶಾಸನಗಳಲ್ಲಿ ಬರುವ ಈ ಕೆಳಗಿನ ವಾಕ್ಯಗಳನ್ನು ಗಮನಿಸೋಣ:

೪೭. ಗುಣಸೇನ ಪಂಡಿತದೇವರ್ ಮೋಕ್ಷಲಕ್ಷ್ಮೀನಿವಾಸಕ್ಕೆ ಸಂದರ್
೪೮. ಪೋಚಬ್ಬರಸಿ......ಗುಣಸೇನ ಪಂಡಿತದೇವರ್ಗ್ಗೆ ಕೊಟ್ಟರು.

ಮೋಕ್ಷ ಲಕ್ಷ್ಮೀ ನಿವಾಸಕ್ಕೆ' (೪೭) ಮತ್ತು ಗುಣಸೇನ ಪಂಡಿತದೇವರ್ಗ್ಗೆ' (೪೮) ಎಂಬೆರಡು ನಾಮ ಪದಗಳೂ ಚತುರ್ಥೀ ವಿಭಕ್ತಿ ಪ್ರತ್ಯಯವನ್ನು ಹೊಂದಿ ಒಂದೇ ಕಾರಕವನ್ನು ತೋರಿಸುವಂತೆ ಮೇಲ್ಮೈಯ ಸ್ತರದಲ್ಲಿ ಕಂಡರೂ, ಅಂತರಾಳಸ್ತರದಲ್ಲಿ ಅವೆರಡು ಬೇರೆ ಬೇರೆ ಕಾರಕಗಳನ್ನು ಹೊಂದಿವೆ. ೪೭ ಮತ್ತು ೪೮ನೇ ವಾಕ್ಯದಲ್ಲಿರುವ ಕ್ರಿಯಾಪದಗಳು ಬೇರೆ ಬೇರೆ ಗುಣಗಳನ್ನು ಹೊಂದಿವೆ. 'ಸಂದರ್' (೪೭) ಎಂಬುದು ಚಲನೆಯನ್ನು ವ್ಯಕ್ತಪಡಿಸುವ ಅಕರ್ಮಕ ಕ್ರಿಯಾಪದ. 'ಕೊಟ್ಟರು' (೪೮) ಎಂಬುದು ಒಂದು ವಸ್ತುವನ್ನು ಒಬ್ಬನಿಗೆ ಹಸ್ತಾಂತರಿಸುವುದನ್ನು ಹೇಳುವ ಸಕರ್ಮಕ ಕ್ರಿಯಾಪದ. ಒಂದು ವಸ್ತುವನ್ನು ಒಬ್ಬನಿಗೆ ಕೊಡುವ ಕ್ರಿಯೆಯಲ್ಲೂ ಆ ವಸ್ತುವಿನ ಚಲನೆಯನ್ನು ಹೇಳಿದಂತಾಯ್ತೆಂದು ವಾದಿಸಬಹುದು. ಆದರೆ, ಅಕರ್ಮಕ ಮತ್ತು ಸಕರ್ಮಕ ಗುಣಗಳಿಂದ ಇವೆರಡೂ ಕ್ರಿಯಾಪದಗಳ ನಡುವಣ ಅಂತರವು ಸ್ಪಷ್ಟವಾಗುತ್ತದೆ. ಇವುಗಳಂತೆಯೇ ವಿಭಕ್ತಿ ಪ್ರತ್ಯಯ ಹೊಂದಿದ ನಾಮಪದ ಗಳಲ್ಲಿಯೂ ಗುಣವಿಶೇಷಗಳು ಪ್ರತ್ಯೇಕವಾಗಿವೆ. ಮೋಕ್ಷಲಕ್ಷ್ಮೀನಿವಾಸ' (೪೭)ವೆಂಬ ನಾಮಪದ ಒಂದು ಸ್ಥಳವನ್ನು ನಿರ್ದೇಶಿಸುತ್ತದೆ; 'ಗುಣಸೇನಪಂಡಿತ' (೪೮) ವ್ಯಕ್ತಿಯೊಬ್ಬನ ಹೆಸರನ್ನು ನಿರ್ದೇಶಿಸುವ ಅಂಕಿತನಾಮವಾಗಿದೆ. ೪೮ನೇ ವಾಕ್ಯದಲ್ಲಿ ಒಂದು ಕರ್ಮಪದವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ (overt or covert) ಇರುತ್ತದೆ. ಆದರೆ ೪೭ರಲ್ಲಿ ಕರ್ಮಪದವಿರಲು ಸಾಧ್ಯವಿಲ್ಲ. ಮೇಲಿನ ವಾಕ್ಯ ಗಳೆರಡೂ ಒಂದೇ ಕಾರಕ ಸಂಬಂಧವನ್ನು ಹೊಂದಿದ್ದರೆ ಒಂದರ ಕ್ರಿಯಾಪದವನ್ನು ಇನ್ನೊಂದು ವಾಕ್ಯಕ್ಕೆ ಬದಲಿಸಿಹಾಕಿದಾಗ ಫಲಿತ ವಾಕ್ಯಗಳು (resultant sentences) ಅರ್ಥಹೀನವೋ ಅರ್ಥ ವೈಪರೀತ್ಯವೋ ತೋರದೆ ಸ್ವೀಕಾರಾರ್ಹವಾಗಿರಬೇಕು. ಅದಲ್ಲದೆ ಹೋದರೆ ವಾಕ್ಯಗಳ ಕಾರಕಗಳು ಬೇರೆ ಬೇರೆ ಎಂಬುದು ಸ್ಪಷ್ಟ.[2]

ಉದಾ: ೪೭ಎ. *ಗುಣಸೇನ ಪಂಡಿತದೇವರ್ ಮೋಕ್ಷಲಕ್ಷ್ಮೀ ನಿವಾಸಕ್ಕೆ ಕೊಟ್ಟರು
೪೮ಎ. *ಪೋಚಬ್ಬರಸಿ......ಗುಣಸೇನಪಂಡಿತದೇವರ್ಗ್ಗೆ ಸಂದರ್

೪೭ಎ.ಯಲ್ಲಿ ಬರುವ 'ಕೊಟ್ಟರು' ಎಂಬ ಕ್ರಿಯೆ, 'ಮೋಕ್ಷಲಕ್ಷ್ಮೀನಿವಾಸ' ಎಂಬ ಸ್ಥಳನಿರ್ದೇಶ ಮಾಡುವ ನಾಮಪದದೊಡನೆ ಮೇಲಿನ ವಾಕ್ಯದಲ್ಲಿ ಹೊಂದುವುದಿಲ್ಲ. ೪೮ಎ.ಯಲ್ಲಿಯೂ 'ಸಂದರ್' ಎಂಬ ಕ್ರಿಯಾಪದ ಹೊಂದುವುದಿಲ್ಲ. ಇಂಗ್ಲಿಷಿನಲ್ಲಿ She went to him ಎಂದು ಹೇಳುವಂತೆ '*ಅವನಿಗೆ ಹೋದಳು...' ಎಂದು ಕನ್ನಡದಲ್ಲಿ ಹೇಳಲುಸಾಧ್ಯವಿಲ್ಲ. 'ಅವನ ಹತ್ತಿರ, ಅವನಲ್ಲಿಗೆ ಹೋದಳು' ಎಂಬಂತೆ ಸ್ಥಳವನ್ನು ನಿರ್ದೇಶನ ಮಾಡುವ 'ಹತ್ತಿರ' ಅಥವಾ 'ಅಲ್ಲಿಗೆ' ಎಂಬ ಪದಖಂಡಗಳು 'ಹೋಗು' ಎಂಬ ಚಲನಾಕ್ರಿಯೆಯನ್ನು ಹೇಳುವ ವಾಕ್ಯದಲ್ಲಿ ಬೇಕೇ ಬೇಕು. ಕನ್ನಡದಂತೆ ಇತರ ದ್ರಾವಿಡಭಾಷೆ ಗಳಲ್ಲಿಯೂ ಈ ಪ್ರಕ್ರಿಯೆ ಹೀಗೆಯೇ ಇದೆ. ಉದಾ: ತಮಿಳಿನಲ್ಲಿ: *ಅವನುಕ್ಕು ಪೋನಾನ್. *ಅವನಿಗೆ ಹೋದನು ಎಂದು ಹೇಳಲಾಗದು. ಅವನಿಡಂ. ಅವನ್‌ಕಿಟ್ಟೆ. ಪೋನಾನ್': ಅವನ ಹತ್ತಿರ. ಅವನೆಡೆಗೆ ಹೋದನು' ಎಂದು ಹೇಳಬೇಕಾಗುತ್ತದೆ. ಹೀಗೆ ನಾವು ವಾಕ್ಯರೂಪದ ಹೊರಪದರಿನಲ್ಲಿ ಅದು ಏಕ ರೂಪಿಯಾಗಿ ಕಾಣುವ ಭ್ರಮೆಯಿಂದ ೪೭ ಮತ್ತು ೪೮ನೇ ವಾಕ್ಯಗಳು ಹೊಂದಿರುವ ವಿಭಕ್ತಿಯನ್ನು

---

2. ಒಂದರ ಬದಲು ಇನ್ನೊಂದು ಶಬ್ದವನ್ನು ವಾಕ್ಯದಲ್ಲಿ ಆರೋಪಿಸುವಾಗ ವಾಕ್ಯದ ಶಬ್ದಾರ್ಥ ನಿಶ್ಚಯವಾಗಿ ಬದಲಾಗುತ್ತವೆ. ಆದರೆ ಇಲ್ಲಿ ವಾಕ್ಯದ ಶಬ್ದಾರ್ಥದಿಂದಾಗಿ ವಾಕ್ಯ ಸ್ವೀಕಾರಾರ್ಹವೋ ಅಸ್ವೀಕಾರಾರ್ಹವೋ ಆಗುವುದಿಲ್ಲ: ವಾಕ್ಯದ ಒಟ್ಟು ಪ್ರಕ್ರಿಯೆಯ ಅರ್ಥ ((functional meaning)ದಿಂದ ಎಂದು ತಿಳಿಯಬೇಕು.

ಚತುರ್ಥಿಯೆಂಬ ಒಂದೇ ಹೆಸರಿನಿಂದ ಕರೆಯುವುದು ವಾಡಿಕೆ. ಆದರೆ ಅವುಗಳ ನಿಜವಾದ ಕಾರಕ ಬೇರೆ ಬೇರೆಯೆಂಬ ಕಾರಣದಿಂದ ಇವೆರಡೂ ಬೇರೆ ಬೇರೆ ವಿಭಕ್ತಿಗಳೆಂದು ಗುರುತಿಸಬೇಕಾಗುತ್ತದೆ. ೪೭ನೇ ವಾಕ್ಯದ ವಿಭಕ್ತಿಯನ್ನು (ಅದರಂತಿರುವ ಇತರ ವಾಕ್ಯಗಳನ್ನೂ ಸಹ) 'ದಿಗ್ವಾಚೀ ಚತುರ್ಥಿ'–ಅಂದರೆ ಒಂದು ಕಡೆಯಿಂದ ಒಂದು ಕಡೆಗೆ ಯಾವುದಾದರೊಂದು ವ್ಯಕ್ತಿ ಅಥವಾ ವಸ್ತುವಿನ ಚಲನೆಯನ್ನು ಸೂಚಿಸುವಂತಹದು ಎಂದೂ ೪೮ನೇ ವಾಕ್ಯದಂತಹ ವಾಕ್ಯಗಳ ವಿಭಕ್ತಿಯನ್ನು ನಿಜಚತುರ್ಥೀಯೆಂದೂ ವಿಂಗಡಿಸಬೇಕಾಗುತ್ತದೆ.

೪೯. ಈ ಧರ್ಮವ ತಪ್ಪನಡದವ ಪಾಪ ನರಕ ಬಿದ್ದ

ಮೇಲಿನ ವಾಕ್ಯವನ್ನು ಪರಿಶೀಲಿಸಿದಾಗ ಇದು ೪೮ನೆಯ ವಾಕ್ಯಕ್ಕಿಂತ ಭಿನ್ನವಾದ ಗುಣವಿಶೇಷವನ್ನು ಪಡೆದಿದೆಯೆಂದು ಸ್ಪಷ್ಟವಾಗುತ್ತದೆ. 'ಬಿದ್ದ' ಎಂಬ ಕ್ರಿಯಾಪದ ಚಲನಾರ್ಥದಿಂದಿರುವುದರಿಂದ ಇದು ೪೭ನೆಯ ವಾಕ್ಯಕ್ಕೆ ಸಮಾನವಾಗಿರುವಂತೆ ತೋರುತ್ತದೆ. ಪಾಪನರಕ ಎಂಬ ನಾಮಪದದಲ್ಲಿ ವಿಭಕ್ತಿ ಪ್ರತ್ಯಯದ ಪ್ರತ್ಯಕ್ಷ ರೂಪ (overt form) ಇಲ್ಲ. –ಕ್ಕೆ ಎಂಬ ಚತುರ್ಥಿಯ ಪ್ರತ್ಯಯವಾಗಲೀ, '–ಅಲ್ಲಿ' ಎಂಬ ಸಪ್ತಮಿಯ ಪ್ರತ್ಯಯವಾಗಲೀ 'ಪಾಪನರಕ' ಎಂಬ ಪದದೊಡನೆ ಬರಬಹುದು. ಇವೆರಡರ ಪೈಕಿ ಯಾವುದೂ ಆ ನಾಮಪದದೊಡನೆ ಬಂದಿಲ್ಲವಾದುದರಿಂದ ಅಲ್ಲಿ ಬರಬೇಕಾದ ಪ್ರತ್ಯಯ ಯಾವುದೆಂದು ಇತರ ದ್ರಾವಿಡಭಾಷೆಗಳಲ್ಲಿ ಬರುವ ಇಂತಹ ರಚನೆಗಳನ್ನು ಹೋಲಿಸಿ ಅನುಮಾನಿಸಬೇಕು. ತಮಿಳಿನಲ್ಲೂ ತೆಲುಗಿನಲ್ಲೂ ಒಂದು ಸ್ಥಳವನ್ನು ಹೆಸರಿಸಿದ ನಾಮಪದವಿದ್ದು 'ಹೋಗು' ಎಂಬ ಕ್ರಿಯಾಪದವಿದ್ದರೆ ಚತುರ್ಥಿಯ ಪ್ರತ್ಯಯ (ಮೇಲ್ಮೈ ಸ್ತರದಲ್ಲಿ) ಬರಲೇ ಬೇಕೆಂಬ ನಿಯಮ ವಿರುವುದಿಲ್ಲ. ಉದಾ: 'ನಾನ್ ಮದ್ರಾಸ್ ಪೋಗಿರೇನ್ (ತ). ನೇನು ಮದ್ರಾಸ್ ವೆಳುತಾನು (ತೆ) 'ನಾನು ಮದ್ರಾಸಿಗೆ ಹೋಗುತ್ತೇನೆ'(ಕ) ಈ ತರದ ಚತುರ್ಥಿಯ ಪ್ರತ್ಯಯ ಬರುವ ಅಥವಾ ಬಾರದಿರುವ ಐಚ್ಛಿಕವಿನ್ಯಾಸ (optionality) ಕನ್ನಡದಲ್ಲಿಲ್ಲ. ಆದರೆ ಈ ಶಾಸನ ಲೇಖಕನಿಗೆ ತಮಿಳಿನ ಪ್ರಭಾವ ಸಾಕಷ್ಟು ಬಿದ್ದಿರಬೇಕೆಂದು ಊಹಿಸಲು ಸಾಧ್ಯವಿದೆ.[3] ಈ ಕಾರಣದಿಂದ 'ಪಾಪನರಕಕ್ಕೆ' ಎಂಬುದರ ಬದಲಿಗೆ 'ಪಾಪನರಕ' ಎಂದು ಬರೆದುದಾಗಿರಬೇಕು. ಹಾಗಾಗಿ –ಕ್ಕೆ ಎಂಬ ಪ್ರತ್ಯಯ ಈ ವಾಕ್ಯದಲ್ಲಿ ಪರೋಕ್ಷವಾಗಿದೆಯೆಂದೂ ಈ ವಾಕ್ಯ ೪೭ನೆಯದಕ್ಕೆ ಸಮಾನವೆಂದೂ ಊಹಿಸಬಹುದು.

'ಬೀಳ್' ಎಂಬ ಕ್ರಿಯಾಪದ ಒಂದು ವಾಕ್ಯದಲ್ಲಿ ಬರುವಾಗ, ಚತುರ್ಥೀ ಮತ್ತು ಸಪ್ತಮಿಗಳೊಳಗೆ ವ್ಯತ್ಯಯವುಂಟಾಗುವ ಸಂದರ್ಭಗಳಿವೆ.ಉದಾ: 'ಬಾವಿಗೆ ಬಿದ್ದ' ಅಥವಾ 'ಬಾವಿಯಲ್ಲಿ ಬಿದ್ದ' ಎಂಬೆರಡೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಆದರೆ 'ಹೋಗು' ಎಂಬ ಕ್ರಿಯಾಪದ ವಾಕ್ಯದಲ್ಲಿರುವಾಗ ಚತುರ್ಥೀ ಮತ್ತು ಸಪ್ತಮಿಗಳೊಳಗೆ ವಿರೋಧಾರ್ಥವುಂಟಾಗುತ್ತದೆ. ಉದಾ: 'ಹೊಳೆಗೆ ಹೋದ' ಮತ್ತು 'ಹೊಳೆಯಲ್ಲಿ ಹೋದ' ಎಂಬವುಗಳ ಅರ್ಥ ಬೇರೆ ಬೇರೆ. 'ಹೊಳೆಗೆ ಹೋದ' ಎನ್ನುವಾಗ ಹೊಳೆಯಿರುವ ಕಡೆಗೆ ಹೋದ. ಮತ್ತು 'ಹೊಳೆಯಲ್ಲಿ ಹೋದ' ಎಂದರೆ, ಹೊಳೆಯಲ್ಲಿ ಮುಳುಗಿ ಸತ್ತು ಹೋದ ಅಥವಾ ಹೊಳೆಯ ಹೊಯ್ಲಿನಲ್ಲಿ ಕೊಚ್ಚಿ ಹೋದನೆಂಬ ಅರ್ಥಗಳುಂಟಾಗುತ್ತವೆ. ಈ ತರ ಚತುರ್ಥಿ ಮತ್ತು ಸಪ್ತಮಿಗಳೊಳಗೆ 'ಹೋಗು' ಎಂಬ ಕ್ರಿಯಾಪದವಿರುವ ವಾಕ್ಯದಲ್ಲಿ ವೈಷಮ್ಯವುಂಟಾಗುವುದರಿಂದ, ೪೯ನೇ ವಾಕ್ಯದ ಪಾಪನರಕ ಎಂಬುದರ ವಿಭಕ್ತಿ –ಕ್ಕೆ ಎಂಬ ಚತುರ್ಥಿಯೋ ಇಲ್ಲ, –ಅಲ್ಲಿ ಎಂಬ ಸಪ್ತಮಿಯೋ ಎಂಬ ಸಂದೇಹವುಂಟಾಗುತ್ತದೆ. ಅದು ಚತುರ್ಥಿಯೆಂಬ ಮೇಲಿನ ತೀರ್ಮಾನ ತಾತ್ಕಾಲಿಕವಾದುದೆಂದು ತಿಳಿದುಕೊಳ್ಳಬೇಕು.

೫೦. ತೊಳಸಿಯ ಮಾಲೆಗೆ ಕೊಟ್ಟ ಗದ್ಯಾಣ ೫

ತೊಳಸಿಯ ಮಾಲೆಯೆಂಬುದು ಸ್ಥಳವನ್ನು ನಿರ್ದೇಶಿಸುವಂತಹ ನಾಮಪದವಲ್ಲವೆಂಬುದರಲ್ಲಿ ಸಂದೇಹವಿಲ್ಲ. '೫ ಗದ್ಯಾಣ'–ಕರ್ಮಪದವಾಗುಳ್ಳ ನಾಮಪದ. 'ಕೊಟ್ಟ' ಎಂಬುದು ಸಕರ್ಮಕ ಕ್ರಿಯಾಪದ. ಈ ಎಲ್ಲ ಗುಣವಿಶೇಷಗಳಿಂದ, ೫೦ನೇ ವಾಕ್ಯ ೪೮ನೆಯದಕ್ಕೆ ಸಮೀಪವಾಗಿದೆಯೆಂದೂ, ೪೭ ಮತ್ತು

3. ೧ನೇ ಟಿಪ್ಪಣಿಯನ್ನು ನೋಡಿ.

ರ್ಥಕ್ಕಿಂತ ಭಿನ್ನವಾದುದೆಂದೂ ಭಾಸವಾಗಬಹುದು. ಆದರೆ ಇದು ಕೂಡ ನಿಜಚತುರ್ಥಿಯಲ್ಲಿಲ್ಲ. ಕಾರಣ, 'ತೊಳಸಿಯ ಮಾಲೆ' ಎಂಬುದು ಯಾರೋ ಕೊಡುವ '೫ ಗದ್ಯಾಣವನ್ನು' ಸ್ವೀಕರಿಸುವ ವ್ಯಕ್ತಿ ನಿರ್ದೇಶಕನಾಮಪದವಲ್ಲ. ೫ ಗದ್ಯಾಣವನ್ನು ಸ್ವೀಕರಿಸುವ ವ್ಯಕ್ತಿ ಯಾರೋ ಬೇರೆ. ಅವನಿಗೆ ೫ ಗದ್ಯಾಣವನ್ನಿತ್ತುದು ತೊಳಸಿಯ ಮಾಲೆಯನ್ನು ಪಡೆಯುವುದಕ್ಕೋಸ್ಕರ. ಆದುದರಿಂದ ಇಂತಹ ವಾಕ್ಯಗಳಲ್ಲಿ ಬರುವ ಚತುರ್ಥೀ ವಿಭಕ್ತಿಯನ್ನು ಅದು ನಿಜವಾದ ಚತುರ್ಥಿಯಲ್ಲ, ಅದು ಕಾರಣ ಚತುರ್ಥೀ (Dative of purpose) ಎಂದು ತಿಳಿಯಬೇಕಾಗುತ್ತದೆ. ಮೇಲೆ ಹೇಳಿದ ಮೂರು ತರದ ಚತುರ್ಥಿಗಳಾದ ದಿಗ್ವಾಚೀ ಚತುರ್ಥಿ, ನಿಜಚತುರ್ಥಿ ಮತ್ತು ಕಾರಣಚತುರ್ಥಿಗಳಲ್ಲಿ ಪ್ರತಿಯೊಂದು ವಾಕ್ಯದ ಮೇಲ್ಮೈಯ ಸ್ತರದ ಅಥವಾ ಅಂತರಾಳ ಸ್ತರದಲ್ಲಿ ಚತುರ್ಥೀ ಪ್ರತ್ಯಯವು ಪ್ರತ್ಯಕ್ಷರೂಪದಿಂದಲೋ, ಪರೋಕ್ಷರೂಪದಿಂದಲೋ ಇದೆ–ಅರ್ಥಾತ್ ಮೇಲ್ಮೈಸ್ತರ ಮತ್ತು ಅಂತರಾಳಸ್ತರಗಳು ಒಂದಕ್ಕೊಂದು ಸಮವಾಗಿವೆ. ಮೇಲ್ಮೈಸ್ತರದಲ್ಲಿ ಚತುರ್ಥೀ ವಿಭಕ್ತಿಯನ್ನು ಹೊಂದಿದ್ದೂ ಅಂತರಾಳಸ್ತರದಲ್ಲಿ ಚತುರ್ಥಿಯಲ್ಲದ (ಸಂಪ್ರದಾನವಲ್ಲದ) ಬೇರೆಯೇ ಕಾರಕವನ್ನು ತೋರಿಸುವ ವಾಕ್ಯಗಳ ಉದಾಹರಣೆಗಳಿವೆ. ಅಂತರಾಳಸ್ತರದ ರೂಪದಮೇಲೆ ನಡೆಯುವ ವಿವಿಧ ಪರಿವರ್ತನಾಪ್ರಕ್ರಿಯೆಯ (Transformational mechanism) ಮೂಲಕ ವಾಕ್ಯದ ಮೇಲ್ಪದರಿನ ರೂಪದಲ್ಲಿ ಚತುರ್ಥೀ ವಿಭಕ್ತಿಯು ಬರುತ್ತದೆ. ಶಾಸನ ಹಾಗೂ ಇತರ ಪಾಠ (Texts)ಗಳಲ್ಲಿ ದೊರೆಯುವ ಅಂತಹ ವಾಕ್ಯಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ:

೫೧. ಯಿ ಧರ್ಮಕ್ಕೆ ಆವನಾನೊರ್ಬ್ಬ ಅಳಿಪಿದಡೆ...ವಧಿಸಿದ ದೋಷದಲ್ಲಿ ಹೋಹರು.

'ಅಳಿಪು' ಎಂಬುದು ಸಕರ್ಮಕ ಕ್ರಿಯೆಯೆಂಬುದರಿಂದ ಅದನ್ನು ಹೊಂದಿಕೊಂಡೇ ಒಂದು ಕರ್ಮಪದ ಪ್ರತ್ಯಕ್ಷರೂಪದಲ್ಲೋ ಪರೋಕ್ಷ ರೂಪದಲ್ಲೋ ಇರಬೇಕಾಗಿದೆ. ೫೧ನೇ ವಾಕ್ಯದಲ್ಲಿ ಅದಿಲ್ಲ. ಚತುರ್ಥಿಯನ್ನು ಹೊಂದಿರುವ 'ಧರ್ಮಕ್ಕೆ' ಎಂಬ ಪದವು ೪೮ನೇ ವಾಕ್ಯದಂತೆ ಯಾವುದಾದರೊಂದನ್ನು ಸ್ವೀಕರಿಸುವ ವ್ಯಕ್ತಿಯ ನಿರ್ದೇಶನಮಾಡುವುದಿಲ್ಲ. ೫೦ನೇ ವಾಕ್ಯದಲ್ಲಿರುವಂತೆ ವಾಕ್ಯದಲ್ಲಿ ಪ್ರತ್ಯಕ್ಷವಾಗಿ ಬಾರದ, ಆದರೆ ಅಂತರಾಳ ಸ್ತರದಲ್ಲಿರಬೇಕಾದ ಸ್ವೀಕರಿಸುವಂತಹ ವ್ಯಕ್ತಿ ಬೇರಾರೋ ಆಗಿರುವಂಥದ್ದೂ ಇದರಲ್ಲಿಲ್ಲ. ಹೀಗಿರುವುದರಿಂದ ೫೧ನೇ ವಾಕ್ಯದಲ್ಲಿರುವ ವಿಭಕ್ತಿಯು ಮೇಲೆ ನೋಡಿದ ಚತುರ್ಥಿಯ ಯಾವ ಜಾತಿಗೂ ಸೇರುವುದಿಲ್ಲ. 'ಅಳಿಪು' ಎಂಬ ಕ್ರಿಯೆ 'ಧರ್ಮದ' ಮೇಲೆ ನಡೆಯುತ್ತದೆ. 'ಧರ್ಮ'ವೆಂಬುದು ಕರ್ಮಪದ. ಆದುದರಿಂದ ೫೧ನೇ ವಾಕ್ಯ ಅಂತರಾಳ ಸ್ತರದಲ್ಲಿರುವ ಈ ಕೆಳಗೆ ಕೊಟ್ಟ ವಾಕ್ಯದ ಪ್ರಭೇದವೆಂದು ನಿಷ್ಪನ್ನ ಮಾಡಬೇಕಾಗುತ್ತದೆ.

೫೧ಎ. ಯಿ ಧರ್ಮವಂ ಆವನಾನೊರ್ಬ್ಬ ಅಳಿಪಿದೊಡೆ... ವಧಿಸಿದ ದೋಷದಲ್ಲಿ ಹೋಹರು.

ಅಂತರಾಳ ಸ್ತರದಲ್ಲಿ ಕರ್ಮಪದವಾಗಿದ್ದುದು ಮೇಲ್ಪದರಿನಲ್ಲಿ ಚತುರ್ಥೀ ವಿಭಕ್ತಿಯನ್ನು ಹೊಂದಿದೆ. ಈ ಕೆಳಗೆ ಕೊಟ್ಟ ವಾಕ್ಯವೂ ಮೇಲಿನದರಂತೆಯೇ ಇದೆ.

೫೨. ಇದಕ್ಕೆ ಬಾನಗೇಡು ಬರಗೇಡಿಲ್ಲ.

ಇಲ್ಲ ಎಂಬುದು ಇರ್– ಎಂಬ ಕ್ರಿಯೆಯ ಪ್ರತಿಷೇಧ (Negative) ರೂಪ[4]. ಈ ಕ್ರಿಯೆ ಒಂದು

---

4 ಇರ್–ಎಂಬುದು ಅಚಲವಾಗಿರುವಿಕೆಯನ್ನು ಹೇಳುವಂತಹ ಅನೇಕವಾಕ್ಯಗಳಿವೆ. ಆ ಸಂದರ್ಭದಲ್ಲಿ ಅದು ಒಂದು ವಸ್ತುವು ಪಡೆದಿರುವ ಗುಣವನ್ನು ಹೇಳುವುದಿಲ್ಲ.
ಉದಾ: ಹಾಲು ಬೆಳ್ಳಗಿದೆ ಎಂಬ ವಾಕ್ಯದಲ್ಲಿ, ಬೆಳ್ಳಗಿರುವಿಕೆಯನ್ನು ಹಾಲು ಹೊಸತಾಗಿ ಪಡೆದುಕೊಂಡುದಲ್ಲ. ಒಂದನ್ನೊಂದು ಬೇರ್ಪಟ್ಟು ನಿಲ್ಲಲಾರದಂತಹ ಗುಣವಾಗಿದೆ. ಹೀಗಿರುವುದರಿಂದ ಇಲ್ಲಿರುವ ಕ್ರಿಯಾಪದ ಇರ್–ಧಾತು ಅಂತರಾಳಸ್ತರದಲ್ಲಿಯೂ ಸಹ ಸಕರ್ಮಕವಲ್ಲ, ಅಕರ್ಮಕ (೨೫ನೇ ವಾಕ್ಯದ ಕೆಳಗೆ ನೋಡಿ).

ವಸ್ತು (=ಇದು, ಅಂದರೆ ನೆಲ) ಅಡಕಗೊಂಡಿರುವ ಗುಣದ (=ಇಲ್ಲಿ ಬಾಸಗೇಡು, ಬರಗೇಡು') ಸ್ಥಿತಿಯನ್ನು ಸೂಚಿಸುತ್ತದೆ. ಇದು ಮೇಲ್ಪದರಿನಲ್ಲಿ ಅಕರ್ಮಕವಾಗಿ ಕಂಡರೂ ಅದು ಗುಣದ ಇರುವಿಕೆಯ ಸ್ಥಿತಿಯನ್ನು ಹೇಳುತ್ತದೆಂಬುದರಿಂದ ಅಂತರಾಳಸ್ತರದಲ್ಲಿ ಇದನ್ನು ಸಕರ್ಮಕವೆಂದೇ ತೆಗೆದುಕೊಳ್ಳಬೇಕು. ಆದುದರಿಂದ ೫೨ನೇ ವಾಕ್ಯವನ್ನು ಕೆಳಗೆ ಕೊಟ್ಟಂತಹ ಅಂತರಾಳವಾಕ್ಯ (deep structure sentence) ದಿಂದ ನಿಷ್ಪನ್ನ ಮಾಡಬೇಕಾಗಿದೆ.

೫೨ಎ. ಇದು (ಕರ್ತೃ) + ಬಾಸಗೇಡು ಬರಗೇಡನ್ನು (ಕರ್ಮ) + ಉಳ್ಳುದು (ಸಕರ್ಮಕ ಕ್ರಿಯೆ) + ಪ್ರತಿಷೇದ

೫೨ಎ.ಯ ಮೇಲೆ:

ಕರ್ತೃ→ಚತುರ್ಥೀಯುತ ನಾಮ
ಕರ್ಮ→ಕರ್ತೃ
ಉಳ್ಳುದು + ಪ್ರತಿಷೇಧ→ಇಲ್ಲ

ಎಂದಾದ ಪರಿವರ್ತನಾ ಕ್ರಿಯೆಯಿಂದ(transformation) ಮೇಲ್ಪದರಿನಲ್ಲಿ ೫೨ನೇ ವಾಕ್ಯ ಘಟಿಸಿದೆ.

ರಚನಾತ್ಮಕ ವ್ಯಾಕರಣಗಳಲ್ಲಿ (structural grammars) ಚತುರ್ಥಿಯ ಪ್ರತ್ಯಯವನ್ನು ಪಡೆದಿರುವ ನಾಮಪದಗಳೆಲ್ಲವೂ ಚತುರ್ಥೀ ವಿಭಕ್ತಿಯುಳ್ಳವೆಯೆಂದು ಹೇಳುವುದು ಪದ್ಧತಿ. ಆದರೆ ಮೇಲಿನ ವಿವೇಚನೆಯಿಂದ ಚತುರ್ಥಿಯ ಪ್ರತ್ಯಯ ಸಂಪ್ರದಾನದ ಅರ್ಥದಲ್ಲಿ ಮಾತ್ರವಲ್ಲ ಬೇರೆ ಸಂದರ್ಭಗಳಲ್ಲೂ ಬರುತ್ತದೆಂಬುದು ಮುಂದಟ್ಟಾಗುತ್ತದೆ. ಕೇಶಿರಾಜನಂತಹ ಸಾಂಪ್ರದಾಯಿಕ ವೈಯಾಕರಣಿಗಳಿಗೆ (traditional grammarians) ಅಂತರಾಳಸ್ತರದ ಮತ್ತು ಮೇಲ್ಮೈಸ್ತರದ ರಚನೆಗಳ ರೂಪಭೇದಗಳ ಹೊಳಹು ಮನಸ್ಸಿಗಾದಂತೆ ತೋರುತ್ತದೆ. ಕೇಶಿರಾಜನು ೧೪೦–೧೪೧ನೇ ಸೂತ್ರಗಳಲ್ಲಿ ಚತುರ್ಥೀ ವಿಭಕ್ತಿಯ ಕುರಿತು ಈ ವಿಭಕ್ತಿ ಒಂದು ವಸ್ತುವನ್ನು ಸ್ವೀಕರಿಸುವವನನ್ನು ನಿರ್ದೇಶಿಸುತ್ತದೆಂದು ಹೇಳಿದ್ದಾನೆ. ಅದಲ್ಲದೆ ಚತುರ್ಥೀ ವಿಭಕ್ತಿಯು ಇನ್ನಿತರ ೧೬ ಅರ್ಥಗಳಲ್ಲಿಯೂ ಪ್ರಯೋಗವಾಗುತ್ತದೆಂದಿದ್ದಾನೆ. ಅದಕ್ಕೆ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಆದರೆ ಈ ಅರ್ಥಭೇದಗಳುಂಟಾಗಲು ವಿಭಕ್ತಿ ಪ್ರತ್ಯಯಗಳು ಕಾರಣವಲ್ಲ—ಅದಕ್ಕೆ ಬೇರೆಯೇ ಕಾರಣಗಳಿವೆಯೆಂದು ಕೇಶಿರಾಜನು ಸ್ಪಷ್ಟಪಡಿಸದೆ ಹೋದುದೆ ಕೊರತೆ.

ಕೇಶಿರಾಜನೇ ಕೊಟ್ಟ ಚತುರ್ಥೀ ವಿಭಕ್ತಿಯ ಲಕ್ಷಣದ ಪ್ರಕಾರ ಅವನು 53ನೇ ವಾಕ್ಯವನು ಮಾತ್ರ ಚತುರ್ಥಿಯುಳ್ಳಿರುವುದೆಂದು ಹೇಳಿ ಉಳಿದವುಗಳನ್ನು ಬೇರೆ ಅರ್ಥಗಳ ಕೆಳಗೆ ಪಟ್ಟಿಮಾಡಿದ್ದರೂ ಈ ಕೆಳಗಿನವುಗಳೆಲ್ಲ ಸಂಪ್ರದಾನಾರ್ಥದಲ್ಲಿಯೇ ಇವೆ.

೫೩. ಬ್ರಾಹ್ಮಣಂಗೆ ಗೋವಂ ಕೊಟ್ಟಂ (ಸಂಪ್ರದಾನ)
೫೪. ಆತಂಗೆ ವಿಷಮನಿಕ್ಕಿದಂ (ಅನಿಷ್ಟ)
೫೫. ಭಕ್ತಂಗೆ ವರಮನಿತ್ತಂ (ಇಷ್ಟ)
೫೬. ಕಳೆಯಂಗೆ ಸಂತೋಷಮಂ ಮಾಡಿದಂ (ಇಷ್ಟ)
೫೭. ಜಗಕ್ಕೆಲ್ಲಿಯುಂ ಸಮನಿಸುಗೆ ಕ್ಷೇಮವೃತ್ತಿ (ಸ್ವಸ್ತಿ)

೫೩ರಿಂದ ೫೭ನೇ ವಾಕ್ಯಗಳಲ್ಲಿ ಬರುವ ಕ್ರಿಯಾಪದಗಳೆಲ್ಲವೂ ಯಾವುದಾದರೊಂದು ವಸ್ತುವನ್ನು ಒಬ್ಬನು ಸ್ವೀಕರಿಸುವ ಅರ್ಥವನ್ನು ಕೊಡುತ್ತವೆ; 'ಕೊಟ್ಟಂ (೫೩)', 'ಇಕ್ಕಿದಂ' (೫೪), 'ಇತ್ತಂ' (೫೫), 'ಮಾಡಿದಂ' (೫೬) ಮತ್ತು ಸಮನಿಸುಗೆ (೫೭); ಆ ವಾಕ್ಯಗಳಲ್ಲಿ 'ಗೋವಂ' (೫೩), 'ವಿಷಮಂ' (೫೪), 'ವರಮಂ' (೫೫), ಸಂತೋಷಮಂ (೫೭) ಎಂಬವು ಕರ್ಮಪದಗಳಾಗಿವೆ. ಚತುರ್ಥೀ ವಿಭಕ್ತಿಯ ಪ್ರತ್ಯಯವಿರುವ ನಾಮಪದಗಳು ಸ್ವೀಕರಿಸುವ ವ್ಯಕ್ತಿಯನ್ನು ಸೂಚಿಸುತ್ತವೆ. 'ಅನಿಷ್ಟ', 'ಇಷ್ಟ',

'ಸ್ವಸ್ತಿ' ಎಂಬ ಸಂದರ್ಭಗಳು ಚತುರ್ಥಿಯೊಡನೆ ನೇರ ಸಂಬಂಧವನ್ನು ಹೊಂದಿಲ್ಲ. ಆದುದರಿಂದ ಈ ವಾಕ್ಯಗಳನ್ನು ಕೇಶಿರಾಜ ಮಾಡಿದಂತೆ ಉಪವಿಭಾಗ ಮಾಡುವ ಅಗತ್ಯವಿಲ್ಲ.

ಕೇಶಿರಾಜನು ಚತುರ್ಥಿಯಲ್ಲಿ ರುಚಿ ಮತ್ತು ಹಿತ ಎಂಬ ವಿಭಜನೆಗಳನ್ನು ಮಾಡಿ ಈ ಕೆಳಗಿನ ವಾಕ್ಯಗಳನ್ನು ಉದಾಹರಿಸಿದ್ದಾನೆ.

೫೮. ಕೂಸಿಂಗೆ ಲಡ್ಡುಗೆಯಟ್ಟಿ (ರುಚಿ)
೫೯. ಪಶುವಿಂಗೆ ತೃಣಂ ಹಿತಂ (ಹಿತ)

ಇವುಗಳು ಖಂಡವಾಕ್ಯಗಳು. (elliptical sentences) ಅವುಗಳ ಮೂಲರೂಪದಲ್ಲಿ (ಅಂತರಾಳಸ್ತರದಲ್ಲಿ) 'ಅಟ್ಟಿ' ಮತ್ತು 'ಹಿತಂ' ಎಂಬ ಪದಗಳ ಸ್ಥಾನದಲ್ಲಿ ಇಚ್ಛಿಸು, ಬಯಸು ಎಂಬ ಅರ್ಥವಿರುವ ಕ್ರಿಯಾಪದಗಳಿರಬೇಕು. ಕೇಶಿರಾಜನು ಈ ಎರಡು ವಾಕ್ಯಗಳನ್ನು ಬೇರೆಬೇರೆಯೆಂದು ಕೊಟ್ಟರೂ ಅವೆರಡೂ ಒಂದೇ ಜಾತಿಯಲ್ಲಿ ಸೇರುತ್ತವೆ.

೫೮ಎ. ಕೂಸು ಲಡ್ಡುಗೆಯನ್......... ×
೫೯ಎ. ಪಶು ತೃಣಮಂ......... ×

ಅಟ್ಟಿ ಎಂಬುದರಿಂದ ಕ್ರಿಯಾಪದವನ್ನು 'ಅಟ್ಟಿಸು' ಎಂದು ಮಾಡಬಹುದಾದರೂ, ಹಿತ ಎಂಬುದನ್ನು ಹಾಗೆ ಮಾಡಲಾಗದ ಕಾರಣ, 58ಎ. ಮತ್ತು 59ಎ.ಗಳ ಕ್ರಿಯಾಪದಗಳನ್ನು '×' ಎಂಬ ಸಂಜ್ಞೆಯಿಂದ ತೋರಿಸಲಾಗಿದೆ. ಈ ವಾಕ್ಯಗಳ ಮೂಲರೂಪದ ಮೇಲೆ ನಡೆಯುವ ಪರಿವರ್ತನಾ ಕ್ರಿಯೆ ಈ ಕೆಳಗಿನಂತೆ ನಡೆಯುತ್ತದೆ.

(೧) ಕರ್ಮಪದ ಕರ್ತೃಪದವಾಗುತ್ತದೆ:
ಲಡ್ಡುಗೆಯನ್→ಲಡ್ಡುಗೆ
ತೃಣಮಂ→ತೃಣಂ

(೨) ಕರ್ತೃಪದವಾಗಿದ್ದುದು ಚತುರ್ಥೀ ವಿಭಕ್ತಿಯನ್ನು ಪಡೆಯುತ್ತದೆ.
ಕೂಸು→ ಕೂಸಿಂಗೆ
ಪಶು→ಪಶುವಿಂಗೆ

ಹೀಗೆ 58 ಮತ್ತು ೫೯ನೇ ವಾಕ್ಯಗಳು ಮೇಲ್ಮೈಸ್ತರದ ರೂಪಗಳಾಗಿವೆ. ಅಂತರಾಳಸ್ತರದ ರೂಪದಲ್ಲಿ ಅವುಗಳಿಗೆ ಚತುರ್ಥಿರೂಪಗಳಿಲ್ಲ.

ಸ್ವಭಾವವನ್ನು ನಿರ್ದೇಶಿಸುವ ಚತುರ್ಥಿಗೆ ಕೆಳಗಿನ ವಾಕ್ಯವನ್ನು ಕೇಶಿರಾಜ ಉದಾಹರಿಸಿದ್ದಾನೆ:

೬೦. ಸಿಂಹಕ್ಕೆ ಶೌರ್ಯಂ

೫೮ ಮತ್ತು ೫೯ನೇ ವಾಕ್ಯಗಳಂತೆ ಇದೂ ವಾಕ್ಯಖಂಡವಾಗಿ. ಕೆಳಗೆ ತೋರಿಸಿದ ಮೂಲದಿಂದ ನಿಷ್ಪನ್ನವಾಗಿದೆ:

೬೦ಎ. ಸಿಂಹಂ ಶೌರ್ಯಮನ್ ಉಳ್ಳುದು

ಇಲ್ಲಿಯೂ ಕ್ರಿಯಾಪದವಿದ್ದುದು ನಾಮರೂಪವನ್ನು ತಾಳಿದೆ. ಜತೆಗೆ ಕರ್ಮಪದ→ ಕರ್ತೃಪದವಾಗಿ. ಕರ್ತೃಪದ→ ಚತುರ್ಥೀಯುತ ನಾಮವಾಗಿ ಪರಿವರ್ತನೆಗೊಂಡಿದೆ.

ಈರ್ಷ್ಯೆ ಮತ್ತು ಮತ್ಸರಗಳನ್ನು ನಿರ್ದೇಶಿಸುವ ಚತುರ್ಥಿಯೆಂದು ಕೇಶಿರಾಜ ಈ ಕೆಳಗಿನ ಉದಾಹರಣೆಗಳನ್ನು ಕೊಟ್ಟಿದ್ದಾನೆ:

೬೧. ಕವಿಗೆ ಕವಿ ಮುನಿವಂ (ಈರ್ಷ್ಯೆ)
೬೨. ಸವತಿಗೆ ಸವತಿ ಪುರುಡಿಪಳ್ (ಮತ್ಸರ)

ಈ ಎರಡೂ ವಾಕ್ಯಗಳಲ್ಲೂ ಸಮಾನ ಕರ್ತೃಗಳಿವೆ: ಕವಿ–ಕವಿ; ಸವತಿ–ಸವತಿ. ವಾಕ್ಯಗಳು ಲೋಕ ರೂಢಿಯ ಸಮಾನಧರ್ಮವನ್ನು ಅಂದರೆ ಕವಿಗಳೊಳಗಿರುವ ಪರಸ್ಪರ ಈರ್ಷ್ಯೆ, ಸವತಿಗಳೊಳಗಣ ಪರಸ್ಪರ ಮತ್ಸರವನ್ನು ಕುರಿತು ಹೇಳುತ್ತವೆ. ಹೊರನೋಟಕ್ಕೆ ಏಕರೀತಿಯ ಕರ್ತೃಗಳಿರುವುದರಿಂದ, ಅಂದರೆ ಕ್ರಿಯೆಯಲ್ಲಿ ಇಬ್ಬರೂ ಸಮಭಾಗಿಗಳಾಗಿರುವುದರಿಂದ ಮೇಲಿನ ಒಂದೊಂದು ವಾಕ್ಯದಲ್ಲೂ ಎರಡೆರಡು ಸರಳವಾಕ್ಯಗಳಿವೆಯೆಂದು ತೋರಿ ಬಂದೀತು.

೬೧ಎ. ಕವಿ ಮುನಿವಂ   ೬೨ಎ. ಸವತಿ ಪುರುಡಿಪಳ್
೬೧ಬಿ. ಕವಿ ಮುನಿವಂ   ೬೨ಬಿ. ಸವತಿ ಪುರುಡಿಪಳ್

ಆದರೆ ಎರಡು ಕರ್ತೃಗಳಿದ್ದು ಒಂದಕ್ಕೆ ಚತುರ್ಥೀ ಪ್ರತ್ಯಯವಿರುವ ಕೆಳಗಿನ ವಾಕ್ಯವನ್ನು ಹೋಲಿಸಿ ನೋಡಿದರೆ ಇವುಗಳಲ್ಲಿ ಎರಡೆರಡು ಸರಳವಾಕ್ಯಗಳಿರುವುವೆಂದು ಹೇಳಲು ಸಾಧ್ಯವಿಲ್ಲವೆಂದು ಕಾಣುತ್ತದೆ.

೬೩. ಊರಿಗೆ ಊರೇ ಬಂತು

೬೩ನೇ ವಾಕ್ಯದಲ್ಲಿ 'ಊರು–ಊರು' ಎಂಬ ಎರಡು ಪದಗಳು ಸಮಾನ ಕರ್ತೃಗಳೆಂದು ಕಂಡು ಬಂದರೂ ೬೧ ಮತ್ತು ೬೨ನೇ ವಾಕ್ಯಗಳಲ್ಲಿರುವಂತೆ. ಅವುಗಳ ಕ್ರಿಯೆ ಬೇರೆ ಬೇರಾಗಿ ನಡೆಯುವುದಿಲ್ಲ. ಈ ವಾಕ್ಯವನ್ನು ಎರಡು ಸರಳವಾಕ್ಯಗಳಿಂದ ನಿಷ್ಪನ್ನ ಮಾಡಬಹುದು.

೬೩ಎ. ಊರು ಬಂತು
೬೩ಬಿ. ಊರು ಬಂತು

೬೩ನೇ ವಾಕ್ಯ ಅವಧಾರಣೆಯನ್ನು ತೋರಿಸುತ್ತದೆ. ೬೧ ಮತ್ತು ೬೨ನೇ ವಾಕ್ಯಗಳಲ್ಲಿ ಕ್ರಿಯೆಯು ಎರಡು ಕರ್ತೃಗಳಿಂದಲೂ ಬೇರೆ ಬೇರಾಗಿ ನಡೆಯುತ್ತದೆ. ಆದುದರಿಂದ ೬೩ರಂತೆ ಅವುಗಳನ್ನು ಎರಡು ಸಂಯುಕ್ತವಾಕ್ಯಗಳಿಂದ ನಿಷ್ಪನ್ನಮಾಡಲು ಕಷ್ಟವಾಗುತ್ತದೆ. ಹಾಗೆಂದಾಗ ೬೧ ಮತ್ತು ೬೨ನೇ ವಾಕ್ಯಗಳ ಮೂಲರೂಪದಲ್ಲಿಯೇ ಒಂದು ಕರ್ತೃಪದ ಮತ್ತು ಒಂದು ಚತುರ್ಥೀಯುತ ನಾಮಪದವಿದೆಯೆಂದು ಹೇಳುವಂತಾಯ್ತು.

ಚತುರ್ಥೀಯುತ ನಾಮವಿದೆಯೆಂದಾಗ, ಚತುರ್ಥಿಗೆ ಅಗತ್ಯವಾಗುಳ್ಳ ಕರ್ಮಪದ ಸಕರ್ಮಕ ಕ್ರಿಯೆ ಮುಂತಾದುವು ಹಿಂದೆ ಹೇಳಿದಂತೆ ಇರಬೇಕು. ಆದುದರಿಂದ ನಾವು ಕ್ರಿಯಾಪದಗಳನ್ನು ಮೊದಲು ಪರಿಶೀಲಿಸಬೇಕು.

ಮುನಿವಂ (೬೧) ಪುರುಡಿಪಳ್ (೬೨) ಎಂಬ ಕ್ರಿಯಾಪದಗಳು ವಾಕ್ಯಗಳ ಮೇಲ್ಮೈಸ್ತರದಲ್ಲಿ ಕರ್ಮಪದವನ್ನು ಹೊಂದಿಲ್ಲ. ಕರ್ಮಪದಗಳನ್ನು ವಾಕ್ಯದಲ್ಲಿ ಹೊಂದಿಸಿದರೆ ಫಲಿತ ವಾಕ್ಯಗಳು ಅಸ್ವೀಕೃತವಾಗುತ್ತವೆ:

೬೧ಸಿ .*ಕವಿಗೆ ಕವಿ ಅದಂ ಮುನಿವಂ
೬೨ಸಿ. *ಸವತಿಗೆ ಸವತಿ ಅದಂ ಪುರುಡಿಪಳ್ .

ಮೇಲ್ಮೈಸ್ತರದಲ್ಲಿ ಈ ಕ್ರಿಯಾಪದಗಳು ಸಕರ್ಮಕಗಳಾಗಿಲ್ಲ. ಮಾತ್ರವಲ್ಲ, ಈ ಕ್ರಿಯಾಘಟಕಗಳಲ್ಲಿ ಒಂದು ನಾಮಪದ ಮತ್ತೊಂದು ಕ್ರಿಯಾಪದಗಳು ಸಂಯೋಗಗೊಂಡಿವೆ. ಹಾಗಿರುವ ಆ ನಾಮಪದವೇ ಕರ್ಮಪದವಾಗಿಯೂ ಇದೆ. ಕ್ರಿಯಾಪದವು ಸಂಕುಚಿತವಾಗಿ ಕ್ರಿಯಾಪ್ರತ್ಯಯ ರೂಪವಾಗಿ ಮಾರ್ಪಟ್ಟಿದೆ. 'ದುಃಖಿಸು' ಎಂಬುದು 'ದುಃಖ + ಮಾಡು', 'ಕೋಪಿಸು' ಎಂಬುದು 'ಕೋಪ + ಮಾಡು' ಎಂಬುದರ ರೂಪಾಂತರವೆಂಬುದರಿಂದ ಮೇಲಿನ ವಿಶ್ಲೇಷಣೆಗೆ ಸಮರ್ಥನೆ ದೊರೆಯುತ್ತದೆ. ಹೀಗೆ 'ಮುನಿವಂ' ಎಂಬುದು 'ಮುನಿಸು + ಸಕರ್ಮಕ ಕ್ರಿಯೆ'; ಪುರುಡಿಪಳ್ ಎಂಬುದು 'ಪುರುಡು + ಸಕರ್ಮಕ ಕ್ರಿಯೆ' ಯೆಂದು ವಿಶ್ಲೇಷಿತವಾಗಬೇಕು. ಹೀಗಾಗಿ ೬೧ ಮತ್ತು ೬೨ನೆಯ ವಾಕ್ಯಗಳನ್ನು ಕೆಳಗೆ ತೋರಿಸಿದ ಅಂತರಾಳಸ್ತರದ ರೂಪದಿಂದ ನಿಷ್ಪನ್ನ ಮಾಡಬೇಕು:

೬೧ಡಿ. ಕವಿಗೆ ಕವಿ ಮುನಿಸು + ಸಕರ್ಮಕ ಕ್ರಿಯೆ→ಕವಿಗೆ ಕವಿ ಮುನಿವಂ
೬೨ಡಿ. ಸವತಿಗೆ ಸವತಿ ಪುರುಡು + ಸಕರ್ಮಕ ಕ್ರಿಯೆ→ಸವತಿಗೆ ಸವತಿ ಪುರುಡಿಪಳ್

೬೧ ಮತ್ತು ೬೨ನೇ ವಾಕ್ಯಗಳು ನಿಜಚತುರ್ಥಿಗೆ ಬೇಕಾದ ಕರ್ತೃ, ಕರ್ಮ, ಸ್ವೀಕರಿಸುವ ವ್ಯಕ್ತಿ ಹಾಗೂ ಸಕರ್ಮಕ ಕ್ರಿಯೆಯೆಂಬ ಎಲ್ಲ ಅಂಗಗಳನ್ನು ಹೊಂದಿರುತ್ತವೆಂದು ಮೇಲಿನ ವಿಶ್ಲೇಷಣೆಯಿಂದ ತಿಳಿಯುತ್ತದೆ. ಹೀಗಾಗಿ ಕೇಶಿರಾಜನು ಮಾಡಿದ ಈರ್ಷ್ಯಾರ್ಥದ ಚತುರ್ಥಿ, ಮತ್ಸರಾರ್ಥದ ಚತುರ್ಥಿಯೆಂಬ ವಿಭಜನೆಯ ಅಗತ್ಯವಿಲ್ಲ. ಈ ಅರ್ಥಭೇದಕ್ಕೂ ಚತುರ್ಥಿಯ ಪ್ರತ್ಯಯಗಳೊಳಗೂ ನೇರ ಸಂಬಂಧವೇನೂ ಇಲ್ಲ.

ಕೇಶಿರಾಜನು ಕೊಟ್ಟ ಚತುರ್ಥಿಯ ಸಾದೃಶ್ಯ, ಪ್ರತಿನಿಧಿ, ಮತ್ತು ಪ್ರಾಣ್ಯನಾದರಸ್ಮರಣೆಯೆಂಬವುಗಳ ಉದಾಹರಣೆಯನ್ನೂ ಹೇತುವಿನ ಚತುರ್ಥಿಯನ್ನೂ ವಿವೇಚಿಸಿದರೆ ತುಲನಾರ್ಥದ ತೃತೀಯೆ, ಕಾರಣಾರ್ಥದ ತೃತೀಯೆಗಳೊಡನೆ ಅವು ಮೀಲಿನ (overlap)ಗೊಳ್ಳುತ್ತವೆ. ತೃತೀಯೆಯ ಕೆಳಗೆ ಅವುಗಳನ್ನು ಕೊಟ್ಟುದರಿಂದ ಚತುರ್ಥಿಯ ಕೆಳಗೂ ಅವನ್ನು ಎಳೆದು ತಂದುದು ಅಸಮಂಜಸವೆಂದು ಕಾಣುತ್ತದೆ. ಆದರೂ, ವಿಭಕ್ತಿ ಪ್ರತ್ಯಯದ ರೂಪ ಚತುರ್ಥಿಯದಾಗಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಈ ಉದಾಹರಣೆಗಳಲ್ಲಿ ಬರುವ ಚತುರ್ಥಿ ಮೇಲೆ ಹೇಳಿದ ಯಾವ ಚತುರ್ಥಿಯ ಪ್ರಭೇದಗಳಿಗೂ ಹೊಂದುವುದಿಲ್ಲ. ಆದುದರಿಂದ ಇವನ್ನು ಚತುರ್ಥಿಯೂ ತೃತೀಯೆಯೂ ಅಲ್ಲದ ಬೇರೆಯೇ ಒಂದು ಅಂತರ್ಜಾತಿಯೆಂದು ಪರಿಗಣಿಸಬೇಕಾಗುತ್ತದೆಂದು ತೋರುತ್ತದೆ. ಹೀಗೆ ಮಾಡುವಾಗ ಇವುಗಳು ತುಲನಾವಿಭಕ್ತಿ (comparative case) ಮತ್ತು ಕಾರಣವಿಭಕ್ತಿಯೆಂಬ ಹೊಸಗುಂಪುಗಳಾಗುವುದು ಬಹುಶಃ ಸಾಧ್ಯ.

ತುಲನಾಚತುರ್ಥಿಯ ಉದಾಹರಣೆಗಳಿವು:

೬೪. ಆತಂಗೀತಂ ತಕ್ಕಂ (ಸಾದೃಶ್ಯ)
೬೫. ಜೇನುತುಪ್ಪಕ್ಕೆ ಸಕ್ಕರೆ ಸಲ್ವುದು (ಪ್ರತಿನಿಧಿ)
೬೬. ಮಾನಸರಂ ಪುಲ್ಗೆ ಕಷ್ಪಮಾಗಿ ನೆನೆವಂ (ಪ್ರಾಣ್ಯನಾದರಸ್ಮರಣ)

ಒಂದರೊಡನೊಂದನ್ನು ತುಲನೆ ಮಾಡುವುದೆಂದರೆ, ಆ ಒಂದೊಂದರ ಗುಣಾಂಶಗಳನ್ನೂ ತುಲನೆ ಮಾಡುವುದೆಂದು ಬೇರೆ ಹೇಳಬೇಕಾಗಿಲ್ಲ. ಗುಣಾಂಶಗಳೆಂದರೆ, ಎತ್ತರ, ಉದ್ದ, ಅಗಲ, ಭಾರ, ಬಣ್ಣ, ಆಕಾರವೆಂದು ನಾನಾ ರೀತಿಯದಾಗಬಹುದು. ಗುಣಾಂಶವೆಂಬುದು ನಾನಾ ಮುಖವಾಗಿ, ವ್ಯಕ್ತಾವ್ಯಕ್ತರೂಪದಲ್ಲಿರಬಹುದು. ಹೀಗೆ ತುಲನೆ ಮಾಡುವಾಗ, ಆ ಗುಣಾಂಶಗಳಲ್ಲಿ ಯಾವುದಾದರೂ ಒಂದು, ಅಥವಾ ಹಲವು, ಸ್ಫುಟಪಡಿಸದಿರುವುದು ಇಲ್ಲವೇ ಸ್ಫುಟಪಡಿಸಿದುದು, ಯಾವುದೂ ಆಗಿರಬಹುದು. ನಾವು "ಅವನು ಕುದುರೆಯಂತೆ ಓಡುತ್ತಾನೆ" ಎಂದು ಎಂದು ಹೇಳಿದಾಗ, ಆ ಮಾತಿನ ಅರ್ಥ "ಅವನು ಕುದುರೆ ಓಡುವಂತೆ ಓಡುತ್ತಾನೆ" ಎಂದು. ಕುದುರೆಯ ಮುಖ್ಯ ಗುಣವೇನೆಂದು ನಮ್ಮ ಮನಸ್ಸಿಗೆ ಮೊದಲೇ ವೇದ್ಯವಾಗಿರುತ್ತದೆ. ಆದುದರಿಂದ ಈ ಅಭಿಪ್ರಾಯ ಆ ಗುಣವನ್ನು ಹೇಳದೆಯೂ ನಮ್ಮ ಮನಸ್ಸಿಗೆ ಬರುತ್ತದೆ. ಆದರೆ ಇಷ್ಟು ಮಾತ್ರವಲ್ಲ. ತುಲನೆಗೆ ಬರುವ ಇನ್ನೂ ಅನೇಕ ಸೂಕ್ಷ್ಮ ವಿಚಾರಗಳು, ಅಂದರೆ ಓಡುವುದರಲ್ಲಿ ಅಂತರ್ಗತವಾದ ದಿಕ್ಕು, ವೇಗ, ಕ್ರಮ ಮುಂತಾದ, ಇಂಥವೇ ಎಂದು ಪಟ್ಟಿಮಾಡಿ ಹೇಳಲಾಗದ ಅನೇಕ ವಿಷಯಗಳಿರಬಹುದು. ಮೇಲೆ ಕೊಟ್ಟ ವಾಕ್ಯವನ್ನು ಹೇಳಿದಾಗ, ಹೇಳಿದವನು ಯಾವ ಅಭಿಪ್ರಾಯದಿಂದ ಆ ಮಾತನ್ನು ಹೇಳಿದ್ದಾನೋ, ಅದೇ ನಿರೀಕ್ಷಿತ ಪ್ರತಿಕ್ರಿಯೆ ಆ ಮಾತನ್ನು ಕೇಳಿದವನಿಂದಲೂ ಆಗುತ್ತದೆ—ಅವರಿಬ್ಬರೂ ಕುದುರೆಯ ಓಟವನ್ನು ನೋಡಿರುವವರಾದುದರಿಂದ. ಅಂತು ವಿವರಣೆಯನ್ನು ಉದ್ದ ಬೆಳೆಸದೆ, ಮೇಲೆ ಕೊಟ್ಟ ವಾಕ್ಯದಲ್ಲಿ 'ಓಡುವಿಕೆ' ಎಂಬುದು ಅವನ ಮತ್ತು ಕುದುರೆಯ ನಡುವಣ ಹೆಸರಿಸದ ಸಮಾನ ಗುಣಾಂಶವೆಂದೇ ತಗೆದುಕೊಳ್ಳೋಣ. ಅವನು ಕುದುರೆಯಂತೆ ಓಡುತ್ತಾನೆ ಎಂಬ ವಾಕ್ಯದ ಅಂತರಾಳಸ್ತರದಲ್ಲಿ ಕುದುರೆ ಓಡುವಂತೆ ಓಡುತ್ತಾನೆ—ಎಂದಿದ್ದುದರ ಮೇಲೆ ಪರಿವರ್ತನಾ ಪ್ರಕ್ರಿಯೆ (Transformation) ಹೇಗೆ

ನಡೆದಿದೆಯೆಂದು ನಾವು ನೋಡಬೇಕು. 'ಓಡುವಂತೆ ಓಡುತ್ತಾನೆ-'ಎಂಬೆರಡರಲ್ಲೂ ಒಂದೇ ಕ್ರಿಯಾ ರೂಪವಿರುವುದರಿಂದ ಅವುಗಳಲ್ಲಿ ಒಂದು ಲೋಪವಾಗಬೇಕಾದುದು ಅಗತ್ಯ. ಮಾತೃವಾಕ್ಯದಲ್ಲಿ (matrix sentence) ಮತ್ತು ಉಪವಾಕ್ಯದಲ್ಲಿ ಒಂದೇ ಕ್ರಿಯಾಪದವಿದ್ದುದಾದರೆ, ಉಪವಾಕ್ಯದ ಕ್ರಿಯೆಗೆ ಲೋಪವೊದಗುತ್ತದೆಯೆಂದು ಪರಿವರ್ತನಾ ವೈಯಾಕರಣಗಳು (transformation-lists) ತೋರಿಸಿಕೊಟ್ಟಿದ್ದಾರೆ. ಮೇಲಿನವರಲ್ಲಿ 'ಓಡುವಂತೆ' ಎಂಬುದರಿಂದ 'ಓಡು' ಎಂಬುದು ಈ ಕಾರಣಕ್ಕಾಗಿ ಲೋಪಪೊಂದುತ್ತದೆ.-ಅಂತೆ ಎಂಬ ತುಲನಾವಾಚಕ ಉಪವಾಕ್ಯದ ಕರ್ತೃವನ್ನಂಟಿ ಕೊಂಡು ಬಿಡುತ್ತದೆ. "ಅವನು ಕುದುರೆಯಂತೆ ಓಡುತ್ತಾನೆ"ಎಂಬುದು ಕೂಡ. ಅದರ ಮುಖ್ಯಕ್ರಿಯೆಯೂ ಲೋಪವಾಗಿ ವಾಕ್ಯಖಂಡದ ರೂಪ ತಾಳಬಹುದು. ಅಂತಹ ವಾಕ್ಯಖಂಡದ ರೂಪ: "ಅವನು ಕುದುರೆಗೆ ಸರಿ" ಎಂಬತಾಗಬಹುದು. ಇದನ್ನು ಮಾತ್ರವೇ ಉಚ್ಚರಿಸಿದರೆ, ಯಾವುದೋ ಸಮಾನಧರ್ಮವನ್ನು ತುಲನೆ ಮಾಡಲಾಗಿದೆ ಎಂಬುದರ ಹೊರತು ಬೇರೇನೂ ನಮಗೆ ತಿಳಿಯದಾಗುವುದು.

ಈಗ ೬೪ನೇ ವಾಕ್ಯವನ್ನು ಪ್ರತಿನಿಧಿಯಾಗಿ ತೆಗೆದುಕೊಳ್ಳೋಣ. ಇದರಲ್ಲಿ 'ಆತಂ' ಮತ್ತು 'ಈತಂ' ಎಂಬೆರಡು ಕರ್ತೃಗಳ ನಡುವೆ ಇರುವ ಸಮಾನಧರ್ಮವನ್ನು ಹೋಲಿಸಲಾಗಿದೆಯೆಂದು ನಮಗೆ ಸ್ಪಷ್ಟವಾಗುವುದಿಲ್ಲ. ಆದುದರಿಂದ ತುಲನೆಗೆ ಅಗತ್ಯವಾದುದಕ್ಕಾಗಿ ಬೇಕಾದ ಒಂದು ಪದವನ್ನು ಈ ವಾಕ್ಯಕ್ಕೆ ಸೇರಿಸಬೇಕು. ಪರಿಣಾಮವಾಗಿ ೬೪ನೇ ವಾಕ್ಯದಲ್ಲಿ ಅಂತರ್ಗತವಾಗುಳ್ಳ ಕೆಳಗಿನ ವಾಕ್ಯಗಳೆರಡು ನಮಗೆ ದೊರೆಯುವುವು:

ಎ. ಆತಂ ಗುಣಮುಳ್ಳವಂ
ಬಿ. ಈತಂ ಗುಣಮುಳ್ಳವಂ

ಇಲ್ಲಿ ಗುಣ ಎಂದರೆ ಯಾವುದೋ ಒಂದು ಹೆಸರಿಸದ ವಿಶಿಷ್ಟಗುಣ-ಅದು ಇಬ್ಬರಿಗೂ ಸಾಮಾನ್ಯವಾದುದು. ಅದರ ಶಬ್ದಾರ್ಥ ಇಲ್ಲಿ ಮುಖ್ಯವಲ್ಲ. ಈ ಎರಡು ವಾಕ್ಯಗಳಿಂದ ಈ ಕೆಳಗೆ ಕಾಣಿಸಿದ ವಾಕ್ಯ ವ್ಯುತ್ಪನ್ನವಾಗುವುದು:

೬೪ಸಿ. ಆತನ ಗುಣಂ ಈತನ ಗುಣಮಂ ಪೋಲ್ವುದು.

'ಗುಣ' ಎಂಬುದು ಎರಡು ಸಲ ಪುನರಾವರ್ತನೆಯಾಗಿರುವುದರಿಂದ ಅವುಗಳಲ್ಲಿ ಒಂದು ಲೋಪವಾಗಬೇಕಾಗಿದೆ. ದ್ವಿತೀಯಾ ವಿಭಕ್ತಿಯುತ ಪದವಾದ 'ಗುಣಮಂ' ಎಂಬುದು ಲೋಪವಾಗುತ್ತದೆ. 'ಗುಣಮಂ' ಎಂಬುದರ ಬದಲು 'ಗುಣಂ' ಎಂಬುದನ್ನು ಲೋಪಿಸಿದರೆ ವಾಕ್ಯದ ಅರ್ಥ ದೂಷ್ಯವಾಗುತ್ತದೆಂಬುದೇ ಅದನ್ನು ಲೋಪಿಸಬೇಕೆಂಬ ಕಾರಣ. ಉದಾ:

೬೪ಡಿ. *ಆತನ ಈತನ ಗುಣಮಂ ಪೋಲ್ವುದು.

'ಗುಣಮಂ' ಎಂಬುದರ ಪ್ರಕೃತಿರೂಪವನ್ನು ಲೋಪಿಸುವಾಗ ಅದರೊಡನಿದ್ದ -ಅಂ ಎಂಬ ವಿಭಕ್ತಿ ಪ್ರತ್ಯಯ ಕರ್ತೃಪದವಾದ 'ಈತಂ' ಎಂಬುದನ್ನು ಅಂಟಿಕೊಳ್ಳುತ್ತದೆ. ಅದರ ಪರಿಣಾಮವಾಗಿ ನಮಗೆ ಈ ಕೆಳಗಣ ವಾಕ್ಯರೂಪ ಲಭಿಸುತ್ತದೆ.

೬೪ಇ. ಆತನ ಗುಣಂ ಈತನಂ ಪೋಲ್ವುದು.

ಈಗಲೂ ಈ ವಾಕ್ಯ ಏನೋ ಒಂದು ತರಹವಾಗಿರುವಂತೆ ಭಾಸವಾಗುತ್ತದೆ. ಕಾರಣ ಒಂದು ಕರ್ತೃವಿನ ತುಲನಾತ್ಮಕ ಗುಣವನ್ನು ಸ್ಪಷ್ಟಪಡಿಸಿದೆ, ಇನ್ನೊಂದು ಅನುಕ್ತವಾಗಿದೆ. ಇಲ್ಲಿಯ ಕ್ರಿಯಾಪದ ಪೋಲ್ವುದು ಎಂಬುದು 'ಆತಂ' 'ಈತಂ' ಎಂಬ ಎರಡು ಕರ್ತೃಗಳ ನಡುವಣ ನೇರವಾದ ಹೋಲಿಕೆಯಲ್ಲ. ಕಾರಣ, ಕರ್ತೃಗಳ ಪುರುಷ-ಲಿಂಗ-ವಚನ ವಿವಕ್ಷೆಯ ಪ್ರತ್ಯಯಗಳು. ಕ್ರಿಯಾಪದದಲ್ಲಿ ಪ್ರತಿಫಲಿತವಾಗಿಲ್ಲ. ಅವನು ಕುದುರೆಯಂತೆ ಓಡುತ್ತಾನೆ' ಎಂಬ ಮೊದಲು ಉದಾಹರಿಸಿದ ವಾಕ್ಯದಲ್ಲಿ ಹಾಗಲ್ಲ; ಅದರ ಕ್ರಿಯಾಪದವು ಕರ್ತೃವಿನೊಡನೆ ನೇರವಾದ ಸಂಬಂಧ ಹೊಂದಿದೆ. ಇದರಿಂದಾಗಿ 'ಗುಣಂ' ಎಂಬ ಪದ

ವನ್ನೂ ಲೋಪಿಸಬೇಕಾಗಿ ಬರುತ್ತದೆ. ಇದರೊಡನೆ ಷಷ್ಠಿಯ ಅಕಾರವೂ ಕರ್ತೃ ಪದದಿಂದ ಲೋಪ ಗೊಳ್ಳುತ್ತದೆ. ಜತೆಗೆ ಕ್ರಿಯಾಪದವೂ ಕರ್ತೃವಿನ ಪುರುಷ–ಲಿಂಗ–ವಚನಕ್ಕೆ ತಕ್ಕಂತೆ ಪರಿವರ್ತನೆಗೊಳ್ಳು ತ್ತದೆ. ಹೀಗೆ ನಿಷ್ಪನ್ನವಾದ ವಾಕ್ಯ ಈ ಕೆಳಗಿನಂತಿದೆ:

೬೪ಎಫ್. ಆತಂ ಈತನಂ ಪೋಲ್ವಂ

ಕನ್ನಡವಲ್ಲಿ ಹಾಗೂ ಇತರ ದ್ರಾವಿಡಭಾಷೆಗಳಲ್ಲೂ ವಾಕ್ಯರೂಪಗಳು ಐಚ್ಛಿಕವಾಗಿ ಕ್ರಿಯಾರಹಿತ ವಾಕ್ಯ ಖಂಡಗಳಾಗಿ (elliptical sentences) ಪರಿವರ್ತನಗೊಳ್ಳುತ್ತವೆ. ಈ ಕಾರಣದಿಂದ ಇನ್ನಿತರ ಪರಿವರ್ತನಾ ಪ್ರಕ್ರಿಯೆಗಳು ೬೪ ಎಫ್‌ನ ಮೇಲೆ ನಡೆಯುತ್ತವೆ. ಕರ್ತೃ→ಚತುರ್ಥಿ (ಆತಂ→ ಆತಂಗೆ). ಕರ್ಮ→ಕರ್ತೃ (ಈತನಂ→ಈತಂ) ಎಂಬ ಪರಿವರ್ತನಾ ಪ್ರಕ್ರಿಯೆ ನಡೆದು ೬೪ನೇ ವಾಕ್ಯ ವಾಗುತ್ತದೆ. ಹೋರನೋಟಕ್ಕೆ ಅದು ಚತುರ್ಥಿಯಲ್ಲಿರುವ ವಾಕ್ಯವೆಂದು ಕಂಡರೂ ಅದು ಅಂತರಾಳ ದಲ್ಲಿ ತುಲನಾ ಚತುರ್ಥಿಯೆಂದು ತಿಳಿಯಬೇಕಾಗಿದೆ.

ಕೇಶಿರಾಜನು ಕಾರಣ ಚತುರ್ಥಿಯೆಂದು ಕೆಳಗಿನ ಉದಾಹರಣೆಯನ್ನು ಕೊಟ್ಟಿದ್ದಾನೆ.

೬೭. ಸಿರಿಗೆ ಉದ್ಯೋಗಂ

೬೪ನೇ ವಾಕ್ಯದಂತೆ ಇದೂ, ಕರ್ತೃ, ಕರ್ಮ ಮತ್ತು ಕ್ರಿಯಾಪದವಿರುವ ವಾಕ್ಯವಾಗಿದೆ.

೬೭ಎ. ಉದ್ಯೋಗಂ ಸಿರಿಯಂ ತರ್ಪುದು

ಮೇಲೆ ನೋಡಿದ ಕರ್ತೃಗಿಂತ ಇದು ಭಿನ್ನವಾಗಿದೆ.ಇದು (=ಉದ್ಯೋಗಂ) ಕರ್ಮವುಂಟಾಗಲುಕಾರಣ ವಾಗಿದೆ. ಈ ಕರ್ಮದರೂಪ ಮೇಲ್ಮೆಸ್ತರದಲ್ಲಿಯೂ ಇರಬೇಕೆಂದಾದಾಗ ಕರ್ತೃಗೆ–ಕಾರಣ ತೃತೀಯಾ ವಿಭಕ್ತಿರೂಪ–'ಇಂದ' ಎಂಬ ಪ್ರತ್ಯಯ ಸೇರಬೇಕಾಗಿದೆ. ಆಗ ಕ್ರಿಯೆಯೂ ವಾಕ್ಯದಲ್ಲಿರಲೇ ಬೇಕಾಗುವುದು. ಆದರೆ ಮೇಲೆ ನೋಡಿದಂತಿತೆ ಕ್ರಿಯಾರಹಿತ ವಾಕ್ಯಖಂಡವಾಗಿ ಮೇಲ್ಮೈಸ್ತರದಲ್ಲಿ ಇದು ತೋರುತ್ತದೆ. ಕ್ರಿಯಾಲೋಪವಾಗಿ ಕರ್ಮಪದ→ಚತುರ್ಥೀರೂಪವಾಗಿ ಕರ್ತೃಸಮೇತವಾಗಿ ವಾಕ್ಯವು ರೂಪುಗೊಂಡು ದರ ಪರಿಣಾಮವಾಗಿ ೬೭ನೇ ವಾಕ್ಯ ಲಭಿಸಿದೆ.

ಭೀತ್ಯರ್ಥದಲ್ಲಿ ಬರುವ ಚತುರ್ಥಿಗೆ ಕೇಶಿರಾಜನು ಈ ಕೆಳಗಿನ ವಾಕ್ಯಗಳನ್ನು ಉದಾಹರಿಸಿದ್ದಾನೆ:

೬೮. ಪಾಪಕ್ಕಂಜುಗುಂ ತಕ್ಕಂ

೬೯. ಪುಲಿಗಂಜಿ ಪುತ್ತನೇಱಿದೊಡೆ...

ಮೇಲಿನ ವಾಕ್ಯಗಳಂತೆ 68ನೇ ಮತ್ತು 69ನೇ ವಾಕ್ಯಗಳಲ್ಲಿಯೂ ಚತುರ್ಥೀರೂಪ ಮೇಲ್ಮೈಸ್ತರದಲ್ಲಿ ಕಾಣುವ ಪ್ರಕ್ರಿಯೆ, ಅಂತರಾಳಸ್ತರದ ರೂಪದಲ್ಲಿ ಚತುರ್ಥೀ ಪ್ರತ್ಯಯವಿರುವ ನಾಮ ಪದಗಳೆರಡೂ ಕರ್ಮಪದಗಳಾಗಿವೆ. ಆದುದರಿಂದ ಅಂತರಾಳಸ್ತರದ ವಾಕ್ಯಗಳು ಕರ್ತೃ. ಕರ್ಮ ಮತ್ತು ಸಕರ್ಮಕ ಕ್ರಿಯಾಪದಗಳನ್ನೊಳಕೊಂಡಿವೆ.

	ಕರ್ತೃ	ಕರ್ಮ	ಸಕರ್ಮಕ ಕ್ರಿಯೆ
೬೮ಎ.	ತಕ್ಕಂ	ಪಾಪಮಂ	ಸ.ಕ್ರಿ.
೬೯ಎ.	×	ಪುಲಿಯಂ	ಸ.ಕ್ರಿ.

೬೮ಎ ಮತ್ತು ೬೯ಎ.ಯಲ್ಲಿ ಕೊಟ್ಟ ಕರ್ಮತಪದಗಳು ಅಂತರ್ಗತವಾಕ್ಯದಿಂದುತ್ಪನ್ನವಾಗಿ. ಅವು, ಪಾಪವು ಯೋಗ್ಯನಿಗೆ ವ್ಯಥೆಯನ್ನುಂಟುಮಾಡುವ. ಇಲ್ಲವೇ ಭಯವನ್ನುಂಟು ಮಾಡುವ ಗುಣವುಳ್ಳದು; ಹುಲಿ ನೋಡಿದವನ ಮನಸ್ಸಿಗೆ ಭಯವನ್ನುಂಟುಮಾಡುವ ಗುಣವುಳ್ಳುದು ಎಂಬ ಅರ್ಥವನ್ನು ಕೊಡ ಬಲ್ಲುವು. ಇನ್ನೊಂದು ವಿಧವಾಗಿಯೂ ಈ ವಾಕ್ಯಗಳನ್ನು ವಿವರಿಸಲು ಸಾಧ್ಯವಿದೆ:

೬೮ಬಿ.	ಪಾಪಂ	ತಕ್ಕನಂ	ಅಂಜಿಕುಂ
೬೯ಬಿ.	ಪುಲಿ	......	ಅಂಜಿಕುಂ

೬೮ಬಿ ಮತ್ತು ೬೯ಬಿ.ಯ ಕರ್ತೃಗಳು ಅಂಜಿಕೆ ಬರಿಸಲು ಕಾರಣವಾಗಿರುವಂಥವುಗಳು. ಇವುಗಳಲ್ಲಿರುವ ಕರ್ಮಪದಗಳನ್ನುಳಿಸಿಕೊಳ್ಳಬೇಕಾದರೆ ಅವುಗಳ ಕ್ರಿಯಾಪದಗಳು ಸಕರ್ಮಕಗಳಾಗಿಯೋ ಹೇತುರೂಪವಾಗಿಯೋ ಇರಬೇಕು.

ಪಾಪ ಅಥವಾ ಪುಲಿ. ವ್ಯಕ್ತಿಗಳಲ್ಲಿ ಭಯೋತ್ಪಾದನೆ ಮಾಡಲು ನೇರವಾಗಿ ಸಂಬಂಧಿಸಿಲ್ಲದಿರಬಹುದು. ಎಂದರೆ ತಕ್ಕವನನ್ನು ಪಾಪ ಬಂದು ತಿವಿದು ಬೆದರಿಸದು; ಹಾಗೆಯೇ ಪುಲಿ, ನಿಜವಾಗಿ ಒಬ್ಬನನ್ನು ಹೆದರಿಸದೆ ತನ್ನಷ್ಟಕ್ಕೆ ಇದ್ದುದಾದರೂ ಅದನ್ನು ನೋಡಿದವನು ತಾನಾಗಿಯೇ ಹೆದರಿರಬಹುದು. ಈ ಕಾರಣದಿಂದಾಗಿ ತಕ್ಕನು (೬೮ಬಿ.) 'x' (೬೯ಬಿ) ಎಂಬುದು ನಿಜವಾಗಿ ಕರ್ಮಪದಗಳಾಗಿರದೆ ಪಾಪವನ್ನು ನೆನೆದು ನೋಡಿ, ಹುಲಿಯನ್ನು ಕಂಡು. ಹೆದರುವ ವ್ಯಕ್ತಿಗಳನ್ನು ಕುರಿತು ಹೇಳುವುದರಿಂದ ಅವೆರಡೂ ಕರ್ತೃಪದಗಳಾಗಿವೆ. ಹೀಗಿದ್ದು ಅಂತರಾಳಸ್ತರದಲ್ಲಿಯ ವಾಕ್ಯರೂಪಗಳು ೬೮ಎ ಮತ್ತು ೬೯ಎ.ಯಂತಿರಬೇಕೆಂದು ನಾವು ನಿರ್ಧರಿಸಬೇಕಾಗುತ್ತದೆ. ಅಂಜುಗುಂ' ಎಂಬ ಕ್ರಿಯಾಪದ ಕನ್ನಡದಲ್ಲಿ ಅಕರ್ಮಕವಾಗಿರುವುದರಿಂದ–ಅದು ಬರುವ ವಾಕ್ಯದಲ್ಲಿ ಕರ್ಮಪದ ಬರಲು ಸಾಧ್ಯವಿಲ್ಲ. ಹೀಗಿರುವುದರಿಂದ ಕರ್ಮಪದ–ಚತುರ್ಥೀರೂಪವಾಗಿ ೬೮ನೇ ವಾಕ್ಯದಲ್ಲಾದಂತೆ ಪರಿವರ್ತನೆಗೊಳ್ಳುತ್ತದೆ. ೬೮ರಲ್ಲಿ ವಾಕ್ಯವು ವಾಕ್ಯ ಖಂಡವಾಗಿ ಪರಿವರ್ತಿತವಾಗುವ ಪ್ರಕ್ರಿಯೆ ನಡೆಯುತ್ತದೆ. ಅದರ ೬೮ ಮತ್ತು ೬೯ರಲ್ಲಿ ಕ್ರಿಯಾಪದವು ಅಕರ್ಮಕವಾಗಿ ಮಾರ್ಪಡುವುದರಿಂದ ಈ ಪರಿವರ್ತನೆ ನಡೆಯುತ್ತದೆ.

ಚತುರ್ಥೀ ಕ್ರಿಯಾವಿಶೇಷಣಗಳು:

–ಕ್ಕೆ ಎಂಬ ಚತುರ್ಥಿಯ ಪ್ರತ್ಯಯವು ಸಂಖ್ಯಾವಾಚಕಗಳಿಗೂ ಹತ್ತುತ್ತದೆ.

೭೦. ಪ್ರತಿ ದಿನ ಒಂದಕ್ಕೆ ಕಂಚಿನ ಅಕ್ಕಿ ಹಾನೆ 1½

ಈ ವಾಕ್ಯದಲ್ಲಿ 'ಕೊಟ್ಟನು' ಅಥವಾ 'ಕೊಡುವನು' ಎಂಬ ಅನುಕ್ತಕ್ರಿಯಾಪದವಿರಬೇಕು. ಚತುರ್ಥಿಯ ಪ್ರತ್ಯಯವಾದ–ಕ್ಕೆಯನ್ನು 'ಒಂದು' ಎಂಬ ಸಂಖ್ಯಾವಾಚಕದ ಬದಲಾಗಿ 'ದಿನ' ಎಂಬ ನಾಮಪದದ ಮೇಲೆಯೂ ಹಚ್ಚಲು ಸಾಧ್ಯವಿದೆ. ಈ ಎರಡು ಸನ್ನಿವೇಶಗಳಲ್ಲೂ (contexts) ಅದು ಚತುರ್ಥಿಯ, ಅರ್ಥಾತ್, ಸಂಪ್ರದಾನಾರ್ಥವನ್ನಾಗಲೀ, ದಿಗ್ವಾಚೀ ಚತುರ್ಥಿಯನ್ನಾಗಲೀ ನಿರ್ದೇಶಿಸುವುದಿಲ್ಲ. ಸ್ವಲ್ಪಮಟ್ಟಿಗೆ ಅದು ಕಾರಣ ಚತುರ್ಥಿಯನ್ನು ಹೋಲುತ್ತದೆ. ಆದರೆ ಇನ್ನೂ ಸೂಕ್ಷ್ಮವಾಗಿ ಅವಲೋಕಿಸುವಾಗ ಅದು ಕಾರಣ ಚತುರ್ಥಿ ಸಹ ಅಲ್ಲವೆಂದು ತಿಳಿಯುತ್ತದೆ. ಕಾರಣ: ಅದು ೫೦ನೇ ವಾಕ್ಯಕ್ಕೆ ಸಮಾನವಾಗಿಲ್ಲವೆಂಬುದರಿಂದ. ೫೦ನೇ ವಾಕ್ಯದಲ್ಲಿ ೫೦ ಗದ್ಯಾಣವನ್ನು ಸ್ವೀಕರಿಸುವುದು ತೊಳಸಿಯ ಮಾಲೆಯಲ್ಲ. ಬೇರಾರೋ ಒಬ್ಬ. ಇಲ್ಲಿಯೂ ಒಂದುವರೆ ಹಾನೆ ಅಕ್ಕಿಯನ್ನು ಸ್ವೀಕರಿಸುವುದು 'ದಿನ'ವಲ್ಲ;–ಯಾರೋ ಒಬ್ಬ ಎಂದು ವಾದಿಸಲೆಡೆಯಿದೆ.ಆದರೆ ೫೦ನೇ ವಾಕ್ಯದಲ್ಲಿ ಚತುರ್ಥಿಯ ಪ್ರತ್ಯಯವನ್ನು ಹೊಂದಿದುದು ಕರ್ಮಪದ; ೭೦ರಲ್ಲಿ ಅದು ಕರ್ಮಪದವಲ್ಲ–ಎಂಬುದು ಎರಡರೊಳಗಣ ವ್ಯತ್ಯಾಸ. ಹೀಗೆ ಚತುರ್ಥಿಯ ಯಾವೊಂದು ಉಪಪಂಗಡಕ್ಕಾಗಲೀ, ಇತರ ಯಾವುದೇ ವಿಭಕ್ತಿಗಳಿಗಾಗಲೀ ಇದನ್ನು ಸಂಬಂಧಿಸಲು ಸಾಧ್ಯವಿಲ್ಲದ ಕಾರಣ ಚತುರ್ಥೀ ಕ್ರಿಯಾವಿಶೇಷಣವೆಂದು ಕರೆಯಲಾಗಿದೆ.

ಚತುರ್ಥಿಯ ಪ್ರತ್ಯಯ ಹೊಂದಿರುವ ಸಂಖ್ಯಾವಾಚಕ ಹಾಗೂ ಸಮಯವಾಚಕ ನಾಮಪದಗಳು ಯಾವಾಗಲೂ ಚತುರ್ಥೀ ಕ್ರಿಯಾವಿಶೇಷಣವೆಂಬ ಗುಂಪಿಗೆ ಸೇರಲಾರವೆಂಬುದನ್ನೂ ಗಮನಿಸಬೇಕು. ಕೆಲವು ಸಂದರ್ಭಗಳಲ್ಲಿ ಅಂತಹ ಪ್ರತ್ಯಯವುಳ್ಳ ನಾಮಗಳು ಅಂತರಾಳದಲ್ಲಿ ಬೇರೆಯೇ ವಿಭಕ್ತಿಯನ್ನುಳ್ಳವೆಂದೂ ಹೇಳಲು ಸಾಧ್ಯವಿದೆ.

೭೧. ವಾರಕ್ಕೆ ಏಳು ದಿನಗಳಿವೆ.
೭೧ಎ. ವಾರ ಒಂದಕ್ಕೆ ಏಳು ದಿನಗಳಿವೆ.

೭೦ರಲ್ಲಿ ಅಥವಾ ೫೦ರಲ್ಲಿದ್ದಂತೆ ಇಲ್ಲಿ ಚಲನೆಯನ್ನು ಹೇಳುವ ಕ್ರಿಯಾಪದವಿಲ್ಲ. 'ವಾರ' ಅಥವಾ 'ವಾರ ಒಂದು' ಎಂಬುದು ಒಂದೊಂದು ಸಂಪೂರ್ಣ ಘಟಕಗಳಾಗಿ ಅವುಗಳನ್ನು ಸಣ್ಣಭಾಗಗಳಾಗಿ

ವಿಭಜಿಸಲು ಸಾಧ್ಯವಿದೆ. ಹೀಗಿರುವುದರಿಂದ ಮೇಲೆ ತೋರುವ ಚತುರ್ಥೀ ವಿಭಕ್ತಿಯನ್ನು ಅಂತರಾಳ ಸ್ತರದ ಸಪ್ತಮಿಯಿಂದ ನಿಷ್ಪನ್ನಮಾಡಬಹುದು.

೭೧ಬಿ. ವಾರದಲ್ಲಿ ಏಳು ದಿನಗಳಿವೆ.
೭೧ಸಿ. ವಾರ ಒಂದರಲ್ಲಿ ಏಳು ದಿನಗಳಿವೆ–ಎಂದು.

ಹೊರಮೈಯಲ್ಲಿ ಚತುರ್ಥೀವಿಭಕ್ತಿಯನ್ನು ಹೊಂದಿದ್ದರೂ, ಅಂತರಾಳ ಸ್ತರದಲ್ಲಿ ಅದು ಬೇರೆಯೇ ವಿಭಕ್ತಿಗೆ ಸೇರಿರುವ ಹಲವು ಉದಾಹರಣೆಗಳು ದೊರೆಯುತ್ತವೆ:

೭೨. ದೋಸೆಗೆ ಚಟ್ನಿ ಕೊಡು

ಇದರಲ್ಲಿ ಚಟ್ನಿಯನ್ನು ಕೊಡುವುದು ದೋಸೆಗಲ್ಲ; ದೋಸೆಯನ್ನು ತಿನ್ನುವ ವ್ಯಕ್ತಿಗೆ. ಈ ವಾಕ್ಯವನ್ನು ಈ ಕೆಳಗೆ ಕಾಣಿಸಿದಂತೆ ವಿವರಿಸಬಹುದು.

೭೨ಎ. ದೋಸೆಯೊಡನೆ ಚಟ್ನಿಕೊಡು (ಸಂಯೋಗ)
೭೨ಬಿ. ನನಗೆ ದೋಸೆಯನ್ನು ತಿನ್ನಲು ಚಟ್ನಿಕೊಡು (ನಿಜಚತುರ್ಥಿ)
೭೨ಸಿ. ನನಗೆ ದೋಸೆ ಮತ್ತು ಚಟ್ನಿಕೊಡು (ಚತುರ್ಥಿ–ಸಾಯುಕ್ತ)

ಸಂಬಂಧ ಚತುರ್ಥಿ

ನಾಮಪದ ಮತ್ತು ಕ್ರಿಯಾಪದಗಳನ್ನು ಸಂಬಂಧಿಸುವ ಬದಲು ಕೆಲವೇಳೆ ನಾಮಪದಗಳೆರಡರೊಳಗಿರುವ ಸಂಬಂಧವನ್ನು ತೋರಿಸುವುದಕ್ಕಾಗಿಯೂ ಚತುರ್ಥೀವಿಭಕ್ತಿ ಬರುವುದುಂಟು. ಆದರೆ, ಷಷ್ಠಿಯ ಸ್ಥಾನವನ್ನು ಚತುರ್ಥಿ ನಿರ್ವಹಿಸುವ ಪಲ್ಲಟಕ್ರಿಯೆ ನಡೆಯುತ್ತದೆ. ಹತ್ತನೇ ಶತಮಾನಕ್ಕಿಂತ ಪೂರ್ವದ ಶತಮಾನಕ್ಕೆ ಸೇರಿದ ಶಾಸನವೊಂದರಲ್ಲಿ ಪ್ರಖ್ಯಾತವಾದ ಈ ಕೆಳಗಿನ ವಾಕ್ಯವಿದೆ;

೭೩. ನಹುಷಂಗೆ ಮಗನ್ ಯಯಾತಿ

ಇದರ ಅರ್ಥ: ೭೩ಎ. ನಹುಷನ ಮಗನ್ ಯಯಾತಿ. ಇಂತಹ ವಾಕ್ಯಗಳಾವುವೂ. ೧೧. ೧೨. ೧೩ ಮತ್ತು ೧೪ನೆಯ ಶತಮಾನದ ಕೊಡಗು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸೇರಿದ ಶಾಸನಗಳಲ್ಲಿ ಬಂದಿಲ್ಲ. ಆಧುನಿಕ ಕನ್ನಡದಲ್ಲಿ ಇಂತಹ ವಾಕ್ಯಗಳು ಸರ್ವಸಾಧಾರಣವೆನ್ನಬಹುದು.

ಉದಾ: ೭೪. ನನಗೆ ಮದುವೆಯಾಗಿದೆ.
೭೧ಎ. ನನ್ನ ಮದುವೆಯಾಗಿದೆ.

೪೭ನೇ ವಾಕ್ಯ ಮೂಲತಃ –ಗೆ ಎಂಬ ಚತುರ್ಥೀ ಪ್ರತ್ಯಯವನ್ನೊಳಕೊಂಡಿದ್ದರೂ ಅದು ಚತುರ್ಥಿಯ ಜಾತಿಗೆ ಸೇರಿದುದಲ್ಲ. ಮದುವೆ ಮತ್ತು ಆಗಿದೆ ಎಂಬ ಕ್ರಿಯಾಪದ ಈ ವಾಕ್ಯದಲ್ಲಿ ನಿಕಟತಮ ಘಟಕಗಳು (Immediate constitutents). ನನ್ನ.........ಆಗಿದೆ ಎಂಬುವಲ್ಲ. 'ಮದುವೆ' ಎಂಬುದು ಯಾರಿಂದಲೋ ನಡೆವ ಕಾರ್ಯವನ್ನು ಹೇಳುತ್ತದೆ. ಅಂದಲೆ ಅದು ಕರ್ಮಪದ. ಹೀಗಾಗಿ ಮೇಲಿನ ವಾಕ್ಯದಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾಪದಗಳೆಂಬ ಘಟಕಗಳು ಮೂಲತಃ ಇರಬೇಕಾದುದು ಅವಶ್ಯ. ಆದುದರಿಂದ ೭೪ರ ಮೂಲರೂಪ:

೭೪ಬಿ. ನಾನು ಮದುವೆಯಾದೆ.

ಸಂಬಂಧ ಸೂಚಕ ನಾಮಪದಗಳಲ್ಲಿ ಚತುರ್ಥಿ ಮತ್ತು ಷಷ್ಠಿಗಳಲ್ಲಿ ಪಲ್ಲಟವೊದಗುತ್ತದೆ.

೭೫. ಸೀತೆ ರಾಮನ ಹೆಂಡತಿ
೭೫ಎ. ಸೀತೆ ರಾಮನಿಗೆ ಹೆಂಡತಿ

೭೫ ಮತ್ತು ೭೫ಎಗಳೊಳಗೆ ಸೂಕ್ಷ್ಮವಾಗಿ ನೋಡಿದರೆ ಅರ್ಥವ್ಯತ್ಯಾಸವಿದೆಯೆಂದು ಹೇಳಲು ಸಾಧ್ಯವಿದೆಯಾದರೂ, ತೋರುಮಟ್ಟಿಗೆ ಅವು ಒಂದೇ ಎಂಬುವರಿಂದ ಈ ಪಲ್ಲಟ ಕ್ರಿಯೆಯನ್ನು ಒಪ್ಪಿಕೊಳ್ಳ

ಬಹುದು. ಸೀತೆ ಯಾರು? ಎಂಬ ಪ್ರಶ್ನೆಗೆ ಉತ್ತರವಾಗಿ ೭೫ನೇ ವಾಕ್ಯ ದೊರೆಯುತ್ತದೆ. ಇಲ್ಲಿ ಪ್ರಶ್ನೆ ಕೇಳುವವನಿಗೆ ಸೀತೆಯ ಪರಿಚಯವಿದೆ. ಆದರೆ ರಾಮನ ಪರಿಚಯವಿದೆಯೆಂಬುದು ನಿಶ್ಚಯವಿಲ್ಲ. ೭೫ಎ.ಗೆ ಕಾರಣವಾದ ಪ್ರಶ್ನೆ–'ರಾಮನಿಗೆ ಸೀತೆ ಏನಾಗಬೇಕು?' ಎಂಬಲ್ಲಿ ಪ್ರಶ್ನೆಕೇಳುವವನಿಗೆ ಇಬ್ಬರು ವ್ಯಕ್ತಿಗಳ ಪರಿಚಯವೇನೋ ಇದೆ, ಆದರೆ ಅವನ ನಡುವಣ ಸಂಬಂಧದ ಕುರಿತು ಗೊತ್ತಿಲ್ಲ. ಈ ತರದ ಸಣ್ಣ ವ್ಯತ್ಯಾಸ ಮೇಲೆ ಹೇಳಿದಂತೆ ಈ ಎರಡು ವಾಕ್ಯಗಳಲ್ಲಿವೆಯೆಂಬುದನ್ನು ಗಮನಿಸಬೇಕಾಗುತ್ತದೆ.

ಚತುರ್ಥಿ ಮತ್ತು ಸಪ್ತಮಿಗಳೊಳಗೆ ಪಲ್ಲಟವಾಗುವ ಸ್ಪಷ್ಟ ಉದಾಹರಣೆಗಳು ಶಾಸನಭಾಷೆಯಲ್ಲಿ ಸಿಗುವುದಿಲ್ಲ. ೪೯ನೇ ವಾಕ್ಯ ಈ ಪಲ್ಲಟ ಕ್ರಿಯೆಗೆ ಸಂದೇಹ. ಚತುರ್ಥಿ ಮತ್ತು ಸಪ್ತಮಿಗಳೊಳಗೆ ಪರಸ್ಪರ ವೈಷಮ್ಯ (contrast)ವಿರುವ ಹಲವು ಉದಾಹರಣೆಗಳು ಕನ್ನಡದಲ್ಲಿವೆ.

೭೬. ಅವನು ಹೊಳೆಗೆ ಹೋದ
೭೬ಎ. ಅವನು ಹೊಳೆಯಲ್ಲಿ ಹೋದ.

೭೬ನೇ ವಾಕ್ಯ ಸರಳವಾದ ಹೇಳಿಕೆ. ಅದರ ಪ್ರಕಾರ ಅಲ್ಲಿ ಸೂಚಿತವಾದ ವ್ಯಕ್ತಿ ನಿಜವಾಗಿ ಹೊಳೆಗೇ ಹೋಗಿರುವನೆಂಬುದು ಅದನ್ನು ಹೇಳುವವನಿಗೆ ಸ್ಥಿರವಾಗಿ ಗೊತ್ತಿಲ್ಲ. ಅವನು ಹೊಳೆಗೆ ಈಜಲೋ, ಮೀನು ಹಿಡಿಯಲೋ, ಮೀಯಲೋ, ಸ್ವೇಚ್ಛೆಯಿಂದ ಹೋಗಿರಬಹುದು. ೭೬ಎ.ಯ ಪ್ರಕಾರ ಅವನು ಹೊಳೆಯ ಹೊಯ್ಲಿನಲ್ಲಿ ಕೊಚ್ಚಿ ಹೋಗಿರಬಹುದೇ ವಿನಾ. ಸ್ವೇಚ್ಛೆಯಿಂದಲ್ಲ–ಎಂಬುದು ಸ್ಪಷ್ಟವಾಗುತ್ತದೆ. ಇದರಲ್ಲಿ (೭೬ಎ.) ಹೊಳೆಯೆಂಬುದು ಕರ್ತೃ: ಅವನಲ್ಲ: ಈ ಅರ್ಥ ವ್ಯತ್ಯಾಸವಿರುವ ಕಾರಣದಿಂದ ಮೇಲಿನವೆರಡರಲ್ಲಿ (ಚತುರ್ಥಿ ಮತ್ತು ಸಪ್ತಮಿಯ) ಪಲ್ಲಟಪ್ರಯೋಗವು ಸಾಧ್ಯವಿಲ್ಲವೆಂದು, ಅವನ್ನು ಬೇರೆ ಬೇರೆಯೆಂದು ಗುರುತಿಸಬೇಕಾಗಿದೆ.

ಕೇಶಿರಾಜ ಚತುರ್ಥಿ ಮತ್ತು ಸಪ್ತಮಿಗಳೊಳಗೆ ಪಲ್ಲಟವಿದೆಯೆಂದು ಉದಾಹರಣೆ ಕೊಟ್ಟಿದ್ದಾನೆ:

೭೭. ತಾವರೆಗೆ ಪುಟ್ಟಿದಂ
೭೭ಎ. ತಾವರೆಯೊಳ್ ಪುಟ್ಟಿದಂ

ಹುಟ್ಟು (←ಪುಟ್ಟು) ಎಂಬ ಕ್ರಿಯಾಪದವಿದ್ದು ಮಾನವಜಾತಿನಿರ್ದೇಶಕ ನಾಮಪದಗಳಿರುವೆಡೆಯಲ್ಲಿ ಚತುರ್ಥಿಯಾಗಲೀ, ಸಪ್ತಮಿಯಾಗಲೀ ಬರುವ ಪ್ರಕ್ರಿಯೆಯನ್ನು ಹಳಗನ್ನಡದಲ್ಲಿ ಕಾಣುತ್ತೇವೆ.

೭೮. ದಶರಥಂಗೆ ರಾಮಂ ಪುಟ್ಟಿದಂ
೭೮ಎ. ದಶರಥನೊಳ್ ರಾಮಂ ಪುಟ್ಟಿದಂ

ಆದರೆ ಸಾಮಾನ್ಯವಾಗಿ ಮಾನವೇತರ ಜಾತಿನಿರ್ದೇಶಕ ನಾಮಪದವಿದ್ದಲ್ಲಿ ಈ ಪಲ್ಲಟಕ್ರಿಯೆ ಸಾಧ್ಯವಾಗುವುದಿಲ್ಲ. ೭೮ರಲ್ಲಿ ಚತುರ್ಥಿಯ ವಿಭಕ್ತಿ ಬರುವುದು ಮೇಲ್ಮೈಸ್ತರದ (Surface structure) ಗುಣದಿಂದಾಗಿ. ಅಂತರಾಳದಲ್ಲಿ ದಶರಥ ಮತ್ತು ರಾಮ ಪದಗಳ ವಿಭಕ್ತಿ–ಸಂಬಂಧ(ಷಷ್ಠಿ). ೭೮ಎ.ಯೂ ಸಹ ಅಂತರಾಳಸ್ತರದ ರೂಪವೆನ್ನಲು ಸಾಧ್ಯವಿಲ್ಲ. 'ದಶರಥನ ಉದರದೊಳ್' ಎಂದು 'ದಶರಥನೊಳ್' ಎಂಬುದನ್ನು ಅರ್ಥಮಾಡದಿದ್ದರೆ.

೭೯. ಊರೊಳ್ ಪುಟ್ಟಿದಂ
೭೯ಎ. *ಊರ್ಗೆ ಪುಟ್ಟಿದಂ

೭೭, ೭೭ಎ,ಗಳನ್ನು ೭೮, ೭೮ಎ ಮತ್ತು ೭೯, ೭೯ಎ. ದ್ವಂದ್ವಗಳೊಳಗೆ ಹೋಲಿಕೆ ಮಾಡಿದರೆ ತಾವರೆ ಎಂ ಪದಕ್ಕೆ ಮನುಷ್ಯ ಜಾತೀಯತೆಯನ್ನು ಆರೋಪಿಸಿರುವ ಕಾರಣ ಅದರಲ್ಲಿ ಚತುರ್ಥಿ ಮತ್ತು ಸಪ್ತಮೀ ವಿಭಕ್ತಿಯ ಪಲ್ಲಟ ಕ್ರಿಯೆ ನಡೆಯಲು ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಇಲ್ಲವೆಂದು ತಿಳಿಯಬೇಕಾಗುತ್ತದೆ. ಹೊರ ಮೈಯ ವಿಭಕ್ತಿ ಚತುರ್ಥಿಯೋ ಸಪ್ತಮಿಯೋ ಆಗಿದ್ದರೂ ಅಂತರಾಳಸ್ತರದಲ್ಲಿ ಅದು ಮೇಲಿನ ಸಂದರ್ಭಗಳಲ್ಲಿ ನಿಜವಾಗಿ, ಪಂಚಮಿಯೋ ಷಷ್ಠಿಯೋ ಅಥವಾ ಕಾರಣ ವಿಭಕ್ತಿಯೋ ಆಗಿರಬೇಕೆಂದು ಕೊಳ್ಳಬೇಕಾಗಿದೆ.

ಮೇಲೆ ಮಾಡಿದ ವಿವೇಚನೆಯಿಂದ ಚತುರ್ಥೀವಿಭಕ್ತಿ ಬಹುರೂಪಧಾರಿಯೆಂದು ತಿಳಿಯುತ್ತದೆ. ಮೇಲ್ಮೈಸ್ತರದಲ್ಲಿ ಚತುರ್ಥಿಯ ರೂಪವನ್ನು ಹೊಂದಿರುವ ಅನೇಕ ಸಂದರ್ಭಗಳಲ್ಲಿ ಅದನ್ನು ಅಂತರಾಳ ಸ್ತರದ ಬೇರೆಯೇ ವಿಭಕ್ತಿಯಿಂದ ನಿಷ್ಪನ್ನ ಮಾಡಬಹುದು. ಅನೇಕ ವಾಕ್ಯಗಳ ಸವಿವರ ವರ್ಣನೆ ಅತ್ಯಗತ್ಯ ವಾಗಿದೆಯೆಂದಾದರೂ ವಿವರಣೆಯ ದೃಷ್ಟಿ ಕೇವಲ ಶಾಸನಗಳಲ್ಲಿ ದೊರೆಯುವ ವಾಕ್ಯಗಳ ಕಡೆಗೆ ಮುಖ್ಯ ವಾಗಿ ಕೇಂದ್ರೀಕೃತವಾಗಿದ್ದುದರಿಂದ, ಇಲ್ಲಿ ಕೆಲವು ಅಂಶಗಳನ್ನು ಮಾತ್ರ ಚರ್ಚಿಸಲು ಸಾಧ್ಯವಾಗಿದೆ.

ಮುಳಲಿ ವಸಂತಕುಮಾರ್

ಮೂರ್ತಿರಾಯರ ಪ್ರಬಂಧ ಸಾಹಿತ್ಯ

ನಮ್ಮಲ್ಲಿ ಪ್ರಬಂಧ ಸಾಹಿತ್ಯ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ರೂಪುಗೊಂಡಿತು. ಇಂದು ವಿಶ್ವ ವ್ಯಾಪಕವಾಗಿರುವ ಈ ಸಾಹಿತ್ಯ ಮೂಲತಃ ಫ್ರಾನ್ಸಿನಲ್ಲಿ ಜನ್ಮ ಪಡೆಯಿತು. ಈ ಕೀರ್ತಿಗೆ ಕಾರಣನಾದವನು ಅಲ್ಲಿಯ ಮೈಕೇಲ್ ಮಾಂಟೇನ್. (೧೫೩೩–೧೫೯೨). ಇವನ ಪ್ರಬಂಧಗಳನ್ನು ಇಂಗ್ಲಿಷಿಗೆ ತಂದವನು ಫ್ಲೋರಿಯೊ. ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಬಂಧ ಪ್ರಕಾರಕ್ಕೆ ಮೊದಲಿಗೆ ಭದ್ರ ಬುನಾದಿಯನ್ನು ಹಾಕಿದವನು ಫ್ರಾನ್ಸಿಸ್ ಬೇಕನ್. ಅನಂತರ ಇದರ ಶ್ರೀಮಂತ ಬೆಳವಣಿಗೆಗೆ ಲಾಕ್, ಮೆಕಾಲೆ, ಡ್ರೈಡನ್, ಅಬ್ರಾಹಂ ಕೌಲಿ, ಅಡಿಸನ್, ಸ್ಟೀಲ್, ಗೋಲ್ಡ್‌ಸ್ಮಿತ್, ಜಾನ್ಸನ್, ಗಾರ್ಡಿನರ್ ಮೊದಲಾದವರು. ಇಂಗ್ಲೆಂಡಿನಲ್ಲಿ ಹದಿನೆಂಟನೆಯ ಶತಮಾನ ಪ್ರಬಂಧಸಾಹಿತ್ಯದ ಬೆಳವಣಿಗೆಗೆ ಒಂದು ಪರ್ವಕಾಲವಾಗಿ ಪರಿಣಮಿಸಿತು; ಇದಕ್ಕೆ ವೃತ್ತಪತ್ರಿಕೆಗಳ ಮಾಧ್ಯಮ ದೊರೆಯಿತು. ಲಲಿತ ಪ್ರಬಂಧಗಳ ಬರಹಕ್ಕೆ ಒಂದು ಮಹೋನ್ನತ ಸ್ಥಾನವನ್ನು ತಂದು ಕೊಟ್ಟ ಅಡಿಸನ್ ಸ್ಟೀಲ್ ಮತ್ತು ಗೋಲ್ಡ್‌ಸ್ಮಿತ್ ಈ ಶತಮಾನದವರೇ ಆಗಿದ್ದರು. ಮೂರ್ತಿರಾಯರ ಪ್ರಬಂಧಗಳ ಮೇಲೆ ಇವರ ಪ್ರಭಾವ ಕಂಡುಬರುತ್ತದೆ. ಅಂದಮಾತ್ರಕ್ಕೆ ಮೂರ್ತಿರಾಯರು ಹೀಗೆ ಪ್ರಭಾವಿತರಾಗಿ ನೇರವಾಗಿ ಪ್ರಬಂಧಗಳನ್ನು ಬರೆದರೆಂದು ಅರ್ಥವಲ್ಲ. ಇವರು ಬರೆಯುವ ಹೊತ್ತಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ ನೆಲ ಸ್ವಲ್ಪ ಹದಗೊಂಡಿತ್ತು. ಬಿ. ವೆಂಕಟಾಚಾರ್ಯರು. ಕೆ. ಲಕ್ಷ್ಮಣರಾವ್, ಬಾಳಾಜಿ ಕೃಷ್ಣ ಹಳೇಪೇಟೆ, ಸಟಕೆರೆ ಜಯರಾವ್, ರಾಘವೇಂದ್ರ ಕೇಶವರಾವ್ ಹಡಸ, ಎಂ. ಜಿ. ವೆಂಕಟೇಶಯ್ಯ ಮೊದಲಾದವರು ಆರಂಭದ ಘಟ್ಟದಲ್ಲಿ ಈ ದಿಸೆಯಲ್ಲಿ ಕೆಲಸ ಮಾಡಿದ್ದರು. ಆದರೆ ಇವರೆಲ್ಲರ ಕೃತಿಗಳು ಅಪ್ಪಟ ಲಲಿತ ಪ್ರಬಂಧದ ಜಾಯಮಾನಕ್ಕೆ ಬರುವುದಿಲ್ಲ*. ಕನ್ನಡದಲ್ಲಿ ಲಲಿತ ಪ್ರಬಂಧ ಪ್ರಕಾರವನ್ನು ಒಟ್ಟಾಗಿ ಅದರ ಎಲ್ಲ ಅರ್ಥದಲ್ಲಿ ಪರಿಗಣಿಸಿದಾಗ ಮೂರ್ತಿರಾಯರು ಈ ಸಾಹಿತ್ಯದ ಆಚಾರ್ಯಪುರುಷರು" ಎಂಬ ಮಾತನ್ನು ಒಪ್ಪಬೇಕಾಗುತ್ತದೆ.

ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲ್ಲೂಕಿಗೆ ಸೇರಿದ ಅಕ್ಕಿ ಹೆಬ್ಬಾಳಿನ ಮೂರ್ತಿರಾಯರು ಈ ಶತಮಾನದ ಉತ್ತಮ ಕನ್ನಡ ಲೇಖಕರಲ್ಲಿ ಒಬ್ಬರು. ಅವರು ಪ್ರಬಂಧಗಳಲ್ಲದೆ 'ಆಷಾಢ–ಭೂತಿ' (ನಾಟಕ), 'ಮೋಲಿಯೇರನ ಎರಡು ನಾಟಕಗಳು'(ಅನುವಾದ), 'ಹವಳದ್ವೀಪ' (ಅನುವಾದಿತ ಕಥೆ), 'ಸಾಕ್ರಟೀಸನ ಕೊನೆಯ ದಿನಗಳು' (ಅನುವಾದ), 'ಯೋಧನ ಪುನರಾಗಮನ' (ಅನುವಾದಿತ ಕಥೆಗಳು), 'ಪಾಶ್ಚಾತ್ಯ ಸಣ್ಣ ಕಥೆಗಳು'(ಅನುವಾದ), ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಒಳ್ಳೆಯ ಗದ್ಯದಲ್ಲಿ ಸಿದ್ಧಹಸ್ತರಾದ ಅವರಿಂದ ಅನುವಾದಗೊಂಡ ಕೃತಿಗಳು ಸ್ವತಂತ್ರ ಕೃತಿಗಳ ಕಾಂತಿಯನ್ನು ಬಹಳಷ್ಟು ಮಟ್ಟಿಗೆ ಮೈದುಂಬಿಕೊಂಡಿರುವುದು ಸಹಜವಾಗಿಯೇ ಇದೆ. ಅವರ ಅನುವಾದಗಳಲ್ಲಿ ಮೂಲದ

---

*ಇಂಗ್ಲಿಷಿನ 'ದಿ ಎಸ್ಸೆ' ಎಂಬ ಪದಕ್ಕೆ ಸಂವಾದಿಯಾಗಿ ನಮ್ಮಲ್ಲಿ ಪ್ರಬಂಧ, ಶಿಥಿಲಬಂಧ, ಲಲಿತ ಪ್ರಬಂಧ, ಲಘು ಪ್ರಬಂಧ, ಭಾವ ಪ್ರಬಂಧ, ಆತ್ಮೀಯ ಪ್ರಬಂಧ, ನಿಬಂಧ, ಬಂಧ, ಹರಟೆ, ಗದ್ಯ ಚಿತ್ರ, ಭಾವನಾ ಚಿತ್ರ, ಪ್ರಸಂಗ, ನ್ಯಾಸ ಇತ್ಯಾದಿ ಹೆಸರುಗಳನ್ನು ಸೂಚಿಸಿದ್ದಾರೆ. ಇವುಗಳಲ್ಲಿ 'ಲಲಿತ ಪ್ರಬಂಧ' ಎಂಬ ಪದವೇ ಸೂಕ್ತ ಎಂಬ ಬಗ್ಗೆ ಹೆಚ್ಚು ಮಂದಿ ವಿದ್ವಾಂಸರುಗಳ ಅಭಿಪ್ರಾಯವಾಗಿದೆ.

ಛಾಪನ್ನು ಉಳಿದುಕೊಂಡಿರುತ್ತದೆ. ಉಳಿದ ಪ್ರಕಾರಗಳಲ್ಲಿ ಎಷ್ಟೇ ಹೆಸರು ಗಳಿಸಿದ್ದರೂ ಸಹ ಮೂರ್ತಿರಾಯರ ಪೂರ್ಣ ಯಶಸ್ಸು ಇರುವುದು ಪ್ರಬಂಧ ಸಾಹಿತ್ಯದಲ್ಲಿ.

ಮೂರ್ತಿರಾಯರು ಕನ್ನಡದ ಹೆಮ್ಮೆಯ ಪ್ರಬಂಧಕಾರರು. ಪ್ರಬಂಧ ಸಾಹಿತ್ಯದ ಆಚಾರ್ಯ ಪುರುಷರು. ಇವರ ಪ್ರಬಂಧಗಳನ್ನು ಓದುವಾಗ, ಆಶ್ಚರ್ಯ, ವಿಸ್ಮಯ, ಭಯ, ಆನಂದಗಳ ರಸಮಾಲಿಕೆಯಲ್ಲಿ ಹಾದು ಬಂದಂತಾಗುತ್ತದೆ...ತಮ್ಮ ಮೋಹಕ ಮತ್ತು ಚಿತ್ರಕ ಶೈಲಿಯಿಂದ ಓದುಗರನ್ನು ಕನಸಿನ ಲೋಕಕ್ಕೆ ಒಯ್ದು ನಿಲ್ಲಿಸುತ್ತಾರೆ. ಅವರ ಸೌಂದರ್ಯಪ್ರಜ್ಞೆ, ರಸಿಕ ಮನೋಭಾವ, ಪ್ರಕೃತಿಯ ನಿರ್ಜೀವ ವಸ್ತುಗಳನ್ನು ಜೀವಂತವಾಗಿ ಚಿತ್ರಿಸುವ ಚಿತ್ರಕಾರನ ಕುಶಲಕುಂಚ, ಆಳವಾದ ಜೀವನಾನುಭವ, ಪಾಂಡಿತ್ಯಗಳು ಸುವ್ಯಕ್ತವಾಗಿದೆ. ಮಾನವೀಯತೆಯನ್ನು ತೋರುವಲ್ಲಾಗಲಿ, ದಾಂಪತ್ಯ ಜೀವನದ ಮಧುರ ನಿಮಿಷಗಳನ್ನು ಅಳವಡಿಸಿಕೊಳ್ಳುವಲ್ಲಾಗಲಿ ಅವರ ಕಲೆಗಾರಿಕೆ ಕಂಡುಬರುತ್ತದೆ[1]". "ಲಲಿತವಾದ ಬರವಣಿಗೆ, ಉದ್ದಕ್ಕೂ ಚಿಮ್ಮುತ್ತ ಸಾಗುವ ತಿಳಿಹಾಸ್ಯದ ವಾಹಿನಿ, ಹೆಣ್ಣು ಗಂಡುಗಳ, ಅದರಲ್ಲೂ ನವಪ್ರಣಯಿಗಳ ಮನೋವ್ಯಾಪಾರದ ಸೂಕ್ಷ್ಮವಿಶ್ಲೇಷಣೆ, ತುಂಬ ಜನಪ್ರಿಯವಾಗಿರುವ ವಸ್ತು-ಸಂಗತಿಗಳ ಮೇಲೆ ಬೀರುವ ವಕ್ರ-ಕಿರಣ, ಗಂಭೀರ ವಿಷಯಗಳನ್ನೆತ್ತಿಕೊಂಡು ಹಗುರವಾದ ಅಣಕು ಶೈಲಿಯಲ್ಲೇ ನಡೆಸುವ ಮಾರ್ಮಿಕ ಹೃದ್ಬೋಧಕ ವಿಮರ್ಶೆ, ಒಂದು ಕಿರುಚಿತ್ರ ಬರೆದರೂ ಅದರಲ್ಲಿ ಕಾಣಿಸುವ ಪೂರ್ಣದೃಷ್ಟಿ, ಶೈಲಿಯ ಲಾಘವತೆಯಲ್ಲಿ ಇಣುಕಿಸುವ ವಿಚಾರಪುಷ್ಟಿ, ಸಣ್ಣಕತೆ, ನಾಟಕಗಳ ಗಡಿನಾಡಿನಲ್ಲಿ ಸ್ವೇಚ್ಛೆಯಾಗಿ ವಿಹರಿಸುವ ಆವರಣಸೃಷ್ಟಿ, ವ್ಯಕ್ತಿ ಚಿತ್ರಣಗಳಲ್ಲಿ ತೋರುವ ಅಪೂರ್ವ ಚಿತ್ರಸೃಷ್ಟಿ, ನಿರ್ಜೀವ ವಸ್ತುಗಳ ವಿವರಣೆಯಲ್ಲಿ ಮನಗಾಣಿಸುವ ಒಂದು ನಾಟ್ಯಶಕ್ತಿ—ಇಂತಹ ಹಲವಾರು ಗುಣಗಳು ಮೂರ್ತಿರಾಯರ ಪ್ರಬಂಧಗಳಿಗೆ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿವೆ[2]"

ಮೂರ್ತಿರಾಯರು ಮೂರು ಮುತ್ತಿನಂತಹ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಹಗಲುಗನಸುಗಳು' (೧೯೩೭ ೧೯೬೩), 'ಆಲೆಯುವ ಮನ' (೧೯೫೭ ೧೯೫೫), ಮತ್ತು 'ಮಿನುಗು ಮಿಂಚು' (೧೯೭೨ ೧೯೬೭ ೧೯೬೮) ಎಂಬ ಸಂಕಲನಗಳನ್ನು ಮೇಲ್ಕಂಡಂತೆ ದ್ವಿತೀಯ ಮತ್ತು ತೃತೀಯ ಮುದ್ರಣಗಳಲ್ಲಿ ಹೊರತಂದಿದ್ದಾರೆ. ಅತ್ಯುತ್ತಮ ಪ್ರಬಂಧಗಳು ಮೂರೂ ಸಂಕಲನಗಳಲ್ಲಿ ಹರಡಿಕೊಂಡಿವೆ. ಹಾಗೆಯೇ ಪ್ರಬಂಧವಲಯಕ್ಕೆ ಸೇರದ ಬರಹಗಳೂ ಇಲ್ಲಿ ಸ್ಥಾನ ಪಡೆದಿವೆ.

'ಹಗಲುಗನಸುಗಳು' ಕೃತಿ ಗೌರಜ್ಜಿ, ಹಗಲುಗನಸುಗಳು, ಹೂವುಗಳು, ಗಾಡಿಯ ಪ್ರಯಾಣ, ಕುರುಡ, ಲಲಿತೆಯ ವಿದ್ಯಾಭ್ಯಾಸ ಮತ್ತು ಪ್ರಣಯ ಯಾತ್ರೆ ಎಂಬ ಏಳು ಪ್ರಬಂಧಗಳನ್ನೊಳಗೊಂಡಿದೆ. ಇವುಗಳಲ್ಲಿ ಕುರುಡ, ಲಲಿತೆಯ ವಿದ್ಯಾಭ್ಯಾಸ ಮತ್ತು ಪ್ರಣಯ ಯಾತ್ರೆ ಎಂಬಿವು ಒಳ್ಳೆಯ ಕಥಾಂಶವನ್ನೊಳಗೊಂಡಿರುವ ಪ್ರಬಂಧಗಳು. "ಸಾಮಾನ್ಯವಾಗಿ ಸಣ್ಣಕಥೆಯ ವಸ್ತು ನನ್ನ ಕೈಗೆ ಬಂದರೆ ಪ್ರಬಂಧವಾಗಿ ಬಿಡುತ್ತದೆ" ಎಂಬುದಾಗಿ ಲೇಖಕರೇ ಒಂದು ಕಡೆ ಹೇಳಿಕೊಂಡಿದ್ದಾರೆ[3]. ಈ ಸಂಕಲನದ ಮೊದಲ ಪ್ರಬಂಧ 'ಗೌರಜ್ಜಿ'; ಒಂದು ವ್ಯಕ್ತಿ ಚಿತ್ರ. ಗೌರಜ್ಜಿ ಮದುವೆಯಾದ ಮೂರು ವರ್ಷಕ್ಕೇ ಗಂಡನನ್ನು ಕಳೆದುಕೊಂಡದ್ದರ ಜೊತೆಗೆ ಅತ್ತೆಯ ಕಿರುಕುಳದ ನೋವುಂಡರೂ ಅದನ್ನು ವ್ಯಕ್ತಪಡಿಸದೆ ಬಾಳಿದ ಸಾತ್ವಿಕ ಚೇತನ. ಕತ್ತಲಾಗಿದ್ದ ತನ್ನ ಬದುಕನ್ನು ಮಕ್ಕಳ ಲಾಲನೆ ಪಾಲನೆಯಿಂದ ಬೆಳಕಾಗಿಸಿಕೊಂಡು ತಾನೂ ಮಕ್ಕಳಿಗೆ ಬೇಕಾದ ಹಿರಿಯ ಜೀವ. "ತಮಗೆ ತಿಳಿದ ಒಬ್ಬ ವ್ಯಕ್ತಿಯನ್ನು ಚಿತ್ರಿಸ ಹೊರಟಿದ್ದರೂ ಅಲ್ಲಿರುವುದು ಒಬ್ಬ ವ್ಯಕ್ತಿಯ ಇತಿಮಿತಿಗಳನ್ನು ಮೀರಿ ಸಾಧಾರಣೀಕರಣವನ್ನು ಪಡೆದ ಚಿತ್ರ. ಯಾರದೇ ಮನೆಯಲ್ಲೂ ಇರಬಹುದಾದ ಒಂದು ತಲೆಮಾರಿನ ಪ್ರತಿನಿಧಿಯೆನ್ನುವಂಥ ಒಬ್ಬ ವ್ಯಕ್ತಿಯ ಚಿತ್ರ.

---

1 ವೀರೇಂದ್ರ ಸಿಂಪಿ: ಕನ್ನಡದಲ್ಲಿ ಲಲಿತ ಪ್ರಬಂಧಗಳು, ಪು. ೪೪–೪೫

2 ಅ. ರಾ. ಮಿತ್ರ: ಎ. ಎಸ್. ಮೂರ್ತಿರಾಯರ ಪ್ರಬಂಧಗಳು, ಲೋಕಪಾವನಿ. ಪು. ೮೪–೮೫, ೧೯೭೧

3 ಎ. ಎಸ್. ಮೂರ್ತಿರಾವ್, ಲೇಖಕನಾಗಿ ನನ್ನ ಅನುಭವ. ಲೋಕಪಾವನಿ. ಪು. ೬೦

ತಮ್ಮ ಹೃದಯದ ಪರಿಪಕ್ವತೆಯಿಂದ ಯಾರದೇ ವ್ಯಕ್ತಿತ್ವವನ್ನೂ ಸಹಾನುಭೂತಿಯಿಂದ ವಸ್ತುನಿಷ್ಠವಾಗಿ ನೋಡುವ ಶಕ್ತಿ ಲೇಖಕರಿಗೆ ಸಿದ್ಧಿಸಿದೆ"4

ಸಂಕಲನದ ಎರಡನೆಯ ಪ್ರಬಂಧ 'ಹಗಲುಗನಸುಗಳು' ಲೇಖಕರ ಒಳ್ಳೆಯ ಕಲ್ಪನಾಶಕ್ತಿಗೆ ದ್ಯೋತಕ. ಕುರುಡ ಒಂದು ಅತ್ಯುತ್ತಮ ಕಥನಾತ್ಮಕ ಪ್ರಬಂಧ. ಇದು ಪ್ರತ್ಯಕ್ಷವಾಗಿ ಕುರುಡ ಮತ್ತು ಆತನ ತಾಯಿಯ ನಲವತ್ತು ವರ್ಷಗಳ ಕಷ್ಟಗಳನ್ನು ಹೃದಯಂಗಮವಾಗಿ ಪರಿಚಯಿಸುವುದರ ಜೊತೆಗೆ ಲೇಖಕರ ಮಾನವೀಯತೆ, ಹೃದಯವಂತಿಕೆ, ಅನುಕಂಪ, ದಯೆ, ಮೊದಲಾದ ಗುಣಗಳನ್ನು ವ್ಯಕ್ತಪಡಿಸುತ್ತದೆ. ಇದು ವಾಚಕರ ಅಂತಃಕರಣವನ್ನು ಮಿಡಿಯುವುದರಲ್ಲಿ ಯಶಸ್ಸು ಪಡೆದಿದೆ. ಕೃತಿಯಲ್ಲಿನ ಕುರುಡ ನಿಜವಾದ ಕುರುಡನಾಗಿ ನಮ್ಮ ಕಣ್ಣ ಮುಂದೆ ನಿಂತಂತೆ ಭಾಸವಾಗುತ್ತದೆ. 'ಲಲಿತೆಯ ವಿದ್ಯಾಭ್ಯಾಸ ಗಂಡ ಹೆಂಡಿರ ಸಂಬಂಧ ಬೇರೆ ಯಾವ ಬಗೆಯ ಸಂಬಂಧವಾಗಿಯೂ ಉಳಿಯಲಾರದು ಎಂಬುದನ್ನು ತೋರಿಸುವ ಒಂದು ಮನೋಹರ ಚಿತ್ರ. 'ಗಾಡಿಯ ಪ್ರಯಾಣ' ನಾಗರಿಕತೆಯಿಂದ ಬೇರೆಯಾದ ಗ್ರಾಮ ಜೀವನದ ಸುಖದ ಸ್ವಚ್ಛ ಅನುಭವಗಳಲ್ಲೊಂದು. ನಾಗರಿಕತೆಗೆ ಬೆರಗಾಗಿ ನಗರ ಜೀವನದ ವಿಲಾಸಗಳಿಗೆ ಮೈಯೊಡ್ಡಲು ಹಂಬಲಿಸುವ ಈ ಕಾಲದಲ್ಲೂ ಹಳ್ಳಿಬಾಳಿನ ಬಗ್ಗೆ ಆಸೆ-ಆಕಾಂಕ್ಷೆಗಳನ್ನು ಮೂಡಿಸಲು ಇಂಥ ಪ್ರಬಂಧಗಳು ತಕ್ಕಮಟ್ಟಿಗಾದರೂ ನೆರವಾಗಬಲ್ಲವು. 'ಹೂವುಗಳು' ಪ್ರಬಂಧದಲ್ಲಿ ವಿವಿಧ ಹೂವುಗಳ ವರ್ಣನಾ ವೈಖರಿಯನ್ನು ಕಾಣಬಹುದು. ಇದರಲ್ಲಿ ಕಮಲ, ಗುಲಾಬಿ, ಜಾಜಿ ಮುಂತಾದ ಹೂವುಗಳನ್ನು ಕುರಿತು ಮಾತನಾಡುವಾಗ ಪ್ರಬಂಧಕಾರರು ಆಯಾ 'ಹೂಗಳ ಪಕ್ಷವನ್ನು ವಹಿಸಿರುವರೇನೋ ಎನಿಸುತ್ತದೆ. ಪ್ರಕೃತ ಪ್ರಬಂಧವನ್ನು ಓದುವಾಗ ಹರಿಹರನ ಪುಷ್ಪರಗಳೆಯಲ್ಲಿ ಒಂದೊಂದು ಹೂವನ್ನು ವರ್ಣಿಸಿ, ಅದರ ವೈಶಿಷ್ಟ್ಯವನ್ನು ತೋರಿಸಿಕೊಡುತ್ತಿದ್ದುದು ನೆನಪಿಗೆ ಬರುತ್ತದೆ. "ಭಗವಂತನು ವಿಶ್ವದಲ್ಲಿ ಸೌಂದರ್ಯವನ್ನು ಅನಂತ ಔದಾರ್ಯದಿಂದ ಎರಚಿರುವನೆಂಬುದಕ್ಕೆ ಅಂತರಿಕ್ಷದಲ್ಲಿ ತಾರೆಗಳೂ ಭೂಮಿಯಲ್ಲಿ ಹೂವುಗಳೂ ಸಾಕ್ಷಿ" "ಪ್ರಕೃತಿಯಂಥ ಅದ್ಭುತ ಕೌಶಲವುಳ್ಳ ಶಿಲ್ಪಿ ಇನ್ನೆಲ್ಲಿಯೂ ಇಲ್ಲ." "ಸುತ್ತಲೂ ಸೌಂದರ್ಯವೇನೋ ತುಂಬಿದೆ; ನೋಡಲು ಕಣ್ಣು ಬೇಕು, ಅನುಭವಿಸಲು ತಕ್ಕ ಮನೋವೃತ್ತಿ ಬೇಕು." ಮುಂತಾದ ವಾಕ್ಯಗಳು ಪ್ರಬಂಧದ ಸೌಂದರ್ಯವನ್ನು ಹೆಚ್ಚಿಸಿವೆ.

"ಅಲೆಯುವ ಮನ' ಕೃತಿಯು ಕೆನ್ಸಿಂಗ್ಟನ್ ಪಾರ್ಕ್, ಹೋಟಲುಗಳು, ಹೆಂಡತಿಯ ಹೆಸರು, ದಿವಾನಖಾನೆಯ ಅಂದಚೆಂದ, ಹರಕೆಗಳು, ಕ್ಲೀಷಾಪ್ರವೀಣರ ಸಾಕ್ಷ್ಯ, ವ್ಯಾಘ್ರಗೀತೆ, ಕಾರ್ ರಿಪೇರಿ, ನೀನೇ ಮಾಡಿನೋಡು, ಮಹಾರಾಜಾ ಕಾಲೇಜಿನ ಕಾಮನ್‌ರೂಮ್, ಟೆಲಿಫೋನ್, ಸಾಹಿತಿಯ ಚಹರೆ, ಸಣ್ಣಕಥೆಯ ಹಾವಳಿ, ನಿಲ್ಲುವುದಕ್ಕೆ ನೆರಳಾಗಿ ಸಣ್ಣದೊಂದು ಗುಡಿಸಲು, ಅಕ್ಕ ಹೆಬ್ಬಾಳು ಎಂಬ ಹದಿನಾಲ್ಕು ವೈವಿಧ್ಯಮಯ ಪ್ರಬಂಧಗಳನ್ನೊಳಗೊಂಡಿದೆ.

ಈ ಸಂಕಲನದಲ್ಲಿ ಸೇರಿರುವ 'ದಿವಾನಖಾನೆಯ ಅಂದಚೆಂದ' ತಂಗಾಳಿಯಂತಹ ಹಗುರವಾದ ಸರಳವಾದ ಹಿತವಾದ ಬರವಣಿಗೆ; ಓದಿದಂತೆಲ್ಲ ಹೊಸ ಸವಿ ಇದರಲ್ಲಿ ಅನುಭವವಾಗುತ್ತದೆ"5. ಕಟ್ಟುನಿಟ್ಟಾದ ಶಿಸ್ತು, ಅತಿಯಾದ ವ್ಯವಸ್ಥೆ ಬದುಕಿನಲ್ಲಿ ಯಾವತ್ತೂ ಸುಖವನ್ನು ಕೊಡಲಾರವು ಎಂಬ ಅಂಶ ಇಲ್ಲಿ ತುಂಬ ಸುಂದರವಾಗಿ ನಿರೂಪಿತವಾಗಿದೆ. ದಿವಾನಖಾನೆಯಲ್ಲಿ ಮಾಡಿದ ವ್ಯವಸ್ಥಿತ ಅಲಂಕಾರ ಕೃತಕವಾಗಿ ಲೇಖಕರ ಸ್ವಾಭಾವಿಕವಾದ ಇರುವಿಕೆಗೆ ಭಂಗತರುತ್ತದೆ. "ವಾಸ್ತವವಾಗಿ ನೋಡಿದರೆ ಅದರ ಸೌಂದರ್ಯವೇ ಒಂದು ದುಷ್ಟಶಕ್ತಿಯಾಗಿ ಪರಿಣಮಿಸಿ" ಲೇಖಕರನ್ನು ಬಂಧಿಸುತ್ತದೆ. ಅವರು 'ಈಗಿನ ದಿವಾನಖಾನೆಯಲ್ಲಿ ಕಾಣುವ ಪಾಷಾಣ ಹೃದಯದ ನಿಶ್ಚಲ ಸೌಂದರ್ಯ ನನಗೂ ಬೇಡ ನನ ಆತ್ಮೀ

4 ಡಾ. ಪ್ರಭುಶಂಕರ, ಕನ್ನಡದಲ್ಲಿ ಪ್ರಬಂಧ ಸಾಹಿತ್ಯ, ಕನ್ನಡ ವಿಶ್ವಕೋಶ, ಸಂಪುಟ ೩, ಪುಟ. ೭೩೮

5 ಗೊರೂರು ರಾಮಸ್ವಾಮಿ ಐಯಂಗಾರ್: ಪ್ರಸ್ತಾವನೆ, ಹೊಸಗನ್ನಡ ಪ್ರಬಂಧ ಸಂಕಲನ, ಪು ೧೩

ಯರಿಗೂ ಬೇಡ"[6] ಎನ್ನುವ ಸ್ಥಿತಿಗೆ ಬರುತ್ತಾರೆ. ದಿವಾನಖಾನೆಯ ಅಂದಚೆಂದದ ಲೇಖಕರಿಗೆ ಬೇಕಾಗಲಿ ಬಿಡಲಿ, ಆದರೆ ಈ ಚೆಂದದ ಬರವಣಿಗೆ ನಮಗೂ ನಮ್ಮ ಆತ್ಮೀಯರಿಗೂ ಖಂಡಿತಾ ಇರಲಿ."ಅವರ ದಿವಾನಖಾನೆಯ ಅಂದಚೆಂದ ಕನ್ನಡ ಪ್ರಬಂಧ ಸಾಹಿತ್ಯದ ಆಣಿಮುತ್ತು. ಹಗಲುಗನಸುಗಳ ಮೂರ್ತಿ ರಾಯರೇ ಇಂಥ ಪ್ರಬಂಧಗಳನ್ನು ಬರೆಯಬಲ್ಲರು" ಎಂದು ಡಾ. ಹಾ. ಮಾ. ನಾಯಕರ ಅಭಿಪ್ರಾಯ.

ಹೋಟಲುಗಳಿಗೆ ಹೋಗುವುದನ್ನು ಬಿಡಲಾರದ ಅನಿವಾರ್ಯ ಚಟವನ್ನು ಘೋಷಿಸಲು ಲೇಖಕರು ಹೆಂಗಸರಿಗೆ ಬಿಡುವು ಕೊಡುವ ಸುಳ್ಳು ನೆಪದ ಕಾರಣವನ್ನೊದಗಿಸಿದ್ದಾರೆ 'ಹೋಟಲುಗಳು' ಪ್ರಬಂಧ ದಲ್ಲಿ 'ಕ್ಷೌರ ಪ್ರವೀಣರ ಸಾಕ್ಷ್ಯ ಪೂರ್ಣವಾಗಿ ಪ್ರಶ್ನೋತ್ತರ ರೂಪದಲ್ಲಿದೆ. 'ಕ್ಷೌರ'ದ ಬಳಕೆಯನ್ನು ಹಲವಾರು ನಿದರ್ಶನಗಳೊಂದಿಗೆ ಸ್ವಾರಸ್ಯವಾಗಿ ವಿಡಂಬಿಸಿರುವ ಈ ಪ್ರಬಂಧ ಹೊಸ ತೆರನಾಗಿದೆ. 'ಹೆಂಡತಿಯ ಹೆಸರು' ಪ್ರಬಂಧ ಮದುವೆಯಲ್ಲಿ ಗಂಡು ಹೆಂಡತಿಯ ಹೆಸರು ಹೇಳಲು ಪಡುವ ಸಂಕೋಚದ ಸೊಗಸು, ಹೆಂಡತಿಗೆ ಹೆಸರಿದ್ದರೂ ಹೇಳಲಾರದೆ ಮಕ್ಕಳ ಹೆಸರ ಮೂಲಕ ಬಳಸಿ ಕರೆ ಯುವವರ ಸ್ಥಿತಿ, ಹೆಂಡತಿಯರಿಗೆ ಇಡಬಹುದಾದ ಆಕರ್ಷಣೀಯ ಹೆಸರುಗಳು– ಇತ್ಯಾದಿ ವಿಷಯ ಗಳನ್ನೊಳಗೊಂಡಿದೆ. ಹೆಂಡತಿಯ ಹೆಸರನ್ನೇ ಕೇಂದ್ರವಾಗಿಟ್ಟುಕೊಂಡು ಅದನ್ನಾವರಿಸಿರುವ ಸುಂದರ ಭಾವನೆಗಳ ಒಂದು ಪುಟ್ಟ ಭಾವಕೋಶ ಈ ಪ್ರಬಂಧ.

ಒಟ್ಟಿನಲ್ಲಿ 'ಅಲೆಯುವ ಮನ' ಸಂಕಲನ ಮೂರ್ತಿರಾಯರ ಲೇಖನ ಸಾಮರ್ಥ್ಯದ ಎಲ್ಲ ಸಾಧ್ಯತೆಗಳನ್ನೂ ಸೂರೆಗೊಂಡಿದೆ. ಅವರ ಮೂರನೆಯ ಪ್ರಬಂಧ ಸಂಕಲನ 'ಮಿನುಗು ಮಿಂಚು' ಕೂಡ ಇಷ್ಟೇ ಸತ್ವಶಾಲಿಯಾಗಿದೆ.

'ಮಿನುಗು ಮಿಂಚು' ಹತ್ತು ಪ್ರಬಂಧಗಳನ್ನೊಳಗೊಂಡಿದೆ. 'ಹರಟೆಯ ಮಲ್ಲ' ಪ್ರಬಂಧದಲ್ಲಿ ಇಂಗ್ಲಿಷಿನ 'ಬೋರ್' ಎಂಬ ಪದಕ್ಕೆ 'ಹರಟೆಯಮಲ್ಲ' ಎಂದು ಅರ್ಥಮಾಡುವುದು ತಪ್ಪು, ಕನ್ನಡದಲ್ಲಿ ಅದಕ್ಕೆ ಸರಿಯಾದ ಸಂವಾದಿ ಪದ ಇಲ್ಲ, ಬೈರಿಗೆಯವನು ಎಂದು ಇಟ್ಟುಕೊಳ್ಳಬಹುದು ಎಂಬುದಾಗಿ ಸೂಚಿಸುತ್ತಾರೆ. ಹರಟೆಯಮಲ್ಲ ಬೈರಿಯವನಿಗಿಂತ ಭಿನ್ನ. ಬೈರಿಗೆಯವನು ಜನಮನವನ್ನು ಅರಿಯದೆ ಏಕಮುಖವಾಗಿ ಕೊರೆಯುವ ಸಮಾಜದ ಶತ್ರು. ಇವನು ಪಾಶ್ಚಿಮಾತ್ಯ ಕ್ಲಬ್ಬುಗಳಲ್ಲಿ ವಿಶೇಷವಾಗಿ ಇರುವ ವ್ಯಕ್ತಿ. "ವಾಕ್ ಪ್ರವಾಹವೆಲ್ಲ ಒಂದು ಕಡೆ ಸೇರಿ ಕೊಳಕು ನೀರಿನ ಕುಂಟೆಯಾಗುತ್ತದೆ. ಅದಕ್ಕೆ ಹೊಸ ನೀರಿನ ಸಂಪರ್ಕವೇ ಇಲ್ಲ. ಬೈರಿಗೆಯವನ ಮನಸ್ಸಿಗೆ ಕಿಟಕಿಗಳಿಲ್ಲ. ನಿರ್ಮಲವಾದ ಗಾಳಿ ಅಲ್ಲಿಗೆ ಪ್ರವೇಶಿಸಲಾರದು. ಅವನ ಭಾಗಕ್ಕೆ ಎದುರಿಗಿರುವ ಜನರು ಸ್ವಂತ ವ್ಯಕ್ತಿತ್ವವುಳ್ಳ ತಮ್ಮದೇ ದೃಷ್ಟಿಯುಳ್ಳ ವಿಚಾರವುಳ್ಳ ಜನರಲ್ಲ. ಅವರು ಸೃಷ್ಟಿಯಾಗಿರುವುದು ಬೈರಿಗೆಯವನ ಮಾತು ಕೇಳಲು ಮಾತ್ರ"[7] ಇವನಿಗಿಂತ ಹರಟೆಯ ಮಲ್ಲ ಉತ್ತಮ ಎಂಬುದು ಪ್ರಬಂಧಕಾರರ ಮತ. "ಹರಟೆ ಒಂದು ಕಡೆ ನಿಂತು ಹಸರುಗಟ್ಟುವ ನೀರಲ್ಲ; ನಾಲ್ಕಾರು ತೊರೆಗಳಿಂದ ವೃದ್ಧಿಯಾಗಿ ಹರಿಯುವ ಹೊಳೆ. ಅದು ಮಾತಾಡು ವವನ ಮತ್ತು ಅವನ ಶ್ರೋತೃಗಳ ಎಲ್ಲರ ಮನಸ್ಸಿಗೂ ತಂಪೆರೆದು ಚಕ್ಕಂದವಾಡಿ, ಅವರು ಬೇಸರ ಗೊಳ್ಳುವುದಕ್ಕೆ ಮೊದಲೇ ಯಾವುದೋ ಅನಿಶ್ಚಿತ ಸ್ಥಾನಕ್ಕೆ ಹೊರಟು ಹೋಗುತ್ತದೆ. ಹರಟೆಗೆ ಗಮ್ಯ ವಿಲ್ಲ, ಪೂರ್ವೋದ್ದೇಶವೂ ಇಲ್ಲ"[8] ಹೀಗೆ ಹರಟೆಯವನಿಗೂ ಬೈರಿಗೆಯವನಿಗೂ ಇರುವ ಪ್ರಮುಖ ವ್ಯತ್ಯಾಸವನ್ನು ಸೂಚಿಸಿದ್ದಾರೆ. ಹರಟೆಯ ಮಲ್ಲರು ಬಯಸುವುದು ಮಿತ್ರ ಸೌಖ್ಯ; ಹರಟೆಯಿಂದ ದೊರೆಯುವುದು ಪ್ರಸನ್ನತೆ–ಎಂಬುದನ್ನು ಗಮನಿಸಿದ ಪ್ರಬಂಧಕಾರರು ಈ ಅನಿಶ್ಚಿತವಾದ ಮಾತು ಗಾರಿಕೆಯ (ಹರಟೆಯ) ಮಹತ್ವವನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ಈ ಪ್ರಬಂಧವನ್ನು ಓದಿದ ಯಾರಿಗಾದರೂ ಹರಟೆ ಹೊಡೆಯುವ ಅಪೇಕ್ಷೆಯೂ, ಹರಟೆಮಲ್ಲರ ಬಗ್ಗೆ ಗೌರವವೂ ಉಂಟಾಗು ವುದರಲ್ಲಿ ಸಂಶಯವಿಲ್ಲ.

---

6 ಅಲೆಯುವ ಮನ, ಪು. ೩೫

7 ಮಿನುಗು ಮಿಂಚು, ಪು. ೫

8 ಅದೇ, ಪು.೭

'ಹರಟೆ ಮತ್ತು ಪ್ರಬಂಧ' ಎಂಬ ಪ್ರಬಂಧದಲ್ಲಿ ಕೂಡ ಅವುಗಳ ಸ್ವರೂಪ ಮತ್ತು ವ್ಯತ್ಯಾಸಗಳನ್ನು ಖಚಿತವಾಗಿ ತಿಳಿಸಿದ್ದಾರೆ. ಬಹುಶಃ ಇಂತಹ ಲೇಖನ ಕನ್ನಡದಲ್ಲಿ ಇದೇ ಪ್ರಥಮ. ಶಾಸ್ತ್ರ ವಿಷಯಗಳನ್ನೂ ಪ್ರಬಂಧದ ಕಕ್ಷೆಯಲ್ಲಿ ಎಷ್ಟು ಉತ್ತಮವಾಗಿ ಹೇಳಬಹುದು ಎಂಬುದಕ್ಕೆ ಈ ಪ್ರಬಂಧ ನಿದರ್ಶನವಾಗಿದೆ.

ಗೊರೂರು ರಾಮಸ್ವಾಮಿ ಐಯ್ಯಂಗಾರರ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ' ಪ್ರಬಂಧದಲ್ಲಿ ನೋಡಿದಂತೆ, ವಿ.ಸೀ. ಅವರ 'ಕಾಯಿಲೆಗಳು' ಪ್ರಬಂಧದಲ್ಲಿ ಕಂಡಂತೆ, ಮೂರ್ತಿರಾಯರ 'ಗೊಣಗುವ ಚಟ' ಪ್ರಬಂಧದಲ್ಲಿ ಕೂಡ ಪ್ರಬಂಧಕಾರರಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ವಿಶಿಷ್ಟಗುಣವನ್ನು ಕಾಣಬಹುದು. ಲೋಕಮೆಚ್ಚದ ವಿಷಯಗಳನ್ನು ಇವರು ಮೆಚ್ಚುವುದು, ಲೋಕ ತೆಗಳುವ ವಸ್ತುಗಳನ್ನು ಇವರು ಹೊಗಳುವುದೇ ಈ ವಿಶಿಷ್ಟಗುಣ. ಗೊಣಗುವ ಚಟವನ್ನು ಯಾರೂ ಪ್ರಶಂಸಿಸುವುದಿಲ್ಲ. ಅದೊಂದು ಪೀಡೆ ಎಂದೇ ಎಲ್ಲರು ಭಾವಿಸುವುದು. ಅದಿದ್ದರೆ ಕೊರಗಿ ಕೊರಗಿ ಶರೀರ ನಶಿಸಲು ಕಾರಣವಾಗುತ್ತದೆ ಎಂಬುದೇ ಬಹುಜನರ ಅಭಿಪ್ರಾಯ. ವಾಸ್ತವವಾಗಿ ಗೊಣಗುವವರನ್ನು ಕಂಡರೆ ಜನರಿಗೆ ಒಂದು ತರಹ ಜಿಗುಪ್ಸೆ. ಆದರೆ ಮೂರ್ತಿರಾಯರು ಈ ಮುಖವನ್ನು ಮರೆಮಾಡುತ್ತಾರೆ. ಗೊಣಗುವ ಚಟವನ್ನು ಗುಣವಾಗಿ ಪರಿಗಣಿಸುತ್ತಾರೆ, ಹಾಗೆ ವ್ಯಾಖ್ಯಾನಿಸುತ್ತಾರೆ. ಆ ಗೊಣಗುವಿಕೆಯಿಂದ ಆಗುವ ಲಾಭಗಳನ್ನು (?) ವಾಚಕರು "ಹೌದು, ನಿಜವಿರಬಹುದು" ಎನ್ನುವಷ್ಟರ ಮಟ್ಟಿಗೆ ಅಪ್ಯಾಯಮಾನವಾಗಿ ಹೇಳುತ್ತಾರೆ. ಈ ರೀತಿಯ ನಿರೂಪಣೆಯಲ್ಲಿ ಔಚಿತ್ಯ ತಲೆಹಾಕಿ ಸಹಜವಾಗಿಯೇ ಹಾಸ್ಯ ಉದ್ಭವವಾಗುತ್ತದೆ; ಅದು ಪ್ರಬಂಧದ ಒಂದು ಒಳ್ಳೆಯ ಗುಣವಾಗಿ ಪರಿಣಮಿಸುತ್ತದೆ ಎಂಬುದು ನಾವು ಗಮನಿಸಬೇಕಾದ ಅಂಶ. ಗೊಣಗುವ ಚಟ 'ರೇಗು'ವುದಕ್ಕಿಂತ ಉತ್ತಮ ಎಂಬುದು ಪ್ರಬಂಧಕಾರರ ಅಭಿಪ್ರಾಯ. ಇಲ್ಲಿ ಅವೆರಡಕ್ಕಿರುವ ಪರಸ್ಪರ ವ್ಯತ್ಯಾಸಗಳನ್ನು ತಿಳಿಸುತ್ತಾರೆ. ಆದರೆ ಅದು ಪ್ರಬಂಧಕಾರನ ದೃಷ್ಟಿ ಮಾತ್ರ. ರೇಗುವುದು 'ರಕ್ಷಣಾವಸ್ಥೆಯೇನಲ್ಲ ಸರ್ವನಾಶದ ವ್ಯವಸ್ಥೆ'–ನಿಜವಾಗಿ ನೋಡಿದರೆ ನಮ್ಮ ಸ್ವಭಾವದಲ್ಲಿ ದೈವ ನೆಟ್ಟಿರುವ ರಕ್ಷಣಾ ವ್ಯವಸ್ಥೆ ಎಂದರೆ ಗೊಣಗಾಟ. ಅದನ್ನು ಬೆಳೆಸಿಕೊಂಡರೆ ನಾವು ರೇಗುವ ಸಂಭವ ಕಡಮೆ' ಇತ್ಯಾದಿಯಾಗಿ ಗೊಣಗಾಟದ ಪರವಹಿಸಿ ವಕೀಲಿ ನಡೆಸುತ್ತಾರೆ. ಪ್ರಬಂಧಕಾರ ಏನಿಲ್ಲವೆಂದರೂ ಒಬ್ಬ ದೊಡ್ಡ ತಾರ್ಕಿಕ ಎಂಬುದು ನಮಗಿಲ್ಲಿ ಸ್ಪಷ್ಟವಾಗುತ್ತದೆ. ಆದರೆ ವಾಸ್ತವಾಂಶ ಬೇರೆ. ಒಂದು ರೀತಿಯಲ್ಲಿ ರೇಗುವುದು ಗೊಣಗುವುದಕ್ಕಿಂತ ಉತ್ತಮ. ಅದರ ಪರಿಣಾಮ ನೇರ ಮತ್ತು ಸ್ಪಷ್ಟ. ರೇಗುವವನು ಒಂದು ಸಾರಿ ರೇಗಿ ಸುಮ್ಮನಾಗಿ ಬಿಡುತ್ತಾನೆ. ಗೊಣಗುವವ ಹಾಗಲ್ಲ. ಅವನ ಅಭಿಪ್ರಾಯ ಜಪ್ಪಯ್ಯ ಅಂದರೂ ಸ್ಪಷ್ಟವಾಗಿ ಅರ್ಥವಾಗುವುದಿಲ್ಲ, ಮಾತ್ರವಲ್ಲ ಅವನು ಗೊಣಗುವಷ್ಟು ಕಾಲ ನಮಗೆ ನೆಮ್ಮದಿಯಿಲ್ಲ. ಒಂದು ಬಗೆಯ ಕೀಡೆಯ ಹುಳು ಮರವನ್ನು ಕೊರೆದಂತೆ ಇವನು ನಮ್ಮ ಮನಸ್ಸನ್ನು ಕೊರೆಯುತ್ತಾನೆ. ಇವನಿಂದ ನಮಗೆ ಹರ್ಷವಿಲ್ಲ. ಆದ್ದರಿಂದ ನಾವು ಪ್ರಬಂಧಕಾರನಿಂದ ವಾಸ್ತವಾಂಶವನ್ನು ಎಲ್ಲ ಕಾಲದಲ್ಲಿಯೂ ಅಪೇಕ್ಷಿಸಬಾರದು. ಆದರೆ ಪ್ರಬಂಧಕಾರ ತಾನು ಹೇಳಬೇಕಾದುದನ್ನು ಎಷ್ಟು ಚೆನ್ನಾಗಿ ಮನಮುಟ್ಟುವಂತೆ ಹೇಳಿದ್ದಾನೆ ಎಂಬುದು ಮುಖ್ಯ.

ಇಂದಿನ ಸಮಾಜದ ಸಂಕೀರ್ಣ ಬದುಕಿನಲ್ಲಿ ತೆರೆದುಕೊಂಡಿರುವ ವಿವಿಧ ಸಮಸ್ಯೆಗಳನ್ನು ಮೂರ್ತಿರಾಯರು ತಮ್ಮ ಪ್ರಬಂಧಗಳಲ್ಲಿ ಎತ್ತಿ ಹಿಡಿದಿದ್ದಾರೆ. ಈ ಸಮಸ್ಯೆಗಳು ನಮ್ಮ ಸಂಸ್ಕೃತಿಯ ಮೇಲೆ ದಟ್ಟ ಪ್ರಭಾವ ಬೀರಿ ಅದರಲ್ಲಿ ಅತಿ ಅನಿವಾರ್ಯವಾದ ಬದಲಾವಣೆಗೆ ಕಾರಣವಾಗಿರುವುದೂ ಉಂಟು. 'ಬೇಡದ ಅತಿಥಿಗಳು' ಎಂಬ ಪ್ರಬಂಧ ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಹಿಂದೆ ವೇದೋಪನಿಷತ್ತುಗಳ ಕಾಲದಲ್ಲಿ ಅತಿಥಿಗಳನ್ನು ದೇವರಿಗೆ ಸಮಾನ ಎಂದು ಕಾಣುತ್ತಿದ್ದರು. ಇಂದು ಆ ಅತಿಥಿಗಳು ಬೇಡವಾಗಿದ್ದಾರೆ. ನಮಗೆ ಪ್ರಿಯರಾದವರು ಕೂಡಾ ಬರುವುದು ಬೇಡವಾಗಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ದುರ್ಬಲ ಆರ್ಥಿಕ ಪರಿಸ್ಥಿತಿ. ಈ ಆರ್ಥಿಕ ಸಮಸ್ಯೆ ಇಂದು ನಮ್ಮ ಔದಾರ್ಯಕ್ಕೆ ಕಟ್ಟೆಕಟ್ಟಿ, ಸಂಸ್ಕೃತಿಗೆ ಅನಿವಾರ್ಯವಾಗಿ ಧಕ್ಕೆ ತರುವಂಥ ಸ್ಥಿತಿಗೆ ತಂದಿದೆ. ಒಂದು ಸಮಸ್ಯೆ ನೂರು ಸಮಸ್ಯೆಗಳ ಸೃಷ್ಟಿಗೆ ಕಾರಣವಾಗುತ್ತದೆ. ಈ ಸಮಯದಲ್ಲಿ ಲೇಖಕರು ಅತಿಥಿಗಳ ಜವಾಬ್ದಾರಿಯ ಬಗ್ಗೆಯೂ ಎಚ್ಚರಿಸುತ್ತಾರೆ.

ಅನಾವಶ್ಯವಾಗಿ ಒಬ್ಬರಿಗೆ ಹೊರೆಯಾಗುವ ಬದಲು 'paying guest' ಎನ್ನುವ (ಇದರ ಅರ್ಥ ಸರಿಯಲ್ಲವಾದರೂ) ಇದರ ಪದ್ಧತಿಯನ್ನು ಸಮರ್ಥಿಸುತ್ತಾರೆ. ಆದರೆ ಇದೂ ಕಷ್ಟದ ಕೆಲಸವೆ. ಹಣ ತೆಗೆದುಕೊಂಡು ಊಟಹಾಕುವವರಿಗೂ, ಹಣಕೊಟ್ಟು ಊಟಮಾಡುವವರಿಗೂ ಒಂದು ರೀತಿಯ ಮುಜಗರ ಮತ್ತು ಸಂಕೋಚ. ಇದರಲ್ಲಿ ಪ್ರೀತಿ, ನಂಟಸ್ತಿಕೆ ಬರುವುದಿಲ್ಲ. ಇದರ ಬದಲು ಹೋಟೆಲ್ಲಿನಲ್ಲಿ ಉಳಿದುಕೊಳ್ಳುವುದು ಸರ್ವರೀತಿಯಲ್ಲೂ ಉತ್ತಮ. ಈ ಪ್ರಬಂಧದಲ್ಲಿ ಹಿಂದಿನ ಮತ್ತು ಇಂದಿನ ಸಮಾಜಗಳಿಗಿರುವ ಜೀವನಮಾರ್ಪಾಡುಗಳನ್ನು ಗುರುತಿಸಬಹುದಾಗಿದೆ.

'ಬೆಂಗಳೂರು' ಪ್ರಬಂಧದಲ್ಲಿಯೂ ಮಾನವನ ಕೆಲವು ಸಮಸ್ಯೆಗಳು ತಲೆಹಾಕಿವೆ. ಬೆಂಗಳೂರಿನ ವೈಶಿಷ್ಟ್ಯವನ್ನು ಕೆಲವು ಕಡೆ ಗುರುತಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಎರಡು ಮಾತುಗಳನ್ನು ಗಮನಿಸ ಬಹುದು: "ಬೆಂಗಳೂರು ರಾಜಮಹಾರಾಜರುಗಳ ಹಸಾದಕ್ಕೆ ಹಮ್ಮೈಸಿ ಅವರಿಂದ ತೊಟ್ಟಿಲು ತೂಗಿಸಿ ಕೊಂಡು ಬೆಳೆಯಬೇಕಾಗಿಲ್ಲ... ರಾಜಾಶ್ರಯದಲ್ಲಿ ಕಲೆ ಸಂಸ್ಕೃತಿಗಳೇನೋ ಬೆಳೆಯಬಹುದು; ಆದರೆ ದಾಸಭಾವ ಅವಕ್ಕಿಂತಲೂ ಹುಲುಸಾಗಿ ಬೆಳೆಯುತ್ತದೆ. ದಾಸ್ಯದ ಲೇಪವಿಲ್ಲದಯೆ ಕಲೆ ಸಂಸ್ಕೃತಿಗಳನ್ನು ಬೆಳೆಸಿಕೊಂಡೆವೆಂಬುದು ಬೆಂಗಳೂರಿನವರ ಹೆಮ್ಮೆ".9 ಈ ಪ್ರಬಂಧದಲ್ಲಿ ನಾಗರೀಕತೆಗೆ ಒಳಗಾದ ಬೆಂಗಳೂರಿನ ಚಿತ್ರ ಹೆಚ್ಚಾಗಿ ಇಲ್ಲ. ಬೆಂಗಳೂರಿನ ವಿವಿಧ ಮೊಹಲ್ಲಾಗಳ ವರ್ಣನೆಗೆ ತೊಡಗಿದ್ದು ಸಾಮಾನ್ಯ ರೀತಿಯ ಬರವಣಿಗೆ ಎನಿಸುತ್ತದೆ.

'ದೆವ್ವಗಳನ್ನು ಕುರಿತು' ಪ್ರಬಂಧ ಕುತೂಹಲಪೂರ್ಣವಾಗಿದೆ. ಇದರಲ್ಲಿ ದೆವ್ವಗಳ ಬಗ್ಗೆ ನಂಬಿಕೆ ಯಿರುವ-ಇಲ್ಲದಿರುವ ಎರಡೂ ಬಗೆಯ ಭಾವನೆಗಳ ಸ್ವಾರಸ್ಯಪೂರ್ಣವಾದ ವಿಶ್ಲೇಷಣೆಯಿದೆ. ಸ್ವಯಂ ಪ್ರಬಂಧಕಾರರಿಗೆ ದೆವ್ವಗಳ ಬಗ್ಗೆ ನಂಬಿಕೆ ಇಲ್ಲದಿದ್ದರೂ ದೆವ್ವದ ಕಲ್ಪನೆಯ ಭಯದಿಂದ ಪಾರಾಗಲು ಸಾಧ್ಯವಾಗಲಿಲ್ಲ. ಈ ಬಗ್ಗೆ ಅವರು ಒದಗಿಸಿರುವ ಅನುಭವದ ಸಮರ್ಥನೆ ಮನಶ್ಶಾಸ್ತ್ರೀಯ ದೃಷ್ಟಿ ಯಿಂದ ಅಧ್ಯಯನ ಯೋಗ್ಯವಾಗಿದೆ. ಮೈಸೂರಿನ ಕುಕ್ಕನಹಳ್ಳಿಯ ಕೆರೆಯ ಏರಿಯ ಮೇಲೆ ಆದ ಅವರ ಅನುಭವ ಎಲ್ಲರಿಗೂ ಆಗುವಂತಹದು. ಪ್ರಕೃತ ಪ್ರಬಂಧದಲ್ಲಿ ಲೇಖಕರು ಕೆಟ್ಟ ಮತ್ತು ಒಳ್ಳೆಯ ದೆವ್ವಗಳ ವಿವಿಧ ಗುಣ ಸ್ವಭಾವಗಳನ್ನು ಪರಿಚಯಿಸಿದ್ದಾರೆ. ಈ ಪ್ರಬಂಧವನ್ನು ಓದಿದ ಮೇಲೆ ದೆವ್ವಗಳ ಬಗ್ಗೆ ಇದ್ದ ಭಯಕ್ಕೆ ಬದಲಾಗಿ ಗೌರವ ಉಂಟಾಗುತ್ತದೆ. ಬಾಣಂತಿ ನರಸಮ್ಮನಿಗೆ 'ಮುದುಕಿ ದೆವ್ವ' ನೆರವಾದ ಚಿತ್ರ-ಈ ದೃಷ್ಟಿಯಿಂದ ಹೆಚ್ಚು ಪರಿಣಾಮಕಾರಿಯಾಗಿದೆ.

ದೆವ್ವ ಇದೆಯೋ-ಇಲ್ಲವೋ ಅದು ಬೇರೆ ವಿಷಯ. ಆದರೆ ಆ ಬಗ್ಗೆ ಇರುವ ಭ್ರಮೆ, ಭಯ-ಅದರಿಂದ ಮನಸ್ಸಿನ ಮೇಲಾಗುವ ಪರಿಣಾಮ ಅತ್ಯಂತ ಭಯಂಕರವಾದುದು. ದೆವ್ವಗಳನ್ನು ಕುರಿತು ಬರೆದ ಈ ಪ್ರಬಂಧ ಅನೇಕ ದೃಷ್ಟಿಯಿಂದ ಮಾನವನ ವ್ಯಕ್ತಿತ್ವದ ಅಳತೆಗೋಲು. ಮಾನವರಿಗಿಲ್ಲದ ಮಾನವತೆಯನ್ನು ದೆವ್ವಗಳಲ್ಲಿ ಕಂಡುಕೊಂಡ ಪ್ರಬಂಧಕಾರರು 'ಮಾನವರು ತಮ್ಮ ತಮ್ಮಲ್ಲಿ ಪ್ರದರ್ಶಿಸುವ ಕುಟಿಲತೆ ಕ್ರೌರ್ಯಗಳಿಗಿಂತ ಹೆಚ್ಚಿನ ಕ್ರೌರ್ಯವೇನುಂಟು ಈ ಬಯಲಚೇತನಗಳಲ್ಲಿ? ನಮಗಿಂತ ಅವೇ ಸಾವಿರಪಾಲು ವಾಸಿ'10 ಎಂದು ಅಭಿಪ್ರಾಯಪಡುತ್ತಾರೆ. ಈ ಪ್ರಬಂಧದ ಕೊನೆಯ ಪ್ಯಾರ ತುಂಬ ಗಮನಾರ್ಹವಾಗಿದೆ; "ಪ್ರಕೃತ್ಯತೀತವಾದ ರಹಸ್ಯವೊಂದಿರಲಿ, ಅದನ್ನು ಹುಡುಕುವ ಪ್ರವೃತ್ತಿಯೂ ನಮ್ಮಲ್ಲಿರಲಿ ಎಂಬ ಬಯಕೆ ಬಹುಶಃ ನಮ್ಮೆಲ್ಲರಲ್ಲೂ ನೆಟ್ಟುನಿಂತಿದೆ-ಆ ರಹಸ್ಯ ದೈವವಾಗಲಿ, ದೆವ್ವ ವಾಗಲಿ. ನಮ್ಮ ದೇಹದಲ್ಲಿ ನಡೆಯುತ್ತಿರುವ 'ಜೀವ' ಎಂಬ ರಾಸಾಯನಿಕ ಕ್ರಿಯೆ ನಿಂತ ಮೇಲೂ ಏನೋ ಒಂದು ಅಂಶ ಅಳಿಯದೆ ನಿಲ್ಲುತ್ತದೆಂಬ ನಂಬಿಕೆ ನಮಗೆ ಪ್ರಿಯವಾದದ್ದು. ಅಷ್ಟು ಮಾತ್ರವಲ್ಲ: ಆ ಅಂಶ ಉಳಿದಿರಲಿ ಇಲ್ಲದಿರಲಿ, ಅದರ ಭಯದ ಅಮಲಾದರೂ ನಮಗೆ ಪ್ರಿಯವಾದದ್ದು. ಅದರಿಂದ ನಮ್ಮ ಭಾವಜೀವನಕ್ಕೂ ಕಲ್ಪನಾಶಕ್ತಿಗೂ ಪ್ರಚೋದನೆಯುಂಟು. ಪುಷ್ಟಿಯೂ ಉಂಟು".11

---

9 ಅದೇ ಪು. ೫೦

10 ಅದೇ ಪು. ೨೪

11 ಅದೇ, ಪು. ೩೩

ಇನ್ನು 'ಗಾಂಪರೊಡೆಯರ ಸಂಘ–ವಿಧಾನ ಸಭೆಯಲ್ಲಿ' ಪ್ರಬಂಧ ಹಾಸ್ಯಮಯವಾದುದು. ಇದರಲ್ಲಿ ಕಲ್ಪನೆಯೊಂದಿಗೆ ಅನುಭವವೂ, ಭೂತದೊಂದಿಗೆ ವರ್ತಮಾನವೂ ಮಿಲನಗೊಂಡಿವೆ. 'ಗಾಂಪರಕಥೆ' ಪ್ರಾಚೀನವಾದುದು. ಆದರೆ ಅಂಥ ಗ್ಯಾಂಪರು ಎಲ್ಲ ಕಾಲದಲ್ಲೂ ಇರುತ್ತಾರೆ ಎನ್ನುವುದನ್ನು ಈ ಪ್ರಬಂಧ ತೋರಿಸಿಕೊಟ್ಟಿದೆ. ವಿಧಾನಸಭೆಯ ಪ್ರೇಕ್ಷಕಗ್ಯಾಲರಿಯಲ್ಲಿ ನಡೆದ ಘಟನೆ ಹಾಸ್ಯದ ಹೊನಲು ಹರಿಸಿದೆ.

ಒಟ್ಟಿನಲ್ಲಿ "ಆತ್ಮೀಯ ಪ್ರಬಂಧಕಾರರಲ್ಲಿ ಎ. ಎನ್. ಮೂರ್ತಿರಾಯರು ಅಗ್ರೇಸರರಾಗಿದ್ದಾರೆ... ಅವರ ಬರವಣಿಗೆ ಗಾತ್ರದಲ್ಲಿ ಕಡಿಮೆಯಾದರೂ ಆತ್ಮೀಯ ಪ್ರಬಂಧದ ಸಹಜ ಗಂಭೀರ ಸ್ವರೂಪಕ್ಕೆ ಅದರ ಬಹುಭಾಗ ಮಾದರಿಯಾಗಿವೆ. ಅವರಲ್ಲಿ ಜೀವನದ ಸತ್‌ಪ್ರವೃತ್ತಿಗಳಿಂದ ಕಾವ್ಯಶಾಸ್ತ್ರ ವಿನೋದ ದಿಂದ ಪರಿಪಕ್ವಗೊಂಡ ವ್ಯಕ್ತಿತ್ವದ ಗುರುತು ಹೆಜ್ಜೆ ಹೆಜ್ಜೆಗೆ ಮೂಡಿರುತ್ತದೆ"[12] ಅವರ ಪ್ರಬಂಧಗಳ ಅಪಾರ ಯಶಸ್ಸು ಅಡಗಿರುವುದು ಅವರ ಸುಲಲಿತವಾದ ಶೈಲಿಯಲ್ಲಿ. 'ಹಿತಮಿತವಾದ ಬರವಣಿಗೆ' ಎಂಬ ಮಾತು ಮೂರ್ತಿರಾಯರ ಲೇಖನಗಳಿಗೆ ನೂರಕ್ಕೆ ನೂರು ಪಾಲು ಒಪ್ಪುತ್ತದೆ. ಮುತ್ತು ಪೋಣಿಸಿ ದಂತಿರುವ ನಿರ್ಮಲವಾದ ಅವರ ಬರವಣಿಗೆಯಲ್ಲಿ ಎಲ್ಲಿಯೂ ಅನೌಚಿತ್ಯಕ್ಕೆ ಅವಕಾಶವಿಲ್ಲ, ಜಾಳುತನವಿಲ್ಲ, ಅನಾವಶ್ಯಕವಾಗಿ ಲಂಬಿಸುವ ಹವ್ಯಾಸವಿಲ್ಲ. ಶುಚಿ ರುಚಿಯಾದ ಭಾವನೆಗಳನ್ನೂ, ಉತ್ತಮ ತಿಳಿಹಾಸ್ಯ ವನ್ನೂ ಒಳಗೊಂಡಿರುವ ಅವರ ಬರವಣಿಗೆ ಒಳ್ಳೆಯ ಗದ್ಯಕಾವ್ಯವೆಂದೇ ಹೇಳಬಹುದು.

ಬದುಕಿನ ವಿವಿಧ ವ್ಯಾಪಾರಗಳಿಗೆ ಹೃದಯ ಸ್ಪಂದಿಸಿ ಹೊರಹೊಮ್ಮಿರುವ ವೈವಿಧ್ಯಮಯವಾದ ಅವರ ಪ್ರಬಂಧಗಳು ಕಲಾತ್ಮಕ ಆತ್ಮವೃತ್ತಾಂತಗಳಾಗಿವೆ. ಬುದ್ಧಿ ಮತ್ತು ಹೃದಯಗಳ ಬೆಸುಗೆಯೂ, ವಿಚಾರವಂತಿಕೆ ಮತ್ತು ಆತ್ಮೀಯತೆಯ ಗುಣವೂ ಇಲ್ಲಿ ಕಂಡುಬರುತ್ತದೆ. ಔಷಧಿ ಜೇನುತುಪ್ಪದಲ್ಲಿ ಬೆರೆತಂತೆ ಈ ಪ್ರಬಂಧಗಳ ಪರಿಣಾಮವಿದೆ. ವ್ಯಾಪಕವಾದ ಅಧ್ಯಯನ, ದಟ್ಟವಾದ ಅನುಭವ, ಸೂಕ್ಷ್ಮ ಆಲೋಚನಾ ಸಾಮರ್ಥ್ಯ, ಒಳ್ಳೆಯ ವಿಶ್ಲೇಷಣಾ ಶಕ್ತಿ, ಅನನ್ಯವಾದ ಮಾನವೀಯತೆ, ಸೂಕ್ತ ವರ್ಣನ ಕಲೆ ಮತ್ತು ಕಲ್ಪಕತೆಯಿಂದ ಕೂಡಿರುವ ಅವರ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಯಾವತ್ತೂ ಅಳಿಯದ ಆಸ್ತಿ.

'ಗೊರೂರರ ಮಾತಿನಲ್ಲೆ ಹೇಳುವುದಾದರೆ' ಇವರ ಪ್ರಬಂಧಗಳನ್ನು ಓದುತ್ತಿರುವಾಗ ಪುಷ್ಪ ಭರಿತವಾದ ಉದ್ಯಾನವನದಲ್ಲಿ ಪಚ್ಚೆಯ ಹಸಿರು ಹುಲ್ಲಿನ ಮೇಲೆ ನಡೆಯುತ್ತ ಬಗೆ ಬಗೆಯ ಹೂಗಳ ಪರಿಮಳವನ್ನು ಆಘ್ರಾಣಿಸುವ ಮನೋಭಾವ ಉಂಟಾಗುತ್ತದೆ. ಇವರ ಪ್ರಬಂಧಗಳಲ್ಲಿ ಒಂದು ಅಪೂರ್ವ ವಾದ ಅಚ್ಚುಕಟ್ಟುತನ ಸರ್ವಾಂಗ ಸಂಪೂರ್ಣತೆ ಇದೆ.'[13]

---

[12] ರಂ. ಶ್ರೀ ಮುಗಳಿ: ಕನ್ನಡ ಸಾಹಿತ್ಯ ಇತಿಹಾಸ, ಪು. ೨೭೦

[13] ಗೊರೂರು ರಾಮಸ್ವಾಮಿ ಐಯಂಗಾರ್, ಲಘು ಟಿಪ್ಪಣಿ, ಹೊಸಗನ್ನಡ ಪ್ರಬಂಧ ಸಂಕಲನ, ಪು. ೨೬೮

(ಸಂ) ಭೋಜರಾಜ ಪಾಟೀಲ

ನಂಜೇಶ್ವರ ಪಾರಿಜಾತ

ಶ್ಲೋಕ: ತರಳೆ ರನ್ನಾಳೆ ಕೇಳೆ ಮರುಳು ಮಾಡುವರೇನೆ
ಕರವಿಟ್ಟು ಶಿರದ ಮೇಲೆ ಕರ್ಣವ ತುಂಬಿದಾನೆ
ಮರೆದೊರಗಿ ಬೆದರಿ[1]ದಾರೆ[1] [2]ಸ್ಸಿ[2]ರವ ಪಿಡಿದೆತ್ತಿದಾನೆ
ಪರಮಗುರು ನಿತ್ಯನಂದ ಸ್ಥಿರವಾಗಿ ಬಾಳೆಂದನೆ

ಪದ: ಮಾತು ಒಂದನು [3]ಕೇಳಿ[3]ದಾಕ್ಷಣ ಮುಕ್ತಿಯೀಕ್ಷಣ [4]ಭೂಚರ[4] ಲಕ್ಷಣ
ಏತರವನೆಂದು ನೋಡಿರೇ ಶರಣು ಮಾಡಿರೇ ಭವವ್ಪೋಡಿತು ನೀರೇ
ಜಾತಿಯ ನೋಡೆ ಜಂಗಮ [5]ತಾನೇ[5]ಶಂಭು ಈತನೇ ಪ್ರಭುನಾಥನು ತಾನೇ ॥೧॥
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ

ಶ್ಲೋಕ: ಸೋಗೆಗಂಗಳೇ ಕೇಳು ಹೇಗೆ ತಾಳಲೀ ನಾನು
ಮಾಗೀಯ ಕೋಗಿಲಾಗಿ ಕೂಗೀದೆ ತನ್ನ [6]ಬಯಸಿ[6]
ತೂಗು ಮಂಚಾದ ಮೇಲೆ ಈಗ ಕಂಡೇನೇ ಕನಸ
ಮಿಗಿಲಾಗಿ ನಿತ್ಯನಂದ ತೋರೀದ ತನ್ನ ಚಂದ

ಪದ: ಸಂಪಿಗೆ ಗಂಧಿ ಕೇಳೀತನು ಜಗನ್ನಾಥನು ಪ್ರಾಣಕಾಂತನು ತಾನು
ಒಪ್ಪುವ ಕುಚ ಕುಂಭ[7]ವರಿ[7]ದಾವೆ ಮುಂಬರಿದಾವೆ ಮಾರನಂ ಬಗಿರ್ದವೆ
ಕರ್ಪೂರ ರಸಂಗಳ ನೀಡನೇ ಸವಿ ನೋಡನೇ ತಾರ್ಕ್ಯಸಿ ಕೂಡನೇ
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ॥೨॥

ಶ್ಲೋಕ: ಬಿದಿಗೆಯ ಚಂದ್ರ ತಾನೂ ಸದನಕ್ಕೆ ಬಾರನಲ್ಲೇ
ಒದಗಿದ ಪ್ರಾಯವೆಲ್ಲ ವ್ಯರ್ಥವಾಯಿತು ಬಾಲೆ
ಎದೆಬದಿಯ ಮುಟ್ಟಿ ಎನ್ನ ಬಿಗಿದಪ್ಪಿಕೊಳ್ಳನಲ್ಲೆ
ನದರಿಟ್ಟು ನಿತ್ಯನಂದ ತೋರಿದ ತನ್ನ ಚಂದ

ಪದ: ಕಸ್ತೂರಿ ಗಂಧಿ ಈತನ ಚಾಳಿ ಹೇಳುವೆ ಕೇಳಿ ಹೀಗೆ ಮಾ[8]ಡೀದ[8] ದಾಳಿ
ಪ್ರಸ್ತ ವೇಳೆಗೆ ಬಂದು ಕೂಡನೆ ದಯ ಮಾಡನೆ ಕಾರ್ಯವ ನೋಡನೆ

---

1 ದಂತೆ(ಅ) 2 ಕ)ಅ) 3 ಪೇ(ಅ) 4 ೩ 5 ತನು(ಅ) 6 ಭ.ಮಿಸಿ(ಅ) 7 ಬಿಗಿ(ಅ) 8 ಡುವ (ಅ)

ಮಸ್ತೀನ ಹೆಣ್ಣಿಂದು ಆಡುವ ಎನ್ನ ಕಾಡುವ ಜನ ಹರಲೆ ಮಾಡುವ
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ॥೩॥

ಶ್ಲೋಕ: ನೋಡೆ ನಾಯಕಿ ರನ್ನೇ ಬೇಡಿಕೊಂಬುವೆ ನಾನೂ
ಕಾಡಬೇಡವೆಂದರೆ ಮಾಡಿದ ಮೋಡಿಯನ್ನೂ
ನಾಡ ಜನರೆಲ್ಲ ಕೂಡಿ ಆಡಿ ಮಾಡುವದೇನೂ
ಮೃಡ ನಿತ್ಯನಂಜೇಶ್ವರ ತಡೆದನೇತಕೆ ತಾನೂ

ಪದ: ನಂಬೀಗಿ ಕೊಟ್ಟೆನ್ನ ಕರೆಸೀದ ಚಿಂತೆ ಮರೆಸೀದ ಬಾಂಧವರ ತೊರಿಸೀದ
ಕುಂಭಿನಿಯೊಳು ರಟ್ಟೆಗಿಟ್ಟನೆ ಎನ್ನ ಬಿಟ್ಟನೆ ಬಂದು ಮಾಡುವರೇನೆ
ಕೆಂಬಲ್ಲು ತುಟಿಯಲೊತ್ತೀದ ಗಾಯಮಾಡೀದ ನೋಯ ಹೇಳುವರನ್ಯಾಯ
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ॥೪॥

ಶ್ಲೋಕ: ಮಂಜುಳಾಂಗನೆ ಕೇಳು [1][ಮಂಜೀ][1]ರ ಪಿಡಿ[2]ದು ನಿಂದು[2]
ಅಂಜಿಕೆಯ ಕಳಿವೆನೆಂದು [3][ಅಂಜನಿ][3]ಯ ಕೊಟ್ಟಿರ್ದನೆ
ಪಂಜರದೋಲೆಗಳನೂ ರಂ[4]ಬಿ[4]ಸೀ ಕರೆದಿಟ್ಟನೆ
ಕೆಂಜಡೆಯ ನಿತ್ಯನಂದ ಸಂಜೀ[5]ಗೆ ಬಾರನೇನೆ[5]

ಪದ: ತಾಳಲಾರೆನು ತಾಪ ಹೆಚ್ಚೀತೆ ದೇಹ ಬಿಚ್ಚೀತೆ ಮನ ಮೋರ್ಚೆಯಾದೀತೆ
ಬಾಳುವರಿಗೆ ಇದು ನೀತವೆ ಪರಮಾರ್ಥವೆ ಮಾಡೊದಿಂತ ಘಾತವೆ
ನಾಳೆ ನಾಡದು ಎಂದು ತೋರಿದ ಸುಳ್ಳೂರಿದ [6]ಜಾ[6]ಗದೊಳು [7]ಬೆರಿದಾ[7]
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ॥೫॥

ಶ್ಲೋಕ: ಸರಸವಾಡುತ ಬಂದೂ [8]ಸೆರಗನೆ ಪಿಡಿದೆಳೆದನೆ[8]
ನಾರಿ ಬಾರೆಂದು ಕರೆದು, ಗಾರು ಮಾಡುವರೇನೆ
ತರವಲ್ಲವೆಂದು ಹೇಳಿ ಮೊರೆಯಿಟ್ಟು ಸಾರಿದೇನೆ
ದೊರೆ ನಿತ್ಯನಂದೇಶಗೆ ಕರುಣೆಲ್ಲದಿರುವರೇನೇ

ಪದ: ಮೆಚ್ಚಿ ಬಂದವಳೀಗೆ ಮತ್ತಿಷ್ಟು ಮಾಡಿದ ಸಿಟ್ಟು ಪ್ರೀತಿಯಿಂಬದ ಬಿಟ್ಟು
ನೆಚ್ಚಿಕೆ ಒಗೆತನ ಹಾರೀತೆ ಹರಯವೇರಿತೆ ದೇಹ ಸೂರೆಯಾಯಿತೆ
ಪೆಚ್ಚಕ್ಕೆ ಸಾವೀರ [9]ಸೂ[9]ರೇಳೆ ಆರು ನೂರೇಳೆ ಮೈನೆರೆದೆನೀಗಳೆ
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ॥೬॥

ಶ್ಲೋಕ: ಚಿಕ್ಕಂದು ಮೊದಲಾಗಿಯು [10]ಸಿಕ್ಕಿದೆನು ಇವಗೆ[10] ಬಂದು
ನಕ್ಕನಗೆಯಿಂದಲೆನಗೆ ಇಕ್ಕಿದನು ಮೆಚ್ಚು ಮದ್ದು
ಸೊಕ್ಕು ಜವ್ವನವೇರಿತೆ ಗಕ್ಕನೆ ಬಾರನಲ್ಲೇ
ತೆಕ್ಕೆಯೊಳು ನಿತ್ಯನಂದ ಮಿ[11]ಕ್ಕ[11] ಸುಯಿದೋರನಲ್ಲೆ

---

1 ಮುಂಜೂ(ಅ) ಮಂಜೂ(ಆ) 2 ದೆ ನಿಂದು(ಆ) 3 ಅಂಜನಿ(ಅ) ಅಂಜನೆ(ಆ) 4 ಜಿ(ಆ)
5 ವ ದೊರಗು ತಾನೆ (ಆ) 6 ಜ(ಆ) 7 ಬೀರಿದ(ಆ) 8 ಶೀರೆ ಸೆರಗೆತ್ತಿದಾನೆ(ಅ) 9 ಮೂ (ಅ)
10 ಮುಸುಕಿದೆ ಎನಗೆ(ಅ) 11 ಕ್ಕಿ(ಅ)

ಪದ: ಹೆಣ್ಣಿನ ತಾಪವ ಸುಟ್ಟನೆ ಕಣ್ಣಿಟ್ಟನೆ ಸೂರೆ ಮಾಡಿಬಿಟ್ಟನೆ
ಸಣ್ಣ ಹೆಣ್ಣೆಂಬುದನರಿಯರೆ ಬಲ್ಲ ಹಿರಿಯರೆ ಆಚಾರ ಹೇಳುವರೆ
ಹೆಣ್ಣ ಹೆತ್ತವರಿಗೆ ತಿಳಿದೀತೆ ಪ್ರಾಣ ಉಳಿದೀತೆ ಕಾಲ ನಾಶವಾದೀತೆ
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ||೭||

ಶ್ಲೋಕ: ಮೊಲೆಕಟ್ಟು ಸಡಲಿ ಮೂರು ದಿನದೊಳಗೆ ತನ್ನದಾರಿ
ಕಲೆ ಹುಟ್ಟಿ ಕಾಮ ಹೆಚ್ಚಿ ಬಾರನೇ ಹೊಂತಕಾರೀ
ಸಲೆ ಜಾಣ [1]ಸಖಿಯ[1]ನಪ್ಪಿಕೊಳನೆ [2]ಹೊಂತಕಾರೀ[2]
ಮಲಹರ ನಿತ್ಯನಂದ ನೋಡೆ ಮಾಡಿದ ಸೂರಿ

ಪದ: ಮಂದಗಮನಿಯೇಳೇಳೆಂದನೆ ಬಂದು ನಿಂದನೆ ಗಂಧ ಕಸ್ತೂರಿಯು ಪೂ[3]ಸಿದನೆ[3]
ತಂದು ಮಲ್ಲಿಗಿ ಹಾರನಿಟ್ಟನೇ ಮುದ್ದುಕೊಟ್ಟನೇ ಸಂತೋಷಬಟ್ಟನೇ
ಇಂದಿನಿರುಳೆ ಬಂದು ಕೂಡಿದ ಚಕ್ಕಂದಾಡಿದ ಮೋಹವನೆ ಮಾಡಿದ
ಹೇಗೆ ತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ||೮||

ಶ್ಲೋಕ: ಸರಸಿಜ [4]ವದನೆ[4] ಕೇಳು ಸಾಸಿರ ಕಮಲದಲ್ಲಿ
ಸ್ಥಿರವಾಗಿ ನೆಲಸಿದಾನೆ ಪರಿಪರಿಯ ಗಂಧದಲ್ಲಿ
ಮರುಗ ಮಲ್ಲಿಗೆ ಸಂಪಿಗೆ ಉರಿವ ಕರ್ಪೂರದಲ್ಲಿ
[5]ಪರಮ[5] ಗುರು ನಿತ್ಯನಂದ ಸವಿದನಮೃತ[6][ವ][6]ಲ್ಲಿ

ಪದ: ತಂಗಿ [7]ಕೇಳೀತನ[7] ಸಂಗವೆ ಮಹ[8]ಲಿಂ[8]ಗವೆ ಕಾಲನಂಗಭಂಗವೆ
ಹಿಂಗುವುದೀಗಲೆ ಸಿದ್ಧವೆ ಮಹಬದ್ಧವೆ ಕೈಲಾಸ [9]ಸಧ್ಯವೆ[9]
ಮಂಗಳ ಮೂರುತಿ ಈತನೆ ಎನ್ನದಾತನೆ ನಿತ್ಯಾನಂದನು ತಾನೆ
ಹೇಗೆತಾಳಲಿ ಮುಕ್ತಿ ಕಲ್ಯಾಣೀ ಚಿಂತಾಮಣೀ ||೯||

---

1 ಸುಖಿವ(ಅ) 2 ನಕವನೂರಿ(ಅ) 3 ಸನೆ (ಅ) 4ಗಂಧಿ(ಅ) 5 ಹರ(ಆ) 6 ದ (ಅ,ಆ) 7 ಕೆಳೆಲೆತನ್ನ(ಅ)
8 ಅಂ(ಆ) 9 ಸಾ(ಆ)

ಭೀಮರಾವ ಚಿಟಗುಪ್ಪಿ

ತೊರವೆ ರಾಮಾಯಣದ ಸ್ವರೂಪ ಮತ್ತು ವೈಶಿಷ್ಟ್ಯ

ಉಪಲಬ್ಧ ರಾಮಾಯಣಗಳನ್ನು ವಾಲ್ಮೀಕಿ ರಾಮಾಯಣ ಭಕ್ತಿ-ಮತ-ಸಂಪ್ರದಾಯ ವಿಶಿಷ್ಟ ರಾಮಾಯಣ ಎಂದು ಇಬ್ಬಗೆಯಲ್ಲಿ ವಿಂಗಡಿಸಬಹುದು. ಎರಡರಲ್ಲೂ ಕಥಾಶರೀರ ಒಂದೇ. ಆದರೆ ಎರಡನೆಯ ಬಗೆಯ ರಾಮಾಯಣಗಳು–ರಾಮನು ಸಾಮಾನ್ಯನಲ್ಲ, ಸಾಕ್ಷಾತ್ ವಿಷ್ಣು; ಸೀತೆ ಲಕ್ಷ್ಮಿ; ಹನುಮಂತಾದಿಗಳು ವಾಯು ಮೊದಲಾದ ದೇವಾಂಶರು; ಲೋಕ ಕಲ್ಯಾಣಕ್ಕಾಗಿ ಭೂಮಿಯ ಮೇಲೆ ಅವತರಿಸಿದವರು; ರಾಮಭಕ್ತಿ ಮೋಕ್ಷಕ್ಕೆ ಸುಲಭ ಸಾಧನ; ಬ್ರಹ್ಮ ರುದ್ರಾದಿಗಳು ರಾಮನ ಆಧೀನ ವರ್ತಿಗಳು. ಭಕ್ತರು; ರಾಮಾವತಾರದ ಉದ್ದೇಶ ದುಷ್ಟದಮನ (ರಾವಣ ವಧೆ), ಎನ್ನುವತ್ತ ಕೇಂದ್ರೀಕೃತವಾಗಿವೆ. ಈ ಭೂಮಿಕೆಗೆ ಅನುಗುಣವಾಗಿ ಮೂಲ ಅಂದರೆ ವಾಲ್ಮೀಕಿ ರಾಮಾಯಣದ ಕಥೆಯಲ್ಲಿ ಅಲ್ಲಲ್ಲಿ ವ್ಯತ್ಯಾಸಗಳಾಗಿವೆ. ಅದರಲ್ಲಿಲ್ಲದ ಬೇರೆ ಅನೇಕ ವಿಷಯಗಳು ಕಥೋಪಕಥೆಗಳು ಸೇರಿಕೊಂಡಿವೆ. ಅಧ್ಯಾತ್ಮವಾಸಿಷ್ಠಗಳಂಥ ಕೆಲವು ರಾಮಾಯಣಗಳು ತತ್ವ ಪ್ರತಿಪಾದನೆಗೇನೆ ಹುಟ್ಟಿಕೊಂಡಂತಿವೆ. ಕೆಲವು ವಾಲ್ಮೀಕಿ ಕೃತವೆಂದೇ ಉಕ್ತವಾಗಿವೆ.

ಆಧುನಿಕ ಅನ್ವೇಷಕರ ಅಭಿಪ್ರಾಯದಲ್ಲಿ ಇವೆಲ್ಲ ಅನ್ಯಕೃತ. ಭಕ್ತಿ-ಮತ-ಸಂಪ್ರದಾಯಗಳ ಹುಟ್ಟಿಗೆಯೊಂದಿಗೆ ಅವುಗಳಿಗೆ ಅನುಗುಣವಾಗಿ ರಚಿತವಾದವುಗಳು. ಸಂಪ್ರದಾಯನಿಷ್ಠ ಭಾವಿಕರ ಅಭಿಪ್ರಾಯ ಇಂತಿಲ್ಲ. ಅವರ ಅಭಿಪ್ರಾಯದಲ್ಲಿ ಎಲ್ಲವೂ ವಾಲ್ಮೀಕಿ ಪ್ರೋಕ್ತ. ಶತಕೋಟಿ ರಾಮಾಯಣವೆಂದು ಪ್ರಸಿದ್ಧವಿದ್ದ ವಾಲ್ಮೀಕಿಕೃತ ಮೂಲ ಅಥವಾ ಮಹಾರಾಮಾಯಣವು ೩೨ ಅಕ್ಷರಗಳ ೧೦೦ ಕೋಟಿ ಶ್ಲೋಕಗಳಿಂದ ಕೂಡಿದ್ದಿತು. ಸದ್ಯ ಪ್ರಚಾರದಲ್ಲಿರುವ ವಾಲ್ಮೀಕಿ ರಾಮಾಯಣಕ್ಕೂ ಇತರ ರಾಮಾಯಣಗಳಿಗೂ ಶಾಸ್ತ್ರ ಪುರಾಣಾದಿಗಳಿಗೂ ಅದೇ ಮೂಲಸ್ರೋತ; ಸದ್ಯ ಪ್ರಚಾರದಲ್ಲಿರುವ ವಾಲ್ಮೀಕಿ ರಾಮಾಯಣಕ್ಕೂ ಇತರ ರಾಮಾಯಣಗಳಿಗೂ ಕಂಡುಬರುವ ವ್ಯತ್ಯಾಸ ವೈಶಿಷ್ಟ್ಯಗಳಿಗೆ ಮೂಲದಿಂದ ಅವುಗಳನ್ನು ಸಂಗ್ರಹಿಸಿದ ಬಗೆಯೇ ಮುಖ್ಯ ಕಾರಣ, ಎಂದು ಅವರು ಬಗೆದಿರುವರು[1].

ತೊರವೆ ರಾಮಾಯಣದ ಕರ್ತ ಕುಮಾರ ವಾಲ್ಮೀಕಿ ಇಂಥವ. ಅವನ ಕೃತಿ ಇಂಥವುಗಳಲ್ಲಿ ಒಂದು. ವಿಜಾಪುರ ಜಿಲ್ಲೆಯಲ್ಲಿರುವ ಸುಪ್ರಸಿದ್ಧ ತೊರವೆ ನರಸಿಂಹಸ್ವಾಮಿಯ ಅಂಕಿತದಲ್ಲಿ ರಚಿಸಿರುವದ

---

1 ಶತಕೋಟಿ ರಾಮಾಯಣದ ವಿವರಗಳು ವಾಲ್ಮೀಕಿಕೃತವೆಂದು ಉಕ್ತವಾದ ಆನಂದ ರಾಮಾಯಣದಲ್ಲಿ ದೊರೆಯುತ್ತವೆ (ಯಾತ್ರಾ ಕಾಂಡ, ಸರ್ಗ–1). ಪ್ರಮಾಣ ಗ್ರಂಥವೆಂದು ದ್ವೈತ (ಜೀವೇಶ್ವರ ಭೇದ) ಸಿದ್ಧಾಂತ ಪ್ರವರ್ತಕರಾದ ಶ್ರೀ ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಅದರ ಉಲ್ಲೇಖವಿದೆ. ಪ್ರಮಾಣಭೂತವಿದ್ದರೂ ಅದೊಂದು ಅನುಪಲಬ್ಧ ಗ್ರಂಥ, ಭಗವದನುಗ್ರಹದಿಂದ ಅದರಲ್ಲಿಯ ವಿಷಯಗಳು ತಮಗೆ ಗೋಚರವಾದವು, ಎಂದಿರುವರು ಅವರು (ಭಾ.ತಾ.ನಿ. 130, 23ರಿಂದ 6). ಆಚಾರ್ಯರ ಈ ಗ್ರಂಥವು ಪ್ರಾಮುಖ್ಯವಾಗಿ ಭಾರತಕ್ಕೆ ಸಂಬಂಧಿಸಿದ್ದರೂ ಪ್ರಾರಂಭದ ಏಳು (3–9) ಅಧ್ಯಾಯಗಳಲ್ಲಿ ರಾಮಾಯಣವನ್ನು ಸಂಗ್ರಹಿಸಿ ನಿರೂಪಿಸಿರುವರು.

ರಿಂದ ಅದು ತೊರವೆ ರಾಮಾಯಣವೆಂದು ಪ್ರಸಿದ್ಧವಾಗಿದೆ. ಕುಮಾರ ವಾಲ್ಮೀಕಿ ಎಂಬುದು ಅವನ ಕಾವ್ಯನಾಮ. ನಿಜನಾಮ ನರಹರಿ. ಕಾಲ-ಕ್ರಿ.ಸು. ೧೫೮೦. ಮಾಧ್ವ ವೈಷ್ಣವ ಬ್ರಾಹ್ಮಣ. ಗ್ರಂಥಾವತಾರ ದಲ್ಲಿ ಮಾಧ್ವರಿಗೆ ಅತ್ಯಂತ ಪೂಜ್ಯರಾದ ವಾಯು ಭಾರತಿಯರನ್ನೂ ಗುರುಗಳೆಂದು ಮಧ್ವಾಚಾರ್ಯ ರನ್ನೂ ಸ್ತುತಿಸಿರುವನು. ಮಧ್ವ ಸಿದ್ಧಾಂತಕ್ಕೆ ಅನುಗುಣವಾಗಿ ಕಥೆಯನ್ನು ಮುಂದುವರಿಸಿರುವನು. ತನ್ನ ಕೃತಿಯು–

ಪಿನಾಕಧರ ಸತಿಗೆ ವಿಸ್ತರಿಸಿ ಪೇಳಿದ ಧರೆಯೊಳ–
ಗ್ಗದ ರಾಘವೇಂದ್ರನ ಶತಕೋಟಿ ವರಮಹಾ ಚಾರಿತ್ರ,
ಸಿರಿಹರಿ ಭಕುತರುಮ್ಮಹದಚ್ಚು, ಶಿವಸೇವಕರ ಮೆಚ್ಚು,
ಪರಮ ಭಕ್ತಿಯಲಿ ಅದರ ಒಂದಕ್ಷರವ ಪೇಳ್ದ ನರಂಗೆ
ಪಾತಕ ಹರೆವುದು, ಸೀತಾಪತಿಯ ಸಿರಿನಾಮ ಶಿವನ
ನಚ್ಚಿನ ನಾಮ, ಗಿರಿಸಂಭವೆಯ ನೇಮದ ನಾಮ,
ಸರಸಿರುಹ ಸಂಭವನ ಮಾತು, ಸುರ ಮುನಿಪನ ಅನುಭವದ
ವಿಶ್ರುತ ವಾಕ್ಯ, ಇಕ್ಷ್ವಾಕು ಕುಲ ಸಂಭೂತ ಕುಶಲವರಿಗೆ
ಪೇಳ್ದ ವಾಲ್ಮೀಕಿ ಮುನಿವರನ ಕಾವ್ಯಾಮೃತಾರ್ಣವ...

ಎಂದು ಅದರ ಸ್ವರೂಪ, ಮೇಲ್ಮೆ, ಮಹತಿಗಳನ್ನು ಬಣ್ಣಿಸಿರುವನು.

ತೊರವೆ ರಾಮಾಯಣದ ಚೌಕಟ್ಟು

ತೊರವೆ ರಾಮಾಯಣದ ಕಥೆ ವಾಲ್ಮೀಕಿ ರಾಮಾಯಣದ್ದು, ಆದರೆ ಅದರ ಚೌಕಟ್ಟು ಅಧ್ಯಾತ್ಮ ರಾಮಾಯಣದ್ದು, ಎಂಬ ಮಾತಿದ್ದರೂ[1] ಕುಮಾರ ವಾಲ್ಮೀಕಿಯು ತನ್ನ ಕೃತಿಯ ವಿಷಯದಲ್ಲಿ ಹೇಳಿಕೊಂಡಿರುವ ಎಲ್ಲ ಅಂಶಗಳು ಅದರಲ್ಲಿಲ್ಲ. ಆನಂದ ರಾಮಾಯಣದಲ್ಲಿವೆ. ಅದೇ ಅದರ ಚೌಕಟ್ಟೆಂದು ಧಾರಾಳವಾಗಿ ಹೇಳಬಹುದು. ಅಧ್ಯಾತ್ಮ ರಾಮಾಯಣದಲ್ಲಿಯವೆಂದು ಎತ್ತಿ ತೋರಿಸಿದ ತೊರವೆ ರಾಮಾಯಣದಲ್ಲಿಯ ಕೆಲವು ಸಂದರ್ಭಗಳಾದರೂ ಅದರಲ್ಲಿ ಕಾಣಸಿಗುವವು. ಅಧ್ಯಾತ್ಮ ರಾಮಾಯಣವು ತತ್ವ ಪ್ರತಿಪಾದಕ ಗ್ರಂಥ. ಉಮಾ ಮಹೇಶ್ವರ ಸಂವಾದ. ವಾಲ್ಮೀಕಿ ಕೃತ ಶತಕೋಟಿ ರಾಮಾಯಣದ ಪ್ರಸ್ತಾಪ ಅದರಲ್ಲಿಲ್ಲ. ಕುಮಾರ ವಾಲ್ಮೀಕಿಯೆಂಬ ಕವಿಯ ಕಾವ್ಯನಾಮಕ್ಕೆ ಸಾರ್ಥಕವಾಗುವಷ್ಟು ವಾಲ್ಮೀಕಿಯ ಪಾತ್ರ ಅದರಲ್ಲಿ ಚಿತ್ರಿತವಾಗಿಲ್ಲ. ಆನಂದ ರಾಮಾಯಣ ಇಂತಿಲ್ಲ. ಅದು ಕಥಾಪ್ರಧಾನ. ವಾಲ್ಮೀಕಿ ಕೃತ ಶತಕೋಟಿ ರಾಮಾಯಣಾಂತರ್ಗತ ಎಂದು ಉಕ್ತವಾಗಿದೆ. ವಾಲ್ಮೀಕಿಯ ಪಾತ್ರ ಅದರಲ್ಲಿ ಸಾಕಷ್ಟು ವಿಸ್ತಾರವಾಗಿ ಬಂದಿದೆ. ಒಂಬತ್ತು ಕಾಂಡಗಳಿವೆ. ರಾಮಕಥೆಯು ಉಮಾ ಮಹೇಶ್ವರ ಸಂವಾದದಿಂದ ತೊಡಗುವ ಪ್ರಾರಂಭದ ಸಾರಕಾಂಡದಲ್ಲಿ ಬಂದಿದೆ. ನಂತರದ ಕಾಂಡಗಳಲ್ಲಿ ರಾಮಕಥೆಗೆ ಸಂಬಂಧಿಸಿದ ಅನ್ಯ ವಿಷಯಗಳಿವೆ. ಅವು ರಾಮದಾಸ ವಿಷ್ಣುದಾಸರೆಂಬ ರಾಮಭಕ್ತರ ಉಪಸಂವಾದದಲ್ಲಿ ಮುಂದರಿದಿವೆ.

ವಾಲ್ಮೀಕಿ ಕೃತ ಎಂದಿದ್ದರೂ ಸಂಶೋಧಕರ ದೃಷ್ಟಿಯಲ್ಲಿ ಆನಂದ ರಾಮಾಯಣವು ಅನ್ಯಕೃತ. ಅರ್ವಾಚೀನ. ಅನೇಕ ವಿಸಂಗತಿಗಳಿಂದ ಕೂಡಿದ ಅತಏವ ವಿಶ್ವಾಸಕ್ಕೆ ಅನರ್ಹವಾದ ಗ್ರಂಥ. ಶತಕೋಟಿ ರಾಮಾಯಣವೆಂಬುದು ಕಾಲ್ಪನಿಕ ಗ್ರಂಥ. ಭಾವುಕರಿಗೆ ಇದು ಅಮುಖ್ಯ. ಇಂದು ಕೂಡ ಪ್ರಾಸಾದಿತ ವೆಂದು ಸರ್ವತ್ರ ಪ್ರಚಾರದಲ್ಲಿರುವ ರಾಮರಕ್ಷಾಸ್ತೋತ್ರವು ಅದರಲ್ಲಿಯದು. ತೊರವೆ ರಾಮಾಯಣ ದಲ್ಲಿಯ ಉಪರೋಕ್ತ 'ಧರೆಯೊಳಗ್ಗದ ರಾಘವೇಂದ್ರನ ಶತಕೋಟಿ ಪ್ರವಿಸ್ತರ ವರಮಹಾ ಚಾರಿತ್ರ; ಅದರ ಒಂದಕ್ಷರವ ಪೇಳ್ದ ನರಂಗೆ ಪಾತಕ ಹರೆವುದು' ಉಕ್ತಿಗಳು ಆ ಸ್ತೋತ್ರದಲ್ಲಿಯ

---

1. ತೊ.ರಾ., ಸಂ. 1, ಮು. 11.

‘ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಂ, ಏಕೈಕಮಕ್ಷರಂ ಪುಂಸಾಂ ಮಹಾಪಾತಕ ನಾಶನಂ” ಉಕ್ತಿಗಳ ಅನುವಾದವಾಗಿವೆ. ರಾಮನವಮಿ ನವರಾತ್ರಿ (ಚೈತ್ರ ಶು. ೧-೯) ಉತ್ಸವದಲ್ಲಿ ಸಮಗ್ರ ಭಾರತದಲ್ಲಿ ದಿನರಾತ್ರಿ ದುಮುದುಮಿಸುತ್ತಿರುವ “ಶ್ರೀರಾಮ ಜಯ ರಾಮ ಜಯ ಜಯ ರಾಮ’ ತ್ರಯೋದಶಾಕ್ಷರಿ ಮಹಾಮಂತ್ರವು ಆನಂದ ರಾಮಾಯಣದಲ್ಲಿಯದು. ಶಿವನ ನಚ್ಚಿನ ನಾಮವೆಂಬುದು ವಿಷ್ಣುವು ವಾಲ್ಮೀಕಿಯ ೧೦೦ ಕೋಟಿ ಶ್ಲೋಕಗಳನ್ನು ಸ್ವರ್ಗ, ಮರ್ತ್ಯ, ಪಾತಾಳಗಳಿಗೆ ಹಂಚಿದಾಗ ಶಿವನು ತನಗಾಗಿ ವಿಷ್ಣುವಿನಿಂದ ಬೇಡಿ ತೆಗೆದುಕೊಂಡ ‘ರಾಮ’ ಎಂಬ ಹೆಚ್ಚಿಗೆ ಉಳಿದ ಎರಡು ಅಕ್ಷರಗಳು ತಾರಕ ಮಂತ್ರವೆಂದು ಪ್ರಸಿದ್ಧವಿರುವ ಈ ನಾಮವನ್ನು ಶಿವನು ಕಾಶಿಯಲ್ಲಿ ಮರಣ ಹೊಂದುವವರಿಗೆ ಕೊನೆಗಾಲದಲ್ಲಿ ಅವರ ಕಿವಿಯಲ್ಲಿ ಉಪದೇಶಿಸುವನು ಎಂದಿದೆ ಅದರಲ್ಲಿ. “ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು ಪಾಮರರು ತಾವೇನು ಬಲ್ಲರು... ಸಿರಿ ಕಾಶಿಯೊಳಗಿಪ್ಪ ಶಿವನು ತಾ ಬಲ್ಲ” ಎಂದು ಪುರಂದರದಾಸರು “ಶಿವನ ನಚ್ಚಿನನಾಮದ ಮಹಿಮೆಯನ್ನು ಹಾಡಿರುವರು ತಮ್ಮದೊಂದು ಕೃತಿಯಲ್ಲಿ.

ಆನಂದ ರಾಮಾಯಣದಲ್ಲಿಯ ಕಥೋಪಕಥೆಗಳ ಲೋಕಪ್ರಿಯತೆಗೆ ಇದಿನ್ನೊಂದು ಉದಾಹರಣೆ ಲಂಕಾದಹನ ಸಂದರ್ಭದಲ್ಲಿದೆ. ಹಾಸ್ಯೋತ್ಪಾದಕ ಸನ್ನಿವೇಶ. ರಾವಣನ ಅಪ್ಪಣೆಯ ಮೇರೆಗೆ ರಾಕ್ಷಸರು ಹನುಮಂತನ ಬಾಲಕ್ಕೆ ಬಟ್ಟೆಗಳನ್ನು ಸುತ್ತಿ ಬೆಂಕಿ ಹಚ್ಚಲು ಯತ್ನಿಸುವರು. ಏನು ಮಾಡಿದರೂ ಬೆಂಕಿ ಹತ್ತುವುದಿಲ್ಲ. ರಾವಣನೇ ಬಂದು ಹಚ್ಚಿದಾಗ ಭುಗಿಲ್ಲೆಂದು ಉರಿ ಎದ್ದು ಅವನ ಗಡ್ಡ ಮೀಸೆಗಳು ಸುಡುವವು. ತನ್ನ ೨೦ ಕೈಗಳಿಂದ ಆತ ಅವನ್ನು ಪಟಪಟ ಬಡಿದುಕೊಳ್ಳುತ್ತ ಅತ್ತಿತ್ತ ಜಿಗಿದಾಡುವನು. ಕೂಡಿದವರು ನಗೆಗೆ ಈಡಾಗುವರು[1]. ಕನ್ನಡ ಜಾನಪದ ಕವಿಯೊಬ್ಬನು ಈ ಸನ್ನಿವೇಶವನ್ನು–

ಮಾಳೀಗಿ ಮನೆಸುಟ್ಟು ಅಂಗಂಗಡೀ ಸುಟ್ಟು।
ಅಂಬಕೆ ರಾವಣನ ಎಳೆಮೀಸೆ ಗಡ್ಡಗಳ ಸುಟ್ಟು।
ಬಂದು ರಾಮರಿಗೆ ಶರಣೆಂದ॥[2]

ಎಂದು ತುಸು ಮಾರ್ಪಡಿಸಿ ಹಾಡಿರುವನು. ತೊರವೆ ರಾಮಾಯಣದಲ್ಲಿ ಬೆಂಕಿಯ ಜಳ ಹೆಚ್ಚಾಗಲು ರಾವಣನು ಹನುಮಂತನನ್ನು ಶಿಕ್ಷಿಸಲು ಮುನ್ನುಗ್ಗಿ ಬರುವನು. ಹನುಮಂತ ಅವನ ಮುಖಕ್ಕೆ ಉರಿಯುತ್ತಿದ್ದ ಬಾಲವನ್ನು ಚಾಚುವನು. ರಾವಣನು ಬೆದರಿ ‘ಗಡ್ಡವನುದುರಿಸುತ’ ಗಗನಕ್ಕೆ ಹಾರುವನು.[3] ಲಕ್ಷ್ಮಣನ ತಾಯಿ ಸುಮಿತ್ರೆ ಮಗಧರಾಜ ಪುತ್ರಿ ಎಂಬುದು ಆನಂದ ರಾಮಾಯಣ ತೊರವೆ ರಾಮಾಯಣ ಎರಡರಲ್ಲಿ ಮಾತ್ರ ಕಾಣಸಿಗುವುದು.[4] ಮಂಥರೆ ದುಷ್ಟೆ, ಕುಟಿಲೆ, ಎಂಬುದು ಸರ್ವೇಸಾಮಾನ್ಯ. ವಾಲ್ಮೀಕಿ ಅವಳನ್ನು ‘ಜ್ಞಾತಿದಾಸಿ’ ಎಂದಿರುವನು. ಆನಂದ ರಾಮಾಯಣದಲ್ಲಿ ಅವಳು ದುಂದುಭಿ ಎಂಬ ಗಂಧರ್ವೆ. ವಿಷ್ಣುವಿನ ಆದೇಶಾನುಸಾರ ದೇವತೆಗಳು ನರ ವಾನರ ಋಕ್ಷ(ಕರಡಿ)ರಾಗಿ ಭೂಲೋಕದಲ್ಲಿ ಜನಿಸಿದಾಗ ಅವರೊಂದಿಗೆ ಅವಳು ಮಂಥರೆಯಾಗಿ ಜನಿಸುವಳು. ರಾಮನನ್ನು ವನವಾಸಕ್ಕೆ ಅಟ್ಟುವುದು ವಿಷ್ಣು ಅವಳಿಗೆ ವಹಿಸಿಕೊಟ್ಟ ಕಾರ್ಯ. ಕರ್ತವ್ಯವೆಂದು ಅವಳು ಅದನ್ನು ನಿರ್ವಹಿಸುವಳು[5] ತೊರವೆ ರಾಮಾಯಣದಲ್ಲಿ ಮಂಥರೆಯು ಮಾಯೆಯ ‘ಅವತಾರವೆಂದು ಉಕ್ತಳಾಗಿರುವಳು. ಈ ಮಾಯೆ ಯಾರೊ ತಿಳಿಯದು. ಆದರೂ ರಾಮನ ಯುವರಾಜಾಭಿಷೇಕ ವಾರ್ತೆಯನ್ನು ಮಂಥರೆಯು ಕೇಳಿದಾಗ ಬಂದಿರುವ–

---

1 ಆ.ರಾ., ಸಾರ ಕಾಂ. 9/197ರಿಂದ 199

2 ಕರ್ಣಾಟಕ ಸಂಸ್ಕೃತಿ (ಎಚ್. ತಿಪ್ಪೇರುದ್ರಸ್ವಾಮಿ)ಯಲ್ಲಿ ಉದ್ಧೃತ.

3 ತೊ.ರಾ., ಸು.ಕಾಂ.8/35.

4 ಆ.ರಾ., ಸಾರ ಕಾಂ.1/70, ತೊ.ರಾ., ಬಾ.ಕಾಂ.3/17 ಮತ್ತು ಇತರತ್ರ.

5 ಆ.ರಾ., ಸಾರ ಕಾಂ. 2/2.

ಭೂರಿ ಭಾವದ ನಿಶಾಚರ
ವೀರಕುಲ ವಿಚ್ಛೇದನಕೆ ಲ
ಕ್ಷ್ಮೀರಮಣನುದಿಸಿದನಲ್ಲೆ ರಾಮಾಭಿಧಾನದಲಿ।
ಆ ರಮಾಪತಿಯಾಜ್ಞೆಗಾವುದು
ದಾರಿಯೆಂದಾ ಮಾಯೆ ವಿಜ್ಞಾ-
ಸಾರ ಮುಖದಿಂದಜಿಂದಳಾಗತ ಕಾರ್ಯ ಕೌಶಲವ॥ (ಅ.ಕಾಂ. ೧-೨೨)

ಈ ಪದ್ಯದಿಂದ ಅವಳು ಆನಂದ ರಾಮಾಯಣದ ದುಂದುಭಿ. ಇಲ್ಲಿ ಮಾಯೆ ಎಂದು ಉಕ್ತಳಾಗಿರುವಳು ಎಂಬುದು ಹೊಳೆಯದಿರದು[1].

ಪಟ್ಟಾಭಿಷೇಕದ ನಂತರ ಹನುಮಂತನ ಸೇವೆಗೆ ಮಾರುಹೋದ ಶ್ರೀರಾಮನು ಅವನಿಗಿತ್ತ ಭಕ್ತರಿಗೆ ಸರ್ವಶ್ರೇಷ್ಠವೆಂದು ಗಣಿಸಲಾದ 'ಸಹಭೋಜನ' ಸನ್ನಿವೇಶವು ಆನಂದ ರಾಮಾಯಣದ ಇನ್ನೊಂದು ವೈಶಿಷ್ಟ್ಯ. ಭೋಜನವನ್ನು ಮುಗಿಸಿ ರಾಮನು ಆಪೋಶನವನ್ನು ತೆಗೆದುಕೊಂಡಾಕ್ಷಣ ಕರೆದರೂ ಭೋಜನಕ್ಕೆ ಕೂಡದೆ ಭಕ್ತಿಯಿಂದ ಎದುರಿಗೆ ಕೈಜೋಡಿಸಿ ನಿಂತಿದ್ದ ಹನುಮಂತನು ಆ ತಟ್ಟೆಯನ್ನು ತೆಗೆದುಕೊಂಡು ಆಕಾಶಕ್ಕೆ ಹಾರುವನು. ಶೇಷಪ್ರಸಾದವೆಂದು ಅದರಲ್ಲಿ ಉಳಿದಿದ್ದ ಪದಾರ್ಥಗಳನ್ನು ಅವನೂ ಇತರ ದೇವತೆಗಳೂ ಭಕ್ತಿಯಿಂದ ಸ್ವೀಕರಿಸುವರು. ಹನುಮಂತನನ್ನು ಮನಸಾರೆ ಶ್ಲಾಘಿಸುವರು[2]. ತೊರವೆ ರಾಮಾಯಣದಲ್ಲಿ ಈ ಸನ್ನಿವೇಶವು ೨೧ ಪದ್ಯಗಳಲ್ಲಿ ವಿಸ್ತೃತವಾಗಿ ವರ್ಣಿತವಾಗಿದೆ[3]. ಪುರಂದರದಾಸರು ತಮ್ಮದೊಂದು ಕೃತಿಯಲ್ಲಿ–

ಒಡೆಯ ಉಣಕರೆಯಲಂದಡಿಗಡಿಗೆ ಕೈಮುಗಿದು
ದೃಢ ಭಕುತಿಯಿಂದ ಮೌನದಲಿ ಕುಳಿತು।
ಎಡೆಯ ಕೊಂಡೆದ್ದೋಡಿ ಗಗನದಲಿ ಸುರರಿಗೆ
ಕೊಡುತ ಸವಿದುಂಡ ಗುಣವಂತ ಹನುಮಂತ॥

---

1 ಮಧ್ವ ಸಂಪ್ರದಾಯದಲ್ಲಿ ಮಾಯೆಯೆಂದರೆ ಯೋಗಮಾಯೆ. ವಿಷ್ಣು ಪರಮಾತ್ಮನ ಇಚ್ಛಾಶಕ್ತಿಯ ಪ್ರತೀಕ. ಶ್ರೀಕೃಷ್ಣನು ಜನಿಸಿದಾಗ ವಸುದೇವನು ಪರಮಾತ್ಮನ ಆದೇಶಾನುಸಾರ ಆ ಮಗುವನ್ನು ಯಶೋದೆಯ ಬಳಿ ಸಾಗಿಸಿ ಯಶೋದೆಯು ಆಗ ತಾನೆ ಹೆತ್ತ ಮಾಯೆಯನ್ನು ದೇವಕಿ ಬಳಿ ತಂದಿರಿಸುವನು. ಹೆಣ್ಣಿದ್ದರೂ ವಿಷ್ಣುವಿನ ಮೋಸ ತಿಳಿಯದೆಂದು ಕಂಸ ಆ ಮಗುವನ್ನು ಕಲ್ಲಿಗೆ ಅಪ್ಪಳಿಸಲು ಮೇಲಕ್ಕೆತ್ತಿದಾಗ ಅದು ಅವನಿಂದ ಕೊಸರಿಕೊಂಡು ಆಕಾಶಕ್ಕೆ ಹಾರಿ ನಿಜರೂಪವನ್ನು ತಾಳಿ ಕಂಸನಿಗೆ–ಎಲೊ, ನಾನು ಮಾಯೆ. ನಿನ್ನನ್ನು ಕೊಲ್ಲುವವ ಈಗಾಗಲೆ ಬೇರೆಡೆ ಹುಟ್ಟಿರುವನು, ಎಂದು ಕಂಸನ ಮನದಲ್ಲಿ ಭಯದ ಬೀಜವನ್ನು ಬಿತ್ತಿ ಅದೃಶ್ಯಳಾಗುವಳು. ಕೃಷ್ಣಾವತಾರದ ಉದ್ದೇಶ ಭೂಭಾರಹರಣ. ಅದಕ್ಕೆ ಮಾಯೆಯ ಈ ಮಾತೇ ನಾಂದಿ. ರಾಮಾವತಾರದ ಉದ್ದೇಶ ರಾವಣವಧೆ. ಅದರ ಪೂರ್ತಿಗೆ ಮಂಥರೆಯ ಕೃತಿಯೇ ನಾಂದಿ ಎಂಬುದು ಪ್ರಸಿದ್ಧವಿದೆ. ಬಹುಶಃ ಈ ಅಂಶವನ್ನು ನೆನೆದು ಕುಮಾರ ವಾಲ್ಮೀಕಿಯು ಮಂಥರೆಯನ್ನು ಮಾಯೆಯ ಅವತಾರ ಎಂದಿರುವದಾದರೂ ಅಸಂಭವವಿಲ್ಲ. ಮಧ್ವಾಚಾರ್ಯರು ಮಂಥರೆ ಮೂಲದಲ್ಲಿ ಅಲಕ್ಷ್ಮಿ, ಕಲಿಪತ್ನಿ, ಸಮುದ್ರ ಮಂಥನದಲ್ಲಿ ಅಪ್ಸರೆಯಾಗಿ ಹುಟ್ಟಿದ್ದಳು, ನಂತರ ಮಂಥರೆಯಾಗಿ ಹುಟ್ಟಿದಳು, ಎಂದಿರುವರು. (ಭಾ. ತಾ.ನಿ. 5–12).

2. ಆ.ರಾ., ಸಾರ ಕಾಂ. 12/152ರಿಂದ 154

3. ತೊ.ರಾ., ಯು. ಕಾಂ. 55/30ರಿಂದ 51

ಎಂದು ಈ ಸನ್ನಿವೇಶವನ್ನು ನೆನೆದು ಹನುಮಂತನನ್ನು ಸ್ತುತಿಸಿರುವರು. ತಿಪ್ಪಣಾರ್ಯಕೃತ (ಬಾದ್ರಿನ ಸಿಂಹ ಮುದ್ರಿಕೆ) ಯಕ್ಷಗಾನ ಹನುಮದ್ವಿಲಾಸದಲ್ಲೂ–

ಕರುಣಾಳು ಭೋಜನಗೈವ ಕಾಲದಲಿ।
ಹರಿಯ ನೈವೇದ್ಯ ಪಾತ್ರೆಯನು ಸಂಗ್ರಹಿಸಿ।
ಪರಿದೋಡಿ ಗಗನ ಗಂಗಾ ತೀರದಲಿ।
ಅಜ ಮುಖ್ಯರಿಂದೊಡಗೂಡಿ ಆರೋಗಣೆಯನು।
ನಿಜಮಾಗಿಗೈದನೀ ನಿಪುಣಾಗ್ರಗಣ್ಯ॥

ಎಂದು ಈ ಮಾತು ಬಂದಿದೆ.

ಆನಂದ ರಾಮಾಯಣವು ತೊರವೆ ರಾಮಾಯಣದ ಚೌಕಟ್ಟಿನಲ್ಲಿ ಒಡೆದು ಕಾಣುವ ಇವಿಷ್ಟು ಉದಾಹರಣೆಗಳು ಸಾಕೆನಿಸುವವು. ಆದರೂ ಅದರಲ್ಲಿಯ ರಾಮಕಥೆಯು ಸಾರರೂಪದಲ್ಲಿ ಇರುವುದರಿಂದ ಕಥಾವಿಸ್ತಾರಕ್ಕಾಗಿ ವರ್ಣನೆಗಳಿಗಾಗಿ ಕುಮಾರ ವಾಲ್ಮೀಕಿಯು ಪ್ರಚಲಿತ ವಾಲ್ಮೀಕಿ ಮತ್ತು ಅನ್ಯ ರಾಮಾಯಣಗಳ, ಇತರತ್ರ ಲಭ್ಯವಿರುವ ರಾಮಕಥೆಗಳ ಮತ್ತು ಸಂಸ್ಕೃತ ಕಾವ್ಯ ಸುಭಾಷಿತಗಳ ನೆರವು ಪಡೆದಿರುವನು. ತನ್ನ ಪ್ರತಿಭೆ ಕವಿತಾಶಕ್ತಿಗಳ ಮೆರುಗಿನೊಂದಿಗೆ ಕನ್ನಡಕ್ಕೊಂದು ಸರಳ ಸುಂದರ ಕಾವ್ಯವನ್ನು ಒದಗಿಸಿರುವನು. ಸಂಸ್ಕೃತ ಕಾವ್ಯ ಸುಭಾಷಿತಗಳ ವಿಷಯದಲ್ಲಿ ಇವೆರಡು ಉದಾಹರಣೆಗಳು

೧ ಶೈಶವೇಽಭ್ಯಸ್ತ ವಿದ್ಯಾನಾಂ ಯೌವನೇ ವಿಷಯೈಷಿಣಾಂ।
ವಾರ್ಧಕೇ ಮುನಿ ವೃತ್ತೀನಾಂ ಯೋಗೇನಾಂತೇ ತನುತ್ಯಜಾಂ॥

(ಇಕ್ಷ್ವಾಕುವಂಶ ವರ್ಣನೆ, ರಘುವಂಶ, ೧–೮)

ಶಿಶುತನದಲಿ ಸಮಸ್ತ ವಿದ್ಯಾ'
ವ್ಯಸನಿಗಳು ಯೌವನದೊಳನುಭವ
ವಿಷಯಿಗಳು ಮುಪ್ಪಿನಲಿ ಮುನಿ ಮಾರ್ಗಾನುವರ್ತಿಗಳು।
ಅಸು ಪರಿತ್ಯಾಗದಲಿ ಯೋಗದ
ಬೆಸುಗೆಗಳನುಳ್ಳವರು ಕೇಳೈ
ಕುಶನೆ ನಿಮ್ಮನ್ವಯದ ರಾಯರು ಲವನೆ ಕೇಳೆಂದಾ॥

(ಅದೆ, ತೊ.ರಾ., ಬಾ.ಕಾಂ. 3–19).

2. ಕಾರ್ಯೇಷು ಮಂತ್ರೀ ಕರಣೇಷು ದಾಸೀ
ಭೋಜ್ಯೇಷು ಮಾತಾ ಶಯನೇಷು ರಂಭಾ।
ಧರ್ಮಾನುಕೂಲಾ ಕ್ಷಮಯಾ ಧರಿತ್ರೀ
ಭಾರ್ಯಾಚ ಷಾಡ್ಗುಣ್ಯವತೀಹ ದುರ್ಲಭಾ॥ (ಸುಭಾಷಿತ)

ಸೇವೆಯಲಿ ತೊತ್ತಾಗಿಯಿಹೆ ವಿ-
ಜ್ಞಾವಿಶೇಷಕೆ ಮಂತ್ರಿಯಾಗಿಹೆ
ಭಾವಿಸಲು ಸಖಿಮಾಳ್ಪ ಪರಮ ಸ್ನೇಹವನು ಮಾಳ್ಪೆ।
ತೀವಿದತಿಶಯ ರತಿಗೆ ವಿವಿಧ ಕ

ಲಾ ವಿಚಿತ್ರದ ಕುಶಲೆಯಾಗಿಹೆ
ಭೂವಧುವಿನಂತೆಮಗೆ ತೋಱುವೆ ಸ್ವೈರಣೆಯೊಳೆಂದಾ॥

ಇಂದ್ರಜಿತು ಮಾಯಾಸೀತೆಯನ್ನು ವಧಿಸಿದಾಗ ರಾಮನ ವಿಲಾಪ. (ತೊ.ರಾ., ಯು. ಕಾಂ 41–60)

ಒಂದು ಪ್ರಶ್ನೆ

ಕುಮಾರವ್ಯಾಸನ ಪರಿಯಲ್ಲಿ ತೊರವೆ ರಾಮಾಯಣದ ಕರ್ತೃ ಕುಮಾರ ವಾಲ್ಮೀಕಿ ಎಂದು ಹೆಸರಿಸಿಕೊಂಡಿದ್ದರೂ ಆತ ವ್ಯಾಸ ಭಾರತವನ್ನು ಕನ್ನಡಿಸಿದಂತೆ ಈ ವಾಲ್ಮೀಕಿ ರಾಮಾಯಣವನ್ನೇಕೆ ಕನ್ನಡಿಸಲಿಲ್ಲ ಎಂಬುದೊಂದು ಪ್ರಶ್ನೆ. ಇದಕೆ ಉತ್ತರ ರಾಜಾಜಿಯವರ ರಾಮಾಯಣದಲ್ಲಿದೆ. ವಾಲ್ಮೀಕಿ ರಾಮಾಯಣ ಮತ್ತು ಭಕ್ತಿ-ಮತ- ಸಂಪ್ರದಾಯಗಳ ಅಭಿವೃದ್ಧಿಯೊಂದಿಗೆ ಹುಟ್ಟಿಕೊಂಡ ಕಂಬನ್ ತುಲಸೀದಾಸಾದಿ ರಾಮಾಯಣಗಳಲ್ಲಿ ಕಂಡು ಬರುವ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗಮನಿಸಿ ಅವರು–ದೇವತಾ ಅವತಾರನೆಂದು ಉಕ್ತನಾಗಿದ್ದರೂ ವಾಲ್ಮೀಕಿ ರಾಮಾಯಣದಲ್ಲಿ ರಾಮನ ಪಾತ್ರವು ಅವನೋರ್ವ ಎಲ್ಲರಿಗೂ ಎಲ್ಲದರಲ್ಲಿ ಆದರ್ಶನಾದ ಉದಾತ್ತ ಪುರುಷ ಎಂಬಂತೆ ಚಿತ್ರಿತವಾಗಿದೆ. ಕಂಬನ್ ತುಲಸೀದಾಸಾದಿಗಳ ರಾಮಾಯಣಗಳು ರಚಿತವಾದಾಗ ರಾಮ ಕೃಷ್ಣರು ಸಾಕ್ಷಾತ್ ವಿಷ್ಣುವಿನ ಅವತಾರವೆಂದು ಸರ್ವತ್ರ ಪೂಜಿಸಲ್ಪಡುತ್ತಿದ್ದರು. ಅಂಥ ಪರಿಸ್ಥಿತಿಯಲ್ಲಿ ವಾಲ್ಮೀಕಿ ರಾಮಾಯಣದ ನೇರ ಅನುವಾದ ಅಥವಾ ತತ್ಸದೃಶ ರಾಮಾಯಣಗಳ ರಚನೆ ಅವ್ಯವಹಾರ್ಯವಾಗುತ್ತಿತ್ತು. ತುಲಸೀದಾಸಾದಿಗಳು ಕವಿಗಳಿದ್ದರೂ ಮೂಲತಃ ಭಕ್ತರು, ಎಂದಿರುವರು. ಕುಮಾರ ವಾಲ್ಮೀಕಿಯ ವಿಷಯವಾದರೂ ಇವರಿಂದ ಭಿನ್ನವಿಲ್ಲ. ಕುಮಾರ ವಾಲ್ಮೀಕಿ ಎಂದು ಹೆಸರಿಸಿಕೊಂಡಿದ್ದರೂ ತನ್ನ ಒಲವು ಮತ್ತು ಪರಿಸ್ಥಿತಿಗನುಸರಿಸಿ ಆತ ವಾಲ್ಮೀಕಿ ರಾಮಾಯಣದ ನೇರ ಅನುವಾದಕ್ಕೆ ಎಳೆಸದೆ ವಾಲ್ಮೀಕಿಯದೆಂದೇ ಉಕ್ತವಾದ ಆನಂದ ರಾಮಾಯಣದಲ್ಲಿಯ ರಾಮಕಥೆಯನ್ನು ಚೌಕಟ್ಟಾಗಿರಿಸಿಕೊಂಡು ಯುಕ್ತ ಮಾರ್ಪಾಟುಗಳೊಂದಿಗೆ ವಿಸ್ತರಿಸಿ ತನ್ನ ಈ ಕೃತಿಯನ್ನು ರಚಿಸಿರುವನೆಂದರೆ ತಪ್ಪಾಗದು.

ವ್ಯಾಸ ಭಾರತ ಭಾಗವತಗಳ ವಿಷಯ ಹೀಗಿಲ್ಲ. ಅವುಗಳಲ್ಲಿ ಭಕ್ತಿಮಾರ್ಗಕೆ ಅನುಗುಣವಾಗಿ ಶ್ರೀಕೃಷ್ಣನ ಪರಮಾತ್ಮ ಸ್ವರೂಪ ಮಾನುಷಲೀಲೆ ಎರಡೂ ಜೊತೆ ಜೊತೆಯಾಗಿ ಉದ್ದಕೂ ಬಂದಿವೆ. ತನ್ಮೂಲಕ ಇದೇ ಕಾಲ ಖಂಡದವನಾದ ಕುಮಾರವ್ಯಾಸನಿಗೆ ತನ್ನ ಪ್ರತಿಭೆಯ ಮೆರುಗಿನೊಂದಿಗೆ ವ್ಯಾಸಭಾರತವನ್ನು ಯಥಾ ಮೂಲ ಕನ್ನಡಿಸುವುದು ಸಾಧ್ಯವಾಯಿತು, ಎನ್ನಬಹುದು.

ಮತೀಯ ವೈಶಿಷ್ಟ್ಯಗಳು

ಕುಮಾರ ವಾಲ್ಮೀಕಿಯ ಕೃತಿಯು ಯಾವ ಮತ ಪ್ರಭಾವಕ್ಕೂ ಒಳಗಾಗದೆ ರಚಿತವಾಗಿರುವುದರಿಂದ ಕನ್ನಡ ರಾಮಾಯಣಗಳಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ, ಇನ್ನುಳಿದ ರಾಮಾಯಣಗಳಿಗಿಂತ ಹೆಚ್ಚು ಜನಪ್ರಿಯವಾಗಿದೆ ಎಂಬ ಪ್ರಶಸ್ತಿಯನ್ನು ಪಡೆದಿದೆ.[1] ಇಂದಿನ ಪರಿಸರದಲ್ಲಿ ಇದೊಂದು ಅಭಿಮಾನಾಸ್ಪದ ಮಾತಾದರೂ ತುಸು ಒಳಹೊಕ್ಕು ನೋಡಿದರೆ ಅದು ಮಧ್ವ ಮತವನ್ನು ಅನುಸರಿಸಿದೆ ಎಂದು ತೋರದಿರದು. ಮತೀಯವಿದ್ದರೂ ಮತಾತೀತವೆಂಬ ಅದರ ಖ್ಯಾತಿಗೆ ಎಲ್ಲರಿಗೂ ಸಾಮಾನ್ಯವಿರುವ ಮಧ್ವತತ್ವಗಳ ವಾಸ್ತವನಿಷ್ಠ ವ್ಯವಹಾರ ನಿಷ್ಠ ಸ್ವರೂಪ ಮತ್ತು ಕವಿಯು ಅವುಗಳ ಪ್ರತಿಪಾದನೆಗೆ ತೊಡಗದೆ ಪರಮಾತ್ಮ ಭಕ್ತಿಗೆ ಪ್ರಥಮ ಸ್ಥಾನವನ್ನಿತ್ತು ಕಥೆಯನ್ನು ಮುಂದರಿಸಿಕೊಂಡು ಹೋಗಿರುವುದು ಮುಖ್ಯ ಕಾರಣಗಳೆನ್ನಬಹುದು. ಮಧ್ವಮತದಲ್ಲಿ ಶ್ರೀಹರಿಯು ಸರ್ವೋತ್ತಮನು, ಪರಮಾತ್ಮನು, ಸ್ವತಂತ್ರನು, ಸರ್ವತಂತ್ರನು, ಸಕಲ ಗುಣ ಪರಿಪೂರ್ಣನು. ದೋಷರಹಿತನು. ಮಿಕ್ಕವರೆಲ್ಲರೂ, ಲಕ್ಷ್ಮಿ ಬ್ರಹ್ಮ ರುದ್ರಾದಿ ದೇವತೆಗಳು ಸಹ, ಅಸ್ವತಂತ್ರರು, ಅವನ ಅಧೀನವರ್ತಿಗಳು,

---

1 ತೊ.ರಾ., ಸಂ. 2 ಮು. 40.

ಭಕ್ತರು. ವಿಷ್ಣು ಲಕ್ಷ್ಮಿ ಈರ್ವರನ್ನು ಬಿಟ್ಟು ಉಳಿದವರೆಲ್ಲರೂ ದೇವತೆಗಳಿದ್ದರೂ ಜೀವರು. ಯಾವುದಕ್ಕೂ ಶ್ರೀಹರಿಯ ಅನುಗ್ರಹ, ಅವನಲ್ಲಿ ಜ್ಞಾನಪೂರ್ವಕ ಸರ್ವಸಮರ್ಪಣ ಭಕ್ತಿ, ಅದರ ಸಾರ್ಥಕತೆಗೆ ಆತ ಬೇರೆ ತಾನು ಬೇರೆ, ಆತ ಈಶ ತಾನು ದಾಸ, ಎಂಬ ದ್ವೈತ ಭಾವ ಅಗತ್ಯ. ತೊರವೆ ರಾಮಾಯಣ ಮತ್ತು ತತ್ಸಮ ಭಕ್ತಿ ಪ್ರಧಾನ ರಾಮಾಯಣಗಳಲ್ಲಿಯ ರಾಮ ಇಂಥವ, ಅವುಗಳಲ್ಲಿ ಸೂಸಿ ಬಂದಿರುವ ಭಕ್ತಿ ಇಂಥದು ಎಂಬುದನ್ನು ಬೇರೆ ಹೇಳಬೇಕಿಲ್ಲ.

ಮತ ಯಾವುದಿದ್ದರೂ ಉಪಾಸ್ಯದೇವತೆ ಯಾರೇ ಇದ್ದರೂ ಭಕ್ತಿರಂಗದಲ್ಲಿ ಭಕ್ತರ ಉಪಾಸ್ಯ ದೇವತೆಯ ಸ್ವರೂಪಕ್ಕೂ ಅವರ ಭಕ್ತಿಯ ಸ್ವರೂಪಕ್ಕೂ ಮಧ್ವಮತೋಕ್ತ ಉಪಾಸ್ಯದೇವತೆಯ ಸ್ವರೂಪ ಭಕ್ತಿಯ ಸ್ವರೂಪಗಳಿಗೂ ವ್ಯತ್ಯಾಸವಿಲ್ಲೆಂಬುದನ್ನು ಆಯಾಯ ಮತಗಳಲ್ಲಿಯ ಭಕ್ತಿ ಸಾಹಿತ್ಯದಿಂದ ಬೇಕಾದಷ್ಟು ಉದಾಹರಣೆಗಳನ್ನು ಎತ್ತಿ ತೋರಿಸಬಹುದು. ಮಧ್ವಮತದ ಅಡಿಗಲ್ಲಿ ನಂತಿರುವ ಈಶ–ದಾಸ ಭಾವದ ಇದೊಂದು ಸುಂದರ ಉದಾಹರಣೆ. ಭಗವದ್ಭಕ್ತಿ ರಸಾಯನ ಮತ್ತು ಮಧ್ವಮತ ಖಂಡನ ಗ್ರಂಥಗಳನ್ನು ರಚಿಸಿದ ಸುವಿಖ್ಯಾತ ಅದ್ವೈತ (ಜೀವೇಶ್ವರೈಕ್ಯ) ಯತಿ ಮಧುಸೂದನ ಸರಸ್ವತಿ (ಕ್ರಿ. 16 ಶ.)–

ಅದ್ವೈತ-ವೀಥೀ ಪಥಿಕೈರುಪಾಸ್ಯಾಃ ಸ್ವಾರಾಜ್ಯ ಸಿಂಹಾಸನ ಲಬ್ಧ ದೀಕ್ಷಾಃ।
ಶಠೇನ ಕೇನಾಪಿ ವಯಂ ಹಠೇನ ದಾಸೀಕೃತಾ ಗೋಪವಧೂ ವಿಟೇನ॥

ತಾವು ಅದ್ವೈತ ಉಪಾಸಕರು, ಯತಿ, ಪೀಠಾಧಿಪರು. ಆದರೂ ಮೋಸಗಾರನಾದ ಈ ಶ್ರೀಕೃಷ್ಣ ಹಟತೊಟ್ಟು ತಮ್ಮನ್ನು ದಾಸನಾಗಿಸಿಕೊಂಡಿರುವನು, ಎಂದಿರುವರು.

ಕನ್ನಡದಲ್ಲಿ ಶೈವಕವಿ, ಭಕ್ತಕವಿ ಎಂದು ಖ್ಯಾತಿವೆತ್ತ ಹರಿಹರ ತನ್ನ ಗಿರಿಜಾ ಕಲ್ಯಾಣದಲ್ಲಿ ಪ್ರಾರಂಭ ದಲ್ಲಿಯೇ 'ಕೋಹಂ ಸೋಹಂಗಳೆಂಬ ಗಜಬಜೆ ಪುಗದ' ಆನಂದ ಸಂಪದವನ್ನಿತ್ತು ಜೀವೇಶ್ವರಸಂಬಂಧ ದಲ್ಲಿರುವ ದಾರ್ಶನಿಕ ವಾದ ವಿವಾದಗಳಿಂದ ರಕ್ಷಿಸಬೇಕೆಂದು ತನ್ನ ಉಪಾಸ್ಯದೇವತೆ–ಪಂಪಾಪತಿಯನ್ನು ಪ್ರಾರ್ಥಿಸಿ ಮುಂದಡಿ ಇಟ್ಟಿರುವುದರ ಇಂಗಿತವಾದರೂ ಇದೇ ಬಗೆಯದು.

ದೇವತೆಗಳ ಸ್ಥಾನಮಾನಗಳಲ್ಲಿ ತಾರತಮ್ಯ

ಮಧ್ವಮತದಲ್ಲಿ ವಾಯುದೇವರಿಗೆ ಅತ್ಯಂತ ಉಹತ್ವದ ಸ್ಥಾನವಿದೆ. "ಹರಿಸರ್ವೋತ್ತಮ ವಾಯು ಜೀವೋತ್ತಮ" ಎಂಬುದು ಮಾಧ್ವರೆಲ್ಲರ ಮನೆಮಾತಾಗಿದೆ. ಕುಮಾರ ವಾಲ್ಮೀಕಿಯ ಕೃತಿಯಲ್ಲಿ ರಾಮಸ್ತುತಿಯ ರೂಪದಲ್ಲಿ ಹರಿಸರ್ವೋತ್ತಮತ್ವದ ಮಾತು ಗ್ರಂಥದುದ್ದಕ್ಕೂ ಬಂದಿದೆ. ಅಲ್ಲಲ್ಲಿ ಶಿವಸರ್ವೋತ್ತಮಪರ ಎನ್ನಬಹುದಾದ ಪದ್ಯಗಳಿದ್ದರೂ ಶಿವಪಾರ್ವತಿಯರು ರಾಮನ ಪರಮ ಭಕ್ತರು, ಅವರ ಸಂವಾದದಿಂದಲೇ ಕಥೆ ತೊಡಗುವುದು ಎಂಬುದನ್ನೂ ಇಂಥ ಸಂದರ್ಭಗಳಿಗೆ ಅನ್ವಯಿ ಸುವ ಮಧ್ವಾಚಾರ್ಯರ 'ಏಷಾಂ ಯನ್ನ ವಿರೋಧಿಸ್ಯಾತ್ತತ್ತ್ರೋತ್ತಂ ತನ್ನ ನಿವಾರ್ಯತೆ' (ಭಾ.ತಾ.ನಿ. 1–36) ಉಕ್ತಿಯನ್ನೂ ನೆನೆದಾಗ ಅವೆಲ್ಲ ಕವಿ ವ್ಯಾಪಾರಜನ್ಯ, ಅವುಗಳಿಂದ ವಿಷ್ಣು ಸರ್ವೋತ್ತಮತ್ವಕ್ಕೆ ಬಾಧೆ ತಟ್ಟದು ಎನ್ನಬೇಕಾಗುವುದು. ವಾಯು ಜೀವೋತ್ತಮನೆಂಬುದು ಹನುಮಂತನು ಓಷಧೀ ಪರ್ವತವನ್ನು ತಂದಿಳಿಸಿದಾಗ 'ಈತನಿಂದಧಿಕರು ನಿದಾನಿಸೆ ಭೂತ ನಿಕರದೊಳಿಲ್ಲ, ಇದು ಸಾಕ್ಷಾತ್ ಪುರಾಣ ಪ್ರಸಿದ್ಧ ರಹಸ್ಯ' ಎಂಬ ಜಾಂಬವಂತನ ಪ್ರಶಂಸಾಪರ ಉಕ್ತಿಯಲ್ಲಿ ಬಂದಿದೆ.[1]

ಎಲ್ಲರ ಸ್ಥಾನಮಾನಗಳಲ್ಲಿ ತಾರತಮ್ಯವಿದ್ದು ವಿಷ್ಣುವಿನ ನಂತರ ಲಕ್ಷ್ಮೀ, ಅವಳ ನಂತರ ಬ್ರಹ್ಮ ವಾಯು ಮತ್ತು ಅವರ ಪತ್ನಿಯರಾದ ಸರಸ್ವತಿ ಭಾರತಿಯರು (ಸಮಾನರು), ಅವರ ನಂತರ ಗರುಡ, ಶೇಷ, ರುದ್ರ ಮತ್ತು ಅವರ ಪತ್ನಿಯರಾದ ಸೌಪರ್ಣಿ, ವಾರುಣಿ, ಪಾರ್ವತಿಯರು (ಸಮಾನರು)

---

1 ತೊ.ರಾ., ಯು.ಕಾಂ. 36/63.

ಅವರ ನಂತರ ಕ್ರಮದಿಂದ ಇತರರು ಮನುಷ್ಯರು ಸಹ ಬರುವರು. ಮಧ್ವಾಚಾರ್ಯರು ವಾಯು ದೇವರ ಅವತಾರರೆಂದು ಮಾಧ್ವರೆಲ್ಲರೂ ನಂಬಿರುವರು. ಗ್ರಂಥರಚನೆ, ಭಜನೆ, ಪೂಜಾದಿಗಳಲ್ಲಿ ಸಂಪ್ರದಾಯಸ್ಥರು ಇದೇ ಕ್ರಮವನ್ನು ಅನುಸರಿಸುವರು. ವಿಷ್ಣುವಿನ ನಂತರ ಬರುವ ದೇವತೆಗಳ ಸ್ತುತಿ ಐಚ್ಛಿಕವಿದ್ದರೂ ಅವರನ್ನು ಸ್ತುತಿಸುವಾಗ ಕ್ರಮದಲ್ಲಿ ವ್ಯತ್ಯಾಸವಾಗುವುದಿಲ್ಲ.[1]

ವಾಯು ಜೀವೋತ್ತಮನೆನ್ನಲು ಛಾಂದೋಗ್ಯ, ಬೃಹದಾರಣ್ಯಕ, ಐತರೇಯ ಉಪನಿಷತ್ತುಗಳಲ್ಲಿ ತತ್ವಾಭಿಮಾನಿ ದೇವತೆಗಳಲ್ಲಿ (ಬ್ರಹ್ಮನನ್ನು ಬಿಟ್ಟು) ಯಾರು ಶ್ರೇಷ್ಠರೆಂಬುದನ್ನು ನಿರ್ಣಯಿಸಲು ನಡೆದ ಪರೀಕ್ಷೆಯ ವಿವರಣೆ ಇದೆ. ವಾಯು (ಪ್ರಾಣ)ವನ್ನು ಬಿಟ್ಟು ಉಳಿದೆಲ್ಲ ತತ್ವಾಭಿಮಾನಿ ದೇವತೆಗಳು ದೇಹದಿಂದ ಹೊರಬರಲು ಅವರ ನಿಯಂತ್ರಣದಲ್ಲಿದ್ದ ಇಂದ್ರಿಯಗಳ ವ್ಯಾಪಾರವು ನಿಂತಿತಲ್ಲದೆ ದೇಹವು ಮೃತವಾಗಲಿಲ್ಲ. ವಾಯುವು ಹೊರಬರಲು ದೇಹವು ನಿಶ್ಚೇಷ್ಟವಾಗಿ ಬಿದ್ದುಕೊಂಡಿತು. ಪರೀಕ್ಷೆ ಮುಂದರಿಯಿತು. ವಾಯುವೇ ಮೊದಲು ದೇಹದಿಂದ ಹೊರಬಂದನು. ಇತರ ದೇವತೆಗಳು ದೇಹವನ್ನು ಪ್ರವೇಶಿಸಿದರು. ಪ್ರಾಣವಿಲ್ಲದ ಆ ದೇಹದಲ್ಲಿ ಎಷ್ಟು ಪ್ರಯತ್ನಿಸಿದರೂ ತಮ್ಮ ತಮ್ಮ ನಿಯಂತ್ರಣದಲ್ಲಿದ್ದ ಇಂದ್ರಿಯಗಳ ವ್ಯಾಪಾರವನ್ನು ಸಾಗಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆಗ ವಾಯುವೇ ಶ್ರೇಷ್ಠನೆಂದು ತೀರ್ಮಾನಿಸಿ ಎಲ್ಲರೂ ಅವನನ್ನು ಆಶ್ರಯಿಸಿದರು. ವಾಯು ಬ್ರಹ್ಮ ಸಮಾನನಾದನು. ರೂಢಿಯಲ್ಲಿ ಬ್ರಹ್ಮನೊಂದಿಗೆ ಅವನು ಸಹ ವಿಷ್ಣುವಿನ ಮಗನೆಂದು ಗಣಿಸಲ್ಪಟ್ಟನು.

ತೊರವೆ ರಾಮಾಯಣದಲ್ಲಿ (ಮೈಸೂರು ವಿ.ವಿ. ಮುದ್ರಣ) ಕ್ರಮದಿಂದ ವಿಷ್ಣು, ಶಿವ, ಬ್ರಹ್ಮ, ವಾಯು, ಭಾರತಿ, ಗಣೇಶ, ಗುರುಗಳೆಂದು ಮಧ್ವಾಚಾರ್ಯರ, ಅದಿಕವಿಯೆಂದು ವಾಲ್ಮೀಕಿಯ ಸ್ತುತಿ ಇದೆ. ವಿಷ್ಣುವಿನ ನಂತರ ಶಿವಸ್ತುತಿ ಬಂದಿದೆ. ಲಕ್ಷ್ಮಿ, ಸರಸ್ವತಿ, ಪಾರ್ವತಿಯರ ಸ್ತುತಿ ಕೆಲವೇ ಪ್ರತಿ

---

[1] ಬ್ರಹ್ಮಾದಿ ಮಾನುಷಾಂತ ಚಾಚಿಕೊಂಡ ಮಾಧ್ವ ವಿಶಿಷ್ಟ ತರ ತಮ ಭಾವವು ಸೃಷ್ಟಿ ಸ್ಥಿತಿ ಲಯಗಳ ವಿಚಾರದಲ್ಲಿ ಅಡಕವಾದ ಪುರುಷ ಪ್ರಕೃತಿ ಮತ್ತು ಮಹತ್ತಾದಿ 24 ತತ್ವಗಳನ್ನು ಆಧರಿಸಿರೂಪಗೊಂಡಿದೆ. ಕ್ರಮದಲ್ಲಿ ಅತ್ಯಂತ ಶ್ರೇಷ್ಠರಾದ ವಿಷ್ಣು ಲಕ್ಷ್ಮಿಯರು ಪುರುಷ ಪ್ರಕೃತಿ ತತ್ವಗಳ ಪ್ರತೀಕರು. ಸೃಷ್ಟಿಯ ಪ್ರಾರಂಭದಲ್ಲಿ ಮೂಲಭೂತ ಸತ್ವ ರಜ ತಮೋಗುಣಗಳ ಪರಸ್ಪರ ಸಂಯೋಗ ವಿಯೋಗ ವಿಕಾರಗಳಿಂದ 24 (ಮಹತ್, ಅಹಂಕಾರ, ಬುದ್ಧಿ, ಮನಸ್ಸು, 5 ಜ್ಞಾನೇಂದ್ರಿಯಗಳು, 5 ಕರ್ಮೇಂದ್ರಿಯಗಳು, 5 ತನ್ಮಾತ್ರಗಳು–ಶಬ್ದ, ಸ್ಪರ್ಶ, ರೂಪ, ರಸ, ಗಂಧ, 5 ಮಹಾಭೂತಗಳು) ತತ್ವಗಳು ಹುಟ್ಟಿಕೊಂಡವು. ಬ್ರಹ್ಮ ರುದ್ರಾದಿ ದೇವತೆಗಳು ಈ 24 ತತ್ವಗಳ ಮತ್ತು ಇವುಗಳಿಂದ ಕುಡಿಯೊಡೆಯುವ ಇತರ ತತ್ವಗಳ ಅಭಿಮಾನಿ ದೇವತೆಗಳೆಂದು ಬಗೆಯಲ್ಪಟ್ಟಿರುವರು. ಬ್ರಹ್ಮನು ಎಲ್ಲರಿಗೂ ಹಿರಿಯ. ಮಹತ್ತತ್ವದ ಅಭಿಮಾನಿ. ಶಿವ ಅದರಿಂದ ಹುಟ್ಟುವ ಅಹಂಕಾರ ತತ್ವದ ಅಭಿಮಾನಿ. ಹೀಗೆಯೆ ಇಂದ್ರ, ಸೂರ್ಯ, ಚಂದ್ರಾದಿಗಳು ವಿಷ್ಣುವಿನ ನಂತರ ಬ್ರಹ್ಮ (ಮಹತ್), ಬ್ರಹ್ಮನ ನಂತರ ಶಿವ (ಅಹಂಕಾರತತ್ವ) ಬರುವುದರಿಂದ ಬ್ರಹ್ಮ ವಿಷ್ಣುವಿನ ಮಗ, ಶಿವ ಮಮ್ಮಗ ಎನ್ನುವುದು ರೂಢವಾಗಿದೆ(ಮಧ್ವ ಚರಿತ, ಪು. 335). ತೊರವೆ ರಾಮಾಯಣದಲ್ಲಿ ಸೀತಾ ಸ್ವಯಂವರ ಸಮಯದಲ್ಲಿ ಉಪಸ್ಥಿತರಿದ್ದ ದೇವರ್ಷಿ ಮಾನವರನ್ನು ಕಂಡು–

ಮಗಳ ಗಂಡನು ಶಿವನು ಬೊಮ್ಮನು। ಮಗನು ಮಿಕ್ಕಿನ ಸುರರು ಬಂಟರು।
ಬಗೆವಡಮಲ ಬ್ರಹ್ಮಋಷಿಗಳು ನಿರ್ಜಿತೇಂದ್ರಿಯರು॥
ಜಗದರಸುಗಳು ನರರು ತೊರವೆಯ। ನಗರದಧಿಪತಿ ಗಂಡನೆಂದೊಗು।
ಮಿಗೆಯ ಹರುಷದಲಬಲೆ ಬಂದಳು ಜನಕನಿವ್ವೆಡೆಗೆ॥ ಬಾ.ಕಾಂ. 14–33॥

–ಎಂದು ಸೀತೆ ತಾರತಮ್ಯೋಕ್ತ ಅವರ ಸ್ಥಾನಮಾನಗಳನ್ನು ಅರಿತುಕೊಂಡು ತೊರವೆಯ ನಗರದಧಿಪತಿ ಅರ್ಥಾತ್ ವಿಷ್ಣು ಅರ್ಥಾತ್ ಶ್ರೀರಾಮನೇ ತನ್ನ ಪತಿಯೆಂದು ನಿಶ್ಚಯಿಸಿಕೊಂಡಳೆಂಬ ಮಾತು ಈ ಸಂದರ್ಭದಲ್ಲಿ ಗಮನಾರ್ಹವಿದೆ.

ಗಳಲ್ಲಿದ್ದು ಆ ಪದ್ಯಗಳು ಪರಿಶಿಷ್ಟದಲ್ಲಿವೆ. ಅಲ್ಲಿ ಕೂಡ ಕ್ರಮ ತಪ್ಪಿದೆ. ಪರಿಸ್ಥಿತಿ ಇಂತಿರುವಾಗ ತಾರತಮ್ಯದಲ್ಲಿ ಕಂಡು ಬರುವ ಲೋಪ ವ್ಯತ್ಯಾಸಗಳಿಗೆ ಕವಿಯ ಹೊಣೆಗಾರಿಕೆ ಎಷ್ಟು ಅನ್ಯರದೆಷ್ಟು ಎಂಬುದನ್ನು ನಿರ್ಧರಿಸುವುದು ಕಷ್ಟ. ಆದರೂ ತೊರವೆ ರಾಮಾಯಣವು ಲೋಕಪ್ರಿಯ ಕಾವ್ಯ, ಅದರ ನೂರಾರು ಹಸ್ತಪ್ರತಿಗಳು ಲಭ್ಯವಿವೆ. ಸಂಪಾದನೆಗಾಗಿ ಅವುಗಳಲ್ಲಿ ಎಂಟೇ ಪ್ರತಿಗಳನ್ನು ಬಳಸಿಕೊಂಡಿದೆ, ಎಂಬ ಮುನ್ನುಡಿಯಲ್ಲಿರುವ ಮಾತುಗಳು, ಕವಿ ಮಾಧ್ವನಿದ್ದು ಮಧ್ವ ಮತಾನುಸಾರ ತನ್ನ ಕೃತಿಯನ್ನು ರಚಿಸಿರುವುದು, ಪಟ್ಟಾಭಿಷೇಕ ಸಮಯದಲ್ಲಿ ಶ್ರೀರಾಮನು ಅತಿಥಿಗಳಿಗೆ ಏರ್ಪಡಿಸಿದ ಭೋಜನ ಸಮಾರಂಭದಲ್ಲಿ ಲಕ್ಷ್ಮಣನು ಅವರನ್ನು 'ಹಿರಿದು ಕಿಱಿದಿನ ಮಾನ ಮನ್ನಣೆಯಱಿದು (ತಾರತಮ್ಯವನಱಿದು)' ಕುಳ್ಳಿರಿಸಿದನೆಂಬ ಬಣ್ಣನೆ, ಸ್ವಯಂವರದಲ್ಲಿ ಸೀತೆ ಉಪಸ್ಥಿತರನ್ನು ಅವರ ತಾರತಮ್ಯಾನುಸಾರ ನಿರುಕಿಸಿ ಶ್ರೀರಾಮನನ್ನು ವರಿಸಿದಳೆಂಬ ಮಾತು, ಇವು ಕವಿಯ ಮೂಲಪ್ರತಿಯಲ್ಲಿ ದೇವತೆಗಳ ಸ್ತುತಿ, ಕ್ರಮಬದ್ಧವಿರಬೇಕು, ಲೋಪ ವ್ಯತ್ಯಾಸಗಳು ಪ್ರತಿಕಾರರ ಒಲವು ನಿಲುವುಗಳಿಗೆ ಅನುಸರಿಸಿ ಹಿಂದಿನಿಂದ ಉಂಟಾಗಿರಬೇಕು, ಎಂದು ಭಾವಿಸಲು ಪೋಷಕವಾಗಿವೆ ಎನ್ನಬಹುದು.

ಮಾಧ್ವ ತಾರತಮ್ಯದಲ್ಲಿ ಬ್ರಹ್ಮವಾಯುಗಳು ಸಮಾನರಿದ್ದರೂ ಪದವಿಯಲ್ಲಿ ಬ್ರಹ್ಮನು ಹೆಚ್ಚಿನವನು, ಜಗದ್ಗುರು; ವಾಯುವು ಮುಂದೆ ಬ್ರಹ್ಮಪಟ್ಟಕ್ಕೆ ಬರತಕ್ಕವನು. ಕುಮಾರ ವಾಲ್ಮೀಕಿಯ ಕೃತಿಯಲ್ಲಿ ಈ ಮಾತು ಮೂರು ಸಲ ಬಂದಿದೆ. ಹನುಮಂತನು ಸಮುದ್ರವನ್ನು ಉಲ್ಲಂಘಿಸಿ ಸೀತೆಯನ್ನು ಕಂಡು ರಾಮನಿಗೆ ಚೂಡಾರತ್ನವನ್ನು ಇತ್ತಾಗ ರಾಮನು "ಬೊಮ್ಮನ ಪದವಿಯನ್ನಿತ್ತು" ಅವನನ್ನು ಮನ್ನಿಸುವನು.[1] ಎರಡನೆಯ ಸಲ ಸೇತು ನಿರ್ಮಾಣ ಸಮಯದಲ್ಲಿ ಬ್ರಹ್ಮನ ಮುಖದಿಂದ ಬಂದಿದೆ. ಕಪಿಗಳೆಲ್ಲರೂ ವಿಶ್ವದ ನಾನಾ ಭಾಗಗಳಿಂದ ಮಹಾ ಮಹಾ ಪರ್ವತಗಳನ್ನು ಕಿತ್ತು ತಂದಿಳಿಸುವರು. ಸಾಹಸಿಗನಾದ ಹನುಮಂತ ಬ್ರಹ್ಮಾದಿ ದೇವತೆಗಳ ವಾಸಸ್ಥಾನ ಅಮರಾದ್ರಿಗೇನೆ ಕೈ ಹಾಕುವನು. ಆಗ ಬ್ರಹ್ಮ–

ಹನುಮ ಕೇಳೀ ಕಲ್ಲುದಭಿರಂ–
ಜನೆಗೆ ಕರ್ತೃಗಳಾವು ಮುಂದಣ
ನೆನಹು ನಿನ್ನದು ನಿನ್ನ ರಾಜಸತನದಲೊಲಿದಂತೆ–।
ಅನುಕರಿಸು ನಿನ್ನೀ ಪ್ರತಿಜ್ಞೆಯ–
ನನುಸರಿಸು ಪುರುಷಾರ್ಥವಿದು ನೀ–
ನೆನಗೆ ಮಾಡುವ ಲೇಸಿದೀಗೆನುತಪ್ಪಿದನು ಕಪಿಯ॥

ಎಂದು ಬೆಸಗೊಳ್ಳಲು, ಹನುಮಂತ 'ನೀವೆಮಗಯ್ಯನೋಪಾದಿ ಕೈದೆಗೆದೆವಾವು' ಎಂದು ಬ್ರಹ್ಮನ ಮಾತನ್ನು ಮನ್ನಿಸಿ ಸುತ್ತಲಿನ ಬೇರೆ ಪರ್ವತಗಳನ್ನು ಕಿತ್ತುಕೊಂಡೊಯ್ಯುವನು[2]. ಮುಂದೆ ಪಟ್ಟಾಭಿಷೇಕವಾದ ಬಳಿಕ ಅತಿಥಿಗಳನ್ನು ಬೀಳ್ಕೊಡುವಾಗ ಶ್ರೀರಾಮನು ಚಿರಂಜೀವಿಯಾಗೆಂದು ಹನುಮಂತನನ್ನು ಇವೇ ಮಾತುಗಳಿಂದ ಹರಸುವನು. ಇವು ಆ ಸಂದರ್ಭದ ಪದ್ಯಗಳು:

ದೇವ ಬಳಿಕತಿ ಹರುಷ ಮುಖದಲಿ
ಪಾವಮಾನಿಯ ಕರೆದು ನಿನ್ನಯ
ಸೇವೆಗೇತಜಲುತ್ತರಾಯಿಗಳಾವು ಹೇಳೆನುತ।
ಆ ವಿರಂಚಿಯ ವೈಭವವು ಕ–
ಲ್ಪಾವಸಾನಕೆ ಸಲಲಿ ಭುವನಜ
ನಾವಳಿಗಳುಱೆ ವಂದಿಸಲಿ ಗುರುವಾಗು ಜಗಕೆಂದ॥ (ಯು.ಕಾ. 5[illegible]–54)

---

1 ತೊ.ರಾ., ಸುಂ. ಕಾಂ. 9/30.

2 ತೊ.ರಾ., ಯು. ಕಾಂ. 5/59,60

ಇರು ಸುರೋರುಗ ಮರ್ತ್ಯ ಭುವನಾಂ
ತರಗಳಲಿ ಮನ ಬಂದ ಠಾವಿನ-
ಲಿರು ಸುರಾದ್ರಿ ಪ್ರಮುಖ ನಾನಾ ಪರ್ವತಂಗಳಲಿ।
ಇರು ಮದೀಯ ಪುರಾಂತರದಲೆಂ-
ದರಸ ಕರುಣಾಸ್ಪದದ ನೇಹದ
ನಿರತಿಶಯದಲಿ ಬೀಳುಕೊಟ್ಟನು ಬೇಹ ಕಿಂಕರನ॥ (ಅದೇ, 55/1)[1]

ಮಹತ್ವದ ವ್ಯತ್ಯಾಸ

ಸೀತಾಪಹರಣ ಸಂದರ್ಭದಲ್ಲಿ ರಾವಣನು ಅಪಹರಿಸಿದ ಸೀತೆ ನಿಜ ಸೀತೆಯಲ್ಲ, ಆಕೆಯ ಪ್ರತಿಕ ತಿ ಎಂಬುದು ಭಕ್ತಿ ಪ್ರಧಾನ ರಾಮಾಯಣಗಳಿಗೂ ವಾಲ್ಮೀಕಿ ರಾಮಾಯಣಕ್ಕೂ ಇರುವ ಮಹತ್ವದ ವ್ಯತ್ಯಾಸಗಳಲ್ಲಿ ಒಂದು. ಅಧ್ಯಾತ್ಮ ರಾಮಾಯಣದಲ್ಲಿ ರಾವಣನು ಕೊಂಡೊಯ್ದ ಸೀತೆ ಆಕೆಯ ಛಾಯೆ ಎಂದಿದೆ. ಆನಂದ ರಾಮಾಯಣದಲ್ಲಿ ರಾಮನ ಆದೇಶದ ಮೇರೆಗೆ ಸೀತೆ ತನ್ನನ್ನು ಮೂರು ರೂಪಗಳಲ್ಲಿ ವಿಂಗಡಿಸಿಕೊಂಡು ತೇಜೋರೂಪವನ್ನು ಅಗ್ನಿಯಲ್ಲಿ, ಸತ್ವಗುಣರೂಪವನ್ನು ಶ್ರೀರಾಮನ ಹೃದಯದಲ್ಲಿ, ತಮೋಗುಣರೂಪದ ಛಾಯೆಯನ್ನು ಪಂಚವಟಿಯಲ್ಲಿ ಇರಿಸಿದಳೆಂದಿದೆ. ತುಲಸೀ ರಾಮಾಯಣದಲ್ಲಿ ಸೀತೆ ತನ್ನ ಛಾಯೆಯನ್ನು ಪಂಚವಟಿಯಲ್ಲಿರಿಸಿ ಪ್ರಭುಪದವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಅಗ್ನಿಪ್ರವೇಶ ಮಾಡಿದಳೆಂದಿದೆ. ವೆಂಕಟೇಶ ಮಹಾತ್ಮ್ಯೆಯಲ್ಲಿ ತಾನು ಕೊಂಡೊಯ್ಯಲಿರುವ ಸೀತೆ ನಿಜ ಸೀತೆಯಲ್ಲೆಂಬ ಅಗ್ನಿಯ ಮಾತನ್ನು ನಂಬಿ ರಾವಣನು ಅವಳನ್ನು ಬಿಟ್ಟು ಅಗ್ನಿಯು ಒಪ್ಪಿಸಿದ ವೇದವತಿ ಎಂಬುವಳನ್ನು ಒಯ್ದನೆಂದಿದೆ. ಈಕೆಯೆ ಮುಂದೆ ಕಲಿಯುಗದಲ್ಲಿ ಆಕಾಶರಾಜನ ಪುತ್ರಿ ಪದ್ಮಾವತಿಯಾಗಿ ಹುಟ್ಟಿ ಶ್ರೀನಿವಾಸ (ವೆಂಕಟೇಶ)ನನ್ನು ಮದುವೆಯಾಗುವಳು. ಮಧ್ವಾಚಾರ್ಯರ ಭಾರತ ತಾತ್ಪರ್ಯ ನಿರ್ಣಯದಲ್ಲಿ ಸೀತೆ ತನ್ನ ಪ್ರತಿಕೃತಿಯನ್ನು ಸೃಷ್ಟಿಸಿ ಕೈಲಾಸಕ್ಕೆ ತೆರಳಿದಳು. ಮುಂದೆ ರಾವಣ ವಧೆಯ ನಂತರ ನಡೆದ ಅಗ್ನಿದಿವ್ಯದಲ್ಲಿ ಆ ಪ್ರತಿಕೃತಿಯ ಬದಲು ಅಗ್ನಿ ಆ ವರೆಗೆ ಕೈಲಾಸದಲ್ಲಿದ್ದ ನಿಜ ಸೀತೆಯನ್ನು ರಾಮನಿಗೆ ತಂದೊಪ್ಪಿಸಿದನೆಂದಿದೆ[2]. ಅವರ ಚರಿತ್ರಕಾರರೆಂದು ಪ್ರಸಿದ್ಧರಿರುವ ನಾರಾಯಣ ಪಂಡಿತರು ತಮ್ಮ ಸಂಗ್ರಹ ರಾಮಾಯಣದಲ್ಲಿ ಇದನ್ನೇ ಪುನರುಚ್ಚರಿಸಿರುವರು.

ಕುಮಾರ ವಾಲ್ಮೀಕಿಯ ಕೃತಿಯಲ್ಲಿ ರಾವಣನು ಅಪಹರಿಸಿದ ಸೀತೆ ಆಕೆಯ ಪ್ರತಿಕೃತಿಯೆಂಬ ಮಾತಿಲ್ಲ. ಅದರಿಂದ ಮುಂದಣ ಕಥೆಯೆಲ್ಲ ಆಭಾಸಮಯವಾಗಿ ಸ್ವಾರಸ್ಯಹೀನವಾದೀತೆಂದು ಆತ ಈ ಮಾತನ್ನು ಬಿಟ್ಟಂತಿದೆ. ಆದರೂ ಅಗ್ನಿದಿವ್ಯದಲ್ಲಿ ಅಗ್ನಿಯಿಂದ ಸೀತೆಯನ್ನು ಬರಮಾಡಿಕೊಳ್ಳುವ ಕಾರ್ಯದಲ್ಲಿ ಪಾರ್ವತಿಯನ್ನು ಪ್ರಧಾನಾಂಗವಾಗಿಸಿ, ಅಗ್ನಿಯು ತಂದೊಪ್ಪಿಸಿದ ಸೀತೆಯನ್ನು 'ಸವ

---

1 ಹೋಲಿಸಿ:

ಅತೋ ಹನೂಮಾನ್ಪದಮೇತು ಧಾತು–
ರ್ಮದಾಜ್ಞಯಾ ಸೃಷ್ಟ್ಯವನಾದಿ ಕರ್ಮ।
ಮೋಕ್ಷಂಚ ಲೋಕಸ್ಯ ಸದೈವಕುರ್ವ–
ನ್ಮುಕ್ತಶ್ಚ ಮುಕ್ತಾನ್ಸುಖಯನ್ ಪ್ರವರ್ತತಾಂ॥ (ಭಾ.ತಾ.ನಿ. 8/240।)
ಪಯೋಬ್ಧಿ ಮಧ್ಯಗಂ ಚಮೇ ಸುಸದ್ಮ ಚಾನ್ಯದೇವ ವಾ।
ಯಥೇಷ್ಟ ತೋ ಗಮಿಷ್ಯಸಿ ಸ್ವದೇಹಸಂಯು ತೋಪಿ (ಸನ್ ಅದೇ, ೯/೬೬)
ಯಥೇಷ್ಟ ಭೋಗ ಸಂಯುತಃ ಸುರೇಶ ಗಾಯಕಾದಿಭಿಃ।
ಸಮೀಡ್ಯಮಾನ ಸದ್ಯಶಾ ರಮಸ್ವ ಮತ್ಪುರಃ ಸದಾ॥ (ಅದೇ, 9/67)

2 ಭಾ.ತಾ.ನಿ. 5/32, 8/222

ಶರೀರೆ' ಎಂದು ಬಣ್ಣಿಸಿ, ಅಗ್ನಿಯನ್ನು ಪ್ರವೇಶಿಸಿದ ಸೀತೆ ಆಕೆಯ ಪ್ರತಿಕೃತಿ, ಹೊರ ಬಂದವಳು ಅಲ್ಲಿಯ ವರೆಗೆ ಕೈಲಾಸವಲ್ಲಿದ್ದ ನಿಜಸೀತೆ ಎಂಬ ಈ ಸಂದರ್ಭದಲ್ಲಿರುವ ಮಧ್ವಾಚಾರ್ಯರ ವಿವರಣೆಯನ್ನು ಪರ್ಯಾಯದಿಂದ ಸೂಚಿಸಿರುವನು ಎಂದು ಬಗೆಯಲು ಅವಕಾಶವಿಲ್ಲದಿಲ್ಲ[1].

ಇನ್ನೊಂದು ವೈಶಿಷ್ಟ್ಯ

ರಾಮಾಯಣದಲ್ಲಿಯ ಜಾಂಬವಂತ ಬ್ರಹ್ಮನ ಮಗ. ಹನುಮಂತ ವಾಯುವಿನ ಮಗ ಎಂಬುದನ್ನೂ ಮಾಧ್ವ ತಾರತಮ್ಯೋಕ್ತ ಬ್ರಹ್ಮ ವಾಯುಗಳ ಹಿರಿ ಕಿರಿ ಸಂಬಂಧವನ್ನೂ ನೆನೆದು ಜಾಂಬವಂತನಿಗೆ ಕೂಡ ಪ್ರಾಮುಖ್ಯತೆಯನ್ನು ಕೊಟ್ಟ. ಜೊತೆಗೆ ವಾಲ್ಮೀಕಿ ರಾಮಾಯಣದ ವಿಮರ್ಶಕರು ಅದರಲ್ಲಿಯ ಹನುಮಂತನ ವಿಷಯದಲ್ಲಿ ಎತ್ತಿದ ಲೋಪ ದೋಷಗಳನ್ನು ಸರಿಪಡಿಸಿಕೊಂಡು ತನ್ನ ಕೃತಿಯಲ್ಲಿ ಅವರೀರ್ವರ ಪಾತ್ರಗಳನ್ನು ಚಿತ್ರಿಸಿರುವುದು ಕುಮಾರ ವಾಲ್ಮೀಕಿಯ ಇನ್ನೊಂದು ವೈಶಿಷ್ಟ್ಯ.

ವಾಲ್ಮೀಕಿ ರಾಮಾಯಣ ಮತ್ತು ಇತರತ್ರ ಜಾಂಬವಂತನೋರ್ವ ರಾಮಭಕ್ತ, ವೃದ್ಧ, ಅನುಭವಿಕ, ಸಮರ್ಥ ಸೇನಾನಿ, ಹನುಮಂತನ ಶಕ್ತಿ ಸಾಮರ್ಥ್ಯಗಳನ್ನು ಬಲ್ಲವ, ಎಲ್ಲರ ಗೌರವಾದರಗಳಿಗೆ ಪಾತ್ರನಿದ್ದವ, ಎಂಬುದು ಸರ್ವೇಸಾಮಾನ್ಯ. ಇಂದ್ರಜಿತುವಿನ ಬ್ರಹ್ಮಾಸ್ತ್ರದಿಂದ ಕಪಿಬಲವೆಲ್ಲ, ರಾಮಲಕ್ಷ್ಮಣರು ಸಹ, ನೆಲಕೊರಗಿದಾಗ ಆಗತಾನೆ ಚೇತರಿಸಿಕೊಂಡ ಜಾಂಬವಂತನ 'ಹನುಮಂತ ಬದುಕಿರುವನೇ? ಅವನೊಬ್ಬ ಬದುಕಿದ್ದರೆ ಎಲ್ಲರೂ ಬದುಕಿದಂತೆ. ಅವನಿಲ್ಲದಿದ್ದರೆ ಎಲ್ಲರೂ ಸತ್ತಂತೆ' ಮಾತುಗಳು ಸುಪರಿಚಿತವಿವೆ. ಕುಮಾರ ವಾಲ್ಮೀಕಿಯ ಕೃತಿಯಲ್ಲಿ ಜಾಂಬವಂತ ಪ್ರಧಾನ ಮಂತ್ರಿ. ಓಲಗದಲ್ಲಿ ರಾಮನು ಅವನನ್ನು ತನ್ನ ಬಲಕೆ ಕುಳ್ಳಿರಿಸಿಕೊಳ್ಳುವನು. ಹನುಮಂತ ಲಕ್ಷ್ಮಣನೊಡನೆ ನಿಂತುಕೊಳ್ಳುವನು. ಪಟ್ಟಾಭಿಷೇಕದ ನಂತರ ನಡೆದ ಭೋಜನಕೂಟದಲ್ಲೂ ರಾಮ ಅವನನ್ನು ತನ್ನ ಬಲಕ್ಕೆ ಕುಳ್ಳಿರಿಸಿಕೊಳ್ಳುವನು[2]. ವಾಲ್ಮೀಕಿ ರಾಮಾಯಣದಲ್ಲಿ ಸೀತಾಶೋಧನೆಗಾಗಿ ದಕ್ಷಿಣಕ್ಕೆ ತೆರಳಿದ ಕಪಿ ಬಲದ ನೇತಾರ ಅಂಗದ. ಜಾಂಬವಂತ ಹನುಮಂತರು ಅವನ ಸಹಾಯಕರು, ಸಲಹೆಗಾರರು. ಕುಮಾರ ವಾಲ್ಮೀಕಿಯ ಕೃತಿಯಲ್ಲಿ ಅಂಗದನ ನೇತೃತ್ವದ ಮಾತಿಲ್ಲ. ಬಹಿರಂಗದಲ್ಲಿ ಸುಗ್ರೀವನು ಮೂವರನ್ನೂ 'ಮಂತ್ರಜ್ಞರು. ಮಹಾಭಟರು, ಅತಿಬಲರು' ಎಂದು ಹೊಗಳಿದರೂ ಅವರಲ್ಲಿ 'ಜಾಂಬವನತಿಶಯನಾತನಿಂದೀ ಹಾವವಾನಿ' ಎಂದು ರಾಮನ ಕಿವಿಯಲ್ಲಿ ಉಸುರುವನು. ಪರ್ಯಾಯದಿಂದ ಅವರೀರ್ವರ ಸ್ಥಾನಮಾನಗಳನ್ನು ವ್ಯಕ್ತಪಡಿಸುವನು. ನಂತರ ಹನುಮಂತನ ಸಾಹಸ ಮಹಿಮೆಗಳನ್ನು ಹೊಗಳುವನು[3]. ಮುಂದೆ ಜಾಂಬವಂತನೇ ಅವರೆಲ್ಲರ ನೇತಾರನೆಂಬಂತೆ ಅವನ ಪಾತ್ರವನ್ನು ಚಿತ್ರಿಸಿರುವನು. ವಾಲ್ಮೀಕಿ ರಾಮಾಯಣದಲ್ಲಿ ಅವರೆಲ್ಲರೂ ಸ್ವಯಂಪ್ರಭೆಯ ಗುಹೆಯನ್ನು ಪ್ರವೇಶಿಸಿದಾಗ ನಡೆದ ಆಕೆ ಮತ್ತು ಹನುಮಂತನ ಸಂಭಾಷಣೆಯು ಕುಮಾರ ವಾಲ್ಮೀಕಿಯ

---

1 ಅಗ್ನಿದಿವ್ಯದಿಂದ ನಿನ್ನ ಪಾವಿತ್ರ್ಯವನ್ನು ಪ್ರಸ್ಥಾಪಿಸೆಂಬ ರಾಮನ ಮಾತನ್ನು ಶಿರಸಾವಹಿಸಿ ಸೀತೆ ಅಗ್ನಿಯನ್ನು ಪ್ರವೇಶಿಸುವಳು. ಇತ್ತ ಆಕೆ ಅಗ್ನಿಯನ್ನು ಪ್ರವೇಶಿಸಲು ಅತ್ತ ಪಾರ್ವತಿಯು ಕೈಲಾಸದಿಂದ ಕೆಳಗಿಳಿದು ಬಂದು ರಾಮನಿಗೆ–ಇನ್ನು ನಟನೆ ಸಾಕು. ನೀನು ಸಾಕ್ಷಾತ್ ನಾರಾಯಣ. ಸೀತೆ ಲಕ್ಷ್ಮಿ. ಹೆಚ್ಚು ಪರೀಕ್ಷಿಸದೆ ಅವಳನ್ನು ಸ್ವೀಕರಿಸು, ಎನ್ನುವಳು. ಮುಂದರಿದು ಇದಾದರೂ ಏಕೆ? ಅಗ್ನಿ ಪರೀಕ್ಷೆಯಿಂದ ಅವಳ ಪಾತಿವ್ರತ್ಯವನ್ನು ಒಪ್ಪುವುದಾಗಿ ನೀನೇ ಹೇಳಿರುವುದರಿಂದ ಆ ಪವಿತ್ರಾತ್ಮಳನ್ನು ತಂದೊಪ್ಪಿಸಲು ಅಗ್ನಿಯನ್ನೇ ಕೇಳುತ್ತೇನೆ, ಎನ್ನುವಳು. 'ಕೈ ನೀಡಿ ಬಾರೌ ತಂಗಿ ಬಾ' ಎಂದು ಸೀತೆಯನ್ನು ಕರೆಯುವಳು. ಎಲ್ಲರೂ ಜಯಘೋಷ ಮಾಡುತ್ತಿರುವಾಗ ಅಗ್ನಿಯು 'ನವಶರೀರೆಯ. ಆ ಪರಿಶುದ್ಧಾತ್ಮಳನ್ನು ರಾಮನಿಗೆ ತಂದೊಪ್ಪಿಸುವನು. (ತೊ.ರಾ., ಯು.ಕಾಂ. 53/80, 95/99)'

2 ತೊ.ರಾ. ಕಿ.ಕಾಂ., 8/4,9 ಯು.ಕಾಂ. 55–37.

3 ತೊ.ರಾ., ಕಿ.ಕಾಂ. 8/13ರಿಂದ 15

ಕೃತಿಯಲ್ಲಿ ಜಾಂಬವಂತ–ಸ್ವಯಂಪ್ರಭೆ ಸಂಭಾಷಣವಾಗಿದೆ[1]. ಸಾಗರೋಲ್ಲಂಘನ ಸಂದರ್ಭದಲ್ಲಿ ಲಂಕೆಯಲ್ಲಿ ಮಾಡಬೇಕಿದ್ದ ಕಾರ್ಯದ ಹೊಣೆಯನ್ನು ನೇರವಾಗಿ ವಿವರಿಸಿ ಅದಕ್ಕೆಲ್ಲ ಹನುಮಂತನೋರ್ವನೆ ಸಮರ್ಥನೆಂದು ಅಂಗದನಿಂದಲೇ ನುಡಿಸಿ ಈ ವಿಷಯದಲ್ಲಿ ಪರಸ್ಪರ ಸ್ಪರ್ಧೆ ಅಸಮಾಧಾನಗಳಿಗೆ ಆಸ್ಪದ ದೊರೆಯದಂತೆ ಮಾಡಿರುವನು[2]. ಹನುಮಂತನನ್ನು ಹುರಿದುಂಬಿಸಿ ಕಾರ್ಯದ ಮಹತ್ವವನ್ನು ತಿಳಿಹೇಳಿ, ರಾಮಕಾರ್ಯ ಮತ್ತು ಗುರುವಿನ ಅಂದರೆ ತನ್ನ ಆಜ್ಞೆಯೆಂದು ಅದನ್ನು ತತ್ಪರತೆಯಿಂದ ನಿರ್ವಹಿಸಬೇಕೆಂದು ಮಮತೆಯಿಂದ ಒತ್ತಾಯಪಡಿಸುವನು. ಸೀತೆಯನ್ನು ಕಂಡು ಅವಳಿಗೆ ರಾಮನ ಮುದ್ರಿಕೆಯನ್ನು ಕೊಡುವುದರೊಂದಿಗೆ ರಾಮ–ರಾವಣ ಯುದ್ಧ ಪ್ರಸಕ್ತಿಯಲ್ಲಿ ಅಗತ್ಯವಿರುವ ಶತ್ರುವಿನ ಬಲಾಬಲ ವಿಚಾರವನ್ನು ತಿಳಿದು ಬರಲು ಆದೇಶಿಸುವನು[3]. ವಾಲ್ಮೀಕಿ ರಾಮಾಯಣದಲ್ಲಿ ಹನುಮಂತನು ಈ ಕಾರ್ಯವನ್ನು ತಾನಾಗಿಯೆ ತಿಳಿದು ಮಾಡಿರುವನು[4]. ಹನುಮಂತನ ಮೇಲಿನ ಜಾಂಬವಂತನ ಪ್ರೀತಿ ಅಭಿಮಾನಗಳು ಅಷ್ಟಿಷ್ಟಲ್ಲೆಂಬುದನ್ನು ಆತ ಸೀತೆಯನ್ನು ಕಂಡು ಮರಳಿದಾಗ ಜಾಂಬವಂತನ–

ವೀರ ಬಂದ್ಯೆ ಸ್ವಾಮಿ ಕಾರ್ಯೋ-
ದ್ಧಾರ ಬಂದ್ಯೆ ಕೀಶಕುಲವನ
ವಾರಿರುಹ ದಿನನಾಥ ಬಂದ್ಯೆ ತಂದೆಯೆನುತ।
ಸೋರುವಾನಂದಾಶ್ರು ಪುಳಕದ
ಪೂರಣದಲೆತ್ತಿದನು ಪವನ
ಕುಮಾರಕನ ಮಸ್ತಕವ ನಲಿದೊಲಿದಬುಜಭವಸೂನು॥ (ಸುಂ. 9–8)

ಈ ಮಾತುಗಳಿಂದ ಕಾಣಬಹುದು. ಹನುಮಂತನಾದರೂ ಜಾಂಬವಂತನು ಹಿರಿಯ. ಹಿತಚಿಂತಕ ಅನುಭವಿಕ, ಸಮರ್ಥ, ಎಂದು ಅವನನ್ನು ಅಷ್ಟೇ ಭಕ್ತಿಗೌರವಗಳಿಂದ ಕಾಣುವನು. ಅವನ ಆದೇಶ ನಿರ್ದೇಶಗಳನ್ನು ಮರುಮಾತಿಲ್ಲದೆ ಶ್ರದ್ಧೆಯಿಂದ ಶಿರಸಾವಹಿಸಿ ನಿರ್ವಹಿಸುವನು.

ಹನುಮಂತ ಅಪ್ರತಿಮ ರಾಮಭಕ್ತ, ಬಲಿಷ್ಠ. ಬುದ್ಧಿವಂತ, ಯುಕ್ತಿವಂತ. ಶೂರ. ಸಾಹಸಿ. ಪಂಡಿತ, ಮುತ್ಸದ್ದಿ, ಮೊದಲಾದ ಅನೇಕ ಸದ್ಗುಣಗಳ ಖಣಿ ಹನುಮಂತ ಎಂಬುವಲ್ಲಿ ಎರಡು ಮಾತುಗಳಿಲ್ಲವಾದರೂ ವಾಲ್ಮೀಕಿ ರಾಮಾಯಣದಲ್ಲಿ ಚಿತ್ರಿತವಾದ ಹನುಮಂತನ ಪಾತ್ರದಲ್ಲಿ ವಿಮರ್ಶಕರು ಕೆಲವು ಲೋಪದೋಷಗಳನ್ನು ಎಣಿಸಿರುವರು. ಹನುಮಂತನ ಬಾಲ್ಯದಲ್ಲಿ ಅವನ ಕಿಡಿಗೇಡಿತನಕ್ಕೆ ಬೇಸತ್ತು ಮುನಿಯೋರ್ವನು–ನಿನ್ನ ವಿದ್ಯೆ ಜಾಣ್ಮೆಗಳೆಲ್ಲ ಮರೆತು ಹೋಗಲಿ ಎಂದು ಶಾಪಿಸುವನು. ಮರುಕ್ಷಣದಲ್ಲಿ ಪಶ್ಚಾತ್ತಾಪ ಪಟ್ಟು ಯಾರಾದರೂ ನೆನಪು ಮಾಡಿದರೆ ಅವೆಲ್ಲ ನಿನಗೆ ಮರಳಿ ಅವಗತವಾಗಲಿ, ಎಂದು ಅನುಗ್ರಹಿಸಿದನೆಂಬ ಕಥೆ ಬರುತ್ತದೆ. ಉತ್ತರ ಕಾಂಡದಲ್ಲಿ. ಹನುಮಂತನ ಸಾಹಸ ಮಹಿಮೆಗಳನ್ನು ಬಣ್ಣಿಸುತ್ತ–ಮನಸ್ಸು ಮಾಡಿದ್ದರೆ ಅವನೇ ವಾಲಿಯನ್ನು ಗೆಲ್ಲಬಹುದಿತ್ತು. ಎಂಬ ಶ್ರೀರಾಮನ ಮಾತಿಗೆ ಅಗಸ್ತ್ಯನು ನಿಜ. ಆದರೆ ತನ್ನಲ್ಲಿ ಅಷ್ಟೊಂದು ಬಲವಿದ್ದಿತೆಂಬುವರ ಅರಿವು ಅವನಿಗೆ ಇದ್ದಿಲ್ಲ. ಅನ್ಯರಾರೂ ಅದನ್ನು ಅವನ ಜ್ಞಾಪಕಕೆ ತರಲಿಲ್ಲ. ಎಂದು ಹೇಳಿ ಈ ಕಥೆಯನ್ನು

---

[1] ಅದೇ, 10/18ರಿಂದ 26.
[2] ಅದೆ ; 12/10
[3] ಅದೇ, 12/14–15.
[4] ವಾ.ರಾ., ಸುಂ.ಕಾಂ. 41/1ರಿಂದ 8.

ಹೇಳಿರುವನು.[1] ವಿಮರ್ಶಕರು ಈ ಕಥೆಗೂ ಹನುಮಂತನವೆಂದು ತಾವು ಬಗೆವ ಲೋಪದೋಷಗಳಿಗೂ ಸಂಬಂಧ ಜೋಡಿಸಿ ಅವೆಲ್ಲ ಅವನ ಸ್ಮೃತಿದೋಷಗಳು ಇರಬಹುದು. ಅನ್ಯಥಾ ಆಗಲಾರವು ಎಂದಿರುವರು.[2]

ಕುಮಾರ ವಾಲ್ಮೀಕಿಯು ಕೆಲವೆಡೆ ಆ ಲೋಪದೋಷಗಳಿರುವ ಸಂದರ್ಭಗಳನ್ನು ಬಿಟ್ಟು, ಕೆಲವೆಡೆ ಕಥೆಯನ್ನು ಮಾರ್ಪಡಿಸಿ ತನ್ನ ಹನುಮಂತನ ಪಾತ್ರವನ್ನು ಚಿತ್ರಿಸಿರುವನು. ಇವು ಕಥೆಯನ್ನು ಮಾರ್ಪಡಿಸಿ ಸರಿಪಡಿಸಿಕೊಂಡ ವಾಲ್ಮೀಕಿ ರಾಮಾಯಣದಲ್ಲಿಯ ಹನುಮಂತನ ಲೋಪದೋಷಗಳು– ಅಶೋಕ ವನದಲ್ಲಿ ಸೀತೆಯನ್ನು ಕಂಡು ರಾಮ ಲಕ್ಷ್ಮಣರ ವೃತ್ತಾಂತವನ್ನು ಅರುಹಿ ಹನುಮಂತ ಜಾಣ್ಮೆಯಿಂದ ಅವಳ ವಿಶ್ವಾಸವನ್ನು ಸಂಪಾದಿಸುವನು. ಶೀಘ್ರದಲ್ಲಿಯೆ ಶ್ರೀರಾಮನು ಅಸಂಖ್ಯ ಕಪಿ ಬಲದೊಂದಿಗೆ ಬಂದು ನಿನ್ನನು ಬಿಡಿಸಿಕೊಂಡು ಹೋಗುವನು ಎಂದು ಅವಳನ್ನು ಸಂತೈಸುವನು. ಸೀತೆ ಇದೇನೋ ಸರಿ. ಆದರೆ ಹೀಗಾಗುವುದು ಎಂದಿಗೊ, ಎಂದು ಖಿನ್ನಳಾಗಿ ನುಡಿಯುವಳು. ಉತ್ಸಾಹದ ಭರದಲ್ಲಿ ಹನುಮಂತ–ತಾಯಿ, ನಿರಾಶಳಾಗಬೇಡ. ಶ್ರೀರಾಮನು ಶೀಘ್ರದಲ್ಲಿ ಬಂದೇ ಬರುತ್ತಾನೆ. ಅಲ್ಲಿಯ ವರೆಗೆ ತಡೆಯಲಾರೆಯಾದರೆ, ಇಗೋ ನನ್ನ ಬೆನ್ನ ಮೇಲೆ ಏರು. ನಿನ್ನನ್ನು ಕರೆದು ಕೊಂಡು ಕ್ಷಣಮಾತ್ರದಲ್ಲಿ ಈ ಸಮುದ್ರವನ್ನು ದಾಟುತ್ತೇನೆ. ನಿನ್ನನ್ನು ಮಾತ್ರವೇ ಅಲ್ಲ. ಕೋಟೆ ಕೊತ್ತಲುಗಳು ಸಹಿತ ಈ ಲಂಕೆಯನ್ನೇ ಕಿತ್ತು ಎತ್ತಿಕೊಂಡು ಹೋಗಬಲ್ಲೆ. ಎನ್ನುವನು. ಹನುಮಂತನ ಪರಾಕ್ರಮ, ಭಕ್ತಿ,ಸದಿಚ್ಛೆಗಳ ವಿಷಯದಲ್ಲಿ ಸಂದೇಹವಿಲ್ಲದಿದ್ದರೂ ಸೀತೆ ಅತನೊಡನೆ ಹಾಗೆ ಹೋಗಲು ಒಪ್ಪುವುದಿಲ್ಲ. ಆಕೆ–ಅಯ್ಯಾ ಮಾರುತಿಯೆ. ನೀನು ಶಕ್ತನಿದ್ದರೂ ನಿನ್ನೊಡನೆ ನಾನು ಬರುವುದು ಯುಕ್ತವಾಗದು. ನೀನು ವಾಯುವೇಗದಿಂದ ಆಕಾಶ ಮಾರ್ಗದಲ್ಲಿ ಹೋಗುವಾಗ ನಾನು ಭಯದಿಂದ ಕೆಳಗೆ ಸಮುದ್ರದಲ್ಲಿ ಬೀಳಬಹುದು. ನನ್ನನ್ನು ಎತ್ತಿಕೊಂಡು ಹೊರಟೊಡನೆ ರಾಕ್ಷಸರು ನಿನ್ನನ್ನು ಬೆನ್ನಟ್ಟುವುದು ನಿಶ್ಚಯ. ಆಗ ನೀನು ನನ್ನನ್ನು ರಕ್ಷಿಸಿಕೊಂಡು ಅವರೊಡನೆ ಯುದ್ಧ ಮಾಡಬೇಕಾಗುವುದ ಅದು ದುಸ್ತರವಾದ ಕೆಲಸ. ಎಲ್ಲಕ್ಕೂ ಹೆಚ್ಚಾಗಿ ಪತಿಪರಾಣೆಯಾದ ನಾನು ಪರಪುರುಷರ ದೇಹವನ್ನು ಮುಟ್ಟುವುದು ಸರ್ವಥಾ ನಿಷಿದ್ಧ. ರಾವಣ ನನ್ನನ್ನು ಮುಟ್ಟಿದ್ದೇನೋ ನಿಜ. ಆದರೆ ಅದು ಅನಿವಾರ್ಯ ವಾಗಿತ್ತು. ಆಗ ನಾನು ಪರಾಧೀನೆಯಾಗಿದ್ದೆ. ಈಗ ಅಂತಿಲ್ಲ. ರಾಮ ಲಕ್ಷ್ಮಣರು ಬಂದೇ ನನ್ನನ್ನು ಮುಕ್ತಳಾಗಿಸಬೇಕು. ಅವರನ್ನು ಬೇಗ ಬರುವಂತೆ ಮಾಡು, ಎಂದು ಪರಿಸ್ಥಿತಿಯನ್ನು ತಿಳಿ ಹೇಳುವಳು. ಹನುಮಂತ ಅದೇ ಸರಿಯೆಂದು ಒಪ್ಪಿಕೊಳ್ಳುವನು. ಶ್ರೀರಾಮನನ್ನುಳಿದು ಇತರರನ್ನೂ ಮುಟ್ಟುವುದಿಲ್ಲೆಂಬ ಮಾತು ಸಾಧ್ವಿಯಾದ ನಿನಗೆ ಒಪ್ಪತಕ್ಕದ್ದೇ ಸರಿ, ಎನ್ನುವನು[3].

ಪ್ರಥಮ ದರ್ಶನದಲ್ಲಿಯೆ ಚಾಣಾಕ್ಷ,ಮಾತಿನಲ್ಲಿ ಜಾಣ. ಎಂದು ಸ್ವಯಂ ಶ್ರೀರಾಮನಿಂದಲೇ ಮೆಚ್ಚುಗೆ ಪಡೆದ ಹನುಮಂತ ಉತ್ಸಾಹದ ಭರದಲ್ಲಿ ಸೀತೆ ಏಕಪತಿವಳೆಂಬುದನ್ನು ಮರೆತು ಅವಳನ್ನು ತಾನೇ ಕರೆದುಕೊಂಡು ಹೋಗುವ ಪ್ರಸ್ತಾಪವನ್ನು ಎತ್ತಬಾರದಿತ್ತು ಎಂದಿರುವರು ವಿಮರ್ಶಕರು.[4]

ಕುಮಾರ ವಾಲ್ಮೀಕಿಯ ಕೃತಿಯಲ್ಲಿ ಸೀತೆ ತನ್ನ ಮುಕ್ತತೆಯ ವಿಷಯದಲ್ಲಿ ನಿರಾಶೆಯನ್ನು ವ್ಯಕ್ತ ಪಡಿಸಿದಾಗ ಹನುಮಂತ–

ಏನು ಮಾಡಲಿ ತಾಯೆ ತಪ್ಪಿತು
ತಾನಲೇ ಕಡು ಮೋಸವ್ಪೋದೆನು
ಹೀನವಾದುದು ಬಂಟತನವಿನ್ನೆಂದು ಫಲವೇನು।
ಈ ನಿಶಾಟನ ಕೊಂದು ನಿಮ್ಮುವ

---

1 ವಾ.ರಾ. ಉ.ಕಾಂ. ಸರ್ಗ–35,36.

2 ರಾ. ಉಪನ್ಯಾಸಗಳು ಪು. 254 ಮುಂದೆ.

3 ವಾ.ರಾ. ಸುಂ.ಕಾಂ. ಸ. 37–38

4 ರಾ. ಉಪನ್ಯಾಸಗಳು, ಪು. 265–66.

ನಾನರೇಂದ್ರನ ಬಳಿಗೆ ಕೊಂಡೊ
ಯ್ವೀ ನೆನಹನೆಚ್ಚರಿಸದಾದೆನು ಬರುತ ತಾನೆಂದ॥ (ಸು. 3–99)

ನಾನು ಹೊರಡುವಾಗಲೇ ನಿನ್ನನು ಬಿಡಿಸಿಕೊಂಡು ಬರುವ ವಿಷಯದಲ್ಲಿ ಶ್ರೀರಾಮನನ್ನು ವಿಚಾರಿಸ ಬೇಕಿತ್ತು. ತಪ್ಪಿತು, ನನ್ನ ಬಂಟತನ ವ್ಯರ್ಥವಾಯಿತು. ಎಂದು ಕೊರಗುವನು. ಮುಂದರಿದು–

ಮಾಣಲದು ಕೊಂಡೊಯ್ವನೇ ತವ
ಪ್ರಾಣ ಪತಿಯೇನೆಂಬನೋ ನಿಮ
ಗೂಣಯುವ ಹೊಳಿಸುವನೊ ಕೊಳಿತೆಯ ಹಾಯ್ಕುವನೊ ತನಗೆ।
ಕಾಣಬಾರದು ಹಗೆಯ ವಿಗತ
ಪ್ರಾಣದಲಿ ನಿಮ್ಮುವನು ತೆಗೆವುದು
ಜಾಣತನದಭಿಯೋಗ ರಾಮಂಗೆಂದನಾ ಹನುಮ॥ (ಅದೇ 100)

ಈಗ ನಾನೇ ನಿನ್ನನ್ನು ಕರೆದುಕೊಂಡು ಹೋಗುವುದು ಯುಕ್ತವಾಗದು. ಅದರಿಂದ ಶ್ರೀರಾಮನ ಮನಸ್ಸೆಂತಾಗುವದೊ ತಿಳಿಯದು. ನಿನಗೂ ಅಪವಾದ ತಟ್ಟಬಹುದು. ನನ್ನ ದಕ್ಷತೆಗೆ ಲೋಪಬರ ಬಹುದು. ಶ್ರೀರಾಮನೇ ಬಂದು ರಾವಣನನ್ನು ಕೊಂದು ನಿನ್ನನು ಕರೆದುಕೊಂಡು ಹೋಗುವುದು ಜಾಣತನದ ಅಭಿಯೋಗ ಎಂದು ಅವಳನ್ನು ಸಂತೈಸುವನು.

ಎರಡನೆಯ ಸಂದರ್ಭ ವಿಭೀಷಣನು ರಾವಣನನ್ನು ತ್ಯಜಿಸಿ ರಾಮನಿಗೆ ಶರಣು ಬಂದ ಸಮಯ ದಲ್ಲಿ. ವಿಭೀಷಣನನ್ನು ಪರಿಗ್ರಹಿಸುವ ವಿಷಯದಲ್ಲಿ ಸುಗ್ರೀವಾದಿಗಳು ಪ್ರತಿಕೂಲ ಅಭಿಪ್ರಾಯವನ್ನು ವ್ಯಕ್ತಪಡಿಸುವರು. ಹನುಮಂತನೊಬ್ಬ–ಶ್ರೀರಾಮಚಂದ್ರ, ರಾವಣನಲ್ಲಿರುವ ದುಷ್ಟತನಕ್ಕೆ ರೋಸಿ, ನಿನ್ನ ಪರಾಕ್ರಮ ಸದ್ಗುಣಗಳಿಗೆ ಮೆಚ್ಚಿ ವಿಭೀಷಣನು ಇಲ್ಲಿಗೆ ಬಂದಿರುವನು. ಅವನ ಅಂತರಂಗದಲ್ಲಿ ಯಾವುದೇ ಬಗೆಯ ಮೋಸವಿರುವಂತೆ ತೋರುವುದಿಲ್ಲ. ವಾಲಿವಧೆ, ಸುಗ್ರೀವಾಭಿಷೇಕ, ಸದ್ಯದ ನಿನ್ನ ಸಮರಸಿದ್ಧತೆಯನ್ನು ಕಂಡು ತಾನೂ ರಾಜ್ಯವನ್ನು ಬಯಸಿ ನಿನ್ನೆಡೆ ಬಂದಂತಿದೆ. ಅವನನ್ನು ಪರಿಗ್ರಹಿ ಸುವುದು ಯುಕ್ತವೆಂದು ತೋರುವುದು. ಎನ್ನುವನು. ಶ್ರೀರಾಮನು ಎಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡು ಶರಣಾಗತ ರಕ್ಷಕನೆಂಬ ತನ್ನ ಪ್ರತಿಜ್ಞೆಯನ್ನು ನೆನೆದು ಅಭಯವಿತ್ತು ವಿಭೀಷಣನನು ಪರಿಗ್ರಹಿಸುವನು[1].

ಈ ಮಾತುಗಳ ಜೊತೆಗೆ ಹನುಮಂತನು ಲಂಕೆಯಲ್ಲಿ ರಾವಣನನ್ನು ಸಂಧಿಸಿದಾಗ ಕೋಪದಿಂದ ಅವನು ತನಗೆ ದೇಹಾಂತ ಶಿಕ್ಷೆಯನ್ನು ವಿಧಿಸಿದ್ದನ್ನೂ ಆಗ ವಿಭೀಷಣನು ನಡುವೆ ಬಂದು ದೂತರನ್ನು ಕೊಲ್ಲುವುದು ನೀತಿ ವಿರುದ್ಧ ಎಂದು ಹೇಳಿ ತನ್ನನ್ನು ಉಳಿಸಿದ್ದನ್ನೂ ಉಲ್ಲೇಖಿಸಬೇಕಿತ್ತು. ಸುಂದರ ಕಾಂಡದಲ್ಲಿ ಲಂಕೆಯಿಂದ ಮರಳಿದ ಬಳಿಕ ಹನುಮಂತನು ರಾಮನಿಗೊಪ್ಪಿಸಿದ ವರದಿಯಲ್ಲಿ ಹನುಮಂತ ಇದನ್ನು ಉಲ್ಲೇಖಿಸಿದ್ದರೂ (ಸ. 58–145–149) ವಿಭೀಷಣನ ಸಮಗ್ರ ಚರಿತ್ರವನ್ನು ಅವಲೋಕಿಸಿ ಅವನನ್ನು ಪರಿಗ್ರಹಿಸಬೇಕಿದ್ದ ಈ ಸನ್ನಿವೇಶದಲ್ಲಿ ಹನುಮಂತನು ಈ ಮಾತನ್ನು ಹೇಳದಿರುವುದು ಒಂದು ಲೋಪವೇ ಸೈ ಎಂಬ ಮಾತಿದೆ[2].

ತೊರವೆ ರಾಮಾಯಣದಲ್ಲಿ ಹನುಮಂತನು ರಾಮನ ಆದೇಶದ ಮೇರೆಗೆ ವಿಭೀಷಣನನ್ನು ಸಂಧಿಸಿ, ವೃತ್ತಾಂತವನ್ನು ತಿಳಿದುಕೊಂಡು, ರಾಮನಿಗೆ–ಜೀಯ, ಈಗ ಬಂದವನು ರಾವಣನ ತಮ್ಮ

---

[1] ವಾ.ರಾ. ಯು.ಕಾಂ., ಸ. 17–18

[2] ರಾ. ಉಪನ್ಯಾಸಗಳು, ಪು. 238

ವಿಭೀಷಣ. ಶೂರ, ಧೀರ, ಧಾರ್ಮಿಕ. ಲಂಕೆಯಲ್ಲಿ ಮರಣ ದಂಡನೆಯಿಂದ ನನ್ನನ್ನು ಉಳಿಸಿದವ, ರಾವಣನ ದುಷ್ಟತನವನ್ನು ಸಹಿಸಲಾಗದೆ ರಕ್ಷಣೆಗಾಗಿ ನಮ್ಮತ್ತ ಬಂದಿರುವನು, ಎನ್ನುವನು. ಇವು ಅವನ ಮಾತುಗಳು–

ಜೀಯ ಬಂದವನೀಗ ರಕ್ಕಸ
ರಾಯನನುಜನು ನೀತಿವಿದನಸ-
ಹಾಯ ಶೂರನುದಾರ ಧೀರ ಗಂಭೀರ ಧಾರ್ಮಿಕನು।
ಮಾಯೆ ಹೊಗದೀತನಲಿ ಹಿಂದೆ ಸ-
ಹಾಯ ವಚನದಲೆನ್ನ ಬಂಧನ
ದಾಯತವ ಬಿಡಿಸಿದನು ತಪ್ಪಿಲ್ಲಸುರನೊಳಗೆಂದ॥ (ಯು. ಕಾಂ. 3–14)

ಮನಮುನಿಸು ಬಳಿಕಾಯ್ತು ಗಡ ಖಳ-
ಜನಪನೊಡನೀತಂಗೆ ದೇವರ
ವನಿತೆಯರ ಬಿಡಹೇಳಿದರೆ ಬಿಡದೀ ವಿಭೀಷಣನ
ಅನುಜನೆಂಬೋವದೆ ವಿರೋಧಿಸಿ
ಕನಲಿ ನೂಕಿದ ಗಡ ಭವತ್ಪದ
ವನರುಹವನೋಲೈಸಿ ಬದುಕಲು ಬಂದ ಗಡಯೆಂದ॥ (ಅದೇ, 15)

ಮೂರನೆಯ ಸಂದರ್ಭ ರಾಮ–ರಾವಣ ಯುದ್ಧ ಸಮಯದಲ್ಲಿದೆ. ರಾವಣನು ಎಸೆದ ಶಕ್ತಿಯ ಆಘಾತದಿಂದ ಲಕ್ಷ್ಮಣನು ನಿಶ್ಚೇಷ್ಟನಾಗಿ ನೆಲಕ್ಕುರುಳುವನು. ರಾಮನು ಕಲ್ಲು ಕರಗುವಂತೆ ವಿಲಾಪಿಸುವನು. ರಾಮನನ್ನು ಸಂತೈಸಿ ಸುಷೇಣನು ಹನುಮಂತನಿಗೆ ಮತ್ತೊಮ್ಮೆ ಔಷಧೀ ಪರ್ವತಕ್ಕೆ ಹೋಗಿ ಸಂಜೀವಿನಿ, ವಿಶಲ್ಯಕರಣಿ ಮೊದಲಾದ ಮೂಲಿಕೆಗಳನ್ನು ತರಹೇಳುವನು. ಅವಸರದಲ್ಲಿ ಸುಷೇಣ ವಿವರಿಸಿದ ಅವುಗಳನ್ನು ಗುರುತಿಸುವ ಬಗೆಯನ್ನು ಮರೆತು ಬಿಡುವನು. ಹೆಚ್ಚು ಕಾಲ ಹರಣ ಮಾಡದೆ ಆ ಪರ್ವತವನ್ನೇ ಕಿತ್ತುಕೊಂಡು ಸುಷೇಣನ ಮುಂದಿರಿಸಿ ನಿನಗೆ ಬೇಕಾದ ಮೂಲಿಕೆಗಳನ್ನು ನೀನೇ ಹುಡುಕಿಕೊ ಎನ್ನುವನು. ಸುಷೇಣನು ನಕ್ಕು ತನಗೆ ಬೇಕಾದ ಮೂಲಿಕೆಗಳನ್ನು ತೆಗೆದುಕೊಂಡು ಲಕ್ಷ್ಮಣನನ್ನು ಉಪಚರಿಸುವನು. ಲಕ್ಷ್ಮಣನು ಎದ್ದು ಕೂಡುವನು[1]. ಇದಕ್ಕೆ ಮೊದಲು ಇಂದ್ರಜಿತುವಿನ ಬ್ರಹ್ಮಾಸ್ತ್ರದಿಂದ ಕಪಿಬಲವೆಲ್ಲ, ರಾಮ ಲಕ್ಷ್ಮಣರು ಸಹ, ನೆಲಕ್ಕೊರಗಿದಾಗ ಹನುಮಂತನು ಹೀಗೆಯೆ ಮಾಡಿದ್ದನು. ಅವರೆ ಕೆಲಸವಾದ ಬಳಿಕ ಆ ಪರ್ವತವನ್ನು ಅದಿದ್ದ ಸ್ಥಳದಲ್ಲಿರಿಸಿದ್ದನು[2]. ಈ ಸಲ ಸಹ ಹನುಮಂತ ಅದನ್ನು ಮರಳಿ ಅದರ ಸ್ಥಳದಲ್ಲಿಟ್ಟನೆಂಬ ಮಾತಿಲ್ಲ. ವಿಮರ್ಶಕರು ಇದಾದರೂ ಹನುಮಂತನ ಸ್ಮೃತಿದೋಷದ್ದೊಂದು ಉದಾಹರಣೆ ಎಂದಿರುವರು[3].

ತೊರವೆ ರಾಮಾಯಣದಲ್ಲಿ ಜಾಂಬವಂತನು ಹಿಂದೆ ಮಾಡಿದಂತೆ ಈಗ ಸಹ ಪರ್ವತವನ್ನು ಕಿತ್ತು ತರಬೇಡೆಂದು ಹನುಮಂತನನ್ನು ಸ್ಪಷ್ಟವಾಗಿ ಎಚ್ಚರಿಸುವನು. ಪರ್ವತದ ಕಾವಲುಗಾರರು ಅವನಿಗೆ ಬೇಕಾದ ಮೂಲಿಕೆಗಳನ್ನು ಕಿತ್ತುಕೊಡುವರು. ಹನುಮಂತ ಅವುಗಳ ಹೊರೆಯನ್ನು ಬಾಲಕ್ಕೆ ಕಟ್ಟಿಕೊಂಡು ಮರಳಿ ಬಂದಿಳಿಯುವನು. ಇವು ಆ ಸಂದರ್ಭದಲ್ಲಿಯ ಪದ್ಯಗಳು–

---

1 ವಾ.ರಾ. ಸರ್ಗ–101

2 ವಾ.ರಾ. ಯು.ಕಾಂ. ಸ. 74

3 ರಾ. ಉಪನ್ಯಾಸಗಳು, ಪು. 260

ಕರೆದು ಜಾಂಬವ ಕಲಿ ಸುಷೇಣಕ
ರೊರೆದರೀತಂಗಂದಿನಂದದಿ
ಗಿರಿಯ ತರಬೇಡೌಷಧಿಯ ನೀ ಬಲ್ಲ ಮೂಲಿಕೆಯ।
ತಿಳಿದು ತಾ ಹೋಗೆಂಬ ನುಡಿಯಿಂ
ದಿರವು ವಾಯುಸ್ಕಂದದಲಿ ಗೋ-
ಚರಿಸಿತಳಿದಿಪ ಬಟ್ಟೆಯೊಳು ಧಾಳಿಟ್ಟನಾ ಗಿರಿಗೆ॥ (ಯು. ಕಾಂ.47–48)

ಅಂದಿನಗ್ಗದ ವೀರ ಮತ್ತೆ
ತಂದನೆಂದಾ ಗಿರಿಯ ಕಾಪಿನ
ಮಂದಿ ತಮತಮಗಳಿಸಿ ಕಿತ್ತಿತ್ತರು ಮಹೌಷಧಿಯ।
ಅಂದು ಬಾಲದಲಗ್ನಿ ದೇವರ-
ನಿಂದಿರಿಸಿದಲೌಷಧಿಯ ಹೊಚ್ಚಿ
ಯಿಂದ ಹೊಳೆಹೊಳೆವುತ್ತ ಬಂದನು ರಾಮನಿದ್ದೆಡೆಗೆ॥ (ಅದೇ 51)

ಇವು ವಿಮರ್ಶಕರು ಬೆರಳಿಟ್ಟು ತೋರಿಸಿದ ಸಂದರ್ಭ ಇಲ್ಲವೆ ಅದರಲ್ಲಿಯ ಅಂಶಗಳನ್ನು ಬಿಟು ಸರಿಪಡಿಸಿಕೊಂಡ ಲೋಪದೋಷಗಳು-

1. ವಾಲಿಯ ಭಯದಿಂದ ಸುಗ್ರೀವನು ಹನುಮಂತಾದಿ ತನ್ನ ಅನುಯಾಯಿಗಳೊಂದಿಗೆ ಋಷ್ಯಮೂಕ ಪರ್ವತದಲ್ಲಿ ವಾಸಿಸುತ್ತಿರುವಾಗ ರಾಮಲಕ್ಷ್ಮಣರು ಅಲ್ಲಿಗೆ ಬರುವರು. ಅವರು ವಾಲಿಯ ಗೂಢಚಾರರೆಂದು ಬಗೆದು ಭಯದಿಂದ ಸುಗ್ರೀವ ಮತ್ತು ಹನುಮಂತಾದಿ ಅವನ ಅನುಯಾಯಿಗಳು ಕಂಗೆಟ್ಟು ಓಡತೊಡಗುವರು. ನಿಜಕ್ಕೂ ಋಷಿಶಾಪದ ಮೂಲಕ ವಾಲಿ ಅಲ್ಲಿ ಬರುವಂತಿರಲಿಲ್ಲ. ಹನುಮಂತನಿಗೆ ಇದು ಗೊತ್ತಿತ್ತು. ಅವನ ಸಲಹೆಯ ಮೇರೆಗೇನೆ ಸುಗ್ರೀವ ಅಲ್ಲಿ ವಾಸಿಸುತ್ತಿದ್ದ. ಆದರೂ ಸುಗ್ರೀವ ಓಡತೊಡಗಲು ಅವನೊಂದಿಗೆ ಹನುಮಂತಾದಿಗಳೂ ಓಡುವರು. ಓಡಿ ಓಡಿ ದಣಿದು ಉಸ್ಸೆಂದಾಗ ಅದು ಸುರಕ್ಷಿತ ಸ್ಥಳ, ವಾಲಿ ಅಲ್ಲಿಗೆ ಬರಲಾರ, ಎಂಬುದು ಹನುಮಂತನ ಲಕ್ಷ್ಯಕ್ಕೆ ಬರುವುದು. ಸುಗ್ರೀವನ ಭಯ ಅಡಗುವುದು. ಅವನ ಆದೇಶದ ಮೇರೆಗೆ ಹನುಮಂತ ರಾಮ ಲಕ್ಷ್ಮಣರನ್ನು ಕಾಣಲು ತೆರಳುವನು1.

2. ರಾಮ ಸುಗ್ರೀವರ ಸ್ನೇಹದ ಒಡಂಬಡಿಕೆಯಲ್ಲಿ ವಾಲಿಯನ್ನು ಸಂಹರಿಸಿ ಕಪಿರಾಜ್ಯವನ್ನು ಕೊಡುವುದಾಗಿ ಸುಗ್ರೀವನಿಗೆ ರಾಮನು ಅಭಿವಚನವಿದ್ದರೂ ಹನುಮಂತ ಅದನ್ನು ಮರೆತು ವಾಲಿಯ ಮರಣ ಸಮಯದಲ್ಲಿ,-ವಾಲಿಯ- ನಂತರ ಅಂಗದನೇ ರಾಜನಾಗುವನು, ನೀನು ರಾಜಮಾತೆಯಾಗುವಿ. ದುಃಖವನ್ನು ನುಂಗಿಕೊಂಡು ಸಮಾಧಾನವನ್ನು ತಾಳು, ಎಂದು ತಾರೆಯನ್ನು ಸಂತೈಸುವನು2.

3. ಹನುಮಂತನ ಉಪಸ್ಥಿತಿಯಲ್ಲಿ ಸೀತಾ ಶೋಧನೆಗಾಗಿ ಕಪಿಸೈನ್ಯವನ್ನು ಕಲೆ ಹಾಕಲು ಸುಗ್ರೀವನು ಆಜ್ಞೆಯನ್ನಿತ್ತಿದ್ದರೂ ಆ ಆಜ್ಞೆಯು ಹೇಗೋ ಅಲಕ್ಷಿತವಾಗಿತ್ತು. ಹನುಮಂತ ಅದನ್ನು ಸುಗ್ರೀವನ ಗಮನಕ್ಕೆ ತಂದು ಕಪಿಸೈನ್ಯವನ್ನು ಸಕಾಲದಲ್ಲಿ ಬರಮಾಡಿಕೊಳ್ಳಬೇಕಾಗಿತ್ತು. ಬದಲಾಗಿ ಪರಿಸ್ಥಿತಿಯನ್ನು ಅರಿತುಕೊಳ್ಳಲು ಲಕ್ಷ್ಮಣನು ಬಂದಾಗ ರಾಮಕಾರ್ಯವನ್ನು ಅಲಕ್ಷಿಸಿದ್ದಕ್ಕೆ ಸುಗ್ರೀವನನ್ನು ಜರಿದು, ಈಗ ಕ್ಷಮೆ ಕೇಳುವುದೊಂದೇ ಉಪಾಯ ಎನ್ನುವನು3. ತಾರೆ ಮುಂದೆ ಬಂದು ಜಾಣತನದಿಂದ ಲಕ್ಷ್ಮಣನನ್ನು ಸಮಾಧಾನ ಪಡಿಸುವಳು.

---

1 ವಾ.ರಾ. ಕಿ. ಕಾಂ. ಸ. 2/9ರಿಂದ 18, 46–21ರಿಂದ 24: ರಾ. ಉಪನ್ಯಾಸಗಳು ಪು.253.
2 ವಾ.ರಾ. ಕಿ.ಕಾಂ. ಸ. 10/33–34, 21/10–11; ರಾ. ಉಪನ್ಯಾಸಗಳು, ಪು. 256
3 ವಾ.ರಾ.ಕಿ.ಕಾಂ. ಸ. 29/28ರಿಂದ 30, 32/10 ಮುಂದೆ; ರಾ. ಉಪನ್ಯಾಸಗಳು, ಪು. 259.

4. ತಾನೊಬ್ಬ ಮಹಾ ನೀತಿಜ್ಞ ಎಂಬುದನ್ನು ಮರೆತು ಅಶೋಕ ವನದಲ್ಲಿ ಸೀತೆಯನ್ನು ಪೀಡಿಸುತ್ತಿದ್ದ ರಾಕ್ಷಸಿಯರನ್ನು ಕಂಡು ಹನುಮಂತ–ಅಮ್ಮಾ ಅಪ್ಪಣೆಕೊಡು. ಇವರೆಲ್ಲರನ್ನು ಕ್ಷಣಾರ್ಧದಲ್ಲಿ ಇಲ್ಲದಂತಾಗಿಸುವೆನು. ಎನ್ನುವನು. ಸೀತೆ–ಅದು ಸರಿಯಲ್ಲ. ಎಷ್ಟೆಂದರೂ ಅವರು ಸೇವಕರು. ತಮ್ಮ ಒಡೆಯನ ಆಜ್ಞೆಯನ್ನು ಪಾಲಿಸುತ್ತಿರುವರು. ಅವರಲ್ಲಿ ಅವರ ತಪ್ಪಿಲ್ಲ. ಹಿಂಸೆಯಿಂದ ಹಿಂಸೆಯ ಪ್ರತೀಕಾರ ಸಲ್ಲದು. ಎನ್ನುವಳು. ಹನುಮಂತನು ತಲೆಬಾಗಿ ಇದೇ ಸರಿ. ಶ್ರೀರಾಮನ ಪತ್ನಿಯಾದ ನೀನು ನಿನ್ನ ಯೋಗ್ಯತೆಗೆ ತಕ್ಕಂತೆ ನುಡಿದೆ ಎನ್ನುವನು[1].

5. ರಾವಣ ವಧೆಯ ನಂತರ ಅಯೋಧ್ಯೆಗೆ ಮರಳುವಾಗ ಭರತನಿಗೆ ತನ್ನ ಆಗಮನದ ವಾರ್ತೆಯನ್ನು ತಿಳಿಸಿ ಆ ವಿಷಯದಲ್ಲಿ ಆತನ ಪ್ರತಿಕ್ರಿಯೆಯನ್ನು ಬೇಗನೇ ಮರಳಿ ಬಂದು ವರದಿ ಮಾಡೆಂದು ರಾಮನು ಹನುಮಂತನನ್ನು ಮುಂದೆ ಕಳಿಸುವನು. ಹನುಮಂತ ಭರತನಿಗೆ ರಾಮನ ಆಗಮನ ವಾರ್ತೆಯನ್ನು ತಿಳಿಸುವನು ರಾಮನ ಎರಡನೆಯ ಆದೇಶವು ರಾಜಕಾರ್ಯಕ್ಕೆ ಸಂಬಂಧಿಸಿದ ಗುಟ್ಟಿನ ಪ್ರಶ್ನೆ ಇದ್ದರೂ ಹನುಮಂತ ಮರಳಿ ಬಂದು ರಾಮನಿಗೆ ಭರತನ ಪ್ರತಿಕ್ರಿಯೆಯನ್ನು ತಿಳಿಸಲು ಮರೆತು ಬಿಡುವನು[2].

ಕುಮಾರ ವಾಲ್ಮೀಕಿಯ ಕೃತಿಯಲ್ಲಿ ಮೊದಲಿನ ನಾಲ್ಕು ಸಂದರ್ಭಗಳಿಲ್ಲ. ಐದನೆಯದರಲ್ಲಿ ಭರತನ ಪ್ರತಿಕ್ರಿಯೆಯನ್ನು ಕುರಿತಾದ ರಾಮನ ಆದೇಶವಿಲ್ಲ[3].

ಇದಿಷ್ಟು ತೊರವೆ ರಾಮಾಯಣದ ಸ್ವರೂಪ ಮತ್ತು ವೈಶಿಷ್ಟ್ಯ. ಇತರ ಕೆಲವು ವೈಶಿಷ್ಟ್ಯಗಳನ್ನು (ಉದಾ: ರಾವಣನ ಪಾತ್ರ) ವಿಮರ್ಶಕರು ಈಗಾಗಲೆ ಎತ್ತಿತೋರಿಸಿರುವುದರಿಂದ ಅವುಗಳ ಪುನರುಚ್ಚಾರ ಅನಗತ್ಯ. ಕುಮಾರ ವಾಲ್ಮೀಕಿಯೆಂದು ಹೆಸರಿಸಿಕೊಂಡಿದ್ದರೂ ವಾಲ್ಮೀಕಿ ರಾಮಾಯಣದ ಅನುವಾದಕ್ಕೆ ತೊಡಗದೆ ಆಗಿನ ಪರಿಸ್ಥಿತಿಗನುಸರಿಸಿ ಅದರ ಕಥೆಯನ್ನೇ ಅನ್ಯ ರಾಮಾಯಣಗಳ ರಾಮಕಥೆಗಳ ನೆರವಿನೊಂದಿಗೆ ಮಾರ್ಪಡಿಸಿ ತನ್ನ ಕೃತಿಯಲ್ಲಿ ಹೆಣೆದಿರುವನು. ಸಾಹಿತ್ಯಿಕ ದೃಷ್ಟಿಯಿಂದ ಮಧ್ಯಮ ಕಾವ್ಯವೆಂದು ಗಣಿಸಲ್ಪಟ್ಟಿದ್ದರೂ ತಿರುಳಿನಲ್ಲಿ ಮಧ್ವಮತವನ್ನು ಅನುಸರಿಸಿದ್ದರೂ ಮತತತ್ವಗಳ ಪ್ರತಿಪಾದನೆಗೆ ತೊಡಗದೆ ವ್ಯವಹಾರದಲ್ಲಿ ಎಲ್ಲರಿಗೂ ಸಾಮಾನ್ಯವಿರುವ ಅದರ ತತ್ವಗಳನ್ನು ಎತ್ತಿಕೊಂಡು, ಭಕ್ತಿಯನ್ನು ಪ್ರಧಾನ ರಸವನ್ನಾಗಿಸಿ, ಕನ್ನಡಕ್ಕೊಂದು ಒಳ್ಳೆಯ ಕಾವ್ಯವನ್ನು ಒದಗಿಸಿರುವನು. ಕನ್ನಡಿಗರೆಲ್ಲರ ಗೌರವಾದರಗಳಿಗೆ ಪಾತ್ರನಾಗಿರುವನು.

ಆಧಾರ ಸಾಹಿತ್ಯ

1. ಶ್ರೀಮದ್ವಾಲ್ಮೀಕಿ ರಾಮಾಯಣ (ಸಂಸ್ಕೃತ), ನಿರ್ಣಯ ಸಾಗರ ಮುದ್ರಣ, ಮುಂಬಯಿ.

---

1 ವಾ.ರಾ. ಯು.ಕಾಂ. ಸ. 113/30 ಮುಂದೆ; ರಾ. ಉಪನ್ಯಾಸಗಳು, ಪು. 266.

2 ವಾ.ರಾ. ಯು.ಕಾಂ. ಸ. 125/16–18, ರಾ. ಉಪನ್ಯಾಸಗಳು, ಪು. 261

3 ಹನುಮಂತ ಮತ್ತು ವಾಲ್ಮೀಕಿ ರಾಮಾಯಣದ ಇತರ ಪಾತ್ರಗಳ ವಿಸ್ತರಿತ ವಿಮರ್ಶೆಗೆ ಇಂಗ್ಲೀಷಿನಲ್ಲಿರುವ ದಿ. ನಾಮದಾರ ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರ ರಾಮಾಯಣ ಉಪನ್ಯಾಸಗಳು ಗ್ರಂಥವನ್ನು ನೋಡಬಹುದು. ವಿಮರ್ಶೆಯಲ್ಲಿ ಹನುಮಂತನವೆಂದು ಎತ್ತಿ ತೋರಿಸಿದ ದೋಷಗಳಿಂದ ಅವನ ಮಹತಿಗೆ ಎಳ್ಳಷ್ಟು ಸಹ ಕುಂದು ತಟ್ಟದು. ಅವನಲ್ಲಿರುವ ಪೂಜ್ಯಭಾವನೆ ಮಾಸದು. ಆ ದೃಷ್ಟಿಯಿಂದ ಅವನ್ನು ಎತ್ತಿ ತೋರಿಸಿಯೂ ಇಲ್ಲ. ಹನುಮಂತನ ಮಹತಿ, ಅವನು ಸಾಧಿಸಿದ ಕಾರ್ಯಗಳ ಮಹತಿ, ಅವನ್ನೆಸಗಿದ ರೀತಿನೀತಿಗಳನ್ನು ಸಾಮಾನ್ಯ ಮಾನದಂಡಗಳಿಂದ ಅಳೆಯುವುದು ಸಾಧ್ಯವೇ ಇಲ್ಲ. ಅವನು ಅವನೇ. ಶ್ರೀರಾಮನ ತರುವಾಯ ಸಮಗ್ರ ರಾಮಾಯಣವನ್ನು ಬೆಳಗಿದವರಲ್ಲಿ ಅವನದೇ ಉಜ್ವಲ ಪಾತ್ರ ಎಂದಿರುವರು ಅವರು.

2. ಶ್ರೀಮದಧ್ಯಾತ್ಮ ರಾಮಾಯಣ (ಸಂಸ್ಕೃತ ಮೂಲ ಮತ್ತು ಕನ್ನಡ ಅನುವಾದ), ಅನುವಾದಕ–ಬೇಲದಕೆರೆ ಸೂರ್ಯನಾರಾಯಣ ಶಾಸ್ತ್ರಿ, ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ, ಮೈಸೂರು.
3. ಶ್ರೀಮದಾನಂದ ರಾಮಾಯಣ (ಸಂಸ್ಕೃತ ಮತ್ತು ಕನ್ನಡ ಅನುವಾದ) ಅನುವಾದಕ–ಬೇಲದಕೆರೆ ಸೂರ್ಯನಾರಾಯಣ ಶಾಸ್ತ್ರಿ, ಶ್ರೀಜಯಚಾಮರಾಜೇಂದ್ರ ಗ್ರಂಥಮಾಲಾ, ಮೈಸೂರು.
4. ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ–ಶ್ರೀಮಧ್ವಾಚಾರ್ಯ (ಸಂಸ್ಕೃತ ಮೂಲ ಮತ್ತು ಕನ್ನಡ ಭಾಷಾಂತರ.) ಭಾಷಾಂತರಕಾರ-ಅಗ್ರಹಾರ ನಾರಾಯಣಶಾಸ್ತ್ರಿ ತಂತ್ರಿ, ಮಧ್ವಮುನಿ ಸೇವಾಸಂಘ, ಉಡುಪಿ.
5. ತೊರವೆ ರಾಮಾಯಣ–ಕುಮಾರ ವಾಲ್ಮೀಕಿ, ಸಂಪುಟ 1–2, ಸಂ: ಎನ್. ಬಸವಾರಾಧ್ಯ ಮತ್ತು ಬಿ.ಎಸ್. ಸಣ್ಣಯ್ಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. Life and teachings of Sri Madhvacharya-C.M. Padmanabhachar, Coimbatore, 1909
7. Ramayana–C. Rajagopalachari, Bharatiya Vidyabhavan, Bombay. 1957
8. Lectures on the Ramayana–Rt. Hon. V.S. Srinivasa Sastri, Madras Sanskrit Academy, Madras, 1952

ಕಾವ್ಯವಿತಾನ

ಎಸ್. ಎಸ್. ಗದಗಕರ

'ಗಂಗಾಲಹರಿ'

ಸಕಲ ಲೋಕ ಸೌಭಾಗ್ಯ ನಿಧಿಯೆ ಆಗಿರುವ ಮಾತೆ ಗಂಗೆ,
ಲೀಲೆ ಮಾತ್ರೆಯಿಂ ಸರ್ವಲೋಕ ನಿರ್ಮಾತೃ ಶಿವನ ಶಕ್ತಿ;
ವೇದಗಳ ಸಾರ ದೇವಾಧಿದೇವ ಸುಕೃತಗಳ ರೂಪವಾಗಿ—
ಅಮೃತ ಸದೃಶ ನೀರುಳ್ಳ ನೀನು ಪರಿಹರಿಸೆ ಎನ್ನ ಪಾಪ! ॥೧॥

ಜೀವನದಿ ಒಮ್ಮೆ ನಿನ್ನನ್ನು ಕಂಡರೆಂತಹರು ಇದ್ದರೇನು?
ಅವರ ಪಾಪಕೃತಿ, ಕಷ್ಟ ದಿಸೆಯ ನೀ ತೊಲಗಿಸುವೆಯಲ್ಲವೇನು?
ಮೋಹರೂಪ ಗಿಡಗಳಿಗೆ ನೀನು ಇಹೆ ಕೊಡಲಿಯಂತೆಯಲ್ಲೆ!
ನಿನ್ನ ದಿವ್ಯ ಆ ಸ್ರೋತ ಕಲ್ಪಿಸಲಿ ಸರ್ವಸಂಪದೆಮಗೆ! ॥೨॥

ಸವತಿ ಮತ್ಸರದ ನೋಟದಿಂದ ಪರಶಿವನು ನಸುವೆ ಅಂಜೆ,
ಈಗ ಉದಿಸುತಿಹ ಸೂರ್ಯನಂತೆ ಮೊಗ ನಿನ್ನದಾಗೆ ಕೆಂಪು,
ಅಲೆದಾಡುವವನ ಜಡೆಯಲ್ಲಿ ಕುಣಿದು ಅಲೆಗಳನು ಹರಡುತಿಹೆಯೆ;
ಭಕ್ತಕೋಟಿ ಪಾತಕಗಳನ್ನು ಅವು ನಾಶಗೊಳಿಸುತಿರಲಿ! ॥೩॥

ತಾಯೆ, ನಿನ್ನ ಆಶ್ರಯದ ಬಲದಿ ಉನ್ಮತ್ತನೆನಿತೊ ಆದೆ,
ಔದ್ಧತ್ಯದಿಂದ ದೇವತೆಗಳನ್ನು ಕಂಡಂತೆ ಹೇಗೋ ಜರಿದೆ;
ಹಸುವು ಆದ ನೀ, ಕರುವು ಎಂದು ನನ್ನನ್ನು ಕಾಯದಿರಲು—
ಇನ್ನಾರ ಎದುರು ಉಸುರುವೆನು, ಅಂಬೆ—ಮನದುಃಖದಾಳವನ್ನು? ॥೪॥

ನಿತ್ಯಕರ್ಮಗಳ ಕೂಡ ತ್ಯಜಿಸಿರುವ ಪಾಪಿಗಳು ನಿನ್ನ ನೆನೆಯೆ,
ಅವರ ಪಾಪ ತಿಮಿರವನು ತೊಡೆವೆ ತವ ಜ್ಞಾನಕಿರಣದಿಂದ;
ಕೋಟಿ ಕೋಟಿ ದೇವತೆಗಳೆಲ್ಲ ನಿನ್ನನ್ನು ನುತಿಸುವಾಗ,
ಮೊದಲು ನನ್ನ ಸಂತಾಪ ತ್ರಿವಿಧವನು ನಾಶಮಾಡು, ಬೇಗ! ॥೫॥

ಎಲ್ಲ ಲೋಕ ಸಾಮ್ರಾಜ್ಯ ಪದವ ಬಲು ಕೀಳು ಎಂದು ಎಣಿಸಿ,
ನಿನ್ನ ತೀರ ವೃಕ್ಷಗಳ ನೆರವಿಯಲಿ ಜನರು ಸುಖಿಸುತಿಹರು;
ಅತಿ ಮಧುರ ನಿನ್ನ ಜಲಪಾನಗೈದು ಆನಂದದಿಂದ ಇಹರು:
ಅಮಿತ ಮುದವ ಎಂದೆಂದಿಗೀವ ಮೋಕ್ಷವನೆ ತೊರೆದು ಇಹರು! ॥೬॥

ಉದಯ ಕಾಲದಲಿ ನೃಪತಿ ರಮಣಿಯರ ಸ್ನಾನಗೈಯ್ಯುವಾಗ,
ಅವರ ಸ್ತನಗಳಿಗೆ ಲೇಪಿಸಿರ್ದ ಕಸ್ತೂರಿ ನಿನ್ನ ಕೂಡೆ,
ಆ ಮೃಗಗಳೆಲ್ಲ ಸಾಗುವವು ಆಗ ಸ್ವರ್ಗಸೀಮೆಯೆಡೆಗೆ;
ಅಚ್ಚರಿಯು ಏನು? ನಿನ್ನಲ್ಲಿ ಮಿಂದವಗೆ ಮೋಕ್ಷ ಸುಖವು ಸಹಜ ॥೭॥

ನಿನ್ನ ದಿವ್ಯನಾಮವನು ಒಮ್ಮೆ ಸ್ಮರಿಸಿದರೆ ಏನು ಸುಖವು!
ಅನವರತ ನಿನ್ನ ಧ್ಯಾನದಲಿ ತೊಡಗೆ ಸಂಸಾರತಾಪ ನಾಶ ;
ಕಿವಿಗೆ ಸೊದೆಯ ಸವಿ, ಮನಕೆ ಮಂಗಲವು ಆ "ಗಂಗಾ" ಎಂಬ ನಾಮ,
ಅನುಗ್ರಹಿಸು, ಹಾ ದೇವಿ! ಅದನು ನೀ ಕೊನೆಯ ಗಳಿಗೆ ವರೆಗೆ! ॥೮॥

ನಿನ್ನ ತೀರದಲಿ ಸುಖದಿ ಕ್ರೀಡಿಸುವ ಆ ಕಾಗೆ ಬಳಗವೆಲ್ಲಾ
ಸ್ವರ್ಗದೈಸಿರಿಯನೆಂದು ಬಯಸದು ಅದರದೇನು ಮೋಹ!
ಸಕಲ ಜನವು ಮರೆಯುವುದು ಜನನ ಸಾವುಗಳ ನಿನ್ನ ಕಂಡು,
ಪರಮಪಾವನೆಯೆ, ಶಮನಗೈಯ್ಯ ನೀ ನನ್ನ ಚಿಂತೆಯನ್ನು! ॥೯॥

ಶ್ರೇಷ್ಠತಮವು ಎನಿಸಿರುವ ಅದುವೆ ಆ ಪರಬ್ರಹ್ಮ ವಸ್ತು
ಆಕಾರ ರಹಿತ, ಗೋಚರವು ಆಗದದು, ವೇದಗಮ್ಯವಲ್ಲ;
ಅಜ್ಞಾನವೆಂಬ ಕತ್ತಲೆಯ ದೂಡಿ ಅದು ಸತ್ವಶಾಲಿ ಅಹುದು,
ಆ ಶಕ್ತಿಯೊಡನೆ ನೀನೆಂದು ಒಂಸು, ನಾ ತಿಳಿದಿರುವೆ ಖಚಿತವಾಗಿ! ॥೧೦॥

ಯಜ್ಞ-ಯಾಗ-ಜಪತಪಗಳಿಂದ ಶ್ರೀ ವಿಷ್ಣು ಲಭ್ಯನಲ್ಲ,
ಮಹಾದಾನ ಧ್ಯಾನಂಗಳಿಂದ ಆ ಪದವು ಕಷ್ಟ ಸಾಧ್ಯ:
ಇಂಥ ವಿಷ್ಣು ಲಭಿಸುವನು ದೇವಿ, ಆ ನಿನ್ನ ಕರುಣೆಯಿಂದ–
ದಯಾಶೀಲ ದೇವತೆಯು ಇಹಳೆ ನಿನ್ನನ್ನು ಬಿಟ್ಟು ಬೇರೆ? ॥೧೧॥

ಸವತಿ ಮತ್ಸರವ ತಳೆದು ಸತಿಯು ಬಲು ಸಿಟ್ಟು ಸೆಡವು ತೋರೆ,
ಅವಳ ಸಾಂತ್ವನದ ಚಿಂತೆ ತೊರೆದು ಶಿವ ಮೋಹಿಸಿದ ನಿನ್ನನೊಂದೆ:
ಸದ್ಗುಣದ ನಿಧಿಯೆ ಎನಿಸಿರುವ ನಿನ್ನ ಧರಿಸಿರುವ ತಲೆಯ ಮೇಲೆ,
ಸಂಸಾರ ತಾಪ ಪರಿಹರಿಸಲಿರುವ ನಿನ್ನನ್ನು ಪೊಗಳಲೆಂತು? ॥೧೨॥

ವಿಪಿನದಲ್ಲಿ ಸಂಚರಿಪ ಶುಕಗಳಾ ರವಕೆ ಮುಗ್ಧರಾಗಿ,
ಇರಿಸುವದು ಅವನು ಪಂಜರಗಳಲ್ಲಿ ಹರುಷದಲಿ ರಸಿಕ ಕುಲವು;
ಪಾಪಿಗಳ ಪಾಪ ತೊಳೆವಲ್ಲಿ ಕುಶಲಳಾಗಿರುವ ನಿನ್ನ ಕಂಡು,
ಧೂರ್ಜಟಿಯು ತನ್ನ ಜಡೆಯಲ್ಲಿ ಎಡೆಯ ಕೊಟ್ಟದುದು ಏನು ಕೆಚ್ಚು? ॥೧೩॥

ಉನ್ಮತ್ತ, ಪತಿತ, ಬಲು ಗರ್ಹಣೀಯ, ಜನ ಇಹರು ಅಲ್ಲಿ ಇಲ್ಲಿ;
ಸಂಸ್ಕಾರ ಶೂನ್ಯ ಪಾತಕಿಗಳೆನಿಸಿ ಜನ ಹೀನದೆಸೆಯಲಿಹರು;
ಇಂಥ ಘೋರಕರ್ಮಿಗಳನೆಂದು ಎತ್ತುವೆಯೆ ನೀನು ಮೇಲೆ,
ನಿನ್ನ ಕೀರ್ತಿ ಧ್ವಜವು ವಿಶ್ವದಲ್ಲಿ ಮೆರೆಯುವುದು ಚಿತ್ರವೇನು? ॥೧೪॥

ಜಗದಂಬೆ ನೋಡು, ಜಗದಲ್ಲಿ ಇಹರು ಜನ ವಿಕೃತರೂಪದವರು;
ದುರ್ದೈವಿ ಅವಕೆ ಹೇಳಿದುದು ಇಲ್ಲ ಪರಿಹಾರ ಯಾವ ಶಾಸ್ತ್ರ;
ಹೆಚ್ಚೇನು ಹೇಳಲಿಯೆ? ದೇವ ದೇವತೆಗಳಾರು ಕೇಳರವರ–
ಗತಿಹೀನ ಜನಕೆ ಮೋಕ್ಷವನು ಈವ ನೀ ದಿವ್ಯ ಶಕ್ತಿಯಲ್ಲೆ? ॥೧೫॥

ಈ ಜಗದ ಜನರು ತುತಿಸುವರು ನಿನ್ನ ಶ್ರೀತಟವ, ಮಧುರ ಜಲವ,
ಪೂರ್ವಕಾಲದಲಿ ಸಗರ ಚಕ್ರವರ್ತಿಯಾ ಪುತ್ರರೆಲ್ಲ ನಿನ್ನ
ಮಾಂಗಲ್ಯಮಯವು ಎನಿಸಿರುವ ನಿನ್ನ ಆ ಅಲೆಯ ಸ್ಪರ್ಶದಿಂದ
ಸ್ವರ್ಗಸುಖವ ಐಮತ್ತಲಿಹರು ಆ ಅಮರ ನಗರಿಯಲ್ಲಿ! ॥೧೬॥

ತೀರ್ಥಕ್ಷೇತ್ರಗಳು ಇಹವು ವಿಶ್ವದಲಿ ಸಾಮಾನ್ಯ ಪಾಪಕಾಗಿ,
ಅಲ್ಲಿ ಪ್ರಾರ್ಥನೆಯ ಗೈದು ಜನರು ಪರಿಶುದ್ಧಿ ಪಡೆವರಲ್ತೆ?
ಇನ್ನು ಎಷ್ಟೋ ಘನಘೋರ ಪಾತಕವ ಮಾಡಿದವರಿಗೆಲ್ಲ
ನಿನ್ನ ಹೊರತು ಗತಿ ಇಲ್ಲ ಅನ್ಯ, ಇದು ಯುಕ್ತ ಕಾರ್ಯ ನಿನಗೆ! ॥೧೭॥

ಶ್ರೇಷ್ಠ ಧರ್ಮಗಳ ಮೂಲಸ್ಥಾನ, ಉನ್ಮಾದದಾಯಿ ನೀನು;
ಪುಣ್ಯತೀರ್ಥಗಳ ಆಗರವು ಅಲ್ಲವೆ? ರಕ್ಷಾಕವಚ ನೀನು;
ಹೀನ ಕಲ್ಪನೆಯ ಹೋಗಲಾಡಿಸಿಯೆ ಮನಶುದ್ಧಿಗೈವಳಲ್ಲೆ?
ಆಲಸ್ಯ ಅಳಿಸಿ, ಉತ್ಸಾಹ ಹರಿಸಿ, ದರ್ಶಿಸುವೆ ಮುಕ್ತಿ ಮಾರ್ಗ! ॥೧೮॥

ತಂಗಾಳಿಯಲ್ಲಿ ಕಮಲಗಳು ಕೊಡವೆ ತಲೆ, ಉದುರಿರಲು ಘನಪರಾಗ–
ಅದು ಸೇರೆ ನಿನ್ನ ಜಲದಲ್ಲಿ ಬಣ್ಣ ಬಣ್ಣಗಳ ಸಂತೆ ನೆರೆಯೆ
ದೇವಲೋಕದಂಗನೆಯರೆಲ್ಲ ಕ್ರೀಡಿಸಲು ನಿನ್ನ ಜಲದಿ–
ಗಂಧಮಯವು ಆ ಚಿತ್ರ ಅಲೆಗಳೆನ್ನನ್ನು ಕಾಯುತಿರಲಿ! ॥೧೯॥

ಪರಮ ಪಾವನವು ಆದ ನಿನ್ನ ಜಲದಲ್ಲಿ ಮೀಯದಾದೆ;
ಕಣ್ಣಿದ್ದು ಕುರುಡರಾಗಿಹರು ನೃಪರು ಐಸಿರಿಯ ಮೋಹ ವಿರೆ,
ಅಂತಹರ ಬೇಡಿ ಅವಮಾನ ಹೊಂದಿ ನಾ ಗಾಸಿಯಾದೆನೆಂದು;
ಆತ್ಮ ಹಿತವ ಇಂತರಿಯದವಗೆ ನೀ ತೋರೆ ದಯೆಯ, ತಾಯಿ! ॥೨೦॥

ಹರಿಯ ವಾಮ ಶ್ರೀಪಾದದುಂಗುಟದಿ ಹರಿವ ತಾಯಿ ನೀನು,
ಶಂಕರನ ಜಡೆಯ ಗೃಹದಲ್ಲಿ ನೆಲಸಿ ನೀ ಸುಖಿಸುತಿರುವೆ ಎಂದು;
ಪತಿತ ನರರನುದ್ಧರಿಸಲೆಂದು ಕಟಿಬದ್ಧಳಾದ ನಿನ್ನ
ಯಶೋನಾದ ಮೊಳಗುತ್ತಲಿಹುದು, ಎಲ್ಲೆಲ್ಲಿ ಹೇಳಲೇನು? ॥೨೧॥

ಶೇಷಶಾಯಿ ಹರಿ ಇರಲಿ ತಾನು ಆ ತನ್ನ ಲೋಕದಲ್ಲಿ,
ಪರಬ್ರಹ್ಮ ಪರ ನಿರ್ವಿಕಲ್ಪ ಆ ಸಮಾಧಿಯಲ್ಲಿ ಇರಲಿ;
ಹರನು ತಾಂಡವದ ನಾಟ್ಯದಲ್ಲಿ ಲೋಲುಪನು ಆದರೇನು?
–ಅವರೆಲ್ಲ ಇರಲಿ ಬಿಡು, ಭಕ್ತರಾರ್ತ ದನಿ ಲಾಲಿಸಲು ನೀನೆ ಸಾಕು! ॥೨೨॥

ಈ ವಿಶ್ವದಲ್ಲಿ ಇಹ ನದ ನದಿಗಳನ್ನು ಬಣ್ಣಿಸಿದ ಕವಿಗಳುಂಟು,
ಕವಿಪ್ರವರ ವರ್ಣಿಸಲೆ ಇಲ್ಲ ನಿಜ, ನಿನಗೆ ಸರಿಯ ನದಿಯ;
ಶ್ರೀಹರಿಯ ಪಾದಪಂಕಜಗಳನ್ನು ತೊಳೆಯುವುದು ಯಾವ ನದಿಯು?
ಶಿವನ ಉತ್ತಮಾಂಗದಲಿ ಮೆರೆವ ಬೇರಾವ ನದಿಯು ಉಂಟು? ॥೨೩॥

ಹೇ ಮಾತೆ, ನಾನು ನಿರ್ಗತಿಕ, ಪತಿತ ನಿರ್ಭಾಗ್ಯನಾಗಿ ಇಹೆನು;
ಕರುಣೆಯಾಗರವು ಮುಕ್ತಿದಾಯಕಳು ಭೇಷಜರೂಪೆ ನೀನು;
ಸುಗುಣಗಳ ನಿಧಿಯು ಆಗಿರುವ ನಿನ್ನ ಮೊರೆಹೊಕ್ಕೆ ಇಂದು ನಾನು-
ತಿಳಿದಂತೆ ಮಾಡು, ಈ ಸಮಯದಲ್ಲಿ ನಾ ಉಸಿರಬಾರೆ ಏನೂ! ॥೨೪॥

ನಿನ್ನ ಸತ್‌ಕಥಾಲಾಪ ವಿಶ್ವದೆಲ್ಲೆಡೆಗು ಹರಿಯಲಾಗಿ,
ಯಮಪುರದ ಪಾಪಿಗಣ ಲೋಲಾಡಿತಾಗ ಆನಂದವಬ್ಧಿಯಲ್ಲಿ,
ನಿನ್ನ ಸ್ನಾನ ಪಾನಗಳಗೈದು ಜನ ಹಿಡಿದಿಹುದು ಸ್ವರ್ಗಮಾರ್ಗ–
ಸಂಚಾರಕೂನು ಆಗಿತ್ತು ಆಗ ಅಮರರಿಗೆ ದಾರಿ ಕಟ್ಟಿ! ॥೨೫॥

ಅಹೋರಾತ್ರಿ ಸ್ಫುರಿಸುತ್ತಲಿಹವು ನನ್ನಲ್ಲಿ ಕಾಮ ಕ್ರೋಧ,
ಪಾಪಿ ದೇಹ ಧಗಧಗಿಸುತಿಹುದು ಈ ವಿಕಾರ ಮೋಹದಿಂದ;
ತಂಗಾಳಿ ಸೂಸೆ, ಸುರತಟಿನಿ ಚಿಮ್ಮುವದು ತುಷಾರ ಮಾಲೆಯನು
ಉದ್ಧರಿಸಲೆನ್ನ ಆ ದಿವ್ಯ ಶಕ್ತಿ ನಿನ್ನನ್ನು ಎಂದು ಎಂದು! ॥೨೬॥

ಈರೇಳು ಲೋಕಗಳಿಗಾವಾಸವಾದ ಬ್ರಹ್ಮಾಂಡವೆಂಬ ಫಲವು-
ನಿನ್ನ ಜಲದ ಅಲೆ ಅಲೆಯ ಮೇಲೆ ಎಸಗುತ್ತಲಿಹುದು ನಾಟ್ಯ!
ಇಂಥ ಜಾಹ್ನವಿಯೆ ನೀನು ವಾಸಿಸುವೆ ಪರಶಿವನ ಜಡೆಗಳಲ್ಲಿ;
ದೂರ ನೀನು ಮಾಡುವೆಯಾ ದೇವಿ, ಈ ನನ್ನ ತಾಪವನ್ನು? ॥೨೭॥

ದಯಾರ್ದ್ರ ಹೃದಯೆ, ನನ್ನನ್ನು ಕಂಡ ನದಿ ಮೊಗದಿರುವಿ ಹೋದವೆಲ್ಲೊ!
ಕಡುಪಾಪಿ ನನ್ನ ಶಿವ ಕಂಡು ಕಿವಿಯ ಮುಚ್ಚಿಕೊಂಡನೇನೊ!
ಉದಾಸೀನವಾಗಿಹವು ಪುಣ್ಯತೀರ್ಥಗಳು ನನ್ನ ಬಗೆಗೆ–
ಪಾಪಿಷ್ಠನಾದ ನನ್ನನ್ನು ಎತ್ತಲೊಬ್ಬಳಿಗೆ ನಿನಗೆ ಸಾಧ್ಯ! ॥೨೮॥

ಅಯುಕ್ತ, ಯುಕ್ತ ಕಲ್ಪನೆಯು ಇರದೆ ಎಸಗಿದೆನು ಹೀನಕಾರ್ಯ,
ಚಾಂಡಾಳಗಿಂತ ಅತಿಹೀನ ಪಾಪವನು ಮಾಡಿದೆನು ಇಲ್ಲಿ ವರೆಗೆ:
ನೀಚಾಗ್ರಗಣ್ಯನುದ್ಧರಿಸಲೆನ್ನ ಕಟಿಬದ್ಧಳಾಗಿ ಇರುವಿ.
ನರ ಪಶುವು ನಾನು ನುತಿಸಲಿಯೆ ಹೇಗೆ ನಿನ್ನತುಲಮಹಿಮೆಯನ್ನು? ॥೨೯॥

ಅಧಮ ಅಧಮರುದ್ಧರಿಸಲೆಂದು ಹಾತೊರೆಯುವೆಯಂತೆ, ದೇವಿ!
ಇದು ವರೆಗೆ ನಿನಗೆ ಸಿಗದಾಯಿತೇನು ಕಡಪಾಪಿ ಒಬ್ಬರೂನು?
ಆದರಿಂದು ನಿಂತೆಹೆನು ನೋಡು, ನಾ ಅಂಥ ಪಾಪಿ ಜೀವಿ,
ಯಶವ ಕಟ್ಟಿಕೊ ದೇವಿ ಎತ್ತಿ ನನ್ನನ್ನು ಒಮ್ಮೆ ಮೇಲೆ! ॥೩೦॥

ನಾಯಿಯಂತೆ ತಿರುತಿರುಗಿ ಹೊಟ್ಟೆ ಹೊರೆಯುವದೆ ನನ್ನ ಕರ್ಮ
ಸುಳ್ಳು, ನಿಂದೆ, ಅತಿಹೇಯ ಕೃತ್ಯಗಳಿಗಾಗರವು ನಾನು ಆಗೆ–
ದುರ್ಗತಿಕ ನನ್ನ ಕೇಳುವರೆ ಇಲ್ಲ ಘೋರ ಕರ್ಮಿಯೆಂದು,
ಕಣ್ಣೆತ್ತಿ ನನ್ನ ನೋಡುವರೆ ಇಲ್ಲ ನಿನ್ನೊಬ್ಬಳನ್ನು ಬಿಟ್ಟು! ॥೩೧॥

ಎನಿತು ಅಂದ ಕಣ್ಣಿದ್ದರೇನು ನಿನ್ನನ್ನು ನೋಡದಿರಲು?
ನಿನ್ನ ಲಹರಿ ಕಲಕಲವ ಕೇಳದಿಹ ಕಿವಿಯು ಕೂಡ ವ್ಯರ್ಥ!
ಇಂದ್ರಿಯಗಳಿಲ್ಲ ಮನವಶವು ಇರಲು ಸಂಯಮವು ಬೇಕೆ ಬೇಕು;
ಪುಣ್ಯಕರ್ಮದಲಿ ನಿರತನಾಗದಿಹ ಮನುಜನಿದ್ದರೇನು? ॥೩೨॥

ಪುಣ್ಯಜೀವಿಗಳು ಅಂತ್ಯದಲ್ಲಿ ಸ್ವರ್ಗಕ್ಕೆ ಏರುವವರು,
ನರಕ ಯಾತನೆಯು ಸಹಜವಿಹುದು, ಬಲು ಪಾಪಿ ಗಣಕೆ ಎಲ್ಲ;
ಆದರೇನು? ನೀ ಹರಿವ ದೇಶದಲಿ ಸರ್ವರಿಗೂ ಸಗ್ಗ ಸಿರಿಯು,
ಅಮಂಗಲವು ಎನಿಸುವುದು ಅಲ್ಲೆ ನೀನಿರದ ದೇಶವೊಂದು? ॥೩೩॥

ಸುರಾಪಾನ, ಗುರುತಲ್ಪಗಮನ, ಕೊಲೆ ಕಳವು ಮಾಡಿ ಕೆಲರು–
ಮಹಾಪಾಪ ಮಾಡಿರುವ ಜನರೊಲು ಮೀಯುವರು ನಿನ್ನ ಜಲದಿ;
ಆಗ ಪಾಪ ಪರಿಹಾರವಾಗಿ ಸೇರುವದು ನಿನ್ನ ಅಡಿಗೆ–
ಮಾತೆ, ಉಸುರು–ಬಣ್ಣಿಸುವೆನೆಂತು ಆ ನಿನ್ನ ಘನ್ನಮಹಿಮೆ?॥೩೪॥

ಅರಳಿರುವ ಸುಮದ ಮಕರಂದವನ್ನು ಕವಿಯುವದು ಮಳ್ಳಗಾಳಿ,
ಪ್ರಿಯಜನರ ವಿರಹವ್ಯಥೆ ಹೆಚ್ಚಿಸುತಲಿಹುದು ಮೈಮುಟ್ಟಿ ತಂಪುಗಾಳಿ;
ಪರಮ ಪಾವನವು ಎಲ್ಲ ಎನಿಸುವದು ತಾಗೆ ನಿನ್ನ ಲಹರಿ
ಸಕಲಲೋಕ ಪರಿಶುದ್ಧಗೈವ ವಾಯುವಿಗೆ ನೀನೆ ಶಕ್ತಿ! ॥೩೫॥

ಉಪಕಾರಿ ಜನರು ಈ ಲೋಕದಲ್ಲಿ ಪಡೆಯುವರು ಉಚ್ಚಗತಿಯ,
ಬೇರೆ ಎನಿತೊ ಜನ ಮುಕ್ತಿ ಹೊಂದುವರು ತಪಧ್ಯಾನದಿಂದ
ಆಗಲಿಲ್ಲ ಸತ್‌ಕಾರ್ಯವೊಂದು ಈ ಜಗನ್ನಾಥನಿಂದ–
ಉದ್ಧರಿಸು ದೇವಿ, ನಿನ್ನಲ್ಲಿ ನಾನು ಇರಿಸಿರುವೆ ಸರ್ವಭಾರ! ॥೩೬॥

ಸಂಸ್ಕಾರ ಶೂನ್ಯರಾಗಿರುವ ಜನರು ನಿನ್ನಲ್ಲಿ ದೇಹವಿಡಲು
ಅವರನ್ನು ನೀನು ಉದ್ಧರಿಸುವಲ್ಲಿ ಆತುರತೆ ಎನಿತು ಇಹುದು!
ಪಾಪ ಕರ್ಮದಾಚರಣೆಯಲ್ಲಿ ತೊಡಗಿರುವೆ ಎಂದಿನಿಂದೊ
ಹುಟ್ಟುಗುಣವನೆ ಬಿಟ್ಟು ಬಾಳುವುದು ಯಾರಿಗೆಂತು ಸಾಧ್ಯ? ॥೩೭॥

ಸಂಜೆ ಸಮಯದಲಿ ಶಿವನು ತಾಂಡವದ ನೃತ್ಯಗೈಯ್ಯುತಿರಲು,
ನೀನು ಶೋಭಿಸುವೆ ಹಸ್ತ ಸಾಸಿರದ ನಾಟ್ಯ ಸೊಬಗಿನಿಂದ;
ಡಮರುವಿನ ನಿನದ ಅನುಕರಿಸುವಂತೆ ಕಿರುಗೆಜ್ಜೆ ನಾದ ಹೊಮ್ಮೆ–
ನಿನ್ನ ಜಲದ ತಾಂಡವದ ನಾಟ್ಯವದು ನಮ್ಮನ್ನು ಪೊರೆಯುತಿರಲಿ! ॥೩೮॥

ಸರ್ವಭಾರ ಅರ್ಪಿಸಿಯೆ ನಿನಗೆ ನಿಶ್ಚಿಂತನಾಗಿ ಉಳಿದೆ,
ಉದಾಸೀನಳಾಗುತ್ತ ನೀನು ತ್ಯಜಿಸಿದರೆ ನನ್ನನೀಗ
ಭವದ ತಾಪ ಪರಿಹರಿಸುವವಳು ಈ ಗಂಗೆ ಎಂಬ ಬಿರುದು–
ಅರ್ಥಹೀನವಾಗುವದು ನೋಡು. ನನ್ನನ್ನು ಪೊರೆಯೆ ಬೇಗ! ॥೩೯॥

ಶಿವನು ತನ್ನ ಎಡತೊಡೆಯ ಮೇಲೆ ಕುಳ್ಳಿರಿಸಿಕೊಂಡ ಮಡದಿ,
ಸವತಿ ಮತ್ಸರದಿ ನಿನ್ನ ಕಣ್ಣು ಕೆಂಪೇರುತಿರಲು ಆಗ,
ಮಂದಹಾಸ ಬೀರುತ್ತ ನೀನು ಶಿವನನ್ನು ಸೆಳೆದುಕೊಂಡೆ
ಪರಮ ಮಂಗಲೆನಿಸಿರುವ ನಿನ್ನ ಜಲ ವಿಜಯಿಯಾಗಲೆಂದು! ॥೪೦॥

ಮಹಾಮಹಿಮೆ ಹೇ ಮಾತೆ, ನಿನಗೆ ಮೊರೆ ಹೋಗದವರು ಯಾರು?
ಸರ್ವದಾಸೆ ಆಕಾಂಕ್ಷೆಗಳನ್ನು ಪೂರೈಸುತಿರುವೆಯಲ್ಲೆ!
ನನ್ನ ಭಕ್ತಿ ನಿನ್ನಲ್ಲಿ ನೆಲಸಿಹುದು; ಏನು ನಿನ್ನ ಮಮತೆ!
ತಾಯಿಯೆಂದು ನೆರೆ ನಂಬಿ ಬಂದೆ ದಯೆಯಿಟ್ಟು ಎನ್ನ ಪೊರೆಯೆ! ॥೪೧॥

ಹಣೆಯಲ್ಲಿ ಒಮ್ಮೆ ಧರಿಸಿದರೆ ನಿನ್ನ ಮೃತ್ತಿಕೆಯ ತಿಲಕವನ್ನು
ಮಧ್ಯಾನ್ಹ ರವಿಯ ತೇಜವನು ಹೊಂದಿ ಹರಿಸುವದು ಪಾಪತಮವ;
ಬಹು ವಿಧದ ದುಃಖ ಬರೆದಂಥ ಬ್ರಹ್ಮ ಸಂಕಲ್ಪವನ್ನು ಅಳಿಸಿ
ಮೃತ್ತಿಕೆಯು ನನ್ನ ಪಾಪಗಳನ್ನೆಲ್ಲ ಪರಿಹರಿಸಬೇಕು ಈಗ! ॥೪೨॥

ನಿನ್ನ ತೀರದಾ ವೃಕ್ಷರಾಜಿ ನಗೆ ಹೂವ ಚೆಲ್ಲುತಿಹುದು,
ನೀನು ನೆಲಸದಿಹ ನಾಡ ನರರ ಅಪಹಾಸ್ಯಗೆಯ್ಯುತಿಹುದು;
ಪುಷ್ಪ ಸೌರಭವು ಹರಡಿ ಎಲ್ಲೆಡೆಗು ಮಾಲಿನ್ಯ ನಶಿಸಿ ಹೋಗೆ-
ಸ್ನಿಗ್ಧ ಮಧುರ ಆ ವೃಕ್ಷಛಾಯೆ ಆವರಿಸಲೆನ್ನ ಆತ್ಮ! ॥೪೩॥

ಕಠಿಣಸೇವೆ, ಘನಪೂಜೆ, ಯಜ್ಞ-ತಪ ಜಪದ ಸರಣಿಯಲ್ಲಿ
ಸೇವಿಸುವರೆನಿತು ಜನ ನಿನ್ನನ್ನು ನಂಬಿ ಹಿರಿಶ್ರದ್ಧೆ ಮೂಡಿ ಇರಲು-
ನನ್ನ ರೀತಿಯೆ ಬೇರೆ ದೇವಿ ಸ್ಮರಿಸುವೆನು ನಿನ್ನ ವಿರಳ:
ಜಗದ ಮಾಯೆ ಪಾಶಗಳ ಹರಿದು ನಿಶ್ಚಿಂತನಿಹೆನು ಎಂದೂ! ॥೪೪॥

ಸದಾಕಾಲವೂ ಪುಣ್ಯಕಾರ್ಯ ಮಾಡುತ್ತಲಿರುವ ಜನರ
ಉದ್ಧರಿಸಲೆಂದು ದೇವತೆಗಳೆನಿತೊ ನುಗ್ಗುವರು ಮುಂದು ಮುಂದು:
ಪಾಪಕರ್ಮದಾಚರಣೆಯಲ್ಲಿ ರತ ನನ್ನ ದಾರಿ ಬೇರೆ.
ನಿನ್ನನ್ನು ಬಿಟ್ಟು ಬೇರಾರು ಬರರು ಉದ್ಧರಿಸಲೆನ್ನನೆಂದು! ॥೪೫॥

ಹೇ ಗಂಗೆ, ನಿನ್ನ ನೀರನ್ನು ಊಟಿ ಮಾಡಿದೆನು ಮೂರ್ಖ ಸಂಗ.
ಕಂಡಂತೆ ತಿರುಗಿ ಕೊನೆಗೊಮ್ಮೆ ಶಾಂತಿ ದೊರೆಯದಲೆ ನಿಂತೆನಯ್ಯೊ!
ಮಂದ ಮಾರುತವು ಬೀಸೆ ನಿನ್ನ ತೊಡೆ ಶೀತಲವು ಆಗಿ ಇರಲು
ನಿದ್ರೆ ರಹಿತನಾಗಿರುವ ನನಗೆ ಚಿರಶಾಂತಿ ಲಭಿಸಲಿಲ್ಲೆ ! ॥೪೬॥

ಪಾಪಿಷ್ಠನಾದ ಈ ಜಗನ್ನಾಥನನ್ನು ಉದ್ಧರಿಸಲಿದುವೆ ಸಮಯ.
ಕಳಕೊಳ್ಳಬೇಡ ಈ ಸ್ವರ್ಣಸಂಧಿಯನು ಟೊಂಕ ಕಟ್ಟಿ ಬೇಗ !
ನಿನ್ನ ಶಿರದಲಿಹ ಬಾಲಚಂದ್ರನನು ಕಟ್ಟು ಸರ್ಪದಿಂದ,
ರತ್ನಖಚಿತ ತಪಕಿರೀಟ ಧರಿಸಿ ಉದ್ಧರಿಸು ನನ್ನ ಈಗ ॥೪೭॥

ಶರದ್ಋತುವಿನಾ ಚಂದ್ರಕಾಂತಿಮೈ, ತಲೆಗೆ ಮಣಿ ಕಿರೀಟ,
ಕುಂಭ–ಕಮಲ–ವರ–ಅಭಯಗಳನು ಕೈಯಲ್ಲಿ ಹಿಡಿದು ನೀನು
ಅಮೃತಧಾರೆಯಂತಿರುವ ವಸನ ಆಭರಣ ಭೂಷೆಯಾಗಿ,
ಅನುಗ್ರಹಿಸುವೆಯಾ, ದೇವಿ ತುತಿಸುತಿಹ ನನ್ನನಿಂದು ನೀನು? ॥೪೮॥

ಮಂದಹಾಸವೆಂದೆಂಬ ಅಮೃತದಿಂ ಆರಿಸುವೆ ದುಃಖಜ್ವಾಲೆ,
ಚೈತನ್ಯರೂಪಿ ಆ ಚಂದ್ರಕಿರಣ ಚಮತ್ಕಾರ ತೋರಿ ನೀನು;
ಚಕ್ರವರ್ತಿ ಶಂತನುವ ರಾಣಿ ನೀ ಅಭಯದಾಯಿಯಲ್ಲೆ?
ನನ್ನ ದೇಹದಾರೋಗ್ಯ ಉಳಿಸಿ ನೀ ಹರಿಸು ಹರ್ಷ ಹೊಳೆಯ! ॥೪೯॥

ಶ್ರೀಹರಿಯ ಪಾದಕಮಲಗಳ ತೊಳೆವೆ ನೀ ನಿನ್ನ ಲಹರಿಯಿಂದ
ನಿನ್ನ ಹೊರತು ನನಗಿಲ್ಲ ಅನ್ಯಗತ; ಕಚ್ಚಿಹುದು ಕಾಳಸರ್ಪ;
ಔಷಧಿಯ ಸತ್ವ ಕಡುಗುಪ್ತವಾಯ್ತು, ಅಮೃತ ರಸವು ಇಂಗೆ–
ಭವ ಸರ್ಪದಿಂದ ಆಗಿರುವ ಗಾಯ ಗುಣ ಪಡಿಸುವವಳು ನೀನೆ! ॥೫೦॥

ಶಿವನು ಪಾರ್ವತಿಯ ಜೊತೆಗೆ ದ್ಯೂತವನ್ನಾಡುತಿರಲು ಆಗ,
ವೇಷ ಭೂಷಗಳು, ನಂದಿ–ಚಂದ್ರ–ಗಜ ಚರ್ಮ–ಸೋತುಹೋಗೆ,
ಕೊನೆಯ ಆಟದಲಿ ನಿನ್ನ ಗೆಲಲು ಆಕಾಂಕ್ಷೆ ತಳೆಯುವಾಗ–
ನಾನೇನು ಸಿಗುವೆ ನಿನಗೆಂದು ಕುಣಿವ ನೀ ಕಾಯಬೇಕು ನನ್ನ !॥೫೧॥

ಶಿವನ ಮಸ್ತಕದಿ ನಿಂದು ಶೋಭಿಸುವೆ
ಅಳಿಸುವೆಯೆ ಜನರ ಅಳಲು;
ವಿಷ್ಣುಪಾದ ನಖದಿಂದ ಹರಿವ ನೀ
ಪರಿಹರಿಸು ನನ್ನ ನೋವ! ।೫೨॥

"ಜಗನ್ನಾಥ ರಚಿಸಿರುವ ಅಮರ ಈ ಕಾವ್ಯ ಲಹರಿಯನ್ನು
ಪಠಿಸುವಗೆ ದೊರೆಯುವುವು ಕೇಳು ಸುಖವು ಸಿರಿಯು ಎಲ್ಲ!" ॥೫೩॥

(ಪಂಡಿತ ಜಗನ್ನಾಥನ 'ಗಂಗಾಲಹರೀ' ಕೃತಿಯ ಅನುವಾದ)

ಕಮ್ಮಟದ ಕಿಡಿಗಳು

‘ಪಂಪಭಾರತ’ದ ಒಂದು ಪದ್ಯದ ಪಾಠ

ಪಂಪಭಾರತದ ಪನ್ನೆರಡನೆಯ ಆಶ್ವಾಸದಲ್ಲಿ ದುರ್ಯೋಧನನು ಶಲ್ಯನನ್ನು ಕರ್ಣನ ಸಾರಥ್ಯ ಮಾಡಬೇಕೆಂದು ಕೇಳಿಕೊಂಡಾಗ “ಮದ್ರರಾಜನುಮ್ಮಚ್ಚರದೊಳುಮ್ಮನೆ ಬೆವರ್ತುರ್ಜಿ ಕಿನಿಸಿ ಕಿಂಕಿಱಿವೋಗಿ–

ಅನುಪಮ ವಿಕ್ರಮಕ್ರಮಮುದಾರಗುಣಂ ಋತವಾಕ್ಯಮೆಂಬ ಪೆಂ
ಪೆಸಲಪ್ಪ ಮೂಱಿನಾಲ್ಕೆ ಗುಣಮತ್ತ ಮದಾನ್ವಿತ ರಾಜಬೀಜ ಸಂ
ಜನಿತಗುಣಂ ಮದಂ ಮದಮನಾಳ್ದವಿವೇಕತೆಯಿಂದಮಲ್ತೆ ತೊ
ಟ್ಟಿನ ಮೊಲೆವಾಲನುಂಡ ಗುಣಮಿಂತಿವನಾರ್ ಕಿಡಿಪರ್ ನರೇಂದ್ರರೊಳ್॥೧೩॥

ಎಂದು ಹೇಳುತ್ತಾನೆ.

ಇದರಲ್ಲಿ ಮೊದಲನೆಯ ಪಾದದ “ಗುಣಂ ಋತ” ಎಂಬುದಕ್ಕೆ “ಗುಣಂ ನೃಪ” ಎಂದು ಬ ಮತ್ತು ಘ ಪ್ರತಿಯಲ್ಲಿ “ಗುಣಂ ನೃತ” ಎಂದು ಗ ಪ್ರತಿಯಲ್ಲಿ “ತೆ ಸೂನೃತ” ಎಂದು ಪ ಎಂದರೆ ಪರಿಷತ್ತಿನ ಸಂಪಾದಕರು ಸಲಹೆ ಕೊಟ್ಟ ಪಾಠವಾಗಿ ಅಡಿಟಿಪ್ಪಣಿಯಲ್ಲಿದೆ. ಹಾಗೆಯೇ ಮೂರನೆಯ ಪಾದದ “ಮದಮನಾಳ್ದ” ಎಂಬುದಕ್ಕೆ ಕ ಪ್ರತಿಯಲ್ಲಿ “ಮದಮನಾಳ್ವ” ಎಂದು “ಅವಿವೇಕತೆಯಿಂದ-ಮಲ್ತೆ” ಎಂಬುದಕ್ಕೆ ಖ ಪ್ರತಿಯಲ್ಲಿ “ಅವಿವೇಕತೆಯಿಂದಮತ್ತೆ” ಎಂದು ಪಾಠವಿರುವುದನ್ನೂ ಸೂಚಿಸಲಾಗಿದೆ, ೧೯೩೧ರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಪಂಪಭಾರತದಲ್ಲಿ. ಅಲ್ಲಿ ಬೇರೆ ಯಾವ ಪಾಠಾಂತರಗಳನ್ನೂ ಸೂಚಿಸಿಲ್ಲ.

ದಿ. ಮುಳಿಯ ತಿಮ್ಮಪ್ಪಯ್ಯನವರು ತಮ್ಮ “ನಾಡೋಜ ಪಂಪ” (೧೯೩೮ರಲ್ಲಿ ಪ್ರಕಟವಾದುದು) ಎಂಬುದರಲ್ಲಿ ಮೂರನೆಯ ಪಾದದ ‘ಮಲ್ತೆ’ ಎಂಬುದನ್ನು ‘ಮತ್ತ’ ಎಂದು ಕೊಟ್ಟು ಅಡಿಟಿಪ್ಪಣಿಯಲ್ಲಿ ಹೀಗೆ ಬರೆದಿದ್ದಾರೆ:

ಕ.ಸಾ. ಪರಿಷತ್ತಿನ ಪ್ರತಿಯಲ್ಲಿ ‘ಮಲ್ತೆ’ ಎಂದಿದೆ. ಅದರ ಅಡಿಟಿಪ್ಪಣಿಯಲ್ಲಿ ತೋರುವಂತೆ ‘ಖ’ ಪ್ರತಿಗನುವಾಗಿ ‘ತ್ತೆ’ ಎಂದಿದೆ. ‘ತ್ತ’ ಎಂದಿದ್ದರೆ ಇನ್ನಷ್ಟು ಉಚಿತವಾಗುವುದೆಂಬ ಭಾವನೆಯಿಂದ ಹೀಗೆ ಮಾರ್ಪಡಿಸಿರುತ್ತೇವೆ. ಈ ಮಾರ್ಪಾಟಿನಿಂದ ಪ್ರಕೃತದಲ್ಲಿ ಯಾವ ತೊಡಕೂ ಇಲ್ಲ; ‘ಅಲ್ತೆ’ ಎಂದೇ ಇದ್ದರೆ ಅಷ್ಟೊಂದು ದೋಷವೂ ಇಲ್ಲ. ಆದರೆ ಎರಡನೆಯ ಪಂತಿಯಲ್ಲಿ ‘ನಾಲ್ಕೆಗುಣಮತ್ತ,’ ಎಂಬುದಾಗಿ ‘ಅತ್ತ’ ಎಂದೇ ಇದೆ. ಅದಕ್ಕನುವಾಗಿ ನೋಡಿದರೆ ಇಲ್ಲಿಯೂ ಆ ರೂಪವೇ ಉಚಿತವೆಂದು ನಮ್ಮ ಭಾವನೆ. (ಪು. ೧೪೯). ಅವರ “ಸಮಸ್ತಭಾರತಸಾರ” (೧೯೪೧)ದಲ್ಲಿ ಇದೇ ಪಾಠವನ್ನವಲಂಬಿಸಿ ಮುಂದುವರಿಯಲಾಗಿದೆ.

ದಿ. ಡಿ.ಎಲ್. ನರಸಿಂಹಾಚಾರ್ಯರು ತಮ್ಮ “ಪಂಪಭಾರತ ದೀಪಿಕೆ” (೧೯೭೧)ಯಲ್ಲಿ ಕ.ಸಾ ಪರಿಷತ್ತಿನವರ ಪಾಠವನ್ನನುಸರಿಸಿ ಅರ್ಥವನ್ನು ಬರೆದಿದ್ದಾರೆ. ಅದು ಹೀಗಿದೆ:

“ಅಸದೃಶವಾದ ಪರಾಕ್ರಮದ ರೀತಿ, ವಿಶಾಲವಾದ ತ್ಯಾಗದ ಗುಣ, ನೇರಾದ ಭಾಷೆ ಎಂದರೆ ಸತ್ಯ ಎನ್ನುವ ಹಿರಿಮೆ ಇವೇ ಮೂರು ಅಥವಾ ನಾಲ್ಕು ಗುಣಗಳು; ಇನ್ನೊಂದು ಕಡೆ ಅರಸು ಕುಲದಲ್ಲಿ

ಹುಟ್ಟಿದ್ದವರ ಗುಣವು. ಮದವು (ಗರ್ವವು); ಮದವನ್ನು ಹೊಂದಿರುವ ವಿವೇಕಶೂನ್ಯತೆಯಿಂದ ತೊತ್ತಿನ ಮೊಲೆಹಾಲನ್ನು ಕುಡಿದ ಗುಣವಲ್ಲವೇ? ಇವುಗಳನ್ನು ರಾಜರಲ್ಲಿ ಯಾರು ಹೋಗಲಾಡಿಸುವವರು? (ಪು. ೪೬೮)

"ನಾಡೋಜ ಪಂಪ"ದಲ್ಲಿ ಹೀಗಿದೆ:

'ಅನುಪಮವಿಕ್ರಮಕ್ರಮ–ಉದಾರಗುಣ–ಋತವಾಕ್ಯ'ಗಳೆಂಬ ಮೂರು ಗುಣಗಳು ಕರ್ಣನಲ್ಲಿವೆ ಎಂಬಲ್ಲಿ ಸಂಶಯವಿಲ್ಲ. ಆದರೆ ಅಗಳಿಂದತ್ತಣ ನಾಲ್ಕನೆಯ ಗುಣವೆಂದರೆ 'ಮದಾನ್ವಿತರಾಜ ಬೀಜ ಸಂಜನಿತ'ವಾದ 'ಮದವು'. ಮತ್ತಿನದು ಆ ಮದವನಾಳ್ದ ಅವಿವೇಕತೆ. ಆ ಅವಿವೇಕತೆಯಿಂದತ್ತ 'ತೊಟ್ಟಿನ ಮೊಲೆವಾಲನುಂಡ ಗುಣ'ವು. ಹೀಗೆ ಕರ್ಣನಲ್ಲಿರುವ ಅಸಾಧ್ಯ ದೋಷಗಳನ್ನು 'ನರೇಂದ್ರರೊಳಗೆ ಯಾರು ಕೆಡಿಸುವರು? ಅರ್ಥಾತ್ ಯಾವ ಮಹಾರಾಜನೂ, ಈ ಕರ್ಣನ ರಕ್ತವನ್ನೊಂದಿದ ಈ ತ್ರಿದೋಷಗಳನ್ನು ಹೋಗಲಾಡಿಸಲಾರನೆಂಬುದೇ ಈ ಪದ್ಯದ ತಾತ್ಪರ್ಯವು. (ಪು. ೧೪೯)

'ಸಮಸ್ತಭಾರತಸಾರ'ದಲ್ಲಿ ಹೀಗಿದೆ:

ಕರ್ಣನಲ್ಲಿ 'ಅನುಪಮ ವಿಕ್ರಮಕ್ರಮ'ವು. 'ಉದಾರಗುಣ'ವು. 'ಋತವಾಕ್ಯಮೆಂಬ ಪೆಂಪೆನಲವು ಮೂರೆ' ಗುಣಗಳಿವೆ ಎನ್ನುವ. 'ನಾಲ್ಕೆ ಗುಣ'ವೆಂದರೆ 'ಅತ್ತ ಮದಾನ್ವಿತ ರಾಜಬೀಜ ಸಂಜನಿತ ಗುಣ'ವು. ಐದನೆಯದೆಂದರೆ 'ಮದ'ವು. ಆ 'ಮದಮನಾಳ್ದ–ಅವಿವೇಕತೆಯಿಂದ'ತ್ತ ಆರನೆಯದು 'ತೊಳ್ತಿನ ಮೊಲೆವಾಲನುಂಡ ಗುಣ'ವು. ಎಂದರೇನು? ಗುಣಗಳಾಗಿ ಭಾವಿಸಲ್ಪಟ್ಟ ದೋಷಗಳಿವು. ಇವುಗಳನ್ನು ನರೇಂದ್ರರೊಳಗಾರು ಕೆಡಿಸುವವರು? (ಪು. ೨೦೨)

ಮೇಲಿನ ಉದ್ಧರಣಗಳಿಂದ ಅಚ್ಚಾದ ಪ್ರತಿಯ ಒಂದು ಪಾಠವನ್ನು ತಿಮ್ಮಪ್ಪಯ್ಯನವರು ಮಾರ್ಪಡಿಸಿಕೊಂಡಿದ್ದಾರೆಂದೂ ನರಸಿಂಹಾಚಾರ್ಯರು ಯಾವ ಬದಲಾವಣೆಯನ್ನೂ ಮಾಡಿಕೊಂಡಿಲ್ಲ ವೆಂದೂ ಗೊತ್ತಾಗುತ್ತದೆ. ಈ ಪ್ರಾತಃಸ್ಮರಣೀಯರಿಗೆ ವಂದಿಸಿ ನನ್ನ ಅಭಿಪ್ರಾಯವನ್ನು ವಿದ್ವಾಂಸರ ಮುಂದಿಡುತ್ತಿದ್ದೇನೆ.

ಮೊತ್ತಮೊದಲಾಗಿ, "ಮೂಜೆನಾಲ್ಕೆ ಗುಣಂ" ಎಂದಿರುವುದನ್ನು "ಮೂಜೆನಲ್ಕೆ ಗುಣಂ" ಎಂದು ಮಾರ್ಪಡಿಸಿಕೊಂಡರೆ ಸಾಮಂಜಸ್ಯ ಹೆಚ್ಚೆಂದು ನನ್ನೆಣಿಕೆ. ಏಕೆಂದರೆ ಅನುಪಮವಿಕ್ರಮಕ್ರಮ, ಉದಾರಗುಣ, ಋತವಾಕ್ಯ ಎಂದು ಹೆಸರಿಸಿರುವುದು ಮೂರು ಗುಣಗಳನ್ನೆಂದು ಮೇಲೆ ಹೆಸರಿಸಿದ ಇಬ್ಬರು ವಿದ್ವಾಂಸರೂ ಒಪ್ಪುತ್ತಾರೆ. ಇವು ಮೂರೂ ಸದ್ಗುಣಗಳು. ಆ ಬಳಿಕ (ಅತ್ತ) ಹೆಸರಿಸಲ್ಪಟ್ಟವು ಗಳೆಂದರೆ ಮದಾನ್ವಿತ ರಾಜಬೀಜ ಸಂಜನಿತ ಗುಣವಾದ ಮದ, ಮದಮನಾಳ್ದ ಅವಿವೇಕತೆ ಮತ್ತು ತೊತ್ತಿನ ಮೊಲೆವಾಲನುಂಡ ಗುಣ. ಈ ಮೂರೂ ಅಸದ್ಗುಣಗಳು. ಮೊದಲಿನ ಮೂರು ಸದ್ಗುಣ ಗಳನ್ನು ಸಂಪೂರ್ಣವಾಗಿ ತೊಲಗಿಸುವುದಕ್ಕೆ ಈ ಮೂರು ದುರ್ಗುಣಗಳು ಸಮರ್ಥವಾಗುತ್ತವೆ. "ಮೂಜೆ ನಾಲ್ಕೆ" ಎಂಬ ಪಾಠವಿದ್ದರೆ ಗುಣಗಳು ಮೂರೋ ನಾಲ್ಕೋ ಎಂಬ ಸಂದೇಹಕ್ಕೆ ಎಡೆ ಯಾಗುತ್ತದೆ.

"ಋತವಾಕ್ಯಮೆಂಬ ಪೆಂಪು" ಎಂಬುದಕ್ಕೆ "ಋತವಾಕ್ಯವನ್ನು ಹೇಳುವ (ಆಡುವ) ಹಿರಿಮೆ" ಎಂದು ಅರ್ಥ ಮಾಡಬೇಕೇ ಹೊರತು "ಋತವಾಕ್ಯ ಎಂಬ ಹೆಸರಿನ ಹಿರಿಮೆ" ಎಂದು ಅರ್ಥಮಾಡ ಬಾರದು ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಆ ಇಬ್ಬರು ಮಹನೀಯರೂ ಈ ರೀತಿ ಅರ್ಥಮಾಡಿದಂತೆ ತೋರುವುದಿಲ್ಲ–ಎಂಬುದರಿಂದ ಅವರ ವಿದ್ವತ್ತೆ ಕಡಮೆಯಾಗಿತ್ತೆಂದು ಅರ್ಥವಲ್ಲ. ಅವರಿಗೆ ಆ ರೀತಿ ಹೊಳೆಯಲಿಲ್ಲ ಎಂದಿಷ್ಟೇ ಇದರ ಅಭಿಪ್ರಾಯ.

ಇಲ್ಲಿ ಒಂದು ಪ್ರಶ್ನೆಯೇಳುತ್ತದೆ: ಯಾವ ಪ್ರತಿಯಲ್ಲಿಯೂ "ಮೂಜೆನಾಲ್ಕೆ" ಎಂಬುದಕ್ಕೆ ಯಾವ ಬಗೆಯ ಪಾಠಾಂತರವೂ ಕಂಡು ಬಾರದಿರುವಾಗ, ಇದ್ದ ಪಾಠಕ್ಕೇ ಅರ್ಥ ಹೇಳಬೇಕಾದುದು ಉಚಿತವಾದುದರಿಂದ, ತಿದ್ದುಪಡಿ ಮಾಡುವುದು ಸರಿಯೆ? ಆದರೆ ವಿದ್ವಾಂಸರು ಅವರಿಗೆ ದೊರೆತ ಪ್ರತಿಗಳಲ್ಲಿ ಯಾವ ಪಾಠಾಂತರವೂ ಇಲ್ಲದ ಪಾಠವೊಂದು ಕಂಡುಬಂದಾಗ, ಅದಕ್ಕೆ ಇದ್ದಂತೆ ಅರ್ಥ

ಮಾಡುವುದು ಪ್ರಯಾಸಕರವಾದಾಗ, ಅವರು ತಿದ್ದುಪಡಿ ಮಾಡುವುದಕ್ಕೆ ಮುಂದಾಗುತ್ತಾರೆ ಎಂಬುದನ್ನು ನಾವು ಕಾಣುತ್ತೇವೆ. ಇದೇ ಪಂಪಭಾರತದ ಒಂಬತ್ತನೆಯ ಆಶ್ವಾಸದ ೬೯ನೆಯ ಪದ್ಯವನ್ನು ಇದಕ್ಕಾಗಿ ಪರಿಶೀಲಿಸಬಹುದು:

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ।
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ॥
ಳ್ಕುತ್ತಿರೆಯೇವಮಿಲ್ಲದಿವನಾ[ಯ್ವು]ದೊ ತಪ್ಪದೆ ಪೇಱಿಮೆಂಬ ಭೂ।
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ॥

ಇದು ಮುದ್ರಿತಪ್ರತಿಯ ಪಾಠ. ಎರಡನೆಯ ಪಾದದಲ್ಲಿ "ಎಲ್ಲ ಪ್ರತಿಗಳಲ್ಲಿಯೂ 'ಮುತ್ತಿನ ಲಂಬಣಂ ಪಱಿಯೆ' ಎಂದಿದ್ದು ಛಂದೋಭಂಗವಾಗಿದೆ" ಎಂಬ ಸೂಚನೆ ಅಡಿಟಿಪ್ಪಣಿಯಲ್ಲಿದೆ. ಮೂರನೆಯ ಪಾದದಲ್ಲಿ 'ವು' ಎಂದು ಸರ್ವಪ್ರತಿಗಳಲ್ಲಿಯೂ ಇದ್ದರೂ ಸಂಪಾದಕರು 'ಯ್ವು' ಎಂದು ಪಾಠವನ್ನು ತಿದ್ದಿದ್ದಾರೆ. ಇದರಿಂದ ಛಂದೋಭಂಗವಾಗುವ ಪಾಠ ಸರ್ವಪ್ರತಿಗಳಲ್ಲಿದ್ದರೂ ತಿದ್ದುವುದು ಅವಶ್ಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಮಾತ್ರವಲ್ಲ, ಸಂಪಾದಕರಿಗೆ ಸಮಂಜಸವೆಂದು ತೋರದಿದ್ದಲ್ಲಿ ಪಾಠವನ್ನು ಅವರಿಗೊಪ್ಪುವಂತೆ ಮಾರ್ಪಡಿಸುವುದು ವಿಹಿತವೆಂದೂ ಅಂಗೀಕರಿಸಬೇಕಾಗುತ್ತದೆ. ದಿ. ಮುಳಿಯದವರೂ ಸಂಪಾದಕರು ತಿದ್ದಿದ ಈ ಪಾಠವೇ ಸಮುಚಿತವೆಂದೂ 'ಅವುದೋ' ಎಂದು ಬರುವ ಪಾಠವು ಸರಿಯಲ್ಲವೆಂದೂ ತಮ್ಮ ಒಂದು ಲೇಖನದಲ್ಲಿ ಹೇಳಿದ್ದಾರೆ.* ಅದಕ್ಕಿಂತ 'ಏವುದೋ' ಎಂದಿದ್ದಿರಲೂ ಬಹುದು ಎಂದು ಸೂಚಿಸಿದ್ದಾರೆ. ಹೀಗೆ ಅವರವರಿಗೆ ಸಮಂಜಸವಾಗಿ ತೋರುವ ಪಾಠಗಳನ್ನು ಅವರವರು ಪ್ರತಿಪಾದಿಸುತ್ತಾರೆಂಬುದು ನಿಶ್ಚಯ.

ದಿ. ಡಿ. ಎಲ್. ನರಸಿಂಹಾಚಾರ್ಯರ "ಕನ್ನಡ ಗ್ರಂಥ ಸಂಪಾದನೆ" (ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು–೪, ೧೯೬೪) ಎಂಬುದರಲ್ಲಿ ಕನ್ನಡ ಕೈಬರಹದ ಪ್ರತಿಗಳಲ್ಲಿ ಕಂಡು ಬರುವ ನಾನಾ ವಿಧವಾದ ಅಕ್ಷರ ಸ್ಖಾಲಿತ್ಯಗಳನ್ನು ವಿಶದೀಕರಿಸುವ ಸಂದರ್ಭದಲ್ಲಿ (ಪು. ೭೭) 'ಅ' ಅಕ್ಷರವು 'ಆ' ಆಗಿರುವುದಕ್ಕೆ ಈ ಉದಾಹರಣೆಗಳನ್ನು ಕೊಟ್ಟಿದ್ದಾರೆ:

೧. *ವಿಕ್ರಮ ತಿಮಿಂಗಳಂಗಾ ನೃ'ಪಾ'ಣ್ಣಾ (ಧರ್ಮಪು. '೩–೧೬) [ಪ]
೨. ಓಲಗಿಪಂ ಮನೋಭವನಜಸ್ರಂ ನಿರೂಪಮಂ ಭೂ'ಪಾ'ನಾ (ಅದೇ. ೩–೨೫) [ಪ]
೩. ಬಳಸಿದ್ದಾರ್ದ್ರೀಂದ್ರದಿಂದಂ *(S.I.I. xi. II. No 126, 8, 1080 A.D) ([ದ್ರ್ವ]*

ಇಲ್ಲಿ, ಮೊದಲಿನ ಎರಡು ಪಾಠಗಳಲ್ಲಿ ಛಂದೋಭಂಗವಿದೆ. ಮೂರನೆಯ ಪಾಠದಲ್ಲಿ ಛಂದೋಭಂಗವಿಲ್ಲ.

ಇವನ್ನೆಲ್ಲ ಗಮನಿಸಿದರೆ "ಮೂಱಿನಾಲ್ಕೆ" ಎಂಬಲ್ಲಿ ಮೂಲತಃ "ಮೂಱಿನಲ್ಕೆ" ಎಂಬ ಪಾಠವೇ ಇದ್ದಿರಬಹುದೆಂದೂ ಅದರ 'ನ'ಕಾರವು 'ನಾ' ಎಂದು ದೀರ್ಘರೂಪವನ್ನು ಮೊದಲು ಪಡೆದು, ಮುಂದೆ ದೀರ್ಘವಾದರೂ ಹ್ರಸ್ವವಾದರೂ ಛಂದೋಭಂಗವಿಲ್ಲವೆಂದಾದ ಮೇಲೆ, ಅದೇ ಪಾಠವೇ ಉಳಿದುಕೊಂಡಿತೆಂದೂ ತೀರ್ಮಾನಿಸಬಹುದು.

ಇನ್ನೊಂದು ವಿಷಯವನ್ನು ವಿದ್ವಾಂಸರ ಅವಗಾಹನೆಗೆ ತರಬಹುದು: "ಸುತವಾಕ್ಯಮೆಂಬ ಪೆಂಪು" ಎಂಬುದಕ್ಕೆ ಸತ್ಯ ವಚನವನ್ನು ಹೇಳುವ ಹಿರಿಮೆ ಎಂದು ಅರ್ಥಹೇಳುವುದು ಸರಿಯೆ? ಮೇಲಿಂದ ಮೇಲೆ ನೋಡಿದರೆ ಇದಕ್ಕೆ "ಸತ್ಯವಾಕ್ಯ ಎಂದು ವ್ಯಪದೇಶವುಳ್ಳ ಹಿರಿಮೆ" ಎಂಬರ್ಥವೆಂದು

*ಮಂಗಳೂರಿನ ತ್ರಿವೇಣಿ–ಸಂಪುಟ ೪, ಸಂಚಿಕೆ ೮–ಇದೇ ಲೇಖನ ಬೆಂಗಳೂರಿನ ಅರಳೇಪೇಟೆಯ ಶಾರದಾ ಪ್ರಕಟನಾಲಯದಿಂದ ಪ್ರಕಟವಾದ "ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು" ಎಂಬುದರಲ್ಲಿ ಪುನರ್ಮುದ್ರಣಗೊಂಡಿದೆ.(೧೯೬೫).

ಯಾರಿಗಾದರೂ ಕಾಣದಿರದು. ಇದು ಸರಿಯಾದ ಅರ್ಥವೆಂದಾದೀತೆ? ಕರ್ಣನನ್ನು "ಸತ್ಯವಾಕ್ಯ ಎಂಬ ವ್ಯಪದೇಶವುಳ್ಳವನು" ಎಂದು ಕವಿ ಹೇಳಿದ್ದಾನೆನ್ನುವುದಾದರೆ ಅಲ್ಲಿ "ಋತವಾಕ್ಯನೆಂಬ ಪೆಂಪು" ಎಂದಿರಬೇಕು. ಮಾತ್ರವಲ್ಲ, ಮುಂದೆ ಗುಣಗಳೆಂದು ಪರಾಕ್ರಮಾದಿಗಳನ್ನು ಹೇಳಿದುವಲ್ಲದೆ ಗುಣಿಗಳನ್ನು ಹೇಳಿದುವಲ್ಲವೆಂಬುದೂ ಸ್ಪಷ್ಟ. ಹೀಗಿದ್ದ ಮೇಲೆ ಇಲ್ಲಿ ವಿಚಾರಣೀಯಾಂಶವಿದೆ.

"ಋತವಾಕ್ಯಮೆಂಬ ಪೆಂಪೆನಲಿವು ಮೂಱೆನಲ್ಕೆ ಗುಣಂ" ಎಂಬುದನ್ನು "ಋತವಾಕ್ಯಂ + ಎಂಬ + ಪೆಂಪು + ಎನಲ್ + ಇವು + ಮೂಱು + ಎನಲ್ಕೆ + ಗುಣಂ" ಎಂದು ವಿಂಗಡಿಸಿದರೆ "ಋತವಾಕ್ಯ(ಸತ್ಯ) ಎನ್ನುವ ಹಿರಿಮೆ ಎನ್ನುವ ಇವು ಮೂರು ಎನ್ನುವುದು ಗುಣ" ಎಂದು ಅರ್ಥಹೇಳಬೇಕು. ಇದಕ್ಕೆ ಬದಲಾಗಿ "ಋತವಾಕ್ಯವ + ಎಂಬ + ಪೆಂಪು + ..." ಎಂದು ವಿಂಗಡಿಸಿದರೆ "ಸತ್ಯವಾಕ್ಯವನ್ನು ಹೇಳುವ ಹಿರಿಮೆ ಎನ್ನುವ ಇವು ಮೂರು ಎನ್ನುವುದು ಗುಣ" ಎಂಬರ್ಥವಾಗುತ್ತದೆ. ಈ ಎರಡರಲ್ಲಿ ಯಾವುದು ಉಚಿತತರವೆಂದು ಬಲ್ಲವರು ವಿವೇಚಿಸಬೇಕು. ನನ್ನ ಅಲ್ಪಮತಿಗೆ ಈ ಎರಡನೆಯ ಅರ್ಥವೇ ಸಾಧುವೆಂದು ತೋರುತ್ತದೆ.

ಈಗ ಇನ್ನೂ ಒಂದು ತೊಡಕಿದ್ದಂತೆ ಕಾಣಬಹುದು: "ಋತವಾಕ್ಯವ + ಎಂಬ" ಎಂದಿದ್ದರೆ ಸಂಧಿಯಾಗುವಾಗ "ಋತವಾಕ್ಯವೆಂಬ" ಎಂದು ಲೋಪಸಂಧಿಯಾಗುತ್ತದೆ; "ಋತವಾಕ್ಯಮೆಂಬ" ಎಂಬುದನ್ನು ವಿಂಗಡಿಸಿದರೆ "ಋತವಾಕ್ಯಂ + ಎಂಬ" ಎಂಬ ರೂಪವೇ ಉಳಿಯುತ್ತದೆ. "ಋತವಾಕ್ಯವೆಂಬ" ಎಂದಿರುವ ರೂಪವು "ಋತವಾಕ್ಯಮೆಂಬ" ಎಂಬ ರೂಪಕ್ಕೆ ಮಾರ್ಪಡುವುದು ಅಸಂಗತವಲ್ಲ; ಶಬ್ದಮಣಿದರ್ಪಣದಲ್ಲಿ 'ವಮ' ಅಭೇದವನ್ನು ಹೇಳಲಾಗಿದೆ. ಪಂಪನು ಆ ರೀತಿ ಪ್ರಯೋಗಿಸಿದ್ದಿರಲಾರ ಎಂಬುದೂ ಸಾಧುವೇ. ವ್ಯಾಕರಣರೀತ್ಯಾ ಇಲ್ಲಿ ಕ್ರಿಯಾಸಮಾಸವಿದೆ ಎಂದು ತೋರಿಸಿದರೆ ಯಾವ ತಪ್ಪೂ ಆಗುವುದಿಲ್ಲ. ಋತವಾಕ್ಯಂ + ಎಂಬ = ಋತವಾಕ್ಯಮೆಂಬ ಎಂದಾಗುತ್ತದೆ. ಶಬ್ದಮಣಿದರ್ಪಣದ ಕ್ರಿಯಾಸಮಾಸದ ಲಕ್ಷಣವನ್ನು ಹೇಳುವಲ್ಲಿ "ಪೂರ್ವಪದದ ಕಾರಕವು ಸಂಸ್ಕೃತದ ಅಕಾರಾಂತವಾಗಿದ್ದರೆ ಅಲ್ಲಿ ಬಿಂದು ಬರಲೇ ಬೇಕು" ಎಂಬ ಮಾತಿದೆ. ಅದರಂತೆ ಇಲ್ಲಿ ಮೊದಲು ಋತವಾಕ್ಯಮಂ + ಎಂಬ ಎಂಬುದು ಋತವಾಕ್ಯಂ ಎಂಬ ಎಂದಾಗಿ ಅನಂತರ ಸಂಧಿಯಾಗಿ ಋತವಾಕ್ಯಮೆಂಬ ಎಂದು ನಿಷ್ಪನ್ನವಾಗಿದೆಯೆನ್ನಬಹುದು.

ಈಗ ಪದ್ಯಕ್ಕೆ ಈ ರೀತಿ ಅರ್ಥ ಹೇಳಬಹುದು:

"ಹೋಲಿಕೆಗೆ ಸಿಕ್ಕದ ಪರಾಕ್ರಮದ ರೀತಿ, ತ್ಯಾಗಗುಣ, ಸತ್ಯವಾಕ್ಯವನ್ನು ಹೇಳುವ ಹಿರಿಮೆ ಎನ್ನುವ ಇವು ಮೂರು (ಎಂದರೆ ಒಳ್ಳೆಯ) ಗುಣ. (ಈ ಗುಣಗಳಿಂದ) ಆಚೆಗೆ ಸೊಕ್ಕಿನಿಂದ ಕೂಡಿದ ರಾಜರೇ ಬೀಜ (ಕಾರಣ, ಮೂಲ)ವಾಗಿರುವುದರಿಂದ ಉಂಟಾದ ಗುಣ ಮದ. ಈ ಮದವನ್ನು ಆಳಿಕೊಂಡಿರುವುದು ಅವಿವೇಕತೆ. ಅದರಿಂದಾಚೆಗೆ ತೊತ್ತಿನ ಮೊಲೆಹಾಲನ್ನು ಕುಡಿದ ಗುಣ. ಹೀಗೆ ಇವನ್ನು ಅರಸರಲ್ಲಿ ಕೆಡಿಸುವವರಾರು?"

ಇಷ್ಟು ತಿಳಿದ ಮೇಲೆ ಇನ್ನುಳಿದ ಪಾಠಗಳ ವಿಷಯ ಗಮನ ಹರಿಸಬಹುದು: ಆಳ್ದ, ಅವಿವೇಕತೆ ಮತ್ತು ಅಲ್ತೆ ಎಂಬ ಮೂರು ಪಾಠಗಳನ್ನು ವಿವೇಚನೆಗೆ ತೆಗೆದುಕೊಳ್ಳಬಹುದು. ಅವಿವೇಕ ಎಂಬುದಕ್ಕೆ ತಿಳಿಗೇಡಿತನ, ಬುದ್ಧಿಹೀನತೆ ಎಂಬುದೇ ಅರ್ಥವಷ್ಟೆ. ಈ ಅವಿವೇಕ ಎಂಬುದರಿಂದ ನಿಷ್ಪನ್ನವಾಗುವುದು ಅವಿವೇಕಿ ಎಂಬುದು. ಅವಿವೇಕಿಯಲ್ಲಿರುವ ಗುಣವೇ ಅವಿವೇಕ; ಅಥವಾ ಅವಿವೇಕವುಳ್ಳವನು ಅವಿವೇಕಿ. ಅವಿವೇಕ ಎಂಬುದಕ್ಕೆ ಮತ್ತೆ 'ತೆ' ಎಂಬ ತದ್ಧಿತಪ್ರತ್ಯಯವನ್ನು ಸೇರಿಸುವುದು ಸರಿಯೆ? ಅವಿವೇಕಿ ಎಂಬುದಕ್ಕೆ 'ತೆ' ಸೇರಿಸಿದರೆ ತಪ್ಪಾಗದು. ಆದರೆ ಸಂಸ್ಕೃತದಲ್ಲಿ 'ಅವಿವೇಕಿನ್' ಎಂದು ನಕಾರಾಂತವಾಗಿರುವುದರಿಂದ ಇದಕ್ಕೆ 'ತೆ' ಎಂಬುದು ಸೇರದೆಂದೇ ಹೇಳುವವರಿರಬಹುದು. ಕನ್ನಡದಲ್ಲಿ ಎಷ್ಟೋ ನಕಾರಾಂತ ಶಬ್ದಗಳು ಆ ನಕಾರವನ್ನು ಕಳೆದು 'ಲಿಂಗ'ವಾಗಿ ಬಳಕೆಗೊಳ್ಳುವುದನ್ನು ಕಾಣುತ್ತೇವೆ. ಹಾಗೆ ಲಿಂಗವಾದ 'ಅವಿವೇಕಿ' ಎಂಬುದಕ್ಕೆ 'ತೆ' ಪ್ರತ್ಯಯ ಸೇರುವುದು ಕ್ರಮಪ್ರಾಪ್ತವಾಗುತ್ತದೆ. ಆದುದರಿಂದ ಅಲ್ಲಿ ವಿವೇಕತೆ ಎಂಬ ಪಾಠವಿರುವುದಕ್ಕಿಂತ ಅವಿವೇಕಿತೆ ಎಂದಿದ್ದರೆ ಹಿತ.

ಆಳ್ದ ಎಂದು ಭೂತಕಾಲ ಪ್ರತ್ಯಯಯುಕ್ತವಾದ ರೂಪವಿರುವುದಕ್ಕಿಂತ ಆಳ್ವ ಎಂದು ಭವಿಷ್ಯತ್ಕಾಲ ಪ್ರತ್ಯಯಯುಕ್ತವಾದ ರೂಪವಿರುವುದು ಸಾಧುತರ. ಏಕೆಂದರೆ ವರ್ತಮಾನ ಕಾಲದ 'ದಪ' ಎಂಬ ಪ್ರತ್ಯಯ ವಿರಹಿತವಾದ ಭವಿಷ್ಯತ್ಕಾಲದ 'ವ' ಎಂಬ ಪ್ರತ್ಯಯ ಸಹಿತವಾದ ರೂಪವಿದ್ದರೆ ಅದು ಸದಾ ಇರುವ ವಿಷಯವನ್ನೇ ಹೇಳುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಅವಿವೇಕವು ಸದಾ ಮದವನ್ನು ಆಳುತ್ತಲೇ ಇರುತ್ತದೆ; ಒಮ್ಮೆ ಆಳಿ ಮತ್ತೆ ತೊಲಗುವುದಲ್ಲ. ಆದುದರಿಂದ 'ಆಳ್ವ' ಎಂಬ ಕ ಪ್ರತಿಯ ರೂಪವನ್ನೇ ಉಳಿಸಿಕೊಳ್ಳಬಹುದು.

ಇನ್ನು ಮುಂದಣದು 'ಅಲ್ತೆ' ಎಂಬ ಪಾಠ. ಗಿ. ಮುಳಿಯದವರು ತಮ್ಮ "ನಾಡೋಜ ಪಂಪ" ದಲ್ಲಿ ಸೂಚಿಸಿದುದನ್ನು ಈ ಮೊದಲೇ ಉದ್ಧರಿಸಲಾಗಿದೆ. ಅಲ್ತೆ ಎಂಬುದಕ್ಕಿಂತ ಅತ್ತ ಎಂಬ ಪಾಠವು "ಇನ್ನಷ್ಟು ಉಚಿತವಾಗುವುದೆಂದು" ಅವರು ಹೇಳಿದ್ದಾರೆ. ಅದಕ್ಕಿಂತಲೂ ಮುದ್ರಿತಪ್ರತಿಯಲ್ಲಿ ಅಡಿ ಟಿಪ್ಪಣಿಯಲ್ಲಿ ಕೊಟ್ಟಿರುವ ಖ ಪ್ರತಿಯ 'ತ್ತೆ' ಎಂಬುದನ್ನೇ ಉಳಿಸಿಕೊಂಡರೆ ಇನ್ನಷ್ಟು ಉಚಿತತರವೆಂದು ನನ್ನ ಅಭಿಪ್ರಾಯ.

ಪಂಪನ ಕೃತಿಯಲ್ಲಿ ಬಂದಿರುವ ಎಷ್ಟೋ ಪದಗಳೂ ಪ್ರಯೋಗಗಳೂ ಇಂದಿಗೂ ಮಂಗಳೂರು ಮುಂತಾದ ಪ್ರದೇಶದಲ್ಲಿ ನೆಲಸಿರುವ ಹವೀಕರ ಆಡುನುಡಿಯಲ್ಲಿ ಆಯಾ ರೂಪಗಳಲ್ಲಿಯೇ ಉಳಿದು ಕೊಂಡಿವೆ. ಅವುಗಳಲ್ಲಿ 'ಅತ್ತೆ' ಎಂಬುದೂ ಒಂದು. ಇದು 'ಅತ್ತ' ಎಂಬ ದಿಗ್ವಾಚಕಕ್ಕೆ 'ಎ' ಎಂಬ ಸಪ್ತಮೀ ವಿಭಕ್ತಿಪ್ರತ್ಯಯವು ಸೇರಿ ನಿಷ್ಪನ್ನವಾದ ಪದವಾಗಿದೆ. ಹವೀಕರಲ್ಲಿ 'ಅತ್ತ' ಎಂಬ ರೂಪ ಬಳಕೆಯಲ್ಲಿಲ್ಲ. (ಬೇರೆ ಕಡೆಯ ಹವೀಕರಲ್ಲಿ ಹೇಗಿದೆಯೆಂದು ತಿಳಿದುಕೊಂಡಿಲ್ಲ.) ದಿಗ್ವಾಚಕಗಳಾದ ಅತ್ತ, ಇತ್ತ, ಎತ್ತ ಎಂಬ ಈ ಮೂರೂ, ಅನುಕ್ರಮವಾಗಿ ಅತ್ತೆ, ಇತ್ತೆ, ಎತ್ತೆ ಎಂಬ ರೂಪಗಳಲ್ಲಿ ರೂಢಿ ಯಲ್ಲಿವೆ. ಶಬ್ದಮಣಿ ದರ್ಪಣದಲ್ಲಿ ದಿಗ್ವಾಚಕವಾದ ಉಕಾರಾಂತ ಶಬ್ದಗಳಿಗೆ 'ಎ'ಕಾರವು ಸಪ್ತಮೀ ವಿಭಕ್ತಿ ಪ್ರತ್ಯಯವಾಗಿ ಸೇರುತ್ತದೆ ಎಂದು ಕೇಶಿರಾಜನು ಹೇಳಿದ್ದಾನೆ.* ದಿಗ್ವಾಚಕವಾದ ಅಕಾರಾಂತ ಶಬ್ದಕ್ಕೂ ಆ 'ಎ'ಕಾರವು ಸೇರುವುದೆಂಬುದನ್ನು ಅವನು ಗಮನಿಸಲಿಲ್ಲವೊ ಅಥವಾ ಅವನ ಅನಂತರ ಆ ಪ್ರಯೋಗವು ಬಳಕೆಗೆ ಬಂತೊ ತಿಳಿಯದು. ಕೇಶಿರಾಜನು ಹೇಳದ, ಅವರೆ ಇತ್ತಕಡೆಯ ಹವೀಕರಲ್ಲಿ ಇಂದಿಗೂ ರೂಢಿಗತವಾಗಿರುವ, ಎಷ್ಟೋ ಪ್ರಯೋಗಗಳು ಪಂಪನ ಕೃತಿಗಳಲ್ಲಿ ಕಂಡು ಬರುವುದರಿಂದ ಈ 'ಅತ್ತೆ' ಎಂಬುದೂ ಪ್ರಾಚೀನ ಪ್ರಯೋಗವಾಗಿತ್ತೆಂದು ಸಮರ್ಥಿಸುವಂತಿದೆ.

ಹವೀಕರಲ್ಲಿ ಈ 'ಅತ್ತ' ಎಂಬ ದಿಗ್ವಾಚಕಕ್ಕೆ ಗಮನಾರ್ಹವಾಗಿ ಚತುರ್ಥೀ, ಪಂಚಮೀ, ಷಷ್ಠೀ ಮತ್ತು ಸಪ್ತಮೀ ವಿಭಕ್ತಿ ಪ್ರತ್ಯಯಗಳು ಸೇರಿ ಕ್ರಮವಾಗಿ ಅತ್ತಂಗೆ. ಅತ್ತಂದ, ಅತ್ತಾಣ ಮತ್ತು ಅತ್ತೆ ಎಂಬ ರೂಪಗಳು ಇಂದಿಗೂ ಉಳಿದಿವೆ. ಮಾತ್ರವಲ್ಲ. ಈ 'ಅತ್ತೆ' ಎಂಬ ರೂಪವು ಕೇಶಿರಾಜನು ಇತರ ಕೆಲವು ದಿಗ್ವಾಚಕಗಳ ವಿಷಯದಲ್ಲಿ ಹೇಳಿದಂತೆ, ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಯ ರೂಪವೂ ಆಗಿರುತ್ತದೆ. ಪ್ರಕೃತ ನಮಗೆ, ಉಳಿದ ವಿಭಕ್ತಿಗಳ ವಿಷಯ ಅಪ್ರಸ್ತುತವಾದುದರಿಂದ 'ಅತ್ತೆ' ಎಂಬುದು ಅತ್ತ ಎಂಬ ದಿಗ್ವಾಚಕಕ್ಕೆ 'ಎ' ಎಂಬ ಸಪ್ತಮೀ ವಿಭಕ್ತಿ ಪ್ರತ್ಯಯವು ಸೇರಿ ನಿಷ್ಪನ್ನ ವಾದ ರೂಪವೆಂದು ತಿಳಿದುಕೊಂಡರೆ ಸಾಕು. 'ಅತ್ತೆ' ಎಂಬ ರೂಪವು ಇಲ್ಲವೆಂಬೆಣಿಕೆಯಿಂದ ಸಂಪಾದಕರು ಅಲ್ಲಿ 'ಅಲ್ತೆ' ಎಂಬ ಪಾಠವನ್ನು ಉಳಿಸಿಕೊಂಡಿದ್ದಾರೆ ಎಂದು ಇದರಿಂದ ತಿಳಿಯಬಹುದು. ಆಗ "ಮೂಜಿನಲ್ಕೆ ಗುಣಮತ್ತೆ" ಎಂಬ ಪಾಠವು ಅಲ್ಲಿದ್ದಿರಲಾರದೆ ಎಂಬ ಪ್ರಶ್ನೆಯೇಳಬಹುದು. ಆದು ಮಾತಿನಲ್ಲಿ 'ಅತ್ತೆ' ಎಂದಿದ್ದರೂ ಕೃತಿರಚನೆಯ ಸಂದರ್ಭದಲ್ಲಿ 'ಅತ್ತ' ಎಂಬ ಬಹುರೂಢವಾದ ಪ್ರಯೋಗವೇ ಅಲ್ಲಿ ಬಂದಿರಬೇಕೆಂದೂ ಹೇಳಿದರೆ ತಪ್ಪಾಗದು. ಕೆಲಕೆಲವರಾದರೂ 'ಸರ್ವಜ್ಞ' ಮುಂತಾದ 'ಜ್ಞ' ಉಳ್ಳ ಶಬ್ದಗಳನ್ನು 'ಗ್ನ' ಎಂದು ಉಚ್ಚರಿಸಿ, ಇದೇ ಅಭ್ಯಾಸದ ಬಲದಿಂದ 'ಸರ್ವಗ್ನ' ಎಂದು ಮುಂತಾಗಿ ಬರೆಯುವುದನ್ನು ಕಾಣುತ್ತೇವೆ. ಹಾಗೆಯೇ ಇಲ್ಲಿಯೂ ಆಗಿದ್ದರೆ ಆಶ್ಚರ್ಯಪಡ ಬೇಕಾಗಿಲ್ಲ.

---

*ಶಬ್ದಮಣಿದರ್ಪಣ—ಸಂ. ಡಿ. ಎಲ್. ನರಸಿಂಹಾಚಾರ್, ೧೯೫೪ರ ಪ್ರತಿ—ಸೂತ್ರ ೧೩೯.

ಇಷ್ಟನ್ನೆಲ್ಲ ಪರಿಶೀಲಿಸಿ ಆದಮೇಲೆ ಈ ಪದ್ಯದ ಪಾಠವನ್ನು ಹೀಗೆ ಇರಿಸಬಹುದು ಎಂದು ನನ್ನ ಅಭಿಪ್ರಾಯ:

ಅನುಪಮವಿಕ್ರಮಕ್ರಮಮುದಾರಗುಣಂ ಶ್ರುತವಾಕ್ಯಮೆಂಬ ಪೆಂ।
ಪೆಸಲಿವು ಮೂಜಗಂಸಲ್ಕೆ ಗುಣಮತ್ತ(ತ್ತೆ) ಮದಾನ್ವಿತರಾಜಬೀಜ ಸಂ॥
ಜನಿತಗುಣಂ ಮದಂ ಮದಮನಾಳ್ವ ವಿವೇಕಿತೆಯಿಂದಮಂತ್ರೆ ತೊ।
ಟ್ಟಿನ ಮೊಲೆವಾಲನುಂಡ ಗುಣಮಿಂತಿವನಾರ್ ಕಿಡಿಪರ್ ನರೇಂದ್ರರೊಳ್॥

—ತೆಕ್ಕುಂಜ ಗೋಪಾಲಕೃಷ್ಣಭಟ್ಟ

'ಮುಂತಾಗಿ', 'ಮುಂದಾಗಿ': ಒಂದು ಮರುಟಿಪ್ಪಣಿ

ಲಕ್ಷ್ಮೀಶನ 'ಜೈಮಿನಿಭಾರತ'ದ ಪದ್ಯವೊಂದರಲ್ಲಿ (೧೯–೪) ಬರುವ 'ಮುಂತಾಗಿ' ಎಂಬ ಪ್ರಯೋಗಕ್ಕೆ 'ಅಭಿಮುಖವಾಗಿ' ಎಂಬ ಅರ್ಥವಿರುವುದಾಗಿಯೂ ಅದೇ ಅರ್ಥದಲ್ಲಿ 'ಮುಂತಾಗಿ', 'ಮುಂದಾಗಿ' ಎಂಬ ಎರಡು ಪ್ರಯೋಗಗಳೂ ಶಾಸನಗಳಲ್ಲಿ ಸಿಕ್ಕುವುದಾಗಿಯೂ ದಿವಂಗತ ಪ್ರಾಚಾರ್ಯ ತೀ.ನಂ. ಶ್ರೀಕಂಠಯ್ಯನವರು ತಮ್ಮೊಂದು ಲೇಖನದಲ್ಲಿ[1] ಪ್ರತಿಪಾದಿಸಿದ್ದಾರೆ. ಈ ಬಗ್ಗೆ ಗಮನಿಸಬೇಕಾದ ಸಂಗತಿಗಳು ಎರಡು: 'ಮುಂತಾಗಿ' ಎಂಬ ಅಥವಾ ತತ್ಸಂಬಂಧವಾದ ಪ್ರಯೋಗ 'ಜೈಮಿನಿಭಾರತ'ದ ಹೊರತು ಬೇರೆ ಯಾವುದೇ ಕಾವ್ಯದಲ್ಲಿರುವುದು ತೀ.ನಂ.ಶ್ರೀ ಅವರ ಗಮನಕ್ಕೆ ಬರಲಿಲ್ಲ; ಅಲ್ಲದೆ, ಅವರಿಗೆ ಸಿಕ್ಕಿರತಕ್ಕವು 'ಮುಂತಾಗಿ', 'ಮುಂದಾಗಿ' ಎಂಬ ಅಪೂರ್ಣ ಕ್ರಿಯಾಪದ ರೂಪಗಳು ಮಾತ್ರ.

ಆದರೆ 'ಕುಮಾರವ್ಯಾಸಭಾರತ'ದಲ್ಲಿ ಒಂದು ಕಡೆ 'ಮುಂತಾಗು'('ಮುಂದಾಗು') ಎಂಬುದರ ಪೂರ್ಣಕ್ರಿಯಾರೂಪ ಬಳಕೆಗೊಂಡಿರುವುದನ್ನು ಗಮನಿಸಬಹುದು.

ಅರಣ್ಯಪರ್ವದ ಕಿರಾತಾರ್ಜುನೀಯ ಪ್ರಕರಣದಲ್ಲಿ ಬರುವ ಈ ಎರಡು ಪದ್ಯಗಳನ್ನು[2] ನೋಡಿ:

ಗೆಲಿದನೆನ್ನನು ಶಬರನೀತನ
ಗೆಲುವ ಶಕ್ತಿಯ ಕೊಡು ಕಿರಾತನ
ಬಲುಹು ಭಂಗಿಸಿತೆನ್ನ ಬಿಂಕದ ಒಡೆಯ ನೀನಿರಲು
ಹಲವು ಮಾತೇನಿವನ ಮುಱಿವ
ಗ್ಗಳಿಕೆಯನು ಕೃಪೆ ಮಾಡೆನುತ ಪರ
ಬಲ ದಿಶಾಪಟ ಭುಜವನೊದಱಿಸುತಿತ್ತ ಮುಂತಾದ॥

ಆಗಲಿದನಾರೈವೆನೆನುತವ
ನಾಗಮೋಕ್ತದಿನಮಳ ಲಿಂಗದ
ಮೇಗಱಿಯ ನಿರ್ಮಾಲ್ಯವನು ಬೇಱಿರಿಸಿ ಭಕ್ತಿಯಲಿ
ಹೂಗಳನು ತಿಱಿದೊಟ್ಟಿ ಕರುಣಾ
ಸಾಗರನ ಬಲವಂದು ದಕ್ಷನ
ಯಾಗಹರನೆ ನಮಃಶಿವಾಯೆನುತತ ಮುಂತಾದ॥

---

1 "ಮುನ್ನೀರು ಮುಂತಾಗಿ......", ಕಾವ್ಯಾನುಭವ, ಪು. ೭೫–೮೦

2 ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕೆ. ೨೦೫ನೆಯ ಹಸ್ತಪ್ರತಿ, ಅರಣ್ಯಪರ್ವ, ಐದನೆಯ ಸಂಧಿ, ಪದ್ಯ ೪೫, ೪೮.

ಇವುಗಳ ಸಂದರ್ಭವನ್ನು ವಿವರಿಸಬೇಕಿಲ್ಲ. ಈ ಪದ್ಯಗಳಲ್ಲಿ 'ಮುಂತಾದ' ಎಂಬುದಕ್ಕೆ ವಿರಳವಾಗಿ 'ಮುಂದಾದ' ಎಂದು ಪಾಠಾಂತರವುಂಟು. ಇಲ್ಲಿಯೂ 'ಮುಂತಾದ' 'ಮುಂದಾದ' ಎಂಬ ಪ್ರಯೋಗಗಳಿಗೆ ಅಭಿಮುಖಾರ್ಥವೇ ಇರುವುದು ಸ್ಪಷ್ಟವಾಗಿದೆ. "ಇತ್ತ (ಅತ್ತ) ಮುಂತಾದ (ಮುಂದಾದ)" ಎಂದರೆ "ಅರ್ಜುನನು ಕಪಟ ಕಿರಾತನಿದ್ದ ಕಡೆಗೆ' ಅಭಿಮುಖನಾದನು" ಎಂದು ಅರ್ಥವಾಗುತ್ತದೆ. ಆದ್ದರಿಂದ, 'ಮುಂತಾಗು' ('ಮುಂದಾಗು') ಎಂಬ ಧಾತು ಅಪೂರ್ಣ ಕ್ರಿಯಾರೂಪದಲ್ಲಿ ಮಾತ್ರವಲ್ಲದೆ ಪೂರ್ಣಕ್ರಿಯಾರೂಪದಲ್ಲೂ ಪ್ರಯುಕ್ತವಾಗುತ್ತಿತ್ತೆಂದು ಹೇಳಬಹುದು; 'ಮುಂದಾಗು' ಎಂಬುದಕ್ಕಿಂತ 'ಮುಂತಾಗು' ಎಂಬ ರೂಪವೆ ಹೆಚ್ಚು ಪ್ರಚುರವಾಗಿತ್ತೆಂದೂ ತೋರುತ್ತದೆ.

ಪ್ರಾಚಾರ್ಯ ತೀ.ನಂ.ಶ್ರೀ ಅವರ ವಿವೇಚನೆಗೆ ಇದೊಂದು ಪೂರಕವಾದ ಅಂಶವಾಗಬಲ್ಲುದು.

–ಸಿ. ಪಿ. ಕೆ.

ಕಾವ್ಯಾವಲೋಕನ

ಸಕಲ ಪುರಾತನರ ವಚನಗಳು: ಸಂಪಾದಕರು: ಡಾ. ಆರ್. ಸಿ. ಹಿರೇಮಠ, ಎಂ.ಎ. ಪಿಎಚ್.ಡಿ ಪ್ರಕಾಶಕರು : ಕರ್ನಾಟಕವಿಶ್ವವಿದ್ಯಾಲಯ ಧಾರವಾಡ–ಕನ್ನಡ ಅಧ್ಯಯನ ಪೀಠ; ಪುಟ ೬೫೪ + ೨೦ + ೪೭; ಬೆಲೆ: ಹದಿನೆಂಟು ರೂಪಾಯಿಗಳು.

ವಚನ ವಾಙ್ಮಯವೆಂದರೆ ಕನ್ನಡನಾಡು ನುಡಿಯ ಸತ್ವ; ಕನ್ನಡ ಸಾಹಿತ್ಯದ ಶಕ್ತಿ; ಕನ್ನಡ ವಾಗ್ದೇವಿಯ ಶುಕ್ರಮುಕುರ. ಸಮಾಜದಲ್ಲಿ ಜಾತಿ, ಮತ, ಪಂಥ, ಕುಲಗೋತ್ರ, ಮೇಲು, ಕೀಳು, ಹೆಣ್ಣು, ಗಂಡು, ಎಂಬ ಭೇದಭಾವನೆಯನ್ನು ನಿರಾಕರಿಸಿ, ಸರ್ವಸಮತಾಯೋಗವನ್ನು ಕಲಿಸಿದವರು ಹನ್ನೆರಡನೆಯ ಶತಮಾನದ ಶಿವಶರಣರು. ವಿಶ್ವಹಿತದೃಷ್ಟಿಯಿಂದ ಅವರು ತಾತ್ತ್ವಿಕ, ಧಾರ್ಮಿಕ, ಸಾಮಾಜಿಕ, ಮತ್ತು ಸಾಹಿತ್ಯಕ್ಷೇತ್ರಗಳಲ್ಲಿ ಅಸಮಾನಕ್ರಾಂತಿಯನ್ನೆಸಗಿದರು. ಅರಾಜಕೀಯವನ್ನು ದಾಟಿ ಈ ವಚನವಾಙ್ಮಯ ಉಳಿದು ಬಂದಿರುವುದು ಕನ್ನಡನಾಡಿನ ಭಾಗ್ಯ. ಧಾರ್ವಾಡ ವಿಶ್ವವಿದ್ಯಾಲಯದವರು ವಚನವಾಙ್ಮಯದ ಸಂಗ್ರಹ, ಸಂಸ್ಕರಣ, ಮತ್ತು ಪ್ರಕಟನ ಕಾರ್ಯವನ್ನು ಕೈಕೊಂಡು ಸರ್ವೋತ್ತಮ ವಚನ ಸಂಕಲನ ಗ್ರಂಥಗಳನ್ನು ಪ್ರಕಟಿಸುತ್ತಿದ್ದಾರೆ.

ಅಂತಹ ಗ್ರಂಥಗಳಲ್ಲಿ "ಸಕಲ ಪುರಾತನರ ವಚನಗಳು" ಒಂದು ಪ್ರಮುಖ ಗ್ರಂಥ. ಇದರಲ್ಲಿ ಕೋಲ ಶಾಂತಯ್ಯನಿಂದ ಆರಂಭಿಸಿ ಮೋಳಿಗಯ್ಯಗಳ ವರೆಗಿನ ೧೭ ಜನ ಶರಣರ ೨೯೫೩ ವಚನಗಳನ್ನು ಆಯ್ದು ಅಳವಡಿಸಲಾಗಿದೆ. ಇವುಗಳಲ್ಲಿ ಅತ್ಯಂತ ಕಡಮೆ ಸಂಖ್ಯೆಯ ಉರಿಲಿಂಗದೇವನ ವಚನಗಳು ೩೭ ಇದ್ದರೆ, ಅತ್ಯಂತ ಹೆಚ್ಚು ಸಂಖ್ಯೆಯ ಮೋಳಿಗೆ ಮಾರಯ್ಯಗಳ ವಚನಗಳು ೫೩೨ ಇವೆ. ವಿವಿಧ ವಚನ ಕಾರರ ಸಂಪಾದನೆಯ ವಚನಗಳು ೨೩೭ ಇವೆ. ವಚನ ವಾಙ್ಮಯದಲ್ಲಿ ಸಕಲ ಪುರಾತನರ ವಚನಗಳ ಸ್ಥಾನ ಗಣ್ಯವಾಗಿದೆ. ಪ್ರತಿಯೊಬ್ಬ ವಚನಕಾರನ ಅಂಕಿತವೂ ಬೇರೆ ಬೇರೆ ಇದೆ. ಈ ವಚನಗಳಲ್ಲಿ ಶರಣರ ಶಿವಾನುಭವ ಮತ್ತು ವೀರಶೈವ ತತ್ತ್ವಜ್ಞಾನ ತುಂಬಿದೆ. ಇವರು ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಗಳನ್ನು ವಿಶ್ಲೇಷಿಸಿ, ವಿನೂತನ ಸಮಾಜದರ್ಶನವನ್ನು ಕಂಡು ಮಾನವ ಜೀವನದ ಉನ್ನತ ಮೌಲ್ಯಗಳನ್ನು ನಿರ್ಣಯಿಸಿದ್ದಾರೆ. ಮಾದಾರ ಧೂಳಯ್ಯ, ಮಾದಾರ ಚೆನ್ನಯ್ಯ, ಮೇದಾರ ಕೇತಯ್ಯ, ಅರಿವಿನ ಮಾರಿತಂದೆ, ಡಕ್ಕೆಯ ಬೊಮ್ಮಣ್ಣಗಳಂತ ಶರಣರ ಶಿವಾನುಭವದ ಆಳ ಅಗಾಧವಾದುದು.ನೂತನ ಸಮಾಜೋದಯ ಕಾಲದಲ್ಲಿ ಈ ಶರಣರು ನಡೆಸಿದ ಧಾರ್ಮಿಕ ಕ್ರಾಂತಿ ಜನತೆಯ ಮೇಲೆ ಪ್ರಬಲತರ ಪ್ರಭಾವವನ್ನು ಬೀರಿತೆಂಬುದು ಈ 'ಸಕಲ ಪುರಾತನರ ವಚನಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಇದರಲ್ಲಿ 'ಪ್ರಭುದೇವರ ಬಸವಣ್ಣನ ಸಂಪಾದನೆ, ಪ್ರಭುದೇವರ ಚೆನ್ನಬಸವಣ್ಣನವರ ಸಂಪಾದನೆ ಪ್ರಭುದೇವರ ಸಿದ್ಧರಾಮಯ್ಯದೇವರ ಸಂಪಾದನೆ, ಪ್ರಭುದೇವರ ಮಹಾದೇವಿಯಕ್ಕ ಪ್ರಭುದೇವರ ಮಹಾದೇವಿಯಕ್ಕಗಳ ಸಂಪಾದನೆಗಳಿವೆ. ಬಹುಶಃ ಶಿವಗಣ ಪ್ರಸಾದಿ ಮಹಾದೇವಯ್ಯಗಳ ಹದಿನೈದನೆಯ ಶತಮಾನದ 'ಶೂನ್ಯ ಸಂಪಾದನೆಯ' ಉಗಮ ಸಕಲ ಪುರಾತನರ ವಚನಗಳಲ್ಲಿ ಕಂಡುಬರುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಈ ವಚನಗಳಲ್ಲಿ ಸಾಹಿತ್ಯದ ಮಾಧುರ್ಯವಿದೆ; ತತ್ತ್ವ ಸಾಮರ್ಥ್ಯವಿದೆ. ಇದರಲ್ಲಿ ಅನೇಕ ವಚನಗಳು ಕ್ಲಿಷ್ಟವಾಗಿಯೂ ಇವೆ. ಇವುಗಳನ್ನು ಬೆಡಗಿನ ವಚನಗಳೆಂದು ಕರೆಯುತ್ತಾರೆ. "ಚಿತ್ತಳಿಯ ಹುತ್ತದಲ್ಲಿ ಕತ್ತಲೆಯ ಹೆಡೆಯ ಸರ್ಪ ತೆಕ್ಕೆ ಮಡಿಯಲರಿಯದೆ ಸಿಕ್ಕಿ, ಅದೇ ಹುತ್ತದ ಬಾಯಲ್ಲಿ ಸತ್ತು

ಹರಿದು ಬಂದು ಸರ್ಪನ ನುಂಗಿತ್ತು; ಹುತ್ತ ಬಚ್ಚಬಯಲಾಯಿತ್ತು ಅರ್ಕೇಶ್ವರ ಲಿಂಗನಗೊತ್ತು." ಇಂಥ ವಚನಗಳು ಸಾಮಾನ್ಯರಿಗೆ ಅರ್ಥವಾಗುವಂತಿಲ್ಲ.

ಎಲ್ಲ ಪುರಾತನರೂ ಇಂಥ ಅನೇಕ ವಚನಗಳನ್ನು ನುಡಿದಿದ್ದಾರೆ. ಸಂಪಾದಕರು ಇಂಥ ವಚನಗಳನ್ನು ಆಯ್ದು ಪ್ರತ್ಯೇಕವಾದ ಅನುಬಂಧದಲ್ಲಿ ಸೇರಿಸಿ, ತಾತ್ಪರ್ಯವನ್ನು ಕೊಟ್ಟಿದ್ದರೆ, ಅಭ್ಯಾಸಿಗಳಿಗೆ, ಜಿಜ್ಞಾಸುಗಳಿಗೆ ತುಂಬ ಅನುಕೂಲವಾಗುತ್ತಿತ್ತು. ಈ ವಚನಗಳಲ್ಲಿ ಅನೇಕ ಬಂಧುರ ನುಡಿಗಟ್ಟುಗಳಿವೆ. ತತ್ತ್ವಾರ್ಥಗಳನ್ನು ಅನೇಕ ಸಂದರ್ಭಗಳಲ್ಲಿ ಶರಣರು ಸುಂದರ ಉಪಮಾನಗಳಿಂದ ಮನೋಜ್ಞವಾಗಿ ನಿರೂಪಿಸಿರುತ್ತಾರೆ. "ಮನಕೆ ಸಾಹಿತ್ಯವಾದಲ್ಲದೆ, ಕಾಯಕೆ ಸಾಹಿತ್ಯವಾಗಬಾರದು. ಅಂಬುತಾಗಿಪನೆಂದರೆ ಧನುವಿನ ಸಂಗದಿಂದಲ್ಲದೆ ತಾಗದು; ಚಿತ್ರದ ಹುಲಿ ಮನುಷ್ಯನ ಕಚ್ಚಬಲ್ಲುದೆ? ಕಲ್ಲು ಕಲ್ಲು ತಾಗಿದಲ್ಲಿ ಕಿಚ್ಚಿನ ಕಿಡಿಯಲ್ಲದೆ ಹೆಂಟೆ ಶಿಲೆಹೋರಿದಲ್ಲಿವುಂಟೆ? ಕಸುಗಾಯಲ್ಲಿ ಹಣ್ಣಿನರಸವನರಸಿದರುಂಟೆ ಅಯ್ಯ?–ಈ ಮೊದಲಾದ ಅನೇಕಾನೇಕ ಉಕ್ತಿ ಚಿತ್ರಗಳಲ್ಲಿ ಶರಣರ ಪ್ರತಿಭೆಯನ್ನು ಕಾಣಬಹುದು.

ಸಕಲ ಪುರಾತನರ ವಚನಗಳಲ್ಲಿ ಕ್ರಾಂತಿಯ ಕೆಂಡ ನಿಗಿನಿಗಿಸುತ್ತಿದೆ. ಗುರು, ಲಿಂಗ, ಜಂಗಮ, ಪಾದೋದಕ,ಪ್ರಸಾದ, ಶೂನ್ಯ, ನಿಶ್ಶೂನ್ಯ, ಲಿಂಗ, ಅತ್ಮ, ಜೀವ ಪರಮಲೋಕ, ಶರಣ ಮುಂತಾದ ಘನತತ್ತ್ವಗಳ ಆಚರಣೆ ದಾರಿತಪ್ಪಿದ ಸಂದರ್ಭಗಳಲ್ಲಿ 'ಪುರಾತನರ ವಚನಗಳ' ಶರಣರು ನಿರ್ದಾಕ್ಷಿಣ್ಯವಾಗಿ ಗುರು, ಜಂಗಮರನ್ನು ಖಂಡಿಸಿದ್ದಾರೆ; ಅವರಿಗೆ ನಿಜಮಾರ್ಗವನ್ನು ತೋರಿಸಿದ್ದಾರೆ. ಇದೊಂದು ಅಮೂಲ್ಯ ವಚನ ಸಂಕಲನಗ್ರಂಥ. ಇದರಲ್ಲಿ ಕೊಟ್ಟಿರುವ ಕಠಿಣ ಶಬ್ದಾರ್ಥಕೋಶ, ಪಾರಿಭಾಷಿಕ ಶಬ್ದಕೋಶ, ವಚನಗಳ ಅಕಾರಾದಿ–ಇವು ತುಂಬ ಉಪಯುಕ್ತವಾಗಿವೆ. ಧಾರ್ವಾಡ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಸಾಹಿತ್ಯಲೋಕದ ಗೌರವಕ್ಕೆ ಪಾತ್ರವಾಗಿದೆ.

ಓ. ಎನ್. ಲಿಂಗಣ್ಣಯ್ಯ

ಇದು ಜೀವನ: ಲೇ: ಸದಾಶಿವ ಒಡೆಯರ. ಪ್ರ: ಮ. ಅನಂತಮೂರ್ತಿ. ಸಾಹಿತ್ಯ ಭಂಡಾರ, ಹುಬ್ಬಳ್ಳಿ–೨೦, ಪು. ೭೦, ಬೆಲೆ: ೩ರೂ, ಮೊದಲನೇ ಆವೃತ್ತಿ, ೧೯೭೨.

ವೃತ್ತಿಯಿಂದ ಸಾಹಿತ್ಯದ ಆಚೆ ಇದ್ದರೂ ಪ್ರವೃತ್ತಿಯಿಂದಾಗಿ ಕನ್ನಡ ಸಾಹಿತಿಯಾಗಿರುವವರು ಶ್ರೀ ಸದಾಶಿವ ಒಡೆಯರ ಅವರು. ಈ "ಪುಸ್ತಕ ಒಮ್ಮೆ ಓದಿ ಬದಿಗಿರಿಸುವ ಪುಸ್ತಕವಲ್ಲ. ಅದನ್ನು ಸಾವಕಾಶವಾಗಿ ಓದುತ್ತ, ಓದಿದ್ದನ್ನು ಸಾವಕಾಶವಾಗಿ ಮೆಲುಕು ಹಾಕುತ್ತ ಹೋದರೆ ಅದು ಹೆಚ್ಚು ಪ್ರಯೋಜನಕಾರಿಯಾಗಬಲ್ಲದು. ಇದನ್ನು ಹಾಗೆ ಓದುವುದರಿಂದ ಓದುಗರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುವದೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. (ಅರಿಕೆ ಪು. ೫)" ಎಂದು ಅವರು ನುಡಿದಿದ್ದಾರೆ.

ಪುಸ್ತಕದಲ್ಲಿ ಹನ್ನೊಂದು ಬೇರೆ ಬೇರೆಯ ಲೇಖನಗಳಿದ್ದು 'ಇದು ಜೀವನ', ಸಭ್ಯತೆ, ಯೌವನ, ಇಂದು ಇಂದಿಗೆ, ವಾಸ್ತವ ದೃಷ್ಟಿ' ಇವು ಅನುವಾದಗಳಾಗಿವೆ.

'ಇದು ಜೀವನ' ಪುಸ್ತಕದ ಮೊದಲ ಲೇಖನವಾಗಿದ್ದು, ಬದುಕಿನ ಬಗ್ಗೆ ನಡೆಸಿದ ಜಿಜ್ಞಾಸೆ. ಎಲ್ಲ ಸಾತ್ವಿಕ ಶಕ್ತಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬುದು ಈ ಲೇಖನದ ಮುಖ್ಯ ಧೋರಣೆಯಾಗಿದೆ. ಲೇಖನದ ಮೂಲ ಲೇಖಕರಾದ ಕೆ. ಜಿ. ಸೈಯದೀನ್ ಅವರು ಜೀವನವನ್ನು ಬೇರೆ ಬೇರೆ ಕನ್ನಡಿಯಲ್ಲಿ ನೋಡಲು ಪ್ರಯತ್ನಿಸಿದ್ದಾರೆ. ವ್ಯಕ್ತಿ ಮತ್ತು ಸಾಮಾಜಿಕ ಸಂಬಂಧ ಹಾಗೂ ವ್ಯಕ್ತಿಯೊಳಗೇ ಬೇರು ಬಿಡುವ ಪ್ರೇಮ, ಸೌಂದರ್ಯೋಪಾಸನೆ ಇಂತಹವುಗಳನ್ನು ಚರ್ಚಿಸಿದ್ದಾರೆ. ಅವರ ಹೇಳುವ ಮಾತಿನಲ್ಲಿ ಮೊನೆಗಾರಿಕೆಯ ಚಿಂತನೆಯ ಕೊರತೆಯಿದೆ. ಉದಾಹರಣೆಗೆ ನೋಡಿ: "ಪ್ರೇಮ ಅತ್ಯಂತ ಸಹನ ಶಕ್ತಿಯುಳ್ಳದ್ದು. ಅದು ದಯಾಮಯಿ. ಅಸೂಯೆ ಎಂಬುದನ್ನು ಅದು ಅರಿಯದು. ಅದು

ಪ್ರದರ್ಶನ ಮಾಡಲು ಬಯಸುವುದಿಲ್ಲ. ಅದು ದುರಾಚಾರವನ್ನರಿಯದು. ಅದು ಗರ್ವದಿಂದ ಕೂಡಿರುವುದಿಲ್ಲ; ಸ್ವಾರ್ಥದಿಂದ ಕಲುಷಿತವಾಗಿರುವುದಿಲ್ಲ..."(ಪು. ೧೮).

'ಜೀವನ ಕಲೆ' ಎಂಬ ಎರಡನೆಯ ಬರಹದ ವ್ಯಾಪ್ತಿಯಲ್ಲಿ ಚಿಕ್ಕದಾಗಿದ್ದು, ಬದುಕಿನಲ್ಲಿ ಯಾರು ಪರೋಪಕಾರಿಗಳಾಗಿರುತ್ತಾರೋ ಅವರೇ ಎಲ್ಲಕ್ಕಿಂತ ಮಿಗಿಲಾದ ಕಲಾವಿದರು ಎನ್ನುತ್ತಾರೆ ಲೇಖಕರು.

ಮನುಷ್ಯನ 'ರೀತಿ–ನೀತಿ'ಗಳನ್ನು ಕುರಿತು ಬರೆದ ಮೂರನೆಯ ಲೇಖನ ಒಂದು ಲಘುಪ್ರಬಂಧ. ರೀತಿ–ನೀತಿಗಳೇ ಬದುಕಿನಲ್ಲಿ ಅತಿಯಾಗಿ ಅವು ಬದುಕನ್ನು ಹದಗೆಡಿಸಬಾರದು ಎಂಬುದು ಲೇಖನದ ಧೋರಣೆ.

ಕಾರ್ಡಿನಲ್ ನ್ಯೂಮನ್ನನ 'Gentleman' ಪ್ರಬಂಧದ ಅನುವಾದದಲ್ಲಿ ಸಜ್ಜನನ ಲಕ್ಷಣಗಳನ್ನು ಕುರಿತು ಬರೆಯಲಾದ "ನಾಲ್ಕು ಜನ ಒಂದೆಡೆ ಸೇರಿದಾಗ ಸುಸಂಸ್ಕೃತನಾದವನ ನಡವಳಿಕೆಯ ರೀತಿ ಒಡೆದು ಕಾಣುವಂತಹದು. ಆತ ಮಾತನಾಡುವಾಗ ತನ್ನ ಸುತ್ತಲಿರುವ ಯಾವುದೇ ವ್ಯಕ್ತಿಯ ಮನಸ್ಸಿಗೆ ಆಘಾತ ಮಾಡುವ ಅಥವಾ ನೋವನ್ನುಂಟು ಮಾಡುವ ಮಾತನ್ನು ಎಂದೂ ಆಡುವುದಿಲ್ಲ. (ಪು.೩೦) ಮುಂತಾಗಿ ಹೇಳುವುದರಲ್ಲಿ ಆಸಕ್ತರಿಗೆ ಮನನೀಯವಾದ ಉಪದೇಶ ಸೂಚಿತವಾಗಿದೆ.

'Words to live by' ಎಂಬ ಒಂದು ಪುಸ್ತಕದ ಒಂದು ಬರಹದ ಅನುವಾದ 'ಯೌವನ'. ಪುಸ್ತಕದ ಕರ್ತೃ ಯಾರೆಂದು ತಿಳಿಯಲಾಗುವುದಿಲ್ಲ. ಈ ಚಿಕ್ಕ ಲೇಖನದಲ್ಲಿ ಧೈರ್ಯವೇ ಯೌವನ, ಅಂಜಿಕೆಯೇ ಮುಪ್ಪು ಎಂಬ ಜನಸಾಮಾನ್ಯ ತಿಳುವಳಿಕೆಯನ್ನೇ ಇಲ್ಲಿ ಪ್ರಬಂಧವನ್ನಾಗಿಸಿದೆ. "ಯೌವನವೆಂದರೆ ಅಧೈರ್ಯ ಅಂಜಿಕೆಗಳ ಮೇಲೆ ಧೈರ್ಯದ ಗೆಲುವು. ನಿರುತ್ಸಾಹವನ್ನು ಕಳೆದು ಸಾಹಸಕ್ಕೆಳೆಸುವ ಪ್ರವೃತ್ತಿಯ ವಿಜಯ. ಇದು ಅನೇಕಬಾರಿ ಅರುವತ್ತು ವರ್ಷದ ಮನುಷ್ಯನಲ್ಲಿ ಕಂಡುಬರುವುದೇ ವಿನಾ ಇಪ್ಪತ್ತು ವರ್ಷದ ಹುಡುಗನಲ್ಲಿ ಅಲ್ಲ. (ಪು. ೩೩) ಅನುವಾದದ ರೀತಿ ಹೀಗೆ ಮುನ್ನಡೆಯುತ್ತದೆ.

ಮನುಷ್ಯ ವರ್ತಮಾನದಲ್ಲೇ ಬದುಕಬೇಕು ಅಂತ ಹೇಳುವ ಲೇಖನ 'ಇಂದು ಇಂದಿಗೆ'. ಆ್ಯಂಡ್ರೋ ಮರಾಯಿಸ್ ಲೇಖನ ಒಂದರ ಅನುವಾದ. "ನಿಜವಾದ ಸುಖದ ಗುಟ್ಟೆಂದರೆ ಮನುಷ್ಯ ಅಂದಿನ ಮಟ್ಟಿಗೆ ಬಾಳುವುದನ್ನು ಕಲಿಯಬೇಕು... ನಾಳಿನ ಬಗ್ಗೆ ಚಿಂತಿಸಬೇಡಿರಿ. ಈ ಹೊತ್ತಿನ ಬಗ್ಗೆ ವಿಚಾರ ಮಾಡಿರಿ. ನೀವು ಇದ್ದುದರಲ್ಲಿಯೇ ಚೆನ್ನಾಗಿ ತಿಳಿಯುವ ದಿವಸವೆಂದರೆ ಇಂದಿನ ದಿವಸವೊಂದೇ (ಪು.೩೭)" ಇಂತಹ ಮಾತುಗಳು ವಿಚಾರಕ್ಕೂ ಯೋಗ್ಯ; ಆಚರಣೆಗೂ ಯೋಗ್ಯ: ಆಸಕ್ತಿಯಿಂದ ಈ ಪ್ರಬಂಧವನ್ನು ಓದಬಹುದು.

ಕಲ್ಪನಾ ಸಾಮ್ರಾಜ್ಯದಲ್ಲಿ ಕುಳಿತು ಭ್ರಮೆಯಲ್ಲಿ ಬದುಕುವುದನ್ನು ವ್ಯಕ್ತಿ ಬಿಡಬೇಕು ಎಂಬುದು ಇಲ್ಲಿಯ ಮುಖ್ಯ ಧೋರಣೆ. ಪರಿಪೂರ್ಣತಾವಾದಿಗಳಾಗಿ ನಾವು ಬದುಕನ್ನು ದುರಂತಗೊಳಿಸಿಕೊಳ್ಳಬಾರದು ಎಂದು ತಿಳಿಸುವ ಈ ಲೇಖನ ವಿಚಾರ ಯೋಗ್ಯವಾದ್ದು: 'ಮಾನವತೆ' ಎಂಬ ಲೇಖನದ ವಿಚಾರಧಾರೆಯೂ ಹೀಗೆಯೇ.

'ದೇವಮಾನವ ಆಲ್ಬರ್ಟ್ ಶ್ವಾಯಿಟ್ಝರ್'ನನ್ನು ಕುರಿತಾದ ಮುಂದಿನ ಲೇಖನ ಆಲ್ಬರ್ಟ್‌ನ ಜೀವನ ಚರಿತ್ರೆಯನ್ನು ತಿಳಿಸುತ್ತದೆ; 'ಜಗಜ್ಯೋತಿ ಬಸವೇಶ್ವರರು' ಲೇಖನ ಕೂಡ ಆದರಣೀಯವಾದ್ದು. 'ಶಸ್ತ್ರ ಚಿಕಿತ್ಸೆಯ ಮಹಾಗಾರುಡಿ' ನಿಜವಾದ ಮಾನವತಾವಾದಿಯಾಗಿ ಹುಬ್ಬಳ್ಳಿಯಲ್ಲಿ ಬದುಕುತ್ತಿರುವ ಡಾ. ಆರ್. ಬಿ. ಪಾಟೀಲರನ್ನು ಕುರಿತಾದ ಲೇಖನವಾಗಿದ್ದು ಪಾಟೀಲರ ಸೇವೆಯನ್ನು ಚೆನ್ನಾಗಿ ತಿಳಿಸುತ್ತದೆ

ಬೇರೆ ಬೇರೆ ಲೇಖನಗಳ ಸಂಗ್ರಹವಾದ ಈ ಪುಸ್ತಕದಲ್ಲಿ ಯಾವುದೇ ಏಕಸೂತ್ರವಾದ ಗಾಢವಾದ ಆಲೋಚನೆ ಕಾಣ ಬರದಿದ್ದರೂ ಒಬ್ಬ ವ್ಯಕ್ತಿ ಹೇಗೆ ಸಜ್ಜನನಾಗಬೇಕು ಎಂಬುದರ ತಿಳಿವಳಿಕೆಯನ್ನು ನೀಡುತ್ತದೆ.

ಹೊರೆಯಾಲ ದೊರೆಸ್ವಾಮಿ

ಪ್ರಸಾದಯೋಗ: ಡಾ. ವಿ.ಎ. ದಿವಾಣಜಿ, ಉಷಾ ಸಾಹಿತ್ಯಮಾಲೆಯು ಈ ಪ್ರಬಂಧವನ್ನು ಪ್ರಕಾಶಿಸಿದೆ. ಪುಟಗಳು–೨೭೭+೧೬, ಬೆಲೆ: ಸಾದಾ ಪ್ರತಿ ರೂ. ೧೦; ಕ್ಯಾಲಿಕೋ ಪ್ರತಿ: ರೂ. ೧೫. ಪ್ರಥಮ ಮುದ್ರಣ ೧೯೭೨.

ಡಾ. ವಿ. ಎ. ದಿವಾಣಜಿಯವರು ನಿಷ್ಣಾತ ಸಾಹಿತಿಗಳು. ಕನ್ನಡದಲ್ಲಿ ಈಗಾಗಲೇ ವಿವಿಧ ಗ್ರಂಥಗಳನ್ನು ಬರೆದು ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರು ಕವಿಗಳೂ ಕಾದಂಬರಿಕಾರರೂ ಶ್ರೇಷ್ಠ ವಿಮರ್ಶಕರೂ ಆಗಿದ್ದಾರೆ. ಇವರ 'ನಾಲ್ಕನೆಯ ಆಯಾಮ' ಎಂಬ ಕಾದಂಬರಿಗೆ ಕರ್ನಾಟಕ ಸರಕಾರದ ಸಾಹಿತ್ಯ ಅಕ್ಕಾಡೆಮಿಯವರು ಬಹುಮಾನವನ್ನು ಕೊಟ್ಟು ಈಗಾಗಲೇ ಗೌರವಿಸಿದ್ದುಂಟು. ಇಂಥ ಶ್ರೇಷ್ಠ ಸಾಹಿತಿಯ ಪ್ರೌಢ ಪ್ರಬಂಧವನ್ನು ಉಷಾ ಸಾಹಿತ್ಯ ಮಾಲೆಯವರು ಅಚ್ಚುಕಟ್ಟಾಗಿ ಮುದ್ರಿಸಿ, ಪ್ರಕಾಶಿಸಿ, ಕನ್ನಡಿಗರು ಪುರಂದರ ದಾಸರ ಕೀರ್ತನೆಗಳ ಸಾಹಿತ್ಯಿಕ ಮಹತ್ವವನ್ನು ತಿಳಿದುಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಪಿಎಚ್.ಡಿ. ಪದವಿಗಾಗಿ ಬರೆದ ಪ್ರಬಂಧವಾದುದರಿಂದ ಡಾ. ದಿವಾಣಜಿಯವರು ಪುರಂದರ ದಾಸರ ಕೀರ್ತನೆಗಳನ್ನು ಮುಖ್ಯವಾಗಿ ತಮ್ಮ ಅಧ್ಯಯನದ ತಳಹದಿಯಾಗಿಟ್ಟುಕೊಂಡು ಇನ್ನುಳಿದ ದಾಸರ ಕೀರ್ತನೆಗಳ ಸಾರವನ್ನು ಸಾಹಿತ್ಯಕ ವಿಮರ್ಶೆಯ ಒರೆಗಲ್ಲಿನ ಮೇಲೆ ತೀಡಿ ತೋರಿಸಿದ್ದಾರೆ. ದಾಸರ ಕೀರ್ತನೆಗಳನ್ನು ಕುರಿತು ಅಲೋಕನವನ್ನು ಮಾಡುವಾಗ, ಭಗವಂತನ ಪ್ರಸಾದಯೋಗವು ದಾಸರಿಗೆ ಹೇಗಾಯಿತೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಮಹಾಯೋಗದ ವಿವರಣೆ ಮತ್ತು ವಿವೇಚನೆಯೇ ಈ ಗ್ರಂಥಕಾರರ ಗುರಿಯಾಗಿದೆ. ಇಲ್ಲಿ ಸಾಹಿತ್ಯಕ ದೃಷ್ಟಿಗಿಂತ ತಾತ್ವಿಕ ದೃಷ್ಟಿಯೇ ಮುಖ್ಯವಾಗಿ ಕಾಣಿಸುತ್ತದೆ. ಮಾಧ್ವ ಸಂಪ್ರದಾಯದವರಿಗೆ ಇದು ಅಚ್ಚುಮೆಚ್ಚಿನ ಕೃತಿಯಾಗಿದೆ.

ಹರಿದಾಸಕೂಟದ ಪ್ರಾರಂಭದ ಬಗೆಗೆ ಹಲವಾರು ಅಭಿಪ್ರಾಯಗಳಿದ್ದರೂ, ಅವುಗಳನ್ನು ಚೆನ್ನಾಗಿ ಅವಲೋಕಿಸಿ, ಅವುಗಳ ಬಗ್ಗೆ ಸ್ಪಷ್ಟ ನಿರ್ಣಯಗಳನ್ನು ನೀಡಿದ್ದಾರೆ. ಪುರಂದರ ದಾಸರ ಜೀವನ ಚರಿತ್ರೆಯು ಪವಾಡಗಳ ರೂಪದಿಂದ, ಐತಿಹ್ಯಗಳ ರೂಪದಿಂದ ದೊರೆಯಲು ಸಾಧ್ಯವಾದ ಎಲ್ಲ ಸಂಗತಿಗಳನ್ನು ಎಳೆಯೆಳೆಯಾಗಿ ಬಿಡಿಸಿ ತೋರಿಸಲು ಪ್ರಯತ್ನಪಟ್ಟಿದ್ದಾರೆ. ಪುರಂದರದಾಸರಿಗೆ ತೆಲುಗಿನಲ್ಲಿ ಹಾಡುಗಳನ್ನು ರಚಿಸುವ ಸಾಮರ್ಥ್ಯವಿತ್ತೆಂದು ಸಾಹಸದಿಂದ ಹೇಳಿದ್ದಾರೆ. ಅವರ ಸಂಸ್ಕೃತ ಜ್ಞಾನದ ಕಡೆಗೂ ಓದುಗರ ಗಮನವನ್ನು ಸೆಳೆದಿದ್ದಾರೆ. ಪುರಂದರದಾಸರ ವ್ಯಕ್ತಿತ್ವದ ಬಗ್ಗೆಯಿರುವ ಅಂಶಗಳನ್ನು ವಿಶದವಾಗಿ ವಿವರಿಸಿದ್ದಾರೆ.

ಪುರಂದರದಾಸರ ಪೂರ್ವಜೀವನ ಮತ್ತು ಅವರ ಬಗ್ಗೆಯಿದ್ದ ಪ್ರಚಲಿತ ಸಂಗತಿಗಳನ್ನು ಪರಾಮರ್ಶಿಸುತ್ತ, ಕೀರ್ತನೆಗಳು ಅವರ ಆಧ್ಯಾತ್ಮಿಕ ಸಾಧನೆಗೆ ಹೇಗೆ ಆಧಾರವಾದುವು ಎಂಬುದನ್ನು ತೋರಿಸಿದ್ದಾರೆ. ಪುರಂಗರದಾಸರ ಜೀವನದಲ್ಲಿ ಇದು ಎಷ್ಟು ಉಜ್ವಲವಾಗಿದೆಯೆಂಬುದು ಇಲ್ಲಿ ಸ್ಪಷ್ಟವಾಗಿದೆ.

ಮಧ್ವ ಸಿದ್ಧಾಂತ ಗ್ರಂಥಗಳನ್ನು ಆಳವಾಗಿ ಓದಿಕೊಂಡ ಈ ಲೇಖಕರಿಗೆ ದಾಸರ ಕೀರ್ತನೆಗಳನ್ನು ತಾತ್ವಿಕವಾಗಿ ಪರಿಶೀಲಿಸಲು ಸುಸಾಧ್ಯವಾಗಿದೆ. ಮಧ್ವಮತದ ತತ್ವಗಳ ಪ್ರತಿಪಾದನೆಯಲ್ಲಿ ಪುರಂದರ ದಾಸರಿಗಿದ್ದ ಮುಖ್ಯ ಒಲವು ಯಾವುದೆಂಬುದನ್ನು ಇಲ್ಲಿ ತೋರಿಸಿಕೊಟ್ಟಿದ್ದಾರೆ. ಶ್ರೀಜಗನ್ನಾಥರ ಮತ್ತು ಪುರಂದರದಾಸರ ಕ್ರಮಗಳನ್ನು ತೌಲನಿಕದೃಷ್ಟಿಯಿಂದ ನೋಡಿ, ಅವೆರಡರಲ್ಲಿ ತೋರಿಬರುವ ಅಂತರವನ್ನು ನಿಪುಣತೆಯಿಂದ ತೋರಿಸಿದ್ದಾರೆ. ಭಗವಂತನ ಮಹಾತ್ಮ್ಯೆಯ ವಿವಿಧ ಸ್ವರೂಪಗಳನ್ನು ನಿರೂಪಿಸುವಲ್ಲಿ ಪುರಂದರದಾಸರು ಯಶಸ್ವಿಯಾಗಿದ್ದಾರೆಂಬುದನ್ನು ಲೇಖಕರು ಪ್ರಮಾಣಪೂರ್ವಕವಾಗಿ ಪ್ರಸ್ಥಾಪಿಸಿದ್ದಾರೆ. ಪುರಂದರದಾಸರ ಕೀರ್ತನೆಗಳು ಆಚಾರ ಸಂಹಿತೆಯ ಕುರುಹುಗಳು ಎಂಬ ಮಾತನ್ನು ಮನಸದಟ್ಟುವಂತೆ ಹೇಳಿದ್ದಾರೆ. ಇವರ ಜೀವನವು ಆಧ್ಯಾತ್ಮಿಕತೆ ಮತ್ತು ಲೌಕಿಕತೆಗಳ ಸಂಗಮವಾಗಿತ್ತೆಂಬುದನ್ನು ಲೇಖಕರು ಅವರ ಲೋಕನೀತಿಯನ್ನು ಕುರಿತು ಹೇಳುವಲ್ಲಿ ಸ್ಪಷ್ಟಪಡಿಸಿದ್ದಾರೆ.

ವಿಶ್ವದ ಎಲ್ಲ ಸಂತರಂತೆ ಪುರಂದರದಾಸರೂ ಲೋಕನೀತಿಯನ್ನು ಬೋಧಿಸಿದ್ದಾರೆ. ಈ ಬೋಧೆಯಲ್ಲಿ ಅವರು ಅರಿತುಕೊಂಡ ಮತ್ತು ಅನುಭವಿಸಿದ ಜೀವನದ ನೆಲೆಯನ್ನು ಲೇಖಕರು ಅನೇಕ

ಉದಾಹರಣೆಗಳಿಂದ ಸ್ಪಷ್ಟಪಡಿಸಿದ್ದಾರೆ. ದಾಸರ ಕೀರ್ತನೆಗಳು ಧರ್ಮಶಾಸ್ತ್ರವನ್ನು ಹಾಡುವ ಪದಗಳು. ದಾಸರ ನೀತಿಶಾಸ್ತ್ರವನ್ನು ಬೆಳಗುವ ದೀಪಗಳು. ಈ ದೃಷ್ಟಿಯಿಂದ ಜಗತ್ತಿನ ಧರ್ಮಶಾಸ್ತ್ರ ಮತ್ತು ನೀತಿಶಾಸ್ತ್ರಗಳಲ್ಲಿ ಪುರಂದರದಾಸರ ಕೀರ್ತನೆಗಳಿಗಿರುವ ಮಹತ್ವವನ್ನು ಲೇಖಕರು ತರ್ಕಬದ್ಧವಾಗಿ ವಿವೇಚಿಸಿದ್ದಾರೆ.

ಪುರಂದರದಾಸರ ಕೀರ್ತನೆಗಳಲ್ಲಿ ವಿಷಯ ವೈವಿಧ್ಯ ಮತ್ತು ವಿಪುಲತೆ ಕಂಡುಬರುತ್ತವೆ. ವಿಷಯ ವಿಪುಲತೆಯಲ್ಲಿ ಸಮಗ್ರತೆಯುಂಟು. ಈ ಕೀರ್ತನೆಗಳು ಜೀವನದ ಒಂದು ಸಮಗ್ರ ಚಿತ್ರವನ್ನು ಬಿಂಬಿಸುವಂತಿವೆ, ಬಣ್ಣಿಸುವಂತಿವೆ. ಲೇಖಕರು ಈ ಕೀರ್ತನೆಗಳನ್ನು ವಿಷಯಾನುಗುಣವಾಗಿಯೂ ಕಾವ್ಯರೂಪಕ್ಕನುಗುಣವಾಗಿಯೂ ವಿಂಗಡಿಸಿ, ಅವುಗಳಲ್ಲಿ ಅಡಕವಾಗಿರುವ ಸಾಹಿತ್ಯಿಕ ಸ್ವರೂಪವನ್ನೂ ಕಾವ್ಯವಸ್ತುವನ್ನೂ ಎತ್ತಿತೋರಿಸಿದ್ದಾರೆ. ದಾಸರ ಕೀರ್ತನೆಗಳಲ್ಲಿನ ಕಾವ್ಯಸೌಂದರ್ಯವನ್ನು ವಿವೇಚಿಸುತ್ತ, ಡಾ. ದಿವಾಣಜಿಯವರು ಕಾವ್ಯದ ವಿವಿಧ ಲಕ್ಷಣಗಳನ್ನು ಕುರಿತು ಚರ್ಚಿಸಿದ್ದಾರೆ. ಇವರು ಆಂಗ್ಲಸಾಹಿತ್ಯವನ್ನು ವಿಶೇಷವಾಗಿ ವಿಮರ್ಶಾತ್ಮಕ ಸಾಹಿತ್ಯವನ್ನು ಓದಿಕೊಂಡಿದ್ದರಿಂದ ಅವರ ಇಲ್ಲಿನ ವಿವೇಚನೆಯಲ್ಲಿ ಅದರ ಪರಿಣಾಮ ಪ್ರತಿಬಿಂಬಿತವಾದದ್ದು ಸಹಜವಾಗಿ ಕಂಡುಬರುವುದು. ಪುರಂದರದಾಸರಿಗೆ ಉಪಮೆ ಮತ್ತು ರೂಪಕ ಅಲಂಕಾರಗಳು ಬಹಳ ಪ್ರಿಯವಾಗಿದ್ದವು ಎಂಬುದನ್ನು ಅನೇಕ ಉದಾಹರಣೆಗಳಿಂದ ತೋರಿಸಿದ್ದಾರೆ. ಈ ಅಲಂಕಾರಗಳಲ್ಲಿ ಅಮೂರ್ತತೆಗೆ ಮೂರ್ತತೆಯನ್ನು ತಂದುಕೊಡುವ ಸಂಜೀವಿನಿಶಕ್ತಿಯಿದೆ. ಈ ದೃಷ್ಟಿಯಿಂದ ಪುರಂದರದಾಸರ ಅಲಂಕಾರಗಳ ಸೊಬಗನ್ನೂ ಸಾಹಿತ್ಯಿಕ ಹಿರಿಮೆಯನ್ನೂ ಇಲ್ಲಿ ಕಾಣಬಹುದು.

ಪುರಂದರದಾಸರ ಶೈಲಿಯನ್ನು ಕುರಿತು ಹೇಳುವಾಗ, ಲೇಖಕರು ಅದರ ವೈಶಿಷ್ಟ್ಯವನ್ನು ಮಾರ್ಮಿಕವಾಗಿ ಒಂದೇ ಮಾತಿನಲ್ಲಿ ಸೂಚಿಸಿದ್ದಾರೆ. 'ಅಂತರ್ಯವನ್ನು ತೋರಿಸಿ ಮರಳ ಮೇಲೆ ನಗುನಗುತ ಹರಿಯುವ ಹೊಳೆಯಂತೆ ಸ್ಪಷ್ಟವಾಗಿ' ಹರಿಯುವ ಶೈಲಿ ದಾಸರದು. ಈ ಅಧ್ಯಾಯನದಲ್ಲಿ ಲೇಖಕರು ದಾಸರ ಕಾವ್ಯವಿಷಯಕ ಕಲ್ಪನೆಯನ್ನು ವಿಸ್ತೃತವಾಗಿ ವಿವೇಚಿಸಿದ್ದಾರೆ.

ಕೊನೆಯದಾಗಿ, ಪುರಂದರದಾಸರ ಕೀರ್ತನೆಗಳ ಸಮಾಲೋಕನವನ್ನು ಮಾಡುತ್ತ, ಅವುಗಳ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮಹತ್ವ ಇಂದಿನ ಯುಗದಲ್ಲಿ ಎಷ್ಟಿದೆಯೆಂಬುದನ್ನು ಲೇಖಕರು ಅಲ್ಲದರಲ್ಲಿ ತೋರಿಸಿಕೊಟ್ಟಿದ್ದಾರೆ. ಪುರಂದರದಾಸರ ಜೀವನದೃಷ್ಟಿಯನ್ನು ಸಮಗ್ರವಾಗಿ ಈ ಕೀರ್ತನೆಗಳಲ್ಲಿ ಕಾಣಬಹುದೆಂಬುದೇ ಇವರ ಅಭಿಪ್ರಾಯ. ದಾಸರ ಕೀರ್ತನೆಗಳು ಭಾರತೀಯ ಸಂಸ್ಕೃತಿಗೆ, ಅದರಲ್ಲೂ ಕರ್ನಾಟಕದ ಸಂಸ್ಕೃತಿಗೆ ಹೇಗೆ ಅಮೂಲ್ಯವಾದ ಕಾಣಿಕೆಯನ್ನಿತ್ತಿವೆಯೆಂಬುದನ್ನು ವಿವರವಾಗಿ ವರ್ಣಿಸಿದ್ದಾರೆ.

ಡಾ. ದಿವಾಣಜಿಯವರು ಪ್ರತಿಭಾವಂತ ವಿಮರ್ಶಕರಾದುದರಿಂದ, ಪುರಂದರದಾಸರ ಕೀರ್ತನೆಗಳ ವೈಶಿಷ್ಟ್ಯದ ವಿವಿಧ ಅಂಗಗಳನ್ನು ಪರಿಪರಿಯಾಗಿ ಚರ್ಚಿಸಿ, ಸಾಮಾನ್ಯ ಓದುಗರಿಗೆ ಅವುಗಳ ಮಹತ್ವವು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ತಮ್ಮ ಪ್ರಬಂಧವನ್ನು ಪೂರ್ಣಗೊಳಿಸಿದ್ದಾರೆ. ದಾಸಸಾಹಿತ್ಯವನ್ನು ಆಳವಾಗಿ ಅಭ್ಯಾಸಿಸುವ ಮತ್ತು ಅದರಲ್ಲಿ ಸಂಶೋಧನವನ್ನು ಕೈಕೊಳ್ಳಬೇಕೆನ್ನುವ ವಿದ್ಯಾರ್ಥಿಗಳಿಗೆ ಈ ಗ್ರಂಥವು ಕೈಗನ್ನಡಿಯಾಗಿದೆ.

ಗ್ರಂಥದ ಕೊನೆಯಲ್ಲಿ ಲೇಖಕರು ಎಂಟು ಪರಿಶಿಷ್ಟಗಳನ್ನು ಹಾಕಿದ್ದಾರೆ. ಅವುಗಳಲ್ಲಿ ಪುರಂದರದಾಸರ ತರುವಾಯದ ದಾಸಕೂಟ, ಕರ್ನಾಟಕ ಸಂಗೀತಕ್ಕೆ ದಾಸರ ಕೊಡುಗೆ, ಕೀರ್ತನೆಗಳ ಛಂದೋಲಕ್ಷಣ, ಅಭಂಗ ವಿಟ್ಠಲ, ಅಂಕಿತವನ್ನು ವಿಶೇಷಿಸುವ ಪದಗಳು, ಪುರಂದರದಾಸರು ಮಕ್ಕಳಿಗಾಗಿ ಹಾಡಿದ ಕೆಲವು ಕೀರ್ತನೆಗಳು, ಪುರಂದರದಾಸರ ಕೃತಿಗಳು ಮತ್ತು, ಅವರ ಬಗ್ಗೆ ಉಪಲಬ್ಧವಿರುವ ಸಾಹಿತ್ಯ ಅಲ್ಲದೆ ಮೂರು ಕೀರ್ತನೆಗಳ ಸಂಪಾದನೆ ಇತ್ಯಾದಿ ವಿಷಯಗಳನ್ನು ಚರ್ಚಿಸಿದ್ದಾರೆ.

ಪಿ. ಬಿ. ಬಡಿಗೇರ

ಸಂಪಾದಕೀಯ

ಕನ್ನಡರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ

ಭಾಷಿಕವಾಗಿ, ಭೌಗೋಳಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಚುಪ್ಪಾನುಚೂರಾಗಿ ಹೋಗಿದ್ದ ಕನ್ನಡ ನೆಲ–ಜಲ–ಜನ ರಾಜ್ಯಪುನರ್ವಿಂಗಡಣೆಯ ಪರಿಣಾಮವಾಗಿ ೧–೧೧–೧೯೫೬ರಂದು ಮತ್ತೆ ಕೂಡಿಕೆಯಾಗಿ ಕೂಡುಕುಟುಂಬದಂತೆ ಬಾಳುವಂಥಾದದ್ದು ಸುದೈವ ಎನ್ನಬಹುದಾದರೂ, ಹೊಸದಾಗಿ ಹುಟ್ಟಿದ ಕೂಸಿಗೆ ಹೆಸರಿಡುವುದರಲ್ಲಿ ಗಂಡ ಹೆಂಡತಿ ಹಾಗೂ ಅವರಿಬ್ಬರ ಬಂಧುಬಳಗದಲ್ಲಿ ಮೂಡಿದ ಭಿನ್ನಾಭಿಪ್ರಾಯ ಓಕರಿಕೆ ಬರಿಸುವ ಮಟ್ಟಕ್ಕೆ ಹೋದದ್ದು ದುರ್ದೈವ ಎನ್ನಲೇಬೇಕು. ತಾನು ಸೂಚಿಸಿದ ಹೆಸರನ್ನಿಡದಿದ್ದರೆ ಕೂಸೇ ಬೇಡ ಎಂಬ ಗಂಡನ ಹಟವ ಪಟ್ಟನ್ನು ಕಂಡ ಹೆಂಡತಿ ಮತ್ತು ಆಕೆಯ ಬಂಧುಬಳಗ ಹಾಗೂ ಅಸಂಖ್ಯಾತ ಶಿಶುಹಿತಾಕಾಂಕ್ಷಿಗಳು, ಕೂಸಿನ ಹಿತದೃಷ್ಟಿಯಿಂದ ಅನುರೂಪ ಹೆಸರನ್ನು ಬಿಟ್ಟುಕೊಟ್ಟು ಬೇರೊಂದು ಹೆಸರಿಗೇ ಅಸ್ತು ಎನ್ನಬೇಕಾಯಿತು ಪ್ರಾರಂಭದಲ್ಲಿ. ಆದರೆ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಬರುವ 'ಬಹುಜನರ ಪೆರ್ಬಯಕೆ ಕಲ್ಪವೃಕ್ಷದ ಕೊಂಬೆಯನೆ ಕಚ್ಚಿ ಸೆಳೆದಿಳೆಗೆ ಫಲದಮೃತಮಂ ಮಳೆಗರೆಯದಿಹುದೆ?', 'ಜನಮನಮೆ ಯುಗಶಕ್ತಿಯಲ್ತೆ?', 'ಜನಮನದ ಶಕ್ತಿ ಮೇಣವರಭೀಪ್ಸೆಯೆ ಮಹಾತ್ಮರಂ ನಮ್ಮಿಳೆಗೆ ತಪ್ಪದೆಳೆತರ್ಪುದು ಕಣಾ' ಎಂಬ ಸುಭಾಷಿತ ಸದೃಶ ಮಾತುಗಳಂತೆ, ಜನಮನದ ಅಭೀಪ್ಸೆ ಮತ್ತು ಶಕ್ತಿಯೇ ಸಂಕುಚಿತ ಮನಸ್ಸಿನವರಲ್ಲಿ ವೈಶಾಲ್ಯವನ್ನು ನೆಟ್ಟು, ಒಲ್ಲದ ಮನಸ್ಸಿನವರಲ್ಲಿ ಬೆಲ್ಲದ ಪಾಕವನ್ನು ಅಟ್ಟು ಹದಿನಾರು ವರ್ಷಗಳ ತರುವಾಯ, ೧–೧೧–೭೩ರಂದು 'ವಿಶಾಲ ಮೈಸೂರು ರಾಜ್ಯ' ಎಂಬ ಹೆಸರನ್ನು ಕಳಚಿ ಹಾಕಿ, ಆನುವಂಶಿಕ ಕನ್ನಡ ನೆಲದ ಸೊಗಡನ್ನು ಹಾಗೂ ಸಾಂಸ್ಕೃತಿಕ ಸಮಗ್ರತೆಯನ್ನು ಧ್ವನಿಸುವ 'ಕರ್ನಾಟಕ' ಎಂಬ ಅನುರೂಪ ಹೆಸರನ್ನಿಡುವುದರಲ್ಲಿ ಧನ್ಯತೆಯನ್ನು ಪಡೆದುಕೊಂಡಿತು ಎಂದರೆ ತಪ್ಪಾಗುವುದಿಲ್ಲ.

'ಕರ್ನಾಟಕ' ಎಂಬ ಹೆಸರಿಗೆ ನೂರಾರು ವರ್ಷಗಳ ಇತಿಹಾಸವಿದೆ. ಕನ್ನಡ ನಾಡನ್ನು ಆಳಿದ ಅರಸು ಮನೆತನಗಳೆಲ್ಲ ಕರ್ನಾಟಕವೆಂದೇ ಕರೆಯುತ್ತಾ ಬಂದಿವೆ. ಉದಾಹರಣೆಗೆ ಮೈಸೂರು ಅರಸರಾದ ಚಿಕದೇವರಾಜರ ಆಸ್ಥಾನಕವಿ ತಿರುಮಲಾರ್ಯ ಮೈಸೂರು ಕರ್ಣಾಟಾಂತರ್ಗತ ಪ್ರದೇಶವೆಂದೇ ಪರಿಗಣಿಸಿದ್ದಾನೆ. ಮೈಸೂರು ಅರಸರೆಲ್ಲ ಕರ್ನಾಟಕ ಚಕ್ರವರ್ತಿಗಳೆಂದೇ ತಮ್ಮನ್ನು ಕರೆದುಕೊಂಡಿದ್ದಾರೆ. ನೃಪತುಂಗನಿಂದ ಹಿಡಿದು ಇಂದಿನ ಕಾಲದಲ್ಲಿ ಕುವೆಂಪು ಅವರ ವರೆಗೆ ಎಲ್ಲ ಕವಿಗಳೂ ಸಾಹಿತಿಗಳೂ ಈ ನಾಡನ್ನು ಕರ್ನಾಟಕವೆಂದೇ ಕರೆಯುತ್ತಾ ಬಂದಿದ್ದಾರೆ. ಕಾಶ್ಮೀರದ ದೊರೆ ಶ್ರೀಹರ್ಷ 'ಕರ್ನಾಟಕ ನಾಣ್ಯ'ವಂತೆ ತಾನೂ ನಾಣ್ಯ ಮಾಡಿಸಿದನೆಂಬ ಪ್ರಸ್ತಾಪ 'ರಾಜತರಂಗಿಣಿ' ಎಂಬ ಕಾವ್ಯದಲ್ಲಿ ಬರುತ್ತದೆ. ರಾಮಾಯಣ ಮಹಾಭಾರತಗಳಲ್ಲೂ ಕರ್ನಾಟಕದ ಪ್ರಸ್ತಾಪವಿದೆ. ಹೀಗೆ ಕನ್ನಡ ಕಾವ್ಯಗಳಲ್ಲಿ ಭಾರತೀಯ ಕಾವ್ಯಗಳಲ್ಲಿ ಮೊದಲಿನಿಂದಲೂ ಬಹುವಾಗಿ ಬಳಕೆಯಲ್ಲಿದ್ದ ಈ ಹೆಸರನ್ನು ಈಚೆಗೆ ಅಧಿಕೃತವನ್ನಾಗಿ ಮಾಡುವುದರಲ್ಲಿ ಮುಂದಾಳಾಗಿ ನಿಂತ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಹಾಗೂ ಅವರ ಸರಕಾರವನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತ, ಇನ್ನೂ ಆಗಬೇಕಾಗಿರುವುದರ ಬಗ್ಗೆ ಜಾಗರೂಕತೆಯ ಒಂದು ಕಿವಿಮಾತನ್ನು ಹೇಳಬೇಕಾಗಿದೆ. ಮೊದಲನೆಯದಾಗಿ ನೆರೆರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರಗಳಿಂದ ಕರ್ನಾಟಕಕ್ಕೆ ನ್ಯಾಯವಾಗಿ ಬರಬೇಕಾದ ಹಲವು ಅಚ್ಚಕನ್ನಡ ಭಾಗಗಳ ಸೇರ್ಪಡೆಗೆ ಪ್ರಯತ್ನಿಸಬೇಕು; ಗೋವೆಯನ್ನು ನುಂಗಿ ಗೋವಿಂದ ಎನ್ನಲು ಅದರ ಸುತ್ತಮುತ್ತಲ ಪ್ರದೇಶವಾದ ಕಾರವಾರ ಬೆಳಗಾಂ ಮಹಾರಾಷ್ಟ್ರಕ್ಕೆ ಅಗತ್ಯವೆಂಬುದರಿಂದ ಮಹಾರಾಷ್ಟ್ರದ

ಮಾರಿಗಣ್ಣು ಬೆಳಗಾಂ ಹೋತನ ಮೇಲೆ ಸದಾ ಇದ್ದವ್ವೇ. ಆದ್ದರಿಂದ ಅಂಥ ವಿಪತ್ತಿನಿಂದ ಕಾಯ ಬೇಕಾದದ್ದು, ಕರ್ನಾಟಕ ಎಂದು ಹೆಸರಿಡುವುದರಲ್ಲಿ ದಿಟ್ಟತನವನ್ನು ತೋರಿಸಿದ ರಾಜ್ಯದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸು ಹಾಗೂ ಅವರ ಸರ್ಕಾರದ ಹೆಗಲ ಮೇಲಿರುವ ಗುರುತರ ಜವಾಬ್ದಾರಿ ಎಂಬುದನ್ನು ನೆನಪಿಸಿ, ಮತ್ತೊಮ್ಮೆ ಕರ್ನಾಟಕ ನಾಮಕರಣವನ್ನು ಮಾಡಿದ ಪ್ರಸಕ್ತ ಸರ್ಕಾರವನ್ನು ಪ್ರಬುದ್ಧ ಕರ್ಣಾಟಕ ಇಡೀ ಕನ್ನಡ ಜನಸ್ತೋಮದ ಪರವಾಗಿ ಅಭಿನಂದಿಸುತ್ತದೆ.

ಹಿರಿಯ ಸಾಮಾಜಿಕರಿಗೂ ಸಾಹಿತ್ಯೋಪಾಸಕರಿಗೂ ಸನ್ಮಾನಗಳು

ಕರ್ನಾಟಕ ರಾಜ್ಯೋತ್ಸವದ ಕೇಂದ್ರ ಸಮಿತಿ ರಾಜ್ಯದ ನಾಮಕರಣೋತ್ಸವದ ಅಂಗವಾಗಿ, ಮೈಸೂರು ನಗರದಲ್ಲಿ, ೨-೧೧-೧೯೭೩ರಂದು, ೧೨ ಮಂದಿ ಹಿರಿಯರಿಗೆ ಅವರು ನಾಡುನುಡಿಗಳಿಗೆ ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಸನ್ಮಾನ ಪತ್ರಗಳನ್ನು ನೀಡಿಯೂ ರಜತಫಲಕಗಳನ್ನು ನೀಡಿಯೂ ಗೌರ ವಿಸಿತು. ಆ ಗೌರವಾನ್ವಿತರು ಸರ್ವಶ್ರೀ ದೇವರಾಜ ಅರಸರು, ಎಸ್. ನಿಜಲಿಂಗಪ್ಪನವರು, ಆರ್.ಆರ್. ದಿವಾಕರ್ ಅವರು, ಕೆ. ಹನುಮಂತಯ್ಯನವರು, ಎಸ್.ಎಸ್. ಹರ್ಡೀಕರರು, ಕೆ. ಆರ್. ಕಾರಂತರು, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಕುವೆಂಪು ಅವರು, ತಿರುಮಲೆ ತಾತಾಚಾರ್ಯ ಶರ್ಮರು (ಮರಣೋತ್ತರ), ಬಿ. ಶಿವಮೂರ್ತಿ ಶಾಸ್ತ್ರಿಗಳು, ಜಿ. ನಾರಾಯಣ ಅವರು, ಜಯದೇವಿ ತಾಯಿ ಲಿಗಾಡೆ ಅವರು.

ಉತ್ಸಾಹ ಸಂಭ್ರಮಗಳಿಂದ ಜರುಗಿದ ಈ ಸಮಾರಂಭದಲ್ಲಿ, ಪುರಪ್ರಮುಖರು ಪೌರರ ಪರವಾಗಿ ಸನ್ಮಾನಿತರ ಸಾಧನೆಸಿದ್ಧಿಗಳನ್ನು ಅವರಿಗೆ ಒಪ್ಪಿಸಿದ ಸನ್ಮಾನಪತ್ರಗಳಲ್ಲಿ ಕೀರ್ತಿಸಿದ ತರುವಾಯದಲ್ಲಿ ಸನ್ಮಾನಿತರಲ್ಲಿ ಹಾಜರಿದ್ದವರು ಕರ್ಣಾಟಕದ ಶ್ರೇಯೋಭಿವೃದ್ಧಿಗಾಗಿ ಹೇಗೆ ಶ್ರಮಿಸಬೇಕೆಂಬ ಬಗೆಗೆ ತಮ್ಮ ಚಿಂತನೆಗಳನ್ನು ಸಭೆಯ ಮುಂದಿಟ್ಟರು.

ನಾಡುನುಡಿಗಳನ್ನು ಅಭ್ಯುದಯಪಥಕ್ಕೇರಿಸುವ ಮಹಾನ್ ಪ್ರಯತ್ನದಲ್ಲಿ ಪೂರ್ವೋಕ್ತ ಸನ್ಮಾನಿತರ ಹಲವು ವರ್ಷಗಳ ನಿರಂತರವಾದ ಪರಿಶ್ರಮದಿಂದಲೂ ತ್ಯಾಗದಿಂದಲೂ ಕನ್ನಡಜನರ ಗೌರವಾದರಗಳನ್ನು ಗಳಿಸಿದ್ದಾರೆ. ಅವರ ಸೇವೆ ಸಾಧನೆ ಯಶಸ್ಸುಗಳಿಗೆ ಕನ್ನಡಜನರ ಮನ್ನಣೆ ನ್ಯಾಯವಾದ್ದು, ಸಮಯೋಚಿತ ವಾದ್ದು: ಅವರ ದುಡಿಮೆ ಇನ್ನೂ ಉತ್ಕೃಷ್ಟಫಲಗಳನ್ನು ನಾಡಿಗೆ ತರಲಿ ಎಂದು ನಮ್ಮ ಹಾರೈಕೆ.

ಎಚ್. ಎಂ. ರಾಮಾರಾಧ್ಯರ ನಿಧನ

೨೦-೧೨-೧೯೭೩ರಂದು ನಿಧನರಾದ ಎಚ್.ಎಂ. ರಾಮಾರಾಧ್ಯರು ಪ್ರಸಿದ್ಧ ಗಮಕಿಗಳು, ಪಂಡಿತರು; ಅಲ್ಲದೆ ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲೊಂದಾದ ಗಾದೆಗಳ ಬಗ್ಗೆ ಅಪಾರ ಕೆಲಸ ಮಾಡುತ್ತಿದ್ದವರು, ಮಾಡಲಿದ್ದವರು. ಕನ್ನಡ ಸಾಹಿತ್ಯ ಪರಿಷತ್ತು, ಗಾಂಧಿ ಸಾಹಿತ್ಯ ಸಂಘಗಳಲ್ಲಿ ಅನೇಕ ವರ್ಷಗಳ ಕಾಲ ಗಮಕ ವಿಭಾಗದ ವ್ಯವಸ್ಥೆಗಾಗಿ ಕೆಲಸ ಮಾಡಿ 'ಗಮಕರೂಪಕ' ಎಂಬ ಹೊಸ ಬಗೆಯ ಕಾರ್ಯಕ್ರಮವನ್ನು ಸಿದ್ಧಗೊಳಿಸಿ, ಆ ಬಗ್ಗೆ ಅವರು ಕೆಲವು ಜನಪ್ರಿಯ ಕೃತಿಗಳನ್ನು ಹೊರ ತಂದರು. ಗಮಕರೂಪಕ 'ಗಿರಿಜಾಕಲ್ಯಾಣ' ಆ ಪ್ರಯತ್ನದ ಫಲ.

ಗಾದೆಗಳನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸುತ್ತಾ ಬಂದ ಶ್ರೀ ರಾಮಾರಾಧ್ಯರ 'ಗಾದೆಗಳ ಗೀತೆಗಳು' ಎಂಬ ಕೃತಿ ಅಂಥ ವಿಶಿಷ್ಟ ದೃಷ್ಟಿಕೋನದ ಫಲ. ಹೀಗೆಯೇ ಗಾದೆಗಳ ರಾಮಾಯಣ, ಗಾದೆಗಳ ಭಾರತ ಇತ್ಯಾದಿಯಾದ ರಚನೆಗಳಿಗೆ ಚಿಂತನಮಂಥನ ನಡೆಸಿದ್ದ ಅವರು ಸುಮಾರು ೧೫,೦೦೦ ಗಾದೆಗಳನ್ನು ಕಲೆಹಾಕಿ, ಅವುಗಳನ್ನು ಕೃತಿರೂಪದಲ್ಲಿ ಹೊರತರಲು ಪೂರ್ಣವಾಗಿ ಸಜ್ಜರಾಗಿದ್ದಾಗಲೇ ಕಾಲಾಧೀನರಾದದ್ದು ಕನ್ನಡಕ್ಕಾದ ಅಪಾರ ನಷ್ಟ. ಪ್ರಬುದ್ಧ ಕರ್ಣಾಟಕ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸುತ್ತಾ, 'ಅವರು ಸಂಗ್ರಹಿಸಿ ಪ್ರಕಟಣೆಗೆ ಸಿದ್ಧಗೊಳಿಸಿದ ಗಾದೆಗಳನ್ನು ಪ್ರಕಟಿಸುವ ಮುಖಾಂತರ ಅವರ ಆತ್ಮಕ್ಕೆ ತೃಪ್ತಿ ಒದಗಿಸಬೇಕೆಂದು ಸರ್ಕಾರಕ್ಕೂ ಕನ್ನಡ ಸಾಹಿತ್ಯ ಪರಿಷತ್ತಿಗೂ ವಿಜ್ಞಾಪಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಭವನದ ಉದ್ಘಾಟನೆ

ಭಾರತದ ರಾಷ್ಟ್ರಾಧ್ಯಕ್ಷರಾದ ಶ್ರೀ ವಿ. ವಿ. ಗಿರಿಯವರು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸರ ಅಧ್ಯಕ್ಷತೆಯಲ್ಲಿ, ೨೯–೧೨–೧೯೭೩ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಭವನವನ್ನು ಉದ್ಘಾಟಿಸಿದರು.

ಸ್ಥಾಪಿತವಾದ ಮೇಲೆ ಹಲವು ವರ್ಷಗಳ ವರೆಗೆ ಬೆಂಗಳೂರು ನಗರದ ಬಾಡಿಗೆ ಕಟ್ಟಡಗಳಲ್ಲಿ ಕೆಲಸಮಾಡುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತು, ಅಂದಿನ ಅದರ ಉಪಾಧ್ಯಕ್ಷರಾದ ರಾಜಸಭಾಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾಯರ ಪರಿಶ್ರಮದ ಫಲವಾಗಿ ಉಚಿತವಾದ ನಿವೇಶನವೊಂದನ್ನು ಪಡೆದುಕೊಂಡು, ಅಂದಿನ ರಾಜಕುಟುಂಬ ಮತ್ತು ಸರ್ಕಾರ ನೀಡಿದ ಧನಸಹಾಯದಿಂದಲೂ ಸ್ವಂತ ಗಳಿಕೆಯಿಂದಲೂ ಒಂದು ಸ್ವಂತವಾದ ಕಟ್ಟಡವನ್ನು ಪಡೆಯಲು ಸಮರ್ಥವಾಯಿತು. ೧೨–೪–೧೯೩೧ರಲ್ಲಿ ಕರ್ಪೂರ ಶ್ರೀನಿವಾಸರಾಯರೇ ಕಟ್ಟಡದ ಶಂಕುಸ್ಥಾಪನೆಯನ್ನು ನಡೆಸಿದರು. ೧೯೩೩ರಲ್ಲಿ ಪರಿಷತ್ತಿನ ಭವನ ಸಿದ್ಧವಾದ ಮೇಲೆ, ಅಲ್ಲಿಂದ ಅದರ ಕಾರ್ಯಕ್ಷೇತ್ರ ಹೆಚ್ಚು ಸಾರ್ವಜನಿಕವಾಗಲು ಸಾಧ್ಯವಾಯಿತು. ಭಾಷೆ ಸಾಹಿತ್ಯಗಳ ಬೆಳವಣಿಗೆಯ ನಾನಾ ಯೋಜನೆಗಳಿಗೆ ಒಂದು ನೆಲೆ ದೊರೆತಂತಾಯಿತು. ಈವರೆಗೆ ಆ ಕಟ್ಟಡದಲ್ಲಿ ನಡೆದಿರುವ ಸಭೆ ಸಮ್ಮೇಳನಗಳು, ಉಪನ್ಯಾಸಗಳು, ವಿದ್ವದ್ಗೋಷ್ಠಿಗಳು, ಕಲೆ ಸಾಹಿತ್ಯಗಳ ನಾನಾ ಪ್ರದರ್ಶನಗಳು, ಗ್ರಂಥ ಪ್ರಕಟನೆಗಳು ಅಸಂಖ್ಯವಾದವಾಗಿವೆ.

ಗ್ರಂಥಭಂಡಾರ, ಕನ್ನಡಕೋಶ ಕಛೇರಿ, ಅಚ್ಚುಕೂಟ ಮತ್ತು ಈಚಿನ ನಾನಾ ಭಾಷಾಸಾಹಿತ್ಯ ಯೋಜನೆಗಳ ದೆಸೆಯಿಂದ ಪರಿಷತ್ತಿಗೆ ಹೆಚ್ಚಿನ ಸ್ಥಳಾವಕಾಶದ ಅಗತ್ಯವಿತ್ತು. ಈಗ ಅದರ ಇಂದಿನ ಉತ್ಸಾಹಶಾಲಿ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಮತ್ತು ಕಾರ್ಯಕಾರೀವರ್ಗದ ಇತರರ, ಸಾರ್ವಜನಿಕರ ಮತ್ತು ಸಂಬಂಧಪಟ್ಟವರ ಪರಿಶ್ರಮದ ಫಲವಾಗಿ ಸುವರ್ಣಮಹೋತ್ಸವದ ಭಾರಿಯಾದ ಭವನವೊಂದು ತಲೆಯೆತ್ತಿ ನಿಂತುದು ಸ್ತುತ್ಯರ್ಹವಾದೊಂದು ದೊಡ್ಡ ಸಾಧನೆಯಾಗಿದೆ; ಕನ್ನಡದ ಎಲ್ಲಾ ಶ್ಲಾಘ್ಯ ಚಟುವಟಿಕೆಗಳಿಗೂ ಆ ಕಟ್ಟಡ, ತನ್ನ ಸಂಗಾತಿ ಕಟ್ಟಡದ ಜತೆಗೂಡಿ ನೆಲೆನೀಡಲಿ ಎಂದು ಪ್ರಬುದ್ಧ ಕರ್ಣಾಟಕ ಹಾರೈಸುತ್ತದೆ; ಈ ಸಾಧನೆಗೆ ಶ್ರಮಿಸಿದವರಿಗೆಲ್ಲ ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಗೌರವ ಡಾಕ್ಟರೇಟ್ ಪದವಿಗಳ ನೀಡಿಕೆ

೨೦–೧–೧೯೭೪ರಂದು ಜರುಗಿದ ೫೪ನೇ ಘಟಿಕೋತ್ಸವದ ಸಮಾರಂಭದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಮೂವರು ಪ್ರಖ್ಯಾತ ಹಾಗೂ ಪ್ರತಿಭಾವಂತ ಕನ್ನಡಿಗರಿಗೆ–ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ. ರಾಜಾ ರಾಮಣ್ಣ, ಡಾ. ಟಿ.ಎಂ.ಎ. ಪೈ–ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿದ್ದು ನಿಜಕ್ಕೂ ಅಭಿಮಾನಾಸ್ಪದವಾದ ವಿಷಯ.

ಈ ವರೆಗೆ ಸುಮಾರು ೫೦ ಕೃತಿಗಳನ್ನು ಕನ್ನಡಕ್ಕೆ ನೀಡಿರುವ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಪ್ರಖ್ಯಾತ ಸಾಹಿತಿಗಳೇ ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರೂ ಹೌದು. 'ಗಾಂಧಿಯನ್ನು ಅನುಸರಿಸುವುದು ಎಂದರೆ ಖಾದಿಯನ್ನು ಧರಿಸುವುದು' ಎಂಬ ಮಟ್ಟಕ್ಕೆ ದೇಶದ ಅನೇಕ ರಾಜಕಾರಣಿಗಳು ಇಳಿದಿರುವಾಗ ಗಾಂಧೀತತ್ತ್ವಧಾರಣ ಮಾಡಿ ಬದುಕುತ್ತಿರುವ ಗೊರೂರರಂಥವರು ವಿರಳವೆಂದೇ ಹೇಳಬೇಕು. ಏಕೆಂದರೆ ಅವರು "ಆಡುವುದು ಚಳಿ, ಮಾಡುವುದು ಬೇಸಗೆ", ಪ್ರವೃತ್ತಿಯ ರಾಜಕಾರಣಿಗಳಂತಾಗದೆ, ಬದುಕಿದ್ದನ್ನು ಬರೆಯುತ್ತಾ ಬರೆದದ್ದನ್ನು ಬದುಕುತ್ತಾ ನಡೆ ನುಡಿಯ ಸಾಮರಸ್ಯಕ್ಕೆ ಬೆಲೆಗೊಟ್ಟು ಬೆಳೆದಂಥವರು; ಬಳಿ ಬಂದವರನ್ನು ಬೆಳೆಸುವಂಥವರು. ತಿಳಿಹಾಸ್ಯದ ಜುಳುಜುಳು ನಾದದಿಂದ ಕೂಡಿದ ಅವರ ಸಾಹಿತ್ಯಿಕ ಶೈಲಿ ವಿನೂತನವಾದದ್ದು; ವಿಶಿಷ್ಟವಾದದ್ದು. 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ' ಮೊದಲಾದ ಕೃತಿಗಳ ಮೇಲೆ

ಕಣ್ಣಾಡಿಸಿದರೆ ಸಾಕು ಮೇಲಿನ ಮಾತಿನ ಸತ್ಯ ವೇದ್ಯವಾಗುತ್ತದೆ. ಜೊತೆಗೆ ಇವರು ಕನ್ನಡ ಜನಪದ ಸಾಹಿತ್ಯಾಭಿಮಾನಿಗಳು; ಜನಪದ ಸಾಹಿತ್ಯ ಸಂಗ್ರಾಹಕರೂ ಶ್ರೇಷ್ಠ ಜಾನಪದ ವಿದ್ವಾಂಸರೂ ಆಗಿದ್ದಾರೆ. ಇಂಥವರಿಗೆ ಡಾಕ್ಟರೇಟ್ ಪದವಿ ದೊರಕಿದ್ದಕ್ಕಾಗಿ ಪ್ರಬುದ್ಧ ಕರ್ಣಾಟಕದ ಕನ್ನಡಿಗರೆಲ್ಲರ ಪರವಾಗಿ ಅವರನ್ನು ಅಭಿನಂದಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಪದ್ಮಶ್ರೀ ಡಾ. ಟಿ.ಎಂ.ಎ. ಪೈ (ತೋನ್ಸೆ ಮಾಧವ ಅನಂತ ಪೈ) ವೈದ್ಯ ಪದವೀಧರರಾದರೂ ಬಹುಮುಖ ಪ್ರತಿಭಾಸಂಪನ್ನರು. ವೈದ್ಯರಾಗಿಯೇ ಉಳಿಯದೆ ವಾಣಿಜ್ಯ ವ್ಯವಹಾರ ತಜ್ಞರೂ ಶಿಕ್ಷಣತಜ್ಞರೂ ಹಾಗೂ ಸಮಾಜಸೇವಾ ಧುರೀಣರೂ ಆದದ್ದು ಅವರ ಕರ್ತೃತ್ವಶಕ್ತಿಯನ್ನು ಸೂಚಿಸುತ್ತದೆ. ಸಿಂಡಿಕೇಟ್ ಬ್ಯಾಂಕಿನ ಪ್ರವರ್ಧಮಾನಕ್ಕೆ ಕಾರಣಕರ್ತರೂ, ಮೆಡಿಕಲ್ ಕಾಲೇಜು, ಎಂಜನೀಯರಿಂಗ್ ಕಾಲೇಜು, ಲಾ ಕಾಲೇಜು, ಮೊದಲಾದ ಶಿಕ್ಷಣ ಸಂಸ್ಥೆಗಳ ಜನಕರೂ ಆಗಿ ಆ ಕ್ಷೇತ್ರಗಳಲ್ಲಿ ಮಾಡಿರುವ ಕೆಲಸ ಅಗಾಧವಾದದ್ದು. ಅಂಥ ಧೀಮಂತ ವ್ಯಕ್ತಿಗೆ ಡಾಕ್ಟರೇಟ್ ಪದವಿ ದೊರಕಿದ್ದಕ್ಕಾಗಿ ಪ್ರಬುದ್ಧ ಕರ್ಣಾಟಕ ಇಡೀ ಕನ್ನಡಿಗರ ಪರವಾಗಿ ಅವರನ್ನು ಅಭಿನಂದಿಸುತ್ತದೆ.

ಟ್ರಾಂಬೆಯ ಭಾಭಾ ಪರಮಾಣುಶಕ್ತಿ ಸಂಶೋಧನಾಕೇಂದ್ರದ ನ್ಯೂಕ್ಲಿಯರ್ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡು, ಕ್ರಮೇಣ ಅದೇ ಕೇಂದ್ರದ ಪ್ರಸ್ತುತ ಡೈರೆಕ್ಟರ್ ಆಗಿರುವ ಡಾ. ರಾಜಾ ರಾಮಣ್ಣ ಖ್ಯಾತ ವಿಜ್ಞಾನಿಗಳು. ಅಣುಶಕ್ತಿ ಆಯೋಗದ ಸದಸ್ಯರಾಗಿ, ಭಾರತದ ಮೊದಲ ರಿಯಾಕ್ಟರ್ 'ಅಪ್ಸರಾ'ದ ರಚನಾಕಾರ್ಯದಲ್ಲಿ ಕ್ರಿಯಾತ್ಮಕ ಭಾಗಿಗಳಾಗಿ, ದೇಶದ ಒಳಗೆ ಹೊರಗೆ ನಡೆದ ಹಲವಾರು ಸಮ್ಮೇಳನಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿರುವ ಇವರು ಅಂತರಾಷ್ಟ್ರೀಯ ಗೌರವಕ್ಕೆ ಪಾತ್ರರಾಗಿದ್ದಾರೆ; ಭಾರತ ಸರ್ಕಾರದ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ವಿಜೇತರಾಗಿದ್ದಾರೆ. ಕನ್ನಡಿಗರೇ ಆದ ಖ್ಯಾತವಿಜ್ಞಾನಿ ಡಾ. ರಾಜಾರಾಮಣ್ಣ ಅವರಿಗೆ ಡಾಕ್ಟರೇಟ್ ಪದವಿ ದೊರಕಿದ್ದಕ್ಕಾಗಿ ಪ್ರಬುದ್ಧ ಕರ್ಣಾಟಕ ಇಡೀ ದೇಶದ ಪರವಾಗಿ, ಅವರನ್ನು ಅಭಿನಂದಿಸುತ್ತದೆ.

ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಅಪಾರಸೇವೆ ಸಲ್ಲಿಸಿದ–ಸಲ್ಲಿಸುತ್ತಿರುವ ಈ ಮೂವರು ಪ್ರತಿಭಾವಂತರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ, ಕೆಲಸ ಮಾಡಿದ ಹಿರಿಯರಿಗೆ ತೃಪ್ತಿಯನ್ನೂ ಕೆಲಸಮಾಡಬೇಕೆನ್ನುವ ಕಿರಿಯರಿಗೆ ಉತ್ಸಾಹವನ್ನೂ ಮೂಡಿಸಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ–ಮುಖ್ಯವಾಗಿ ಅದರ ಕುಲಪತಿಗಳಿಗೆ ಹಾಗೂ ಸಿಂಡಿಕೇಟ್ ಸದಸ್ಯರಿಗೆ– ಪ್ರಬುದ್ಧ ಕರ್ಣಾಟಕ ಅಭಿವಂದನೆಗಳನ್ನು ಸಲ್ಲಿಸುತ್ತದೆ.

ರಾಜ್ಯ ಸಾಹಿತ್ಯ ಅಕಾಡೆಮಿ ಸನ್ಮಾನಿತರು

ಈ ಸಾರಿಯ ರಾಜ ಸಾಹಿತ ಮತ್ತು ಲಲಿತಕಲಾ ಅಕಾಡೆಮಿಗಳ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಮತ್ತು ಕಲಾರಂಗಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಎಂಟು ಮಂದಿಗೆ ಕನ್ನಡ ಜನತೆಯ ಪರವಾಗಿ ಅಭಿನಂದನೆ ಪ್ರಶಸ್ತಿ ಪ್ರಧಾನಗಳು ಜರುಗಿದುವು. ೨೩–೧–೯೭೦ರಂದು ಬೆಂಗಳೂರು ನಗರ ಪುರ ಭವನದಲ್ಲಿ ನಡೆದ ಸಮಾರಂಭದಲ್ಲಿ ಹೀಗೆ ಸನ್ಮಾನಿತರಾದವರು ಎಂದರೆ, ಸರ್ವಶ್ರೀ ಎಂ.ವಿ. ಸೀತಾರಾಮಯ್ಯ, ಕೆ. ಎಸ್. ನರಸಿಂಹಸ್ವಾಮಿ, ಕೃಷ್ಣಮೂರ್ತಿ ಪುರಾಣಿಕ, ಡಾ. ಕೆ. ಕೃಷ್ಣಮೂರ್ತಿ, ಎಚ್. ಎಸ್. ಇನಾಮತಿ, ಆರ್. ಎಸ್. ನಾಯ್ಡು, ಸುಬ್ರಹ್ಮಣ್ಯರಾಜು, ನಾರಾಯಣ ಕುಲಕರ್ಣಿ–ಇವರುಗಳು.

ಇವರಲ್ಲಿ ಮೊದಲ ನಾಲ್ವರು ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳು; ಇತರರು ಪ್ರಸಿದ್ಧ ಕಲಾವಿದರು. ಇವರಲ್ಲಿ ಒಬ್ಬೊಬ್ಬರೂ ತಮ್ಮ ಕ್ಷೇತ್ರದಲ್ಲಿ ಅನೇಕ ವರ್ಷಗಳ ಸಾಧನೆಯನ್ನು ತಪಸ್ಸಿನಂತೆ ಕೈಕೊಂಡು ಸಿದ್ಧಿಯ ನೆಲೆಗೇರಿದವರು; ಕನ್ನಡಿಗರ ಹೆಮ್ಮೆ ಕೃತಜ್ಞತೆಗಳಿಗೆ ಪಾತ್ರರಾದವರು. ಅವರು ತಮ್ಮ ಪರಿಶ್ರಮದ ಕಾರ್ಯಕ್ಷೇತ್ರಗಳಲ್ಲಿ ತರುಣರಿಗೆ ಆದರ್ಶಪ್ರಾಯವಾದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವ ಪ್ರತಿಭಾವಂತರಾಗಿದ್ದಾರೆ. ಇಂಥವರಿಗೆ ನ್ಯಾಯವಾಗಿ ಸಂದಿರುವ ಈ ಸನ್ಮಾನ ಯಾರಿಗಾದರೂ ಹೆಮ್ಮೆ ಸಂತಸಗಳನ್ನು ತರತಕ್ಕದ್ದಾಗಿದೆ. ಇವರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

‘ಎಪಿಗ್ರಾಫಿಯ ಕರ್ನಾಟಕ’ ಎರಡನೆಯ ಸಂಪುಟ, ‘ಕಛೇರಿ ಕೈಪಿಡಿ’ಗಳ ಬಿಡುಗಡೆ

ನಮ್ಮ ರಾಜ್ಯಕ್ಕೆ ಅಧಿಕೃತವಾಗಿ ‘ಕರ್ನಾಟಕ’ ಎಂದು ನಾಮಕರಣವಾದ ದಿನವೇ (೧–೧೧–೭೩) ಜರುಗಿದ ಒಂದು ಒಸಗೆಯನ್ನಿಲ್ಲಿ ಹೇಳಬೇಕು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ‘ಎಪಿಗ್ರಾಫಿಯ ಕರ್ನಾಟಿಕ’ದ ಎರಡನೆಯ ಸಂಪುಟವನ್ನೂ ‘ಕಛೇರಿ ಕೈಪಿಡಿ’ ಎಂಬ ಒಂದು ವ್ಯವಹಾರಗ್ರಂಥವನ್ನೂ ರಾಜ್ಯೋತ್ಸವ ಮತ್ತು ರಾಜ್ಯದ ನಾಮಕರಣೋತ್ಸವ ಇವುಗಳ ನೆನಪಿಗಾಗಿ ಪ್ರಕಟಿಸಿತು. ಭಾಷೆ ಸಾಹಿತ್ಯಗಳ ಬೆಳವಣಿಗೆಯಲ್ಲಿ ಈ ಎರಡೂ ಗ್ರಂಥಗಳು ಮಹತ್ತ್ವದ ಪ್ರಕಟಣೆಗಳಾದ್ದರಿಂದ, ಆಸಕ್ತರಾದವರೆಲ್ಲ ಹಾರ್ದಿಕವಾಗಿ ಅವನ್ನು ಬರಮಾಡಿಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ.

‘ಎಪಿಗ್ರಾಫಿಯ ಕರ್ನಾಟಿಕ’ದ ಸಂಪುಟಗಳು ಕನ್ನಡನಾಡಿನ ಇತಿಹಾಸ ಸಂಸ್ಕೃತಿ ಸಾಹಿತ್ಯಗಳ ಪುನರ್ರಚನೆಗೆ ಅವಶ್ಯವಾದ ಮೂಲ ಸಾಮಗ್ರಿಗಳನ್ನು ಒಳಕೊಂಡಿರುವ ಅಮೂಲ್ಯ ಆಕರಗ್ರಂಥಗಳಾಗಿವೆ: ಅವು ರೈಸ್ ಮೊದಲಾದ ಮಹನೀಯರು ಕನ್ನಡನಾಡಿಗೆ ನೀಡಿದ ಅಮೋಘ ಕಾಣಿಕೆಗಳಾಗಿವೆ. ಈಚೆಗೆ ಇವುಗಳ ಪರಿಷ್ಕರಣ ಮತ್ತು ಪುನರ್ಮುದ್ರಣಗಳ ಕಾರ್ಯವನ್ನು ಕನ್ನಡ ಅಧ್ಯಯನ ಸಂಸ್ಥೆ ಕೈಗೊಂಡಿದ್ದು, ಈಗಾಗಲೇ ಕೊಡಗು ಜಿಲ್ಲೆಯ ಶಾಸನಗಳನ್ನು ಒಳಕೊಂಡ ಮೊದಲನೆಯ ಸಂಪುಟ ಪ್ರಕಟವಾಗಿದೆ. ಆ ಸಂಬಂಧವಾದ ಬಿಡುಗಡೆ ಸಮಾರಂಭ, ಯೋಜನೆಯ ಆರಂಭ ಇವನ್ನು ಕುರಿತು ಇದೇ ಪತ್ರಿಕೆಯಲ್ಲಿ ಹಿಂದೆ (೫೪–೩, ೧೯೭೨) ಬರೆಯಲಾಗಿದೆ. ಈಗ ಪ್ರಕಟವಾಗಿರುವುದು ಶ್ರವಣಬೆಳಗೊಳದ ಶಾಸನಗಳನ್ನು ಒಳಕೊಂಡ ಎರಡನೆಯ ಸಂಪುಟ. ಇಲ್ಲಿ ಈ ಹಿಂದಿನ ಎರಡು ಪರಿಷ್ಕರಣಗಳಲ್ಲಿ ಸೇರಿರುವುದಕ್ಕಿಂತ ಹೆಚ್ಚಿನ ಶಾಸನಗಳು ಸೇರಿವೆ; ಅಲ್ಲದೆ ಹೊಸ ಉಪೋದ್ಘಾತ. ಪದಸೂಚಿಗಳು. ಶಾಸನಗಳ ಪಡಿಯಚ್ಚುಗಳು ಇವೆಲ್ಲ ಸೇರಿ ಪರಿಷ್ಕರಣದ ಉಪಯುಕ್ತತೆ ಹೆಚ್ಚಿದೆ. ಈ ಗ್ರಂಥಶ್ರೇಣಿ ಬೇಗನೇ ಬೆಳೆದು ಕನ್ನಡನಾಡಿನ ತಿಳಿವಳಿಕೆ ಹೆಚ್ಚಲಿ ಎಂದು ನಮ್ಮ ಹಾರೈಕೆ.

ಕನ್ನಡದಲ್ಲಿ ಶಿಕ್ಷಣ, ಆಡಳಿತ ವ್ಯವಹಾರ ಎಲ್ಲವೂ ಕನ್ನಡ ಭಾಷೆಯಲ್ಲಿ ನಡೆದಾಗಲೇ ಕನ್ನಡ ಜನರ ಶ್ರೇಯಸ್ಸು ಎಂಬುದು ತಿಳಿದ ವಿಷಯ. ಇದಕ್ಕೆ ಅನುಕೂಲಿಸುವ ಪಠ್ಯಪುಸ್ತಕಗಳ ಮತ್ತು ಇತರ ಬಗೆಯ ಸಹಾಯಕಗ್ರಂಥಗಳ ರಚನೆ ಈಗ ಭರದಿಂದ ಸಾಗುತ್ತಿದ್ದು, ಅಂಥ ರಚನೆಗಳಲ್ಲಿ ‘ಕಛೇರಿ ಕೈಪಿಡಿ’ ವಿಶಿಷ್ಟರೀತಿಯದಾಗಿದೆ. ವಿಶೇಷವಾಗಿ ಸರ್ಕಾರದ ಕಛೇರಿಗಳಲ್ಲಿ ಆಡಳಿತ ವ್ಯವಹಾರಗಳನ್ನು ಕನ್ನಡದಲ್ಲಿಯೇ ನಡೆಸಲು ಅನುಕೂಲಿಸುವ ಪತ್ರವ್ಯವಹಾರಾದಿಗಳ ಮಾದರಿಗಳನ್ನೂ ಉಪಯುಕ್ತ ಶಬ್ದಾವಳಿಯನ್ನೂ ಸಿದ್ಧಪಡಿಸಿ ಕೊಟ್ಟಿದೆ ಈ ಕೈಪಿಡಿಯಲ್ಲಿ. ಇದು ಜನಪ್ರಿಯವಾಗಿ ಇದರ ಹತ್ತಾರು ಆವೃತ್ತಿಗಳೂ ಸಹಸ್ರಾರು ಪ್ರತಿಗಳೂ ಜಿಲ್ಲೆಯೆನ್ನದೆ ಹಳ್ಳಿಯೆನ್ನದೆ ಸರ್ಕಾರದ ಎಲ್ಲಾ ಆಡಳಿತ ಕಛೇರಿಗಳನ್ನೂ ಸೇರುವಂತಾಗಬೇಕು, ಜನವ್ಯವಹಾರ ತಾಯ್ನುಡಿಯಲ್ಲೇ ಸುಗಮವಾಗಿ ಸಾಗುವಂತಾಗಬೇಕು–ಎಂಬುದೇ ಈ ಸಂದರ್ಭದಲ್ಲಿ ನಮ್ಮ ಹಾರೈಕೆಯಾಗಿದೆ.

ಸಾದರ ಸ್ವೀಕಾರ

ಬಯಕೆ ಬಯಲು (ಕವನ ಸಂಕಲನ): ಎಸ್. ಎಸ್. ಹಿರೇಮಠ. ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನ ಪೀಠ. ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ. ಪುಟ ೬೫, ಬೆಲೆ: ೩.೦೦ ನವೆಂಬರ್, ೧೯೭೩

ಲೀ ವಿಶಾಲೀ...(ಕವನ ಸಂಕಲನ): ಸಾಹಿತ್ಯಾನಂದ. ನಿವೇದಿತ ಪ್ರಕಾಶನ, ಪುಟ ೬೩, ಬೆಲೆ ೩.೦೦, ನವೆಂಬರ್, ೧೯೭೩.

ಸದ್ಭಕ್ತ ಚಾರಿತ್ರ್ಯ (ವೀರಶೈವ ಧರ್ಮದ ಕೈಪಿಡಿ): ಸಂ. ಪಿ. ಎಮ್. ಗಿರಿರಾಜು, ಸಜ್ಜನ ಸಾಹಿತ್ಯ, ಮೈಸೂರು, ಪುಟ (೨೪+೧೭೬), ಬೆಲೆ: ೫.೦೦, ನವೆಂಬರ್ ೧೯೭೩.

ತಾಕಲಾಟ (ಕವನಗಳು): ಬಿ. ಎಸ್. ಜಗದೀಶ್, ಮಂಜುಳ ಪ್ರಕಾಶನ, ಬೆಂಗಳೂರು, ಪುಟ ೪೦, ಬೆಲೆ: ೩.೦೦, ನವೆಂಬರ್, ೧೯೭೩.

ಗಮಕ ಗೀತ ರೂಪಕ ಕುಂತಿಕರ್ಣ: ಬಿ. ಎಸ್. ಎಸ್. ಕೌಶಿಕ್, ಪುಟ ೧೫, ಬೆಲೆ ೦.೫೦, ನವೆಂಬರ್ ೧೯೭೩.

ಜನತಾ ಶಾಲೆಗಳು: ಟಿ. ಆರ್. ನಾಗಪ್ಪ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾ-ಲಯ. ಧಾರವಾಡ, ಪುಟ ೧೩೮, ಬೆಲೆ ೪.೦೦ (೬.೦೦), ನವೆಂಬರ್ ೧೯೭೩.

ಬಯಲು ಆಲಯ (ಸೂಕ್ತಿಗಳು): ಶಾಂತಾದೇವಿ ಕಣವಿ, ಸುರುಚಿ ಪ್ರಕಾಶನ, ಮೈಸೂರು; ಪುಟ ೨೧೭, ಬೆಲೆ: ೫.೫೦, ಡಿಸೆಂಬರ್, ೧೯೭೩.

ಅಮೃತವರ್ಷ (ನಾಟಕ) ಡಾ. ಎಚ್. ಕೆ. ರಂಗನಾಥ್, ಸುರುಚಿ ಪ್ರಕಾಶನ, ಮೈಸೂರು, ಪುಟ ೭೩, ಬೆಲೆ ೨.೫೦, ಡಿಸೆಂಬರ್, ೧೯೭೩.

ಇವರು ಕುವೆಂಪು: ಸಂ. ಹರಿಹರ ಪ್ರಿಯ, ದಿನಕರ ಪ್ರಕಾಶನ, ಪುಟ ೨೦+೧೫೧; ಬೆಲೆ: ೫.೦೦, ಡಿಸೆಂಬರ್, ೧೯೭೩.

ತಾಯಿ ಮಕ್ಕಳು (ನಾಟಕ): ಕೌಂಡಿನ್ಯ, ಕೌಂಡಿನ್ಯ ಪ್ರಕಾಶನ, ಮೈಸೂರು; ಪುಟ ೧೩೦; ಬೆಲೆ: ೫.೦೦; ಡಿಸೆಂಬರ್ ೧೯೭೩.

ಹಾಲಕೆರೆಯ ಶ್ರೀ ಅನ್ನದಾನ ಮಹಾಸ್ವಾಮಿಯವರು: ಬಿ. ವ್ಹಿ. ಶಿರೂರು, ಅನ್ನದಾನ ಪ್ರಕಾಶನ, ನರೇಗಲ್ಲ, ಪುಟ ೨೫, ಬೆಲೆ: ೦.೫೦, ಡಿಸೆಂಬರ್, ೧೯೭೩.

ದುರಾಗ್ರಹಿ(ನಾಟಕ): ಕೌಂಡಿನ್ಯ, ಕೌಂಡಿನ್ಯ ಪ್ರಕಾಶನ, ಮೈಸೂರು, ಪುಟ ೧೧೩+೪) ಬೆಲೆ: ೬.೦೦, ಡಿಸೆಂಬರ್ ೧೯೭೩.

ಮಲ್ಲಿನಾಥ ಪುರಾಣಂ: ಸಂ. ಬಿ. ಬಿ. ಹೆಂಡಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟ ೪೦೦; ಬೆಲೆ: ೧೫.೦೦, ಜನವರಿ, ೧೯೭೪.

ಸರೋಜಿನಿ ನಾಯ್ಡು: ಎಲ್.ಸಿ. ಪಾಟೀಲ; ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಪುಟ ಪುಟ ೫೮, ಬೆಲೆ: ೦.೨೫, ಜನವರಿ ೧೯೭೪.

ಪೊರೆಬಿಟ್ಟ ಹಾವು (ಕವನ ಸಂಕಲನ): ಎಸ್. ಎಸ್. ಪರಮೇಶ್, ಸಂಗಮ ಪ್ರಕಾಶನ, ಕೋಲಾರ ಜಿಲ್ಲೆ, ಪುಟ ೩೨, ಬೆಲೆ ೨.೦೦, ಜನವರಿ, ೧೯೭೪.

ಕಥನ ಕುಶಲ ಕವಿ ಲಕ್ಷ್ಮೀಶ: ವ್ಹಿ. ಡಿ. ಬೇಂದ್ರೆ, ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ, ಪುಟ ೪೮, ಬೆಲೆ: ೦.೨೫, ಜನವರಿ ೧೯೭೪.

WO 13600—MUPM—1,000 + 25 copies 5-7-75

Reg. No. R.N. 17184/5?